ವಿಶ್ವವಾಣಿ
ವಿಶ್ವಾಸವೇ ವಿಶ್ವ

25ನೇ ಪದಕ ಗೆದ್ದ ಭಾರತಕ್ಕೆ 14ನೇ ಸ್ಥಾನ

ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತ ಎಂಟನೇ ದಿನ 25 ಪದಕಗಳನ್ನು ಗೆದ್ದು, 14ನೇ ಸ್ಥಾನಕ್ಕೇರಿದೆ. ಇದು ಭಾರತದ ಸರ್ವಶ್ರೇಷ್ಠ ಸಾಧನೆಯಾಗಿದೆ. ಕಳೆದ ಬಾರಿ ಟೋಕಿಯೊ ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಭಾರತ ಒಟ್ಟು 19 ಪದಕಗಳನ್ನು ಗೆದ್ದಿತ್ತು. ಗುರುವಾರ ನಡೆದ ಪಂದ್ಯದಲ್ಲಿ ಭಾರತದ ಪ್ಯಾರಾ ಜುಡೊ ಸ್ಪರ್ಧಿ ಕಪಿಲ್ ಪರ್ಮಾರ್ ಕಂಚಿನ ಪದಕ ಗೆದ್ದಿದ್ದಾರೆ. ಪುರುಷರ 60 ಕೆ.ಜಿ. ಜೆ1 ಜುಡೊ ಸ್ಪರ್ಧೆಯಲ್ಲಿ ಕಪಿಲ್, ಬ್ರೆಜಿಲ್‌ನ ಎಲಿಯೆಲ್ಟನ್ ಡಿ ಒಲಿವೇರಾ ಅವರನ್ನು ಮಣಿಸಿ ಐತಿಹಾಸಿಕ ಸಾಧನೆ ಮಾಡಿದರು. ಅಪಘಾತದಲ್ಲಿ ಸಿಲುಕಿ ನಾಲ್ಕು ವರ್ಷ ಕೋಮಾದಲ್ಲಿದ್ದ ಕಪಿಲ್ ಪರ್ಮಾರ್ ಈ ಸಾಧನೆ ಮಾಡಿರುವುದು ಗಮನಾರ್ಹ.

ಪುಟ ತೆರೆದಂತೆ...

ಮ್ಯಾರಥಾನ್ ಎಂಬ ದಂಡೆದ್ದು ಓಡುವ ಕ್ರಿಯೆ, ಕ್ರೀಡೆ
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ಕಾಂತಾವರದ ಸಾಹಿತ್ಯಪ್ರೇಮಿಗೆ ಎಂಬತ್ತು!
ಶಶಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

ಮಾತಂದ್ರೆ ಮಾತು

ಬಾಂಗ್ಲಾದೇಶವು ಮತ್ತೊಂದು ಅಫ್ಘಾನಿಸ್ತಾನವಾಗುವತ್ತ ಸಾಗಿದೆ. ಇಸ್ಲಾಂ ಮೂಲಭೂತವಾದಿಗಳು ಬಾಂಗ್ಲಾ ಯುವಕರು ಭಾರತ ವಿರೋಧಿ, ಹಿಂದೂ ವಿರೋಧಿ ಮತ್ತು ಪಾಕಿಸ್ತಾನ ಪರ ಆಲೋಚನೆ ಹೊಂದುವಂತೆ ಮನಪರಿವರ್ತನೆ ಮಾಡುತ್ತಿದ್ದಾರೆ. ಇದು ವಿದ್ಯಾರ್ಥಿ ಚಳವಳಿಯಲ್ಲ. ಇಸ್ಲಾಂ ಜಿಹಾದಿಗಳ ಯೋಜಿತ ಮತ್ತು ಪ್ರಾಯೋಜಿಕತ್ವದ ಪ್ರತಿಭಟನೆ ಎನಿಸುತ್ತಿದೆ.

– ತಸ್ಲೀಮಾ ನಸ್ರೀನ್
ಲೇಖಕಿ

ದಾರಿದೀಪೋಕ್ತಿ

ಯಾವುದೇ ಸಂಬಂಧವಿರಬಹುದು, ಅದನ್ನು ಜೋಪಾನವಾಗಿ ಕಾಪಾಡಿಕೊಳ್ಳಬೇಕು ಅಂದ್ರೆ, ತಪ್ಪು ಮಾಡಿದವರನ್ನು ಕ್ಷಮಿಸಬೇಕು, ಇಲ್ಲವೇ ಅವರ ತಪ್ಪುಗಳನ್ನು ಮರೆತುಬಿಡಬೇಕು. ಇಲ್ಲದಿದ್ದರೆ ಅಂಥವರ ಜತೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಲು ಆಗುವುದಿಲ್ಲ.

ವಕ್ರತುಂಡೋಕ್ತಿ

ಈ ಭೂಮಿಯನ್ನು ಉಳಿಸಲು ಹೋರಾಡುವುದಾಗಿ ಅನೇಕರು ಹೇಳುತ್ತಾರೆ. ಆದರೆ ಹೆಂಡತಿ ಪಾತ್ರೆ ತೊಳೆಯುವಾಗ ಸಹಾಯಕ್ಕೆ ಬನ್ನಿ ಅಂದ್ರೆ, ಯಾರೂ ಹೋಗುವುದಿಲ್ಲ.

ಸಂಪುಟ ಸಭೆಯಲ್ಲಿ ಚರ್ಚೆ, ಸುಪ್ರೀಂ ಮೆಟ್ಟಿಲೇರಲು ನಿರ್ಧಾರ

ಮಹದಾಯಿ: ದೆಹಲಿಗೆ ಸರ್ವಪಕ್ಷಗಳ ನಿಯೋಗ

ಬೆಂಗಳೂರು: ಮಹದಾಯಿ ಯೋಜನೆಗೆ ಕೇಂದ್ರ ವನ್ಯಜೀವಿ ಮಂಡಳಿ ಅನುಮತಿ ನಿರಾಕರಣೆ ಹಿನ್ನೆಲೆ ಪ್ರಧಾನಿ ಬಳಿಗೆ ಸರ್ವಪಕ್ಷ ನಿಯೋಗ ಕರೆದೊಯ್ಯಲು ರಾಜ್ಯ ಸರಕಾರ ತೀರ್ಮಾನಿಸಿದೆ.

ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಮಾತನಾಡಿದ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಗೋವಾದ ವಿದ್ಯುತ್ ಯೋಜನೆಗೆ ರಾಜ್ಯದ 435 ಎಕರೆ ಅರಣ್ಯ ಭೂಮಿ ಬಳಕೆಯಾಗುವ ಯೋಜನೆಗೆ ವನ್ಯಜೀವಿ ಮಂಡಳಿ ಅನುಮತಿ ಕೊಟ್ಟಿದೆ. ಆದರೆ, ನಮ್ಮ ರಾಜ್ಯದ ಮಹದಾಯಿ ಯೋಜನೆಗೆ ಅನುಮತಿ ಕೊಟ್ಟಿಲ್ಲ. ಇದರಿಂದ ರಾಜ್ಯಕ್ಕೆ ಅನ್ಯಾಯ ಆಗಿದೆ ಎಂದರು.

ಗೋವಾ – ತಮ್ನಾರ್ 400 ಕೆವಿ ವಿದ್ಯುತ್ ಪೂರೈಕೆ ಯೋಜನೆಗೆ ಅನುಮತಿ ಕೊಡಲಾಗಿದೆ. ಆದರೆ, ಮಹದಾಯಿ ಯೋಜನೆಗೆ ಅನುಮತಿ ಕೊಡದೆ ಇರುವ ಬಗ್ಗೆ ಸಂಪುಟ ಸಭೆಯಲ್ಲಿ ಆತಂಕ ವ್ಯಕ್ತವಾಯಿತು. ಈ ಹಿನ್ನೆಲೆಯಲ್ಲಿ ಸರ್ವಪಕ್ಷ ಸಭೆ ನಡೆಸಲು ತೀರ್ಮಾನಿಸಲಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ಬಳಿಗೆ ಸರ್ವಪಕ್ಷ ನಿಯೋಗ ಕರೆದುಕೊಂಡು ಹೋಗಲು ತೀರ್ಮಾನಿಸಿದೆ. ಅಲ್ಲದೆ ಕಾನೂನು ತಜ್ಞರ ಸಲಹೆಯಂತೆ ಸುಪ್ರೀಂಗೆ ಅರ್ಜಿ ಹಾಕಲು ಸಹ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಗೋವಾಕ್ಕೆ ಮಹದಾಯಿ ನದಿಯ ಪ್ರಾಮುಖ್ಯತೆ ಕುರಿತು ತಕರಾರು ಎತ್ತಿ ಗೋವಾ ಸರಕಾರ ಸುಪ್ರೀಂಕೋರ್ಟ್ ಮೊರೆ ಹೋಗಿರುವ ಕಾರಣ ಮುಂದಿಟ್ಟುಕೊಂಡು ಕಳಸಾ ನಾಲಾ ತಿರುವು ಯೋಜನೆಗೆ ಅನುಮೋದನೆ ನೀಡಲು ರಾಷ್ಟ್ರೀಯ ವನ್ಯಜೀವಿ ಮಂಡಳಿ ನಿರಾಕರಿಸಿದೆ. ಕರ್ನಾಟಕದ 435 ಎಕರೆ ಅರಣ್ಯ ಬಳಕೆಯಾಗುವ ಗೋವಾ-ತಮ್ನಾರ್ 400 ಕೆ.ವಿ ವಿದ್ಯುತ್ ಮಾರ್ಗಕ್ಕೆ ಮಂಡಳಿ ಒಪ್ಪಿಗೆ ನೀಡಿದ್ದು, ರಾಜ್ಯಕ್ಕೆ ಕಹಿಯಾಗಿ ಪರಿಣಮಿಸಿದೆ.

→ 4

- ಮಹದಾಯಿ ಯೋಜನೆಗೆ ವನ್ಯಜೀವಿ ಮಂಡಳಿ ಅನುಮತಿ ನಿರಾಕರಣೆ
- ಗೋವಾದ ವಿದ್ಯುತ್ ಯೋಜನೆಗೆ ವನ್ಯಜೀವಿ ಮಂಡಳಿ ಅನುಮತಿ
- ಕರೋನಾ ಹಗರಣ: ಮಧ್ಯಂತರ ವರದಿ ಅಧ್ಯಯನದ ಬಳಿಕ ಮುಂದಿನ ಕ್ರಮಕ್ಕೆ ನಿರ್ಧಾರ
- ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿ ನೀಡುವ ವರದಿ ಆಧಾರದಲ್ಲಿ ಕಾನೂನು ಕ್ರಮ



ಚಾಮುಂಡಿ ಪ್ರಾಧಿಕಾರ ರಚನೆಯಲ್ಲಿ ಕಾನೂನು ಉಲ್ಲಂಘನೆ ಆಗಿಲ್ಲ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಮಾತನಾಡಿ, ಮೈಸೂರು ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರ ಜಾರಿಗೆ ತರಲಾಗಿತ್ತು. ಈ ಬಗ್ಗೆ ಪ್ರಮೋದಾ ದೇವಿ ಅವರು ಪ್ರಕರಣ ನ್ಯಾಯಾಲಯದಲ್ಲಿವಾಗ ಸಭೆ ನಡೆಸಿರುವುದು ಕಾನೂನು ಉಲ್ಲಂಘನೆ ಎಂದು ಹೇಳಿದ್ದಾರೆ. ಆದರೆ ಈ ವಿಷಯದಲ್ಲಿ ಯಾವುದೇ ನ್ಯಾಯಾಂಗ ಉಲ್ಲಂಘನೆಯಾಗಿಲ್ಲ. ಮಧ್ಯಂತರ ಆದೇಶ ಮುಂದುವರಿಯಲ್ಲ ಎಂದು ಕೋರ್ಟ್ ಹೇಳಿದೆ. ಹೀಗಾಗಿ ನ್ಯಾಯಾಂಗ ಆದೇಶ ಉಲ್ಲಂಘನೆಯಾಗಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯಪಾಲರು ವಾಪಸು ಕಳುಹಿಸಿರುವ 11 ವಿಧೇಯಕಗಳ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ. ಅದರಲ್ಲಿ ಐದು ವಿಧೇಯಕಗಳಿಗೆ ಸರಕಾರ ಸ್ಪಷ್ಟನೆ ನೀಡಿದೆ. ಇನ್ನುಳಿದ ಆರು ಬಿಲ್‌ಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಿ ಕಳಿಸಲಾಗುತ್ತದೆ. ಈ ಸಂಪುಟ ಸಭೆ ಬಳಿಕ ಮತ್ತೆ ಎರಡು ವಿಧೇಯಕಗಳನ್ನು ಕಳಿಸಲಾಗುತ್ತದೆ.

– ಎಚ್.ಕೆ.ಪಾಟೀಲ್
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ಮುಖ್ಯಮಂತ್ರಿ ಬಳಿಗೆ ಕಲಾವಿದರ ನಿಯೋಗ: ಕಿರುಕುಳ, ಆರೋಪಗಳ ಬಗ್ಗೆ ತನಿಖೆಗೆ ಸಮಿತಿ ರಚಿಸುವಂತೆ ಮನವಿ

ಚಂದನವನದಲ್ಲಿ ಮತ್ತೆ ಬೆಂಕಿ

ಬೆಂಗಳೂರು: ಲೈಂಗಿಕ ದೌರ್ಜನ್ಯ ದೂರಿಗೆ ಸಂಬಂಧಿಸಿದಂತೆ ಕನ್ನಡ ಚಿತ್ರರಂಗದ ಕಲಾವಿದರು ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿ ಮಾಡಿ ಸಮಿತಿ ರಚಿಸುವಂತೆ ಮನವಿ ಮಾಡಿದರು.

ಸಾಮಾಜಿಕ ಕಾರ್ಯಕರ್ತ, ನಟ ಚೇತನ್ ಅಹಿಂಸಾ, ಹಿರಿಯ ಪತ್ರಕರ್ತೆ ಡಾ. ವಿಜಯಮ್ಮ, ನಟಿ ಶ್ರುತಿ ಹರಿಹರನ್, ನಟಿ ನೀತು ಸೇರಿದಂತೆ 'ಫೈರ್' ನಿಯೋಗ ಇವತ್ತು ಕಾವೇರಿ ನಿವಾಸ ದಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು.

ಮಲಯಾಳಂ ಚಿತ್ರರಂಗದಲ್ಲಿನ ಲೈಂಗಿಕ ದೌರ್ಜನ್ಯದ ಕುರಿತು ನ್ಯಾಯಮೂರ್ತಿ ಹೇಮಾ ಸಮಿತಿ ನೀಡಿರುವ ವರದಿ ಭಾರೀ ಚರ್ಚೆ ಹುಟ್ಟುಹಾಕಿತು. ಕನ್ನಡ ಚಿತ್ರರಂಗದಲ್ಲೂ ಇದೇ ಮಾದರಿಯ ಸಮಿತಿ ರಚನೆ ಮಾಡಬೇಕು ಎಂದು ಸರಕಾರಕ್ಕೆ ಒತ್ತಾಯಿಸಿ ಚೇತನ್ ಅಹಿಂಸಾ ನೇತೃತ್ವದಲ್ಲಿ 153 ತಾರೆಯರು ಪತ್ರಕ್ಕೆ ಸಹಿ ಹಾಕಿದ್ದರು.

ಬಳಿಕ ಮಾಧ್ಯಮಗಳ ಮುಂದೆ ಮಾತನಾಡಿದ ಶ್ರುತಿ ಹರಿಹರನ್, ಕೇರಳ ಮಾದರಿಯಲ್ಲಿ ಕರ್ನಾಟಕದಲ್ಲೂ ಸಮಿತಿ ರಚನೆ ಮಾಡಿ, ಚಿತ್ರರಂಗದಲ್ಲಿ ಸದ್ಯ ಮಹಿಳೆಯರ ವರ್ಕಿಂಗ್ ಕಂಡೀಷನ್ ಹೇಗಿದೆ ಎಂಬ ವಿಚಾರದ ಬಗ್ಗೆ ತನಿಖೆ ಮಾಡಿ, ಅದರಿಂದ ಒಂದಷ್ಟು ಶಿಫಾರಸು ಕೊಟ್ಟರೆ ನಮ್ಮ ಚಿತ್ರರಂಗ ಇನ್ನಷ್ಟು ಚೆನ್ನಾಗಿರುತ್ತದೆ, ಇನ್ನೂ ಸೇಫ್ ಆಗುತ್ತೆ ಎನ್ನುವುದು ನಮ್ಮ ನಂಬಿಕೆ. ನಮ್ಮ ಮನವಿ ಪತ್ರಕ್ಕೆ ಸಿಎಂ ಸ್ಪಂದಿಸಿದ್ದಾರೆ. ಇದು ತುಂಬಾ ವಿಸ್ತೃತವಾದ ವಿಚಾರ, ಮತ್ತೆ ಭೇಟಿಯಾಗಿ ಇನ್ನಷ್ಟು ಚರ್ಚೆ ಮಾಡಿ, ಸಮಿತಿ ರಚನೆ ಮಾಡೋಣ ಎಂಬ ಭರವಸೆ ನಮಗೆ ಕೊಟ್ಟಿದ್ದಾರೆ ಎಂದರು.

ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಕನ್ನಡ ಚಿತ್ರರಂಗದ ಕಲಾವಿದರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸಮಿತಿ ರಚಿಸುವಂತೆ ಮನವಿ ಮಾಡಿದರು.

ಅಧ್ಯಯನಕ್ಕೆ ಸಮಿತಿ: ಸಿಎಂ

ಕನ್ನಡ ಚಿತ್ರರಂಗದ ಕಲಾವಿದರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಇದು ಗಂಭೀರವಾದ ವಿಚಾರ, ಮತ್ತೊಮ್ಮೆ ಸಂಘದೊಂದಿಗೆ ಹಾಗೂ ಚಿತ್ರರಂಗದ ಪ್ರಮುಖರೊಂದಿಗೆ ಸವಿಸ್ತಾರವಾದ ಚರ್ಚೆ ನಡೆಸುತ್ತೇನೆ. ನಂತರ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಸರಕಾರದ ಮೂಲಕ ಕೆಲವೊಂದು ಕಾನೂನು, ನಿಯಮಗಳು ಬಂದರೆ ಮಹಿಳೆಯರ ವರ್ಕಿಂಗ್ ಕಂಡೀಷನ್ ಉತ್ತಮವಾಗುತ್ತದೆ ಎಂಬ ನಂಬಿಕೆ ನಮಗೆ ಇದೆ. ಲೈಂಗಿಕ ದೌರ್ಜನ್ಯ ಒಂದು ಭಾಗ ಅಷ್ಟೇ. ಇನ್ನೂ ಸಾಕಷ್ಟು ವಿಚಾರಗಳಿವೆ, ಸಮಸ್ಯೆಗಳಿವೆ. ಹೀಗಾಗಿ ಸಮಿತಿ ರಚಿಸಲು ಕೋರಿದ್ದೇವೆ. ನಮ್ಮ ಪ್ರಯತ್ನ ನಿರಂತರವಾಗಿರುತ್ತದೆ.

– ಶ್ರುತಿ ಹರಿಹರನ್, ನಟಿ

ಶಿಕ್ಷಕರ ದಿನಾಚರಣೆ ನಿಮಿತ್ತ ರಾಜ್ಯ ಪ್ರಶಸ್ತಿ ಪ್ರದಾನ ಮಾಡಿದ ಸಿಎಂ

ರೈತ, ಸೈನಿಕ, ಶಿಕ್ಷಕ ದೇಶ ನಿರ್ಮಾತೃಗಳು

ಬೆಂಗಳೂರು: ರೈತ, ಶಿಕ್ಷಕ ಹಾಗೂ ಸೈನಿಕರು ದೇಶದ ನಿರ್ಮಾತೃಗಳು ಎಂದು ಸಿಎಂ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಹಾಗೂ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ದೇಶದ ಎರಡನೇ ರಾಷ್ಟ್ರಪತಿಗಳಾಗಿದ್ದ ರಾಧಾಕೃಷ್ಣನ್ ಅವರು ಶ್ರೇಷ್ಠ ಶಿಕ್ಷಕರಾಗಲು ಸಾಧ್ಯವಾಗಿದೆ ಅಂದರೆ, ಇದೇ ಸಾಧ್ಯತೆ ಎಲ್ಲ ಶಿಕ್ಷಕರಿಗೂ ಇದ್ದೇ ಇರುತ್ತದೆ. ಹೀಗಾಗಿ ಪ್ರತಿಯೊಬ್ಬ ಶಿಕ್ಷಕರೂ ರಾಧಾಕೃಷ್ಣನ್ ಅವರ ಮಾರ್ಗದಲ್ಲಿ ನಡೆಯಲು ಪ್ರಯತ್ನಿಸಬೇಕು ಎಂದರು.

ವಿಜ್ಞಾನ ಓದಿರುವ ವಿದ್ಯಾರ್ಥಿಗಳೂ ಮೌಢ್ಯಕ್ಕೆ ಜೋತು ಬೀಳುವುದು, ಜಾತಿ ತಾರತಮ್ಯ ಮಾಡುವುದಾದರೆ ಅವರಿಗೆ ಸಿಕ್ಕ ಶಿಕ್ಷಣಕ್ಕೆ ಅರ್ಥ ಇರುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳನ್ನು ವೈಚಾರಿಕವಾಗಿ ರೂಪಿಸುವ ಜವಾಬ್ದಾರಿ ಶಿಕ್ಷಣದ್ದಾಗಿದೆ.

– ಸಿದ್ದರಾಮಯ್ಯ, ಸಿಎಂ

ಪ್ರತಿಯೊಬ್ಬ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ರೂಪಿಸುವ ಮೂಲಕ ದೇಶದ ವ್ಯಕ್ತಿತ್ವವನ್ನು ರೂಪಿಸುವವರು ನಮ್ಮ ಶಿಕ್ಷಕರು. ಇದು ಶಿಕ್ಷಕರ ಮೂಲ ಜವಾಬ್ದಾರಿ. ಆಕಸ್ಮಿಕವಾಗಿ ಶಿಕ್ಷಕ ವೃತ್ತಿಗೆ ಬಂದವರಿಗಿಂತ ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡವರೇ ಹೆಚ್ಚಾಗಿದ್ದಾರೆ. ಹೀಗೆ ಈ ವೃತ್ತಿಯನ್ನು ಆಯ್ಕೆ ಮಾಡಿಕೊಂಡವರ ಬಗ್ಗೆ ನನಗೆ ಹೆಮ್ಮೆ ಎನಿಸುತ್ತದೆ ಎಂದರು.

ವಿದ್ಯಾರ್ಥಿಗಳು ಸ್ವತಂತ್ರವಾಗಿ ಯೋಚಿಸುವಂತೆ ರೂಪಿಸುವುದೇ ಶಿಕ್ಷಕರ ಜವಾಬ್ದಾರಿ. ವೈಜ್ಞಾನಿಕತೆ ಮತ್ತು ವೈಚಾರಿಕತೆಯನ್ನು ವಿದ್ಯಾರ್ಥಿಗಳು ಬೆಳೆಸಿಕೊಂಡರೆ ಮಾತ್ರ ಅವರಿಗೆ ಸಮಾಜ ಅರ್ಥ ಆಗುತ್ತದೆ. ಸಮಾಜದ ಸಮಸ್ಯೆಗಳಿಗೆ ಪರಿಹಾರ ರೂಪಿಸುತ್ತಾರೆ ಎಂದರು.

11 ಕೋಟಿ ರೈತರಿಗೆ ಡಿಜಿಟಲ್ ಐಡಿ

ದೆಹಲಿ: ರೈತರ ಸಬಲೀಕರಣಕ್ಕಾಗಿ ಕೇಂದ್ರದ ಎನ್‌ಡಿಎ ಸರಕಾರ ದೇಶಾದ್ಯಂತ 11 ಕೋಟಿ ರೈತರಿಗೆ 2027ರೊಳಗೆ 'ಡಿಜಿಟಲ್ ಐಡಿ' ಕಾರ್ಡ್ ನೀಡುವ ಗುರಿ ಇಟ್ಟುಕೊಂಡಿದೆ. ರೈತರಿಗೆ ಪ್ರಮುಖ ಸೇವೆಗಳು–ಯೋಜನೆಗಳನ್ನು ತಲುಪಿಸುವ ರೈತ ಕೇಂದ್ರಿತ 'ಡಿಜಿಟಲ್ ಪಬ್ಲಿಕ್ ಇನ್ಫ್ರಾಸ್ಟ್ರಕ್ಚರ್'(ಡಿಪಿಐ)ದಂತೆಯೇ 'ಡಿಜಿಟಲ್ ಐಡಿ' ಕೂಡಾ ಅಗ್ರಿಸ್ಟಾಕ್ ಉಪಕ್ರಮದ ಭಾಗವಾಗಿರಲಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ 6 ಕೋಟಿ ಹಾಗೂ 2025–26ರಲ್ಲಿ 3 ಕೋಟಿ ಮತ್ತು 2026–27ರಲ್ಲಿ 2 ಕೋಟಿ ಡಿಜಿಟಲ್ ಐಡಿ ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದು ಸರಕಾರ ಹೇಳಿದೆ.

ಟ್ರುಡೋ ಸರಕಾರ ಅಲ್ಪಮತಕ್ಕೆ

ಒಟ್ಟಾವಾ: ಭಾರತ ವಿರೋಧ ನೀತಿ ಅನುಸರಿಸಿಕೊಂಡು ಖಲಿಸ್ತಾನಿ ಹೋರಾಟಗಳಿಗೆ ಪರೋಕ್ಷ ಬೆಂಬಲ ವ್ಯಕ್ತಪಡಿಸುತ್ತಿದ್ದ ಕೆನಡಾದ ಜಸ್ಟಿನ್ ಟ್ರುಡೊ ಸರಕಾರ ಈಗ ಸಂಕಷ್ಟಕ್ಕೆ ಸಿಲುಕಿದೆ.

ನ್ಯೂ ಡೆಮಾಕ್ರಟಿಕ್ ಪಕ್ಷದ ನಾಯಕ ಜಗ್ಮೀತ್ ಸಿಂಗ್ ಸರಕಾರಕ್ಕೆ ನೀಡಿದ್ದ ಬೆಂಬಲ ವನ್ನು ಹಿಂದಕ್ಕೆ ಪಡೆದಿದ್ದು, ಟ್ರುಡೋ ಸರಕಾರ ಈಗ ಅಲ್ಪ ಮತಕ್ಕೆ ಕುಸಿದಿದೆ. ಸರಕಾರ ಉಳಿಸಿಕೊಳ್ಳಬೇಕಾದರೆ ಟ್ರುಡೋ ಈಗ ಉಳಿದ ಸಣ್ಣ ಪಕ್ಷಗಳ ಬೆಂಬಲ ಪಡೆಯಬೇಕು, ಸಿಗದೇ ಇದ್ದರೆ ಸರಕಾರ ಪತನವಾಗುವ ಸಾಧ್ಯತೆಯಿದೆ.

ಜಸ್ಟಿನ್ ಟ್ರುಡೋ 2015ರಲ್ಲಿ ಅಧಿಕಾರ ಸ್ವೀಕರಿಸಿದ್ದರು. ಹಣದುಬ್ಬರ ನಿಯಂತ್ರಿಸಲು ಸರಕಾರ ವಿಫಲವಾಗಿದ್ದರಿಂದ ವಸ್ತುಗಳ ಬೆಲೆ ಏರಿಕೆಯಾಗಿದೆ. ಈ ಕಾರಣಕ್ಕೆ ಟ್ರುಡೋ ಸರಕಾರದ ವಿರುದ್ಧ ಈಗ ಭಾರೀ ವಿರೋಧ ವ್ಯಕ್ತವಾಗುತ್ತಿದೆ. ಸರಕಾರಕ್ಕೆ ಬೆಂಬಲ ನೀಡಿದರೆ ಮುಂದಿನ ಚುನಾವಣೆಯಲ್ಲಿ ನಮಗೂ ಹಿನ್ನಡೆಯಾಗಬಹುದು ಎಂಬ ಕಾರಣಕ್ಕೆ ಜಗ್ಮೀತ್ ಸಿಂಗ್ ಬೆಂಬಲ ವಾಪಸ್ ಪಡೆದಿದ್ದಾರೆ ಎಂದು ವರದಿಯಾಗಿದೆ.

- ಈಗ ಚುನಾವಣೆ ನಡೆದರೆ ಟ್ರುಡೋ ಅವರಿಗೆ ಹೀನಾಯ ಸೋಲಾಗಬಹುದು ಎಂದು ಸಮೀಕ್ಷೆಗಳು ತಿಳಿಸಿವೆ
- ಕೆನಡಾ ಸಂಸತ್ತಿನ ಅವಧಿ 2025ಕ್ಕೆ ಅಂತ್ಯವಾಗಲಿದ್ದು, 2025ರ ಕೊನೆಯಲ್ಲಿ ಚುನಾವಣೆ ಸಾಧ್ಯತೆ

ಪ್ರತ್ಯೇಕ ಅಪಘಾತ: ನಾಲ್ವರ ಸಾವು

ರಾಯಚೂರು: ಮಾನ್ವಿ ತಾಲೂಕಿನ ಕಪಗಲ್ ಬಳಿ ಶಾಲಾ ಬಸ್ ಹಾಗೂ ಸರಕಾರಿ ಬಸ್ ಡಿಕ್ಕಿಯಾಗಿ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದು, 40ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಸಮರ್ಥ (7) ಹಾಗೂ ಶ್ರೀಕಾಂತ (12) ಮೃತ ವಿದ್ಯಾರ್ಥಿಗಳು. ಇನ್ನೊಂದೆಡೆ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯಲ್ಲಿ ಬೆಳಗ್ಗೆ ಲಾರಿಯೊಂದು ರಸ್ತೆ ಬದಿಯ ಹೋಟೆಲ್‌ಗೆ ನುಗ್ಗಿದ ಪರಿಣಾಮ ಇಬ್ಬರು ಸ್ಥಳದಲ್ಲಿ ಮೃತಪಟ್ಟಿದ್ದಾರೆ. ಮೃತರನ್ನು ಮಾಡಿಕೆರೆ ಗ್ರಾಮದ ನಿವಾಸಿ ಶಿವಾನಂದ, ಕೋಲಾರ ಜಿಲ್ಲೆಯ ವೆಲಗಲಬುರೆ ಗ್ರಾಮದ ನಿವಾಸಿ ಶಾಂತಕುಮಾರ್ ಎಂದು ಗುರುತಿಸಲಾಗಿದೆ.

ಶೇಖ್ ಹಸೀನಾಗೆ ಯೂನುಸ್ ಎಚ್ಚರಿಕೆ

ಢಾಕಾ: ಭಾರತದಲ್ಲಿ ಕೂತು ಬಾಂಗ್ಲಾದೇಶದ ರಾಜಕೀಯದ ಬಗ್ಗೆ ಶೇಖ್ ಹಸೀನಾ ಹೇಳಿಕೆ ನೀಡಿರುವುದಕ್ಕೆ ಮಧ್ಯಂತರ ಸರಕಾರದ ಮುಖ್ಯಸ್ಥ ಮುಹಮ್ಮದ್ ಯೂನುಸ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಭಾರತದಲ್ಲೇ ಇನ್ನಷ್ಟು ಸಮಯ ಉಳಿದು ಕೊಳ್ಳಬೇಕೆಂದರೆ ಮೌನವಾಗಿರಿ, ಬಾಂಗ್ಲಾ ಬಗ್ಗೆ ಯಾವುದೇ ಹೇಳಿಕೆ ನೀಡದಿರಿ. ಹಸ್ತಾಂತರಕ್ಕೆ ಬಾಂಗ್ಲಾ ಕೇಳುವವರೆಗೂ ತನ್ನಲ್ಲೇ ಇಟ್ಟುಕೊಳ್ಳಲು ಭಾರತ ಬಯಸಿದರೆ, ಹಸೀನಾ ಮೌನವಾಗಿರಬೇಕು. ಇದು ನಮ್ಮ ಷರತ್ತು ಎಂದು ಯೂನುಸ್ ಹೇಳಿದ್ದಾರೆ.

ತೆಲಂಗಾಣ: 6 ನಕ್ಸಲರ ಹತ್ಯೆ ಪೊಲೀಸರಿಬ್ಬರಿಗೆ ಗುಂಡೇಟು

ಹೈದರಾಬಾದ್: ತೆಲಂಗಾಣದ ಭದ್ರಾದ್ರಿ ಕೊತ್ತಗುಡಂ ಜಿಲ್ಲೆಯಲ್ಲಿ ರಾಜ್ಯ ಪೊಲೀಸ್ ವಿಶೇಷ ದಳ ಗುರುವಾರ ನಡೆಸಿದ ನಕ್ಸಲರ ನಿಗ್ರಹ ಕಾರ್ಯಾಚರಣೆಯಲ್ಲಿ 6 ನಕ್ಸಲರನ್ನು ಕೊಲ್ಲಲಾಗಿದೆ. ಕಾರ್ಯಾಚರಣೆಯಲ್ಲಿ ನಕ್ಸಲ್ ನಿಗ್ರಹ ಪಡೆಯ ಇಬ್ಬರು ಪೊಲೀಸರಿಗೆ ಗುಂಡು ತಾಕಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ.

ಛತ್ತೀಸ್‌ಗಢದಲ್ಲಿ ಮಂಗಳವಾರ ನಡೆದ ಕಾರ್ಯಾಚರಣೆಯಲ್ಲಿ ಹಿರಿಯ ನಕ್ಸಲ್ ಕಮಾಂಡರ್ ಸೇರಿದಂತೆ 9 ಮಂದಿಯ ಅಂತ್ಯವಾಯಿತು. ಆ ಬಳಿಕ ಉಳಿದ ನಕ್ಸಲರ ತಂಡ ಛತ್ತೀಸ್‌ಗಢದಿಂದ ತೆಲಂಗಾಣ ಪ್ರವೇಶಿಸಿ ಗಡಿ ಭಾಗದ ಅರಣ್ಯದಲ್ಲಿ ಅಡಗಿತು. ಈ ಬಗ್ಗೆ ಗುಪ್ತಚರ ಇಲಾಖೆ ಮಾಹಿತಿ ನೀಡಿದ ಬಳಿಕ ತೆಲಂಗಾಣದ ನಕ್ಸಲ್ ನಿಗ್ರಹ ಪಡೆ ಭದ್ರಾದ್ರಿ ಕೊತ್ತಗುಡಂ ಕಾರ್ಯಾಚರಣೆ ಹಮ್ಮಿಕೊಂಡರು. ನಕ್ಸಲರ ತಂಡ ಕಾರಕಗುಡಂ ಪೊಲೀಸ್ ಠಾಣಾ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಅಡಗಿರುವುದು ಕಂಡುಬಂದಾಗ ನಕ್ಸಲ್ ನಿಗ್ರಹ ಪಡೆ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿಸಿತು. ಪ್ರತಿಯಾಗಿ ನಕ್ಸಲರೂ ಗುಂಡು ಹಾರಿಸಿದಾಗ ಇಬ್ಬರು ಪೊಲೀಸ್ ಅಧಿಕಾರಿಗಳು ಗಾಯಗೊಂಡರು.

- ಗುಪ್ತಚರ ಇಲಾಖೆ ಮಾಹಿತಿ ಆಧರಿಸಿ ನಕ್ಸಲ್ ನಿಗ್ರಹ ಕಾರ್ಯಾಚರಣೆ
- ಛತ್ತೀಸ್‌ಗಢದಲ್ಲಿ 9 ಸದಸ್ಯರ ಅಂತ್ಯ ಬಳಿಕ ತೆಲಂಗಾಣಕ್ಕೆ ನಕ್ಸಲ್ ತಂಡ

ಗೂಂಡಾಗಳನ್ನು ಕಾವಲಿರಿಸಿ ಶುಂಠಿ ಬೇಸಾಯ, ಕೂಲಿಗಳಿಂದ ಬಲವಂತದ ದುಡಿಮೆ

ಜೀತ ಪದ್ಧತಿ:36 ಕಾರ್ಮಿಕರ ರಕ್ಷಣೆ

ತುಮಕೂರು: ತಿಪಟೂರು ತಾಲೂಕಿನ ಹಾಲ್ಕುರಿಕೆ, ಮಂಜುನಾಥಪುರ ಸುತ್ತಲಿನ ಪ್ರದೇಶದಲ್ಲಿನ ಶುಂಠಿ ಹೊಲಗಳಲ್ಲಿ ಜೀತದಾಳುಗಳಂತೆ, ಬಲವಂತವಾಗಿ ದುಡಿಯುತ್ತಿದ್ದ 36 ಕಾರ್ಮಿಕರನ್ನು ಪೊಲೀಸರು ಬುಧವಾರ ರಾತ್ರಿ ರಕ್ಷಿಸಿದ್ದಾರೆ.

ಈ ಭಾಗದ ಕೆಲ ಪ್ರಭಾವಿಗಳು ರೈತರಿಂದ ನೂರಾರು ಎಕರೆ ಭೂಮಿಯನ್ನು ಗುತ್ತಿಗೆ ಪಡೆದು ಶುಂಠಿ ಬೆಳೆದಿದ್ದರು. ಆ ಶುಂಠಿ ಹೊಲದಲ್ಲಿ ಕೆಲಸ ಮಾಡಲು ಮೈಸೂರು, ಚಾಮರಾಜನಗರ, ಕೊಳ್ಳೇಗಾಲ, ಬಳ್ಳಾರಿ, ವಿಜಯಪುರ ಸೇರಿದಂತೆ ವಿವಿಧ ಭಾಗಗಳಿಂದ ಬಡ ಕೂಲಿ ಕಾರ್ಮಿಕರಿಗೆ ಹೆಚ್ಚಿನ ಕೂಲಿ ಆಸೆ ತೋರಿಸಿ ಕರೆತಂದು ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದ್ದರು ಎಂದು ಆರೋಪಿಸಲಾಗಿದೆ.

ಕಾರ್ಮಿಕರ ಬಳಿ ಇದ್ದ ಆಧಾರ್ ಕಾರ್ಡ್, ವೋಟರ್ ಐಡಿ, ಮೊಬೈಲ್ ಇನ್ನಿತರೆ ವಸ್ತುಗಳನ್ನು ಕಿತ್ತುಕೊಂಡು ಹೆದರಿಸಿ ಬೆದರಿಸಿ ಶುಂಠಿ ಕ್ಯಾಂಪ್‌ನಲ್ಲಿರಿಸಿದ್ದರು. ಕಾರ್ಮಿಕರ ಕಾವಲಿಗೆ ಗೂಂಡಾಗಳನ್ನು ನೇಮಿಸಿದ್ದರು ಎಂದು ತಿಳಿದು ಬಂದಿದೆ. ಈ ಬಗ್ಗೆ ಮಾಹಿತಿ ಪಡೆದ ಹೊನ್ನವಳ್ಳಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಬಳಿಕ ಸ್ಥಳೀಯರ ನೆರವಿನಿಂದ ಕಾರ್ಮಿಕರನ್ನು ರಕ್ಷಿಸಿ, ಅವರಿಗೆ ಹೊನ್ನವಳ್ಳಿ ಸಮುದಾಯ ಭವನದಲ್ಲಿ ಆಶ್ರಯ ಕಲ್ಪಿಸಿದ್ದಾರೆ ಎಂದು ತಿಳಿದು ಬಂದಿದೆ.

ದೊಣ್ಣೆಗಳಿಂದ ಹೊಡೆತ

ದಿನವಿಡೀ ನಿರಂತರವಾಗಿ ಹೊಲದಲ್ಲಿ ಕೆಲಸ ಮಾಡಬೇಕಿತ್ತು. ಒಂದು ವೇಳೆ ತಪ್ಪಿಸಿಕೊಳ್ಳಲು ಯತ್ನಿಸಿದರೆ, ಕೆಲಸ ಮಾಡದಿದ್ದರೆ ಕಾವಲುಗಾರರು ದೊಣ್ಣೆಗಳಿಂದ ದೇಹದಲ್ಲಿ ಬರೆ ಬರುವ ಹಾಗೆ ಹೊಡೆದು ದೌರ್ಜನ್ಯ ಮಾಡುತ್ತಿದ್ದರು ಎಂದು ಕಾರ್ಮಿಕರು ಅಳಲು ತೋಡಿಕೊಂಡಿದ್ದಾರೆ.

ಪರಶುರಾಮ್ ಸಾವಿನ ವರದಿ ಕೇಳಿದ ಕೇಂದ್ರ

ಬೆಂಗಳೂರು: ಯಾದಗಿರಿ ಸಬ್ ಇನ್‌ಸ್ಪೆಕ್ಟರ್ ಪರಶುರಾಮ ಅನುಮಾನಾಸ್ಪದ ಸಾವು ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಗೃಹ ಸಚಿವಾಲಯಕ್ಕೆ ಪತ್ರ ಬರೆದ ಬೆನ್ನಲ್ಲೇ ಕೇಂದ್ರ ಸರಕಾರ ಈ ಸಂಬಂಧ ವರದಿ ನೀಡುವಂತೆ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದೆ.

ಭಾರತ-ಸಿಂಗಾಪುರ ನಾಲ್ಕು ಒಪ್ಪಂದ

ಸಿಂಗಾಪುರ: ಸೆಮಿಕಂಡಕ್ಟರ್, ಡಿಜಿಟಲ್ ತಂತ್ರಜ್ಞಾನ, ಕೌಶಲ ಅಭಿವೃದ್ಧಿ ಹಾಗೂ ಆರೋಗ್ಯ–ಶಿಕ್ಷಣ ಕ್ಷೇತ್ರದ ಪರಸ್ಪರ ಸಹಕಾರಕ್ಕೆ ಸಂಬಂಧಿಸಿದ ನಾಲ್ಕು ಒಪ್ಪಂದಗಳನ್ನು ಭಾರತ ಮತ್ತು ಸಿಂಗಾಪುರ ಮಾಡಿಕೊಂಡಿದ್ದು, ಅದಕ್ಕೆ ಸಂಬಂಧಿಸಿದ ಒಡಂಬಡಿಕೆ ಪತ್ರಗಳಿಗೆ ಸಹಿ ಹಾಕಿ ಪರಸ್ಪರ ವಿನಿಮಯ ಮಾಡಿಕೊಂಡವು.

ವಿಕಿ ವಿರುದ್ಧ ನೋಟಿಸ್

ದೆಹಲಿ: ವಿಕಿಪೀಡಿಯಾ ಮಾಹಿತಿ ಜಾಲತಾಣದ ವಿರುದ್ಧ ದೆಹಲಿ ಹೈಕೋರ್ಟ್ ಗುರುವಾರ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿದ್ದು, ಭಾರತ ಇಷ್ಟವಿಲ್ಲದಿದ್ದರೆ ಭಾರತದಲ್ಲಿ ಕೆಲಸ ಮಾಡಬೇಡಿ ಎಂದು ಚಾಟಿ ಬೀಸಿದೆ. ಎನ್‌ಐಎ ಸುದ್ದಿ ಸಂಸ್ಥೆಗೆ ಸಂಬಂಧಿಸಿದ ಮಾಹಿತಿ ತಿರುಚಿದವರ ಮಾಹಿತಿ ಬಹಿರಂಗೊಳಿಸದೇ ಮುಚ್ಚಿಟ್ಟಿರುವ ವಿಚಾರವಾಗಿ ಹೈಕೋರ್ಟ್ ಸಿಡಿಮಿಡಿಗೊಂಡಿದೆ.

ಶಾಂತಿ ಮಾತುಕತೆಗೆ ಪುಟಿನ್ ಸಮ್ಮತಿ

ಮಾಸ್ಕೊ: ಉಕ್ರೇನ್ ಜತೆ ಶಾಂತಿ ಮಾತುಕತೆಗೆ ಸಿದ್ಧ ಎಂದು ರಷ್ಯಾ ಹೇಳಿದೆ. ಭಾರತ, ಚೀನಾ, ಬ್ರೆಜಿಲ್ ಮಧ್ಯಸ್ಥಿಕೆ ವಹಿಸಬಹುದಾದರೆ ಶಾಂತಿ ಮಾತುಕತೆ ನಡೆಸಬಹುದಾಗಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಗುರುವಾರ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಆ ಮೂಲಕ ವರ್ಷ ಕಾಲದ ಯುದ್ಧ ಕೊನೆಗೊಳಿಸುವ ಇಚ್ಛೆ ವ್ಯಕ್ತಪಡಿಸಿದ್ದಾರೆ.

ಎತ್ತಿನಹೊಳೆ: ಬತ್ತಿದ ಕನಸಿಗೆ ಜೀವಜಲದ ಧಾರೆ

'ಬಯಲುಸೀಮೆ' ಎಂಬ ಹೆಸರು ಕೇಳಿದಾಕ್ಷಣ ನಮ್ಮ ಮನಸ್ಸಿಗೆ ಬರಡು ಭೂಮಿಯ ಚಿತ್ರಣ ಬರುತ್ತದೆ. ಕೆಲವು ದಶಕಗಳಿಂದಲೇ ಬಯಲು ಸೀಮೆಯಲ್ಲಿ ನೀರಿನ ಕೊರತೆ ಕಂಡುಬಂದಿತ್ತು. ಯಾವುದೇ ಸರಕಾರಗಳು ಬಂದಾಗಲೂ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಬಗ್ಗೆ ಚರ್ಚೆಯಾಗುತ್ತಿತ್ತು. ಆದರೆ ಪರಿಹಾರ ಮಾತ್ರ ಶೂನ್ಯ. ಬಯಲುಸೀಮೆಯ ಬಹುತೇಕ ಭಾಗ ಹಿಂದುಳಿಯುವಲ್ಲಿ ನೀರಾವರಿಯ ಕೊರತೆ ದೊಡ್ಡ ಪರಿಣಾಮ ಬೀರಿದೆ. ತರಕಾರಿ, ಹೂವು, ಹಣ್ಣು ಹಾಗೂ ರೇಷ್ಮೆ ಕೃಷಿ ಪ್ರಧಾನ ವಾಗಿರುವ ಬಯಲು ಸೀಮೆಗೆ ಜೀವಜಲವನ್ನು ಒದಗಿಸುವುದು ಅನೇಕ ದಶಕಗಳ ಕನಸು. ಈ ಕನಸನ್ನು ನನಸಾಗಿಸಲು ಹಿಂದಿನ ಸರಕಾರ ಪ್ರಯತ್ನಪಟ್ಟಿದ್ದರೂ, ಬದ್ಧತೆ ಹಾಗೂ ಇಚ್ಛಾಶಕ್ತಿಯ ಕೊರತೆಯಿಂದಾಗಿ ಅದು ನೆರವೇರಲಿಲ್ಲ. ಕಾಂಗ್ರೆಸ್ ಸರಕಾರದ ಈ ಆಡಳಿತಾವಧಿಯಲ್ಲಿ ಬಯಲುಸೀಮೆಗೆ ನೀರಿನ ಸಿಂಚನವಾಗಿದೆ. ಇದೇ ಎತ್ತಿನಹೊಳೆ ಯೋಜನೆಯ ಮೊದಲ ಹಂತದ ನೀರು ಪೂರೈಕೆ ಕಾರ್ಯ.

ಸ್ವರ್ಣ ಗೌರಿ ಮನೆಗೆ ಬರುತ್ತಾಳೆ ಎಂದರೆ ಎಲ್ಲ ಬಗೆಯ ಸಮೃದ್ಧಿ ಮನೆಯಲ್ಲಿ ನೆಲೆಯಾಗಲಿದೆ ಎಂದೇ ಅರ್ಥ. ಈ ಬಾರಿಯ ಗೌರಿ ಹಬ್ಬ ಅಂತಹ ಜಲ ಸಮೃದ್ಧಿಯನ್ನು ತರುತ್ತಿದೆ. ಈ ಭಗೀರಥ ಕಾರ್ಯವನ್ನು ಮಾಡುವ ಅವಕಾಶ ಕಾಂಗ್ರೆಸ್ ಸರಕಾರಕ್ಕೆ, ಅದು ಕೂಡ ನನಗೆ ದೊರಕಿರುವುದು ಪುಣ್ಯವೆಂದೇ ಭಾವಿಸಿದ್ದೇನೆ. ನನ್ನ ಕ್ಷೇತ್ರ ಕನಕಪುರವಾದರೂ ಸುತ್ತಮುತ್ತಲಿನ ಜಿಲ್ಲೆಗಳ ಬಗ್ಗೆ ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಒಂದು ಕಡೆ ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಜಧಾನಿ ಬೆಂಗಳೂರು. ಇದರ ಸುತ್ತಮುತ್ತ ನೀರಾವರಿಗೂ ಕಷ್ಟ ಪಡುವ ಜಿಲ್ಲೆಗಳು. ಈ ಸಮಸ್ಯೆಯನ್ನು ನಿವಾರಿಸಲು ನಾನು ನೀರಾವರಿ ಕ್ಷೇತ್ರದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದೆ. ನೀರಾವರಿ ಎಂದರೆ ಕೇವಲ ಒಂದು ಇಲಾಖೆ, ಅನುದಾನ ಅಥವಾ ಯೋಜನೆಗಳಲ್ಲ, ಇದು ಜನರ ಜೀವನಾಡಿ. ಒಂದೇ ಒಂದು ನೀರಾವರಿ ಯೋಜನೆ ಇಡೀ ಪ್ರದೇಶದ ಜೀವನ ಗುಣಮಟ್ಟವನ್ನೇ ಬದಲಿಸಿ ಬಿಡುತ್ತದೆ. ಕೃಷ್ಣರಾಜಸಾಗರ ಜಲಾಶಯ ಹಳೆ ಮೈಸೂರು ಭಾಗದ ಸಮಗ್ರ ಪ್ರಗತಿಗೆ ಹೇಗೆ ಕಾರಣವಾಗಿದೆ ಎಂಬುದನ್ನು ನಾನು ಚಿಕ್ಕಂದಿನಿಂದಲೂ ನೋಡಿದ್ದೇನೆ. ಇಂತಹ ಯೋಜನೆಯೊಂದನ್ನು ನಮ್ಮ ಬಯಲುಸೀಮೆಗೆ ನೀಡಬೇಕು ಎನ್ನುವುದು ನನ್ನ ಬಹುವರ್ಷಗಳ ಕನಸಾಗಿತ್ತು. ಅದನ್ನು ಎತ್ತಿನಹೊಳೆಯ ಮೂಲಕ ನೆರವೇರಿಸಿದ್ದೇನೆ ಎನ್ನುವುದು ನನ್ನ ಬದುಕಿನ ಸಾರ್ಥಕತೆಯ ಕ್ಷಣ.

ಇದೇನೂ ದಿಢೀರನೆ ಬಂದ ಆಲೋಚನೆಯಲ್ಲ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರುತ್ತದೆ ಎಂದೇ ಬಲವಾಗಿ ನಂಬಿದ್ದ ನಾನು, ಆ ಸಮಯದಲ್ಲಿ ಎತ್ತಿನಹೊಳೆಯ ಯೋಜನೆಗೆ ಕಾಯಕಲ್ಪ ನೀಡಿಯೇ ತೀರುತ್ತೇನೆ ಎಂದು ಸಂಕಲ್ಪ ಮಾಡಿದ್ದೆ. ಅಂದುಕೊಂಡ ಹಾಗೆಯೇ ನಮ್ಮ ಪಕ್ಷ ಅಧಿಕಾರಕ್ಕೆ ಬಂದ ಕೂಡಲೇ ಎತ್ತಿನಹೊಳೆ ಯೋಜನೆಗೆ ಸಂಪೂರ್ಣ ಒತ್ತು ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ದೃಢ ನಾಯಕತ್ವದಲ್ಲಿ, ಕಾಮಗಾರಿಗಳಿಗೆ ವೇಗ ನೀಡಿ, ಕಾಲಮಿತಿಯಲ್ಲಿ ಪೂರ್ಣ ಗೊಳಿಸಲು ಕ್ರಮ ವಹಿಸಿದೆ. ಅದರ ಫಲಿತಾಂಶ ಇಂದು ನಮ್ಮೆಲ್ಲರ ಮುಂದಿದೆ.

→ 4

ಡಿ.ಕೆ.ಶಿವಕುಮಾರ್
ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರು

ಗೌರಿ ಹಬ್ಬದಂದು ಗಂಗೆಯ ಪೂಜೆ

ಎತ್ತಿನಹೊಳೆ ಯೋಜನೆ ಮೊದಲ ಹಂತದ ಕಾಮಗಾರಿ ಶುಕ್ರವಾರ ಉದ್ಘಾಟನೆ ಯಾಗುತ್ತಿದೆ. ಇಲ್ಲಿಂದ 24 ಟಿಎಂಸಿ ನೀರನ್ನು ಎತ್ತಿ ಬರ ಪೀಡಿತ ಪ್ರದೇಶಗಳಲ್ಲಿ ಕುಡಿಯುವ ಉದ್ದೇಶಕ್ಕೆ ಪೂರೈಸಲಾಗುತ್ತಿದೆ. ಈ ಬಾರಿಯ ಗೌರಿ ಹಬ್ಬದಂದು ಗಂಗೆ ಮಾತೆಗ ಪೂಜೆ ಮಾಡುತ್ತಿರುವುದು ವಿಶೇಷವಾಗಿದೆ ಎಂದು ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಡಿಪಿಆರ್ ಮಾಡಿದ ಎಂಜಿನಿಯರ್‌ಗಳಿಂದ ತಂತ್ರಜ್ಞರು, ಜಮೀನು ನೀಡಿದ ರೈತರು ಎಲ್ಲರ ಪಾತ್ರ ಪ್ರಮುಖವಾಗಿದೆ ಎಂದು ತಿಳಿಸಿದರು.

ಫನ್‌ತರಂಗ

– ರಘುಪತಿ ಶೃಂಗೇರಿ –

'ವೇಕ್ ಫಿಟ್' ಹಾಸಿಗೆ ಕಂಪೆನಿಯ ಆಫರ್. ನಿತ್ಯ 8 ಗಂಟೆ ನಿದ್ರೆ ಮಾಡಿದ್ರೆ 10 ಲಕ್ಷ ಸಂಬಳ
ಸುದ್ದಿ



ಸಮಾಚಾರ ಸಣ್ಣದಲ್ಲ

ವೈದ್ಯ ವಿದ್ಯಾರ್ಥಿ ಮೇಲೆ ಅತ್ಯಾಚಾರ

ಚಿತ್ರದುರ್ಗ: ಕೊಲ್ಕತ್ತಾದಲ್ಲಿ ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರವೆಸಗಿ ಕೊಲೆಗೈದಿರುವವರನ್ನು ಕೂಡಲೆ ಬಂಧಿಸಿ ಗಲ್ಲು ಶಿಕ್ಷೆಗೆ ಗುರಿಪಡಿಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಕನ್ನಡ ಸೇನೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿ ಅಪರ ಜಿಲ್ಲಾಧಿಕಾರಿ ಮೂಲಕ ಪ್ರಧಾನಿಗೆ ಮನವಿ ಸಲ್ಲಿಸಲಾಯಿತು. ನೀಲಕಂಠೇಶ್ವರಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಮೂಲಕ ಆಗಮಿಸಿದ ಪ್ರತಿಭಟನಾಕಾರರು ಕೆಲವು ಕಾಲ ಒನಕೆ ಓಬವ್ವ ವೃತ್ತದಲ್ಲಿ ಕುಳಿತು ರಾಜ್ಯ ಹಾಗೂ ಕೇಂದ್ರ ಸರಕಾರದ ವಿರುದ್ದ ಧಿಕ್ಕಾರ ಕೂಗಿದರು. ಅಪ್ರಾಪ್ತ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ, ಕೊಲೆ, ದೌರ್ಜನ್ಯಗಳು ಜಾಸ್ತಿಯಾಗುತ್ತಿದ್ದು ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ. ರಾಜ್ಯ ಮತ್ತು ಕೇಂದ್ರ ಸರಕಾರಗಳು ಇನ್ನು ಮುಂದೆ ಇಂತಹ ಪ್ರಕರಣಗಳು ನಡೆಯದಂತೆ ಕಟ್ಟೆಚ್ಚರ ವಹಿಸುವಂತೆ ಪ್ರತಿಭಟನಾ ನಿರತರು ಆಗ್ರಹಿಸಿದರು. ಮಹಿಳಾ ಘಟಕದ ರಾಜ್ಯ ಉಪಾಧ್ಯಕ್ಷೆ ಲಕ್ಷ್ಮೀ ಜಿಲ್ಲಾಧ್ಯಕ್ಷ ರವಿಕುಮಾರ್‌ನಾಯ್ಕ, ಪ್ರಧಾನ ಕಾರ್ಯದರ್ಶಿ ಓಬಳೇಶ್ ಯಾದವ್, ಸುವರ್ಣ, ಬಸಣ್ಣ ಡಿಶ್, ಓಬಣ್ಣ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ರೇಣುಕಾ ಇನ್ನು ಅನೇಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಕರ ಪಾತ್ರ ಮುಖ್ಯ

ಹಿರಿಯೂರು: ವಿದ್ಯಾರ್ಥಿಗಳನ್ನು ಸಮಾಜದ ಮತ್ತು ದೇಶದ ಸತ್ಪ್ರಜೆಗಳಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರವೇ ಬಹುಮುಖ್ಯವಾದದ್ದು ಎಂದು ಭಾರತಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಡಾ. ವಿ ಬಸವರಾಜ ಹೇಳಿದರು. ಗುರು ವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮಗೆ ಅಕ್ಷರ ಜ್ಞಾನವಂತು ಮುಂದಿನ ಬದುಕಿನ ದಾರಿ ತೋರಿಸಿದೆ ಗುರುವೃಂದ ಸದಾ ಸ್ಮರಣೀಯ ಬದುಕಿನ ಸರಿ ತಪ್ಪುಗಳ ಗ್ರಹಿಕೆ ಮೂಡಿಸಿದವರು ನಮ್ಮ ಶಿಕ್ಷಕರು ಒಬ್ಬ ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಮಕ್ಕಳ ಜೀವನ ರೂಪುಗೊಳಿಸಿ ಅವರ ಆಸಕ್ತಿ ಕ್ಷೇತ್ರವನ್ನು ಗುರುತಿಸಿ ಆ ವಿದ್ಯಾರ್ಥಿಯ ಜೀವನ ಸಾಧನೆಗೆ ಸಹಾಯ ಮಾಡುವುದೇ ಶಿಕ್ಷಕರ ಸಂಪೂರ್ಣ ಕಾರ್ಯ ವಾಗಿರುತ್ತದೆ, ಕೇವಲ ಅಕ್ಷರ ಮಾತ್ರವನ್ನು ಕಲಿಸಿದವನು ಗುರುವಲ್ಲ, ಸಂಗೀತ, ನೃತ್ಯ ಕ್ರೀಡೆ ಒಳ್ಳೆಯ, ಗುಣ ನಡತೆ ಹಾಗೂ ಯಾವುದೇ ಹೊಸ ವಿಚಾರಗಳನ್ನು ತಿಳಿಸಿಕೊಡುತ್ತಾರೋ ಅವರೆಲ್ಲರೂ ಗುರುಗಳೇ ಆಗಿರುತ್ತಾರೆ ಎಂದರು, ರಾಧಾಕೃಷ್ಣ ಜ್ಞಾನಭಾರತಿ ಬಿ.ಇಡಿ ಕಾಲೇಜಿನ ಪ್ರಾಚಾರ್ಯ ಎನ್ ಧನಂಜಯ ನಟರಾಜ್ ವೆಂಕಟೇಶ್ ಎಲ್‌ಐಸಿ ನಾಗೇಶ್, ಶ್ರೀನಿವಾಸ್, ದೊರೇಶ್ ಗಿರೀಶ್, ಸಿಬ್ಬಂದಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಾಲ್ಯ ವಿವಾಹ ಪ್ರಕರಣ ದಾಖಲು

ಚಿತ್ರದುರ್ಗ: ಚಳ್ಳಕೆರೆ ತಾಲೂಕಿನ ಕೆರೆಹಿಂದಲಹಟ್ಟಿ ಗ್ರಾಮದ ಗಂಟೆ ಮಾರಮ್ಮನ ದೇವಸ್ಥಾನದಲ್ಲಿ ಅಪ್ರಾಪ್ತ ಬಾಲಕಿಯನ್ನು ಮದುವೆಯಾದ ಚಿಕ್ಕಮ್ಮನಹಳ್ಳಿಯ ಬಾಬು.ಸಿ ವಿರುದ್ದ ಬಾಲ್ಯ ವಿವಾಹ ಪ್ರಕರಣ ದಾಖಲಿಸಲಾಗಿದೆ.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಗಮನಕ್ಕೆ ಬಾಲ್ಯ ವಿವಾಹದ ಕುರಿತು ಮಾಹಿತಿ ಬಂದಿತ್ತು. ಕೂಡಲೇ ಆಗಸ್ಟ್ 27 ರಂದು ತಳಕು ಪೊಲೀಸ್ ಠಾಣೆಯಲ್ಲಿ ಆರೋಪಿ ವಿರುದ್ಧ ಪೋಕ್ಸೋ ಹಾಗೂ ಬಾಲ್ಯವಿವಾಹ ನಿಷೇದ ಕಾಯಿದೆ-2006ರ ಪ್ರಕಾರ ಚಳ್ಳಕೆರೆ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹಾಗೂ ತಳಕು ವೃತ್ತದ ಮಹಿಳಾ ಮೇಲ್ವಿಚಾರಕಿ ಎಫ್.ಐ.ಆರ್ ದಾಖಲಿಸಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್.ಬಣಕಾರ್ ತಿಳಿಸಿದ್ದಾರೆ.

ಪ್ರಜಾಪ್ರಭುತ್ವ ದಿನಾಚರಣೆ 15ರಂದು

ಚಿತ್ರದುರ್ಗ: ಜಿಲ್ಲಾಡಳಿತ ವತಿಯಿಂದ ಸೆ.15 ರಂದು ಆಯೋಜಿಸಲಾಗಿರುವ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಯೋಜನಾ ಮತ್ತು ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್ ಅಧ್ಯಕ್ಷತೆಯಲ್ಲಿ ಸೆ.9ರಂದು ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳೊಂದಿಗೆ ತಾಲ್ಲೂಕು ಮಟ್ಟದ ಸಮನ್ವಯ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 11 ಗಂಟೆಗೆ ಮೊಳಕಾಲ್ಮೂರು ತಾಲೂಕಿನ ತಹಸೀಲ್ದಾರ್ ಕಾರ್ಯಾಲಯದಲ್ಲಿ, ಮಧ್ಯಾಹ್ನ 12ಕ್ಕೆ ಚಳ್ಳಕೆರೆ ತಾಲೂಕಿನ ಪಂಚಾಯತಿ ಕಾರ್ಯಾಲಯದಲ್ಲಿ ಹಾಗೂ ಮಧ್ಯಾಹ್ನ 3 ಗಂಟೆಗೆ ಹಿರಿಯೂರು ತಾಲೂಕಿನ ನಗರಸಭೆ ಕಾರ್ಯಾಲಯದಲ್ಲಿ ಸಮಿತಿ ಸಭೆ ಜರುಗಲಿವೆ. ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ತಾಲೂಕು ಸಮಿತಿಗಳ ಸದಸ್ಯರು ಅಗತ್ಯ ಮಾಹಿತಿಯೊಂದಿಗೆ ಹಾಜರಾಗುವಂತೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಜಗದೀಶ್ ಹೆಬ್ಬಳ್ಳಿ ತಿಳಿಸಿದ್ದಾರೆ.

{ಯದುವೀರ್ ಒಡೆಯರ್} ಸಂಸದರು

ಡಾ.ಎಸ್.ರಾಧಾಕೃಷ್ಣನ್‌ಗೆ ಮೈಸೂರಿನ ಜತೆ ಅವಿನಾಭಾವ ಸಂಬಂಧವಿತ್ತು. ನಮ್ಮ ದೇಶದ ಸಂಸ್ಕೃತಿಯಲ್ಲಿ ತಾಯಿಯೇ ಮೊದಲ ಗುರು ಎಂಬ ಪ್ರತೀತಿಯಿದೆ. ಇದಕ್ಕೆ ಮಾದರಿಯಾಗಿ ಸಾವಿತ್ರಿ ಬಾಪುಲೆ ಅವರು ದೇಶದಲ್ಲಿ ಮೊದಲ ಬಾರಿಗೆ ಹೆಣ್ಣು ಮಕ್ಕಳಿಗೆ ಶಿಕ್ಷಣದ ಬಗ್ಗೆ ಅರಿವು ಮೂಡಿಸಿ, ಅಕ್ಷರದ ಜ್ಞಾನ ದೀವಿಗೆ ಹೊತ್ತಿಸಿದರು.

ಶಿಕ್ಷಕರ ದಿನಾಚರಣೆ | ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಿಗೆ,ನಿವೃತ್ತ ಶಿಕ್ಷಕರಿಗೆ ಸನ್ಮಾನ

ಉತ್ತಮ ಸಮಾಜ ರೂಪಿಸಲು ಶಿಕ್ಷಕ ವೃತ್ತಿ ಕೊಡುಗೆ ಅಪಾರ

ದಾವಣಗೆರೆ: ಶಿಕ್ಷಕರಿಲ್ಲದ ಸಮಾಜ ಊಹಿಸಲು ಅಸಾಧ್ಯ, ಮಕ್ಕಳನ್ನು ವಿದ್ಯಾವಂತರನ್ನಾಗಿಸಿ ಅವರ ಜವಾಬ್ದಾರಿಯನ್ನು ಹೆಚ್ಚಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವವಾದದು, ಆದ್ದರಿಂದ ಶಿಕ್ಷಕ ವೃತ್ತಿ ಕಾಪಾಡಿಕೊಂಡು ಉತ್ತಮ ಸಮಾಜ ರೂಪಿಸಲು ಮುಂದಾಗಿ ಎಂದು ಸಂಸದ ಡಾ.ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

> **ಶಿಕ್ಷಕರಿಗಿರುವ ಎಲ್ಲಾ ಕೌಶಲ್ಯತೆ, ಜ್ಞಾನವನ್ನು ವಿದ್ಯಾರ್ಥಿಗಳಿಗೆ ಸಿಗುವಂತೆ ಮಾಡಬೇಕು. ಶಾಲೆಗಳಲ್ಲಿನ ಗ್ರಂಥಾಲಯದ ಪುಸ್ತಕ ಓದುವಂತೆ ಹಾಗೂ ದಿನಪತ್ರಿಕೆಗಳನ್ನು ಓದುವಂತೆ ಮಾಡಬೇಕು. ಇಂದಿನ ಮಕ್ಕಳು ಸಾಕಷ್ಟು ಬುದ್ದಿವಂತರಿದ್ದಾರೆ, ಅವರಿಗೆ ಸೂಕ್ತ ಮಾರ್ಗದರ್ಶನದ ಅಗತ್ಯವಿದೆ. ಬಡತನ, ಏಕ ಪೋಷಕತ್ವ ಮಕ್ಕಳನ್ನು ಪ್ರೋತ್ಸಾಹಿಸುವುದು, ಮಕ್ಕಳಲ್ಲಿರುವ ಪ್ರತಿಭೆ ಗುರುತಿಸುವುದು ಶಿಕ್ಷಕರಿಂದ ಮಾತ್ರ ಸಾಧ್ಯದಿದೆ. ಆ ದೊಡ್ಡ ಜವಾಬ್ದಾರಿ ಶಿಕ್ಷಕರ ಮೇಲೆ ಇದೆ.**
> - ಪ್ರಭಾ ಮಲ್ಲಿಕಾರ್ಜುನ್, ಸಂಸದೆ

ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ, ಇವರ ವತಿಯಿಂದ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮ ದಿನಾಚರಣೆ ಮತ್ತು ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರಿಗೆ ಮತ್ತು ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಡಾ.ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮ ದಿನಾಚರಣೆ ಮತ್ತು ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರಿಗೆ ಮತ್ತು ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಸಮಾರಂಭ ನಡೆಯಿತು.

ನವಭಾರತ ನಿರ್ಮಾಣಕ್ಕೆ ಶಿಕ್ಷಕರ ಪಾತ್ರ ಅತ್ಯಂತ ಮುಖ್ಯವಾದ್ದರಿಂದ ಶಿಕ್ಷಕರು ಅಲೆಗ್ಸಾಡಂರ್‌ನಂತೆ ಜ್ಞಾನಯಾತ್ರೆ, ಅಬ್ದುಲ್ ಕಲಾಂರಂತೆ ಜ್ಞಾನದ ಕ್ಷಿಪಣಿಯನ್ನು ಹಾರಿಸಬೇಕು. ಹೊಸ ಹೊಸ ತಂತ್ರಜ್ಞಾನ, ವೈಜ್ಞಾನಿಕ ಸಂಶೋಧನೆಗಿಂತ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಬದಲಾಯಿಸುವುದು ಶ್ರೇಷ್ಠ, ಅಂತಹ ಕಾಯಕವೇ ಶಿಕ್ಷಕರ ವೃತ್ತಿಯಾಗಿದೆ ಅಭಿಪ್ರಾಯಪಟ್ಟರು. ಎಲ್ಲರ ಶ್ರಮದಿಂದ ಗುರುಗಳಿಗೆ ಹೆಚ್ಚಿನ ಮಾನ್ಯತೆ ಸಿಕ್ಕಿದೆ, ಈ ನಿಟ್ಟಿನಲ್ಲಿ ಶಿಕ್ಷಕರ ಪಾತ್ರ ಮಾದರಿಯಾಗಿದ್ದು ಮಾರ್ಗದರ್ಶಿ ಶಿಕ್ಷಕರಿಗೆ ಧನ್ಯವಾದ ಹೇಳುವ ಈ ಶಿಕ್ಷಕರ ದಿನವಾಗಿದೆ ಎಂದರು.

ತಮ್ಮ ಶಾಲಾ ದಿನಗಳನ್ನು ನೆನಪುಮಾಡಿಕೊಂಡು ಈಗಿನ ವಿದ್ಯಾರ್ಥಿಗಳು ಕ್ವಿಜ್ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಶಿಕ್ಷಕರು ಶಾಲಾ ಅವಧಿಯಲ್ಲಿ ಅಷ್ಟೇ ಅಲ್ಲ, ಬಾಕಿ ವೇಳೆಯಲ್ಲೂ ಮಕ್ಕಳನ್ನು ತಿದ್ದುವ ಅವಶ್ಯಕತೆ ಇದೆ. ಇಂದು ತಂತ್ರಜ್ಞಾನ ಬದಲಾಗಿದ್ದು ಮೊಬೈಲ್‌ನಲ್ಲೇ ಎಲ್ಲಾ ಮಾಹಿತಿ ಸಿಗುತ್ತದೆ, ಮೊದಲೆಲ್ಲಾ ಎಲ್ಲಾ ಮಾಹಿತಿ ಪಡೆಯಲು ಗ್ರಂಥಾಲಯಕ್ಕೆ ಮೊರೆ ಹೋಗಬೇಕಾಗಿತ್ತು ಎಂದು ತಮ್ಮ ವಿದ್ಯಾರ್ಥಿಜೀವನದ ಮೆಲುಕು ಹಾಕಿದರು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೊಟ್ರೇಶ್, ಮಾಯಕೊಂಡ ಶಾಸಕ ಬಸವಂತಪ್ಪ, ಪ್ರಮುಖರಾದ ಕರಿಸಿದ್ದಪ್ಪ, ಎಸ್.ಗೀತಾ, ಶೇರ್‌ಅಲಿ, ಪುಷ್ಪಾಲತಾ, ವೀರೇಶ್.ಎಸ್.ಒಡೇನಪುರ ಉಪಸ್ಥಿತರಿದ್ದರು.

ಶಾಲೆಗಳಲ್ಲಿ ಶಾರದಾ ಪೂಜೆ, ಗಣೇಶ ಹಬ್ಬ ಬೇಕಿಲ್ಲ: ಬಂಜಗೆರೆ

ಹೊಸದುರ್ಗ: ಸಾರ್ವಜನಿಕ ಇಲಾಖೆ, ಶಾಲೆಗಳಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯಬಾರದೆಂಬ ನಿಯಮವಿದೆ. ಆದರೂ ಕೂಡ ಎಲ್ಲರೂ ಶಾರದಾಪೂಜೆ, ಗಣೇಶ ಹಬ್ಬ ಆಚರಿಸುತ್ತಿದ್ದೀರಿ. ಜ್ಞಾನಿಗಳಾಗಿದ್ದು ದಾರಿ ತಪ್ಪುತ್ತಿದ್ದೀರಿ. ಶಾಲೆಗಳಲ್ಲಿ ರಾಷ್ಟ್ರೀಯ ಹಬ್ಬ, ಮಹಾತ್ಮರ ಜಯಂತಿಯಂತಹ ರಾಷ್ಟ್ರಕ್ಕೆ ಉಪಯುಕ್ತ ಸಂದೇಶ ಕೊಡುವ ಆಚರಣೆ ಮಾಡಿ. ನಮ್ಮ ಸಂವಿಧಾನದ ಆಶಯದ ಹೊರತಾಗಿ ಯಾವ ಆಚರಣೆಯೂ ಬೇಕಿಲ್ಲ ಎಂದು ಸಾಹಿತಿ, ಚಿಂತಕ, ವಿಮರ್ಶಕ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಬಂಜಗೆರೆ ಜಯಪ್ರಕಾಶ್ ತಿಳಿಸಿದರು.

> **ಶಿಕ್ಷಕರು ತಮ್ಮ ಪಾಲಿನ ಜವಾಬ್ದಾರಿ ಅರಿತು ಕೆಲಸ ಮಾಡಬೇಕು. ಮಕ್ಕಳ ತಪ್ಪುಗಳನ್ನು ಗುರುತಿಸಿ, ಸರಿಯಾದ ಮಾರ್ಗದರ್ಶನ ಮಾಡಬೇಕು. ಪುಸ್ತಕ ತೆರೆದು ಓದದೇ ತರಗತಿ ಹೋಗಿ ಮಕ್ಕಳನ್ನು ಕೇಳಿ ಪಾಠ ಮಾಡುವ ಪ್ರವೃತ್ತಿ ಕೈಬಿಡಬೇಕು. ತಮ್ಮ ವೈಯಕ್ತಿಕ ಸಮಸ್ಯೆ ಏನೇ ಇದ್ದರೂ ಮಕ್ಕಳ ಕಲಿಕೆಗೆ ದ್ರೋಹ ಮಾಡಬಾರದು.**
> -ಬಿ.ಜಿ.ಗೋವಿಂದಪ್ಪ, ಶಾಸಕ

ಡಾ.ಸರ್ವೇಪಲ್ಲಿ ರಾಧಾಕೃಷ್ಣನ್ ಜಯಂತಿ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾಜಿ ಅಧ್ಯಕ್ಷ ಡಾ. ಬಂಜಗೆರೆ ಜಯಪ್ರಕಾಶ್ ಮಾತನಾಡಿದರು.

ಡಾ.ಸರ್ವೇಪಲ್ಲಿ ರಾಧಾಕೃಷ್ಣನ್ ಜಯಂತಿ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಬ್ರಿಟಿಷ್ ಆಳ್ವಿಕೆ ಕಾಲದಲ್ಲಿ ಶಿಕ್ಷಣಕ್ಕಾಗಿ ಹೋರಾಟ ಮಾಡಬೇಕಾಗಿತ್ತು. ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರು ಶಿಕ್ಷಣ ಕಲಿಸಲು ಹೋಗುತ್ತಿದ್ದಾಗ ಅವರನ್ನು ಸಗಣಿಯಲ್ಲಿ ಹೊಡೆಯಿರಿ ಅಂತ ಹೇಳಿಕೊಡುತ್ತಿದ್ದರು. ವಿಶ್ವಗುರು ಆಗಲಿಕ್ಕೆ ಬದಲು ಒಳ್ಳೆಯ ಶಿಕ್ಷಣ ನೀಡುವ ಗುರುವಾಗಬೇಕು. ಹೊಸ ಸಮಾಜ ಕಟ್ಟಲಿಕ್ಕೆ ಹಗಲುರಾತ್ರಿ ಶ್ರಮಿಸಬೇಕು ಎಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸೈಯದ್ ಮೋಸಿನ್, ಇಒ ಸುನಿಲ್ ಕುಮಾರ್, ಪ್ರಮುಖರಾದ ಆರ್. ಗಂಗಾಧರಪ್ಪ, ಬಿಆರ್‌ಸಿ ಶ್ರೀನಿವಾಸ್, ಶಾಂತಪ್ಪ, ಮಂಜುನಾಥ, ಗುತ್ತಿಕಟ್ಟೆ ಪ್ರಕಾಶ್, ಟಿ.ಶೇಖರಪ್ಪ, ಎನ್.ಓ.ಪ್ರಕಾಶ್, ಪ್ರಶಾಂತ್, ತಿಪ್ಪೇಶಪ್ಪ, ಎಂ.ಆರ್. ಶಾಂತಪ್ಪ, ಮುಖಂಡ ಕೆ.ಸಿ.ನಿಂಗಪ್ಪ, ಪುರಸಭೆ ಸದಸ್ಯರಾದ ರಾಮಚಂದ್ರಪ್ಪ, ದೊಡ್ಡಯ್ಯ, ಶಿಕ್ಷಕರ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಶಿಕ್ಷಕರು ಪಠ್ಯೇತರದಲ್ಲಿ ತೊಡಗಿಸಿಕೊಳ್ಳಲಿ

ಡಾ.ಸರ್ವಪಲ್ಲಿ ರಾಧಕೃಷ್ಣ ಜಯಂತಿಯ ಅಂಗವಾಗಿ ಶಾಸಕ ಟಿ. ರಘುಮೂರ್ತಿ ಮಾತನಾಡಿದರು.

ಚಳ್ಳಕೆರೆ: ಶಿಕ್ಷಕರು ವಿಧ್ಯಾರ್ಥಿಗಳ ಸಾಮಾರ್ಥ್ಯವನ್ನು ಅರಿತು, ಅವರ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಬೇಕು ಸಮಾಜದಲ್ಲಿ ಎಲ್ಲಾ ಹುದ್ದೆಗಳಿಗಿಂತ ಶಿಕ್ಷಕರ ಹುದ್ದೆ ಅತ್ಯಂತ ಮಹತ್ವ ಹಾಗೂ ಪವಿತ್ರವಾದುದು, ಶಿಕ್ಷಣ ಹುದ್ದೆ ಉತ್ತಮ ಸ್ಥಾನ ಪಡೆದದ್ದು ಶಿಕ್ಷಕರು ತಮ್ಮ ಮೇಲಿರುವ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ ಎಂದು ಶಾಸಕ ಟಿ. ರಘುಮೂರ್ತಿ ಹೇಳಿದರು. ಡಾ.ಸರ್ವಪಲ್ಲಿ ರಾಧಕೃಷ್ಣ ಜಯಂತಿಯ ಅಂಗವಾಗಿ ಮಾತನಾಡಿ, ಶಿಕ್ಷಕರ ವೃತ್ತಿ ಅತ್ಯಂತ ಜವಾಬ್ದಾರಿ ಸ್ಥಾನವಾಗಿದ್ದು ಪ್ರತಿಯೊಬ್ಬ ಶಿಕ್ಷಕರು ತಮ್ಮ ಸೇವಾ ಅವಧಿಯಲ್ಲಿ ಹೆಚ್ಚಿನ ಅಧ್ಯಯನ ತೊಡಗುವ ಅಗತ್ಯವಿದೆ ಎಂದರು.

ತಾಪಂ ಇಒ ಶಶಿಧರ್ ಮಾತನಾಡಿ, ಶಿಕ್ಷಕ ವೃತ್ತಿಯನ್ನು ಯಾರು ಗೌರವಿಸುತ್ತಾರೋ ಅಂತವರು ಉನ್ನತ ಮಟ್ಟಕ್ಕೆ ಹೊಗುತ್ತಾರೆ. ಶಾಲಾ ಮಕ್ಕಳನ್ನು ತಮ್ಮ ಸ್ವತಃ ಮಕ್ಕಳಂತೆ ಯಾರು ಕಾಣುತ್ತಾರೋ ಅವರು ಮಾದರಿ ಶಿಕ್ಷಕರಾಗುತ್ತಾರೆ. ಇಂದು ಕನ್ನಡ ಸರ್ಕಾರಿ ಶಾಲೆಗಳು ಮುಚ್ಚುವ ಹಂತಕ್ಕೆ ತಲುಪಿವೆ, ಖಾಸಗಿ ಶಾಲೆಗೆ ಪೈಪೋಟಿ ನೀಡುವಲ್ಲಿ ಸರಕಾರಿ ಶಾಲೆಯ ಮಕ್ಕಳು ವಿದ್ಯಾಭ್ಯಾಸದಲ್ಲಿ ಮುಂಚೂಣಿಯಲ್ಲಿರುವಂತೆ ಶಿಕ್ಷಕ ಪ್ರೇರಕ ಶಕ್ತಿಯಾಗಿರಬೇಕು ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಎಸ್. ಸುರೇಶ್, ಪ್ರಮುಖರಾದ ಜೈತುಂಬಿ, ಸುಜಾತಾ, ರಾಘವೇಂದ್ರ, ಸುಮಕ್ಕ ಅಂಜಿನಪ್ಪ, ಕವಿತಾ, ಶಿಕ್ಷಕರಾದ ಜಿಟಿ.ವೀರಭದ್ರಸ್ವಾಮಿ, ಪಾಲಯ್ಯ, ರಾಜುಕುಮಾರ್, ಹೆಚ್.ಹನುಮಂತಪ್ಪ, ಶ್ರೀನಿವಾಸ್, ಡಿಟಿ.ಶ್ರೀನಿವಾಸ್, ದಯಾನಂದ್, ಬಿಆರ್‌ಸಿ ಮಂಜುನಾಥ,ಗ್ಯಾರಂಟಿ ಸಮಿತಿಯ ಅಧ್ಯಕ್ಷ ಗದ್ದಿಗೆ ತಿಪ್ಪೇಸ್ವಾಮಿ, ಪ್ರಾಂಶುಪಾಲ ಲೀಲಾವತಿ, ಉಪನಿರ್ದೇಶಕ ಮಂಜುನಾಥ್, ನಾಸಿರುದ್ದೀನ್, ಪ್ರೌಢಶಾಲಾ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪಾದಾಧಿಕಾರಿಗಳು ಉಪಸ್ಥಿತರಿದ್ದರು.

> **ಮಕ್ಕಳನ್ನು ಶಿಕ್ಷಕರು ಸರ್ವತೋಮುಖವಾಗಿ ಮುಂದೆ ಬರಲು ಪ್ರೇರೆಪಿಸಲು ಸಾಧ್ಯವಿದೆ. ಶಿಕ್ಷಕರು ಎಂದರೆ ಕೇವಲ ನಾಲ್ಕು ಗೋಡೆಗಳ ಮಧ್ಯೆ ಪಾಠ ಮಾಡಿ ಮನೆಗೆ ಹೋಗುವ ನೌಕರಿ ವರ್ಗದವರಾಗದೆ, ದೇಶವನ್ನು ನಿರ್ಮಾಣ ಮಾಡುವ ಒಬ್ಬ ವ್ಯಕ್ತಿಯನ್ನು ಸೃಷ್ಠಿಮಾಡುವ ವ್ಯಕ್ತಿತ್ವವನ್ನು ತಯಾರು ಮಾಡಿ.**
> -ಟಿ. ರಘುಮೂರ್ತಿ, ಶಾಸಕ

ಆಕ್ಷೇಪಣೆ ಸಲ್ಲಿಸಲು ಅರ್ಜಿ

ದಾವಣಗೆರೆ: ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ, 15 ನೇ ಹಣಕಾಸು ಆಯೋಗ ಮತ್ತು ಪಿಎಂ-ಅಭಿಯಾನ ಕಾರ್ಯಕ್ರಮದಡಿಯಲ್ಲಿ ಗುತ್ತಿಗೆ ಆಧಾರಿತ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಬಹುದು.

ಜಿಲ್ಲೆಯಲ್ಲಿ 2024-25 ಆರ್ಥಿಕ ವರ್ಷದಲ್ಲಿ ಅನುಮೋದನೆಯಾಗಿ ಖಾಲಿ ಇರುವ ಕಿ.ಆ.ಸಹಾಯಕರ ಹುದ್ದೆಗೆ ಆ.17 ರಂದು ಕಚೇರಿಗೆ ಸ್ವೀಕೃತಿಯಾದ ಅರ್ಜಿಗಳಲ್ಲಿ, ರೋಸ್ಟರ್ ಹಾಗೂ ಮೆರಿಟ್ ಆಧಾರದ ಮೇಲೆ ತಾತ್ಕಾಲಿಕವಾಗಿ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಚೇರಿ, ಎಸ್. ಎಸ್. ಹೈಟೆಲ್ ಆಸ್ಪತ್ರೆ ಹತ್ತಿದ, ಎನ್.ಸಿ.ಸಿ ಕ್ಯಾಂಪ್ ಪಟ್ಟಿ, ಶ್ರೀರಾಮ ನಗರ ರಸ್ತೆ, ದಾವಣಗೆರೆ-577005, ಇಲ್ಲಿನ ಸೂಚನಾ ಫಲಕದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಸೆ.6 ರಂದು ಪ್ರಕಟಿಸಲಾಗಿದ್ದು, ಈ ಪಟ್ಟಿಗೆ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತವಾಗಿ ಸಮರ್ಥನೀಯ ಪುರಾವೆಗಳೊಂದಿಗೆ ಸೆ.20 ರೊಳಗಾಗಿ ಕಚೇರಿಗೆ ಸಲ್ಲಿಸಬೇಕೆಂದು ಜಿಲ್ಲಾ ಆರ್ .ಸಿ.ಹೆಚ್ ಅಧಿಕಾರಿ ರೇಣುಕಾರಾಧ್ಯ ತಿಳಿಸಿದ್ದಾರೆ.

ಶಿಕ್ಷಕರು ವೃತ್ತಿಯಲ್ಲಿ ಆದರ್ಶ, ಬದ್ಧತೆ ಅಳವಡಿಸಿಕೊಳ್ಳಿ: ಸಚಿವ

ನಗರದ ತರಾಸು ರಂಗಮಂದಿರದಲ್ಲಿ ಆಯೋಜಿಸಲಾದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ವಾರಿ ಸಚಿವ ಡಿ.ಸುಧಾಕರ್ ಉದ್ಘಾಟಿಸಿದರು.

ಚಿತ್ರದುರ್ಗ: ಶಿಕ್ಷಕರು ವೃತ್ತಿಯಲ್ಲಿ ಆದರ್ಶ, ಬದ್ಧತೆ ಹಾಗೂ ತಲ್ಲೀನತೆ ಅಳವಡಿಕೊಳ್ಳಬೇಕು ಎಂದು ಯೋಜನೆ ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಸಲಹೆ ನೀಡಿದರು.

ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾಪಂಚಾತಿ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ, ಗುರುವಾರ ನಗರದ ತರಾಸು ರಂಗಮಂದಿರದಲ್ಲಿ ಆಯೋಜಿಸಲಾದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕ ಸ್ಥಾನಕ್ಕೆ ಬೆಲೆ ಕಟ್ಟಲಾಗದು. ಸ್ವತಃ ನಾನು ಪದವಿ ಶಿಕ್ಷಣ ಪೂರೈಸಿದ್ದೇನೆ ಎಂದರೆ ಅದಕ್ಕೆ ಕಾರಣ ಚಿಕ್ಕಂದಿನಲ್ಲಿ ನನಗೆ ಪಾಠ ಹೇಳಿದ ಶಿಕ್ಷಕರು. ನಾನು ಜೀವನದಲ್ಲಿ ಶಿಸ್ತು, ಬದ್ಧತೆ ರೂಢಿಸಿಕೊಳ್ಳುವುದನ್ನು ಶಿಕ್ಷಕರು ಕಲಿಸಿದರು. ದೇಶ ಹಾಗೂ ರಾಜ್ಯದಲ್ಲಿ ಸರ್ಕಾರಗಳು ಸಾವಿರಾರು ಕೋಟಿ ಹಣವನ್ನು ಶಿಕ್ಷಣದ ಮೇಲೆ ಖರ್ಚು ಮಾಡುತ್ತಿವೆ. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ನವರು ಶಿಕ್ಷಕರ ಬೇಡಿಕೆಗಳಿಗೆ ತಕ್ಷಣ ಸ್ಪಂದಿಸುತ್ತಿದ್ದಾರೆ. ರಾಜ್ಯದಲ್ಲಿ 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿ ಮಾಡಲಾಗಿದೆ. 2017ಕ್ಕಿಂತ ಮೊದಲು ಪ್ರಾಥಮಿಕ ಶಾಲೆಗಳಿಗೆ ನೇಮಕವಾದ ಶಿಕ್ಷಕರ ಬಡ್ತಿ ಸಮಸ್ಯೆ ಹಾಗೂ ಇತರೆ ಬೇಡಿಕೆಗಳಿಗೆ ಪರಿಹಾರ ದೊರಕಿಸಲು ಸಮಿತಿ ರಚಿಸುವ ಭರವಸೆ ನೀಡಿದ್ದಾರೆ ಎಂದು ಸಚಿವ ಡಿ. ಸುಧಾಕರ್ ಹೇಳಿದರು.

ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಪ್ರಮುಖರಾದ ಸುಮಿತಾ ರಘು, ತಾಜ್‌ಪೀರ್, ಶಿವಣ್ಣ, ಟಿ.ಜಿ.ಲೀಲಾವತಿ, ಕೆ.ಟಿ.ತಿಮ್ಮಾರೆಡ್ಡಿ, ಎಂ.ಆರ್.ಮಂಜುನಾಥ್, ಎಂ.ನಾಸೀರುದ್ದೀನ್, ನಾಗಭೂಷಣ್ ಸೇರಿದಂತೆ ವಿವಿಧ ಶಿಕ್ಷಕ ಸಂಘಟನೆಗಳ ಜಿಲ್ಲಾಧ್ಯಕ್ಷರು, ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

ಶಿಕ್ಷಕರನ್ನು ಕೆಟ್ಟದಾಗಿ ಬಿಂಬಿಸುವ ಪ್ರಯತ್ನಕ್ಕೆ ಬೇಸರ

ಸಾಮಾಜಿಕ ಮಾಧ್ಯಮಗಳ ಮೂಲಕ ಶಿಕ್ಷಕರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ, ಕೆಟ್ಟದಾಗಿ ಬಿಂಬಿಸುವಂತಹ ಪ್ರಯತ್ನವಾಗುತ್ತಿರುವುದಕ್ಕೆ ಸಂಸದ ಗೋವಿಂದ ಎಂ ಕಾರಜೋಳ ಬೇಸರ ವ್ಯಕ್ತಪಡಿಸಿದರು.ಈ ಹಿಂದೆ ಶಿಕ್ಷಕರು ನಮ್ಮನ್ನು ಒಂಟಿ ಕಾಲಿನ ಮೇಲೆ ನಿಲ್ಲಿಸಿ ಪಾಠ ಹೇಳಿಕೊಡುತ್ತಿದ್ದರು. ತಪ್ಪು ಮಾಡಿದರೆ ಶಿಕ್ಷಿಸುತ್ತಿದ್ದರು. ಇದನ್ನು ಪಾಲಕರು ಸಹ ಒಪ್ಪಿದ್ದರು. ಈಗ ಮಕ್ಕಳನ್ನು ದಂಡಿಸಿದರೆ, ಪಾಲಕರು ಶಿಕ್ಷಕರ ಮೇಲೆ ಜಗಳಕ್ಕೆ ಹೋಗುತ್ತಾರೆ. ಇನ್ನು ಹಲವು ಸಾಮಾಜಿಕ ಮಾಧ್ಯಮಗಳಲ್ಲಿ ಶಿಕ್ಷಕರು ಮಕ್ಕಳನ್ನು ಶೌಚಾಲಯ ತೊಳಿಯಲು ಹಚ್ಚಿದ್ದಾರೆ ಎನ್ನುವ ವಿಡಿಯೋ ಹರಿದಾಡಿಸಿ, ಸರಕಾರ ಅವರ ಮೇಲೆ ಕ್ರಮ ಕೈಗೊಂಡ ಪ್ರಸಂಗವೂ ಜರುಗಿವೆ. ಮುಂದುವರಿದ ಜಪಾನ್ ದೇಶದಲ್ಲಿ ಇಂದಿಗೂ ಶಿಕ್ಷಕರು ಹಾಗೂ ಮಕ್ಕಳೇ ಅಲ್ಲಿನ ಶೌಚಾಲಯಗಳನ್ನು ಸ್ವಚ್ಚಗೊಳಿಸುತ್ತಾರೆ. ಸ್ವಚ್ಚತೆ ಬಗ್ಗೆ ಮಕ್ಕಳಿಗೆ ಕಲಿಸಿಕೊಡುವುದು ಅವಶ್ಯಕವಿದೆ ಎಂದು ಗೋವಿಂದ ಕಾರಜೋಳ ಹೇಳಿದರು.

ಗುರುವೆಂದರೆ ಶಕ್ತಿ, ಮನುಷ್ಯನ ಬದುಕಿಗೆ ದೊರೆಯಲಿದೆ ಮುಕ್ತಿ

ಮೊಳಕಾಲ್ಮೂರು ತಾಲೂಕಿನ ದೇವಸಮುದ್ರ ಹೋಬಳಿಯ ರಾಂಪುರ ಗ್ರಾಮದಲ್ಲಿ ಶಿಕ್ಷಣ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಮೊಳಕಾಲ್ಮೂರು: ಶಿಕ್ಷಕರ ಸೇವೆಯು ಅತ್ಯಂತ ಮಹತ್ವಪೂರ್ಣವಾದ ಸೇವೆಯಾಗಿದ್ದು ಪ್ರತಿಯೊಬ್ಬ ನಾಗರಿಕನು ಸಂಸ್ಕಾರದೊಂದಿಗೆ ಜೀವನ ಸಾಗಿಸಲು ಗುರುವಿನ ಸಲಹೆ ಸೂಚನೆ ಮತ್ತು ಮಾರ್ಗದರ್ಶನ ಅತ್ಯವಶ್ಯಕವಾಗಿದೆ ಅಂತಹ ನಿಟ್ಟಿನಲ್ಲಿ ಗುರುವಿನ ಸೇವೆಯು ಅತ್ಯಂತ ಪವಿತ್ರವಾದ ಸೇವೆಯಾಗಿದೆ ಎಂದು ಶಾಸಕ ಎನ್.ವೈ. ಗೋಪಾಲಕೃಷ್ಣ ಅಭಿಪ್ರಾಯ ವ್ಯಕ್ತಪಡಿಸಿದರು ಮೊಳಕಾಲ್ಮೂರು ತಾಲೂಕಿನ ದೇವಸಮುದ್ರ ಹೋಬಳಿಯ ರಾಂಪುರ ಗ್ರಾಮದಲ್ಲಿ ಶಿಕ್ಷಣ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನಮ್ಮ ತಂದೆಯವರು ಸಹ ಶಿಕ್ಷಕರಾಗಿದ್ದು ನಾನು ಸಹ ಶಿಕ್ಷಕರ ಮಗನಾಗಿರುವುದರಿಂದ ಶಿಕ್ಷಕರ ಜೀವನದ ಎಲ್ಲಾ ಸಮಸ್ಯೆಗಳ ಅರಿವಿದೆ ಶಿಕ್ಷಕರು ಉತ್ತಮ ಸೇವೆಗಾಗಿ ಎಲ್ಲಾ ರೀತಿಯ ಸೌಲಭ್ಯ ಮತ್ತು ಸೌಕರ್ಯಗಳನ್ನು ಒದಗಿಸಲಾಗುವುದು ಉತ್ತಮ ಸೇವೆಯನ್ನು ನೀಡುವ ಮೂಲಕ ಪ್ರತಿಯೊಬ್ಬರಿಗೂ ಉತ್ತಮ ಶಿಕ್ಷಣ ಸಿಗುವಂತೆ ಕಾರ್ಯನಿರ್ವಹಿಸಬೇಕಾಗಿದೆ ಎಂದು ತಿಳಿಸಿದರು

> **ಗುರುವೆಂದರೆ ವ್ಯಕ್ತಿಯಲ್ಲ ಅದೊಂದು ಅದ್ಭುತ ಶಕ್ತಿ ಅಂತಹ ಶಕ್ತಿಯಿಂದ ಮಾತ್ರ ಪ್ರತಿಯೊಬ್ಬ ನಾಗರಿಕನು ಹರಿವನ್ನು ಪಡೆದು ಸಂಸ್ಕಾರವಂತನಾಗಿ ಉತ್ತಮ ಬದುಕು ಸಾಗಿಸಲು ಸಾಧ್ಯ. ಇಂತಹ ಅಮೂಲ್ಯ ಸೇವೆಯ ಗುರುಗಳನ್ನು ಒಂದೇ ವೇದಿಕೆಯಲ್ಲಿ ತರುವ ಮತ್ತು ಅವರನ್ನು ಗೌರವಿಸುವ ಅತ್ಯಂತ ಮಹತ್ವಪೂರ್ಣವಾದ ಕಾರ್ಯಕ್ರಮ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವಾಗಿದೆ.**
> -ಎನ್.ವೈ.ಗೋಪಾಲಕೃಷ್ಣ, ಶಾಸಕ

ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ನಿರ್ಮಲಾದೇವಿ, ಅಧಿಕಾರಿಗಳಾದ ತಹಸೀಲ್ದಾರ್ ಟಿ.ಜಗದೀಶ್, ಹನುಮಂತಪ್ಪ ಗೋವಿಂದರಾಜು, ಪಿಎಸ್‌ಐ ಮಹೇಶ್, ಪಾತ ಲಿಂಗಪ್ಪ, ಈರಣ್ಣ, ರಂಗಪ್ಪ, ಮುಖಂಡರಾದ ಅಬ್ದುಲ್ ಸುಬಾನ್ ಸಾಬ್, ಎಸ್.ಖಾದರ್, ಟಿಕೆ ಕಲೀಮುಲ್ಲಾ, ಜಿ.ಪ್ರಕಾಶ್, ಡಿಕೆ ಮಂಜುನಾಥ್, ಅಜ್ಜಪ್ಪ, ವೀರಪ್ಪ, ಶ್ರೀನಿವಾಸ್, ಶ್ರೀಕಾಂತ್ ಮುಂತಾದವರು ಉಪಸ್ಥಿತರಿದ್ದರು.

ಪಪಂ ಅಧ್ಯಕ್ಷರಾಗಿ ನವೀನ್ ಆಯ್ಕೆ

ಜಗಳೂರು: ಪಟ್ಟಣದ ಪಟ್ಟಣಪಂಚಾಯಿತಿ ನೂತನ ಅಧ್ಯಕ್ಷನಾಗಿ ನವೀನ್ ಕುಮಾರ್ ಉಪಾಧ್ಯಕ್ಷೆಯಾಗಿ ಲೋಲಾಕ್ಷಮ್ಮ ಓಬಳೇಶ್ ಅವಿರೋಧ ಆಯ್ಕೆಯಾದರು. ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳು ತೆರವಾಗಿ ಕಳೆದ ಒಂದು ವರ್ಷಕ್ಕಿಂತ ಅಧಿಕ ತಿಂಗಳುಗಳ ಕಾಲ ಆಡಳಿತಾಧಿಕಾರಿಕೈಯಲ್ಲಿದ್ದ ಪಟ್ಟಣ ಪಂಚಾಯಿತಿ ಆಡಳಿತ ಮೀಸಲಾತಿ ಹೊರಬಿದ್ದ ನಂತರ ಪುನಃ ಬಿಜೆಪಿ ತೆಕ್ಕೆಗೆ ಸೇರ್ಪಡೆಗೊಂಡಿತು. 'ಸಾಮಾನ್ಯ ಅಧ್ಯಕ್ಷ ಮೀಸಲು ಸ್ಥಾನಕ್ಕೆ ನವೀನ್ ಕುಮಾರ್ ಅವರು ಹಾಗೂ ಸಾಮಾನ್ಯ ಮಹಿಳಾ ಉಪಾಧ್ಯಕ್ಷ ಸ್ಥಾನಕ್ಕೆ ಲೋಲಾಕ್ಷಮ್ಮ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.ಉಮೇದುವಾರಿಕೆ ದಾಖಲೆಗಳು ಊರ್ಜಿತವಾದ ಹಿನ್ನೆಲೆ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ' ಎಂದು ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ತಹಸೀಲ್ದಾರ್ ಸಯ್ಯದ್ ಕಲೀಂ ಉಲ್ಲಾ ತಿಳಿಸಿದರು. ಮಾಜಿ ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ಬಹುದಿನಗಳಿಂದ ಅಧ್ಯಕ್ಷ ಉಪಾಧ್ಯಸ್ಥಾನಗಳಿಲ್ಲದೆ ಅಧಿಕಾರ ಗಾದಿಗಾಗಿ ಕಾತುಕದಲ್ಲಿ ಕಾಯುತ್ತಿದ್ದ ಆಕಾಂಕ್ಷಿಗಳಿಗೆ ಇದೀಗ ತೆರೆಬಿದ್ದಿದೆ. ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ, ಪ್ರಮುಖರಾದ ಧನಂಜಯ್ ಕಡ್ಲೆಬಾಳು, ರೇವಣ್ಣ, ತಿಪ್ಪೇಸ್ವಾಮಿ, ನಿರ್ಮಲ, ಲಲಿತಮ್ಮ, ವಿಶಾಲಾಕ್ಷಿ, ಮಂಜಮ್ಮ, ಖಾಜುನ್ನಿಸಾ, ಲುಕ್ಮಾನ್ ಖಾನ್, ಸರೋಜಮ್ಮ, ಪಾಪಲಿಂಗಪ್ಪ, ಮುಖಂಡರಾದ ಜೆ.ವಿ.ನಾಗರಾಜ್, ಓಬಳೇಶ್, ಹನುಮಂತಪ್ಪ ಸೇರಿದಂತೆ ಇದ್ದರು.

ಬಿಜೆಪಿ 2 ಬಣಗಳಿಂದ ಪ್ರತ್ಯೇಕ ಸದಸ್ಯತ್ವ

ಹೊನ್ನಾಳಿ: ವಿಕಸಿತ ಭಾರತವನ್ನಾಗಿಸಲು ಮತ್ತು ಮೋದೀಜಿಯವರಿಗೆ ಬಲ ತುಂಬಲು ಹೆಚ್ಚು ಸದಸ್ಯರನ್ನು ಮಾಡಲು ಕಾರ್ಯಕರ್ತರು ಮತ್ತು ಮುಖಂಡರು ಮುಂದಾಗಬೇಕೆಂದು ಲೋಕಸಭಾ ಚುನಾವಣೆಯ ಬಿಜೆಪಿ ಅಭ್ಯರ್ಥಿಯಾಗಿದ್ದ ಗಾಯತ್ರಿ ಸಿದ್ದೇಶ್ವರ್ ಅವರು ಕರೆ ನೀಡಿದರು.

ಪಟ್ಟಣದ ಗುರುಭವನದಲ್ಲಿ ಬಿಜೆಪಿ ಪಕ್ಷದವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸದಸ್ಯತ್ವ ಅಭಿಯಾನ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು.

ಆರ್ಥಿಕತೆಯಲ್ಲಿ 5ನೇ ಸ್ಥಾನದಲ್ಲಿರುವ ಭಾರತವನ್ನು 3ನೇ ಸ್ಥಾನಕ್ಕೆ ತರುವ ನಿಟ್ಟಿನಲ್ಲಿ ಮೋದಿಯವರು ಪ್ರಯತ್ನಿಸುತ್ತಿದ್ದು ಅವರ ಕೈ ಬಲಪಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಅತ್ಯಗತ್ಯವಾಗಿದೆ ಎಂದು ವಿನಂತಿಸಿದರು.

ಕಾರ್ಯಕರ್ತರು ಮತ್ತು ಮುಖಂಡರು ಪ್ರಾಮಾಣಿಕವಾಗಿ ಪಕ್ಷದ ಪರವಾಗಿ ಮತ ಚಲಾಯಿಸಿದ್ದಕ್ಕೆ ನನಗೆ ಕಳೆದ ಚುನಾವಣೆಯಲ್ಲಿ ಅತೀ ಹೆಚ್ಚಿನ ಮತಗಳು ಬರಲು ಸಾಧ್ಯವಾಯಿತು. ಶಾಸಕ ಮತ್ತು ಸಂಸದರ ಸೋಲಿನಿಂದ ಕಾರ್ಯಕರ್ತರ ಮನಸ್ಸಿಗೆ ಬೇಜಾರಾಗಿದೆ ಆದರೂ ಎದೆಗುಂದದೇ ಪಕ್ಷದ ಬೆನ್ನೆಲುಬಾಗಿ ನಿಲ್ಲೋಣ ಎಂದು ಗಾಯತ್ರಿ ಸಿದ್ದೇಶ್ವರ್ ಕಾರ್ಯಕರ್ತರನ್ನು ಹುರಿದುಂಬಿಸಿದರು.

ಜಿಪಂ ಮಾಜಿ ಸದಸ್ಯ ಎಂ.ಆರ್.ಮಹೇಶ್ ಮಾತನಾಡಿ, ಕಳೆದ ಬಾರಿ 80,000 ಸದಸ್ಯತ್ವ ಹೊಂದಿದ್ದರೂ ಲೋಕಸಭಾ ಚುನಾವಣೆಯಲ್ಲಿ ಕಾರ್ಯಕರ್ತರ ಅತಿಯಾದ ವಿಶ್ವಾಸದಿಂದ ಅಭ್ಯರ್ಥಿಯ ಸೋಲಿಗೆ ಕಾರಣವಾಯಿತು ಎಂದು ಬೇಸರ ವ್ಯಕ್ತ ಪಡಿಸಿದರು.

ಸದಸ್ಯತ್ವ ಅಭಿಯಾನ ಕಾರ್ಯಕ್ರಮವನ್ನುದ್ದೇಶಿಸಿ ಗಾಯತ್ರಿ ಸಿದ್ದೇಶ್ವರ್ ಮಾತನಾಡಿದರು.

ಬಿಜೆಪಿ ಮುಖಂಡ ಶಾಂತರಾಜ್ ಪಾಟೀಲ್ ಮಾತನಾಡಿ ಜಿಲ್ಲೆ ಮತ್ತು ತಾಲೂಕಿನಲ್ಲಿ 2 ಬಣಗಳು ಇರುವುದು ಒಳ್ಳೆಯ ಬೆಳವಣಿಗೆಯಲ್ಲ, ಪಕ್ಷದ ಒಳಿತಿಗಾಗಿ ಎಲ್ಲರೂ ತಮ್ಮ ವೈಮನಸ್ಸನ್ನು ಬದಿಗೊತ್ತಿ ಒಗ್ಗಟ್ಟಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿಪಂ ಮಾಜಿ ಅಧ್ಯಕ್ಷೆ ದೀಪಾ ಜಗದೀಶ್, ಜಿಪಂ ಮಾಜಿ ಉಪಾಧ್ಯಕ್ಷ ಕೆ.ವಿ.ಚನ್ನಪ್ಪ, ತಾಲ್ಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಕೆ.ರವಿ ಮುಖಂಡರಾದ ನೆಲಹೊನ್ನೆ ದೇವರಾಜ್,ಟಿ.ಎಸ್.ಜಗದೀಶ್ ಯಕ್ಕನಹಳ್ಳಿ, ಎಂ.ಯು.ನಟರಾಜ್ ನ್ಯಾಮತಿ,ಚನ್ನೇಶ್,ಅಜಯ್ ರೆಡ್ಡಿ,ಲೋಕೇಶ್ ಚೀಲೂರು ಮತ್ತಿತರರು ಉಪಸ್ಥಿತರಿದ್ದರು.

ನಿವೃತ್ತ ಶಿಕ್ಷಕರಿಗೆ ಸನ್ಮಾನ, ಗೌರವ

ಹರಿಹರ: ವ್ಯವಸ್ಥೆ ಬದಲಾಗಿದೆ ಅದರಂತೆ ನಾವುಗಳು ಬದಲಾಗಬೇಕು,ಇಲದಿದ್ದರೆ ಭವಿಷ್ಯದಲ್ಲಿ ಶಿಕ್ಷಕರಿಲ್ಲದೆ ಶಿಕ್ಷಣ ನೀಡುವ ವ್ಯವಸ್ಥೆ ಬಂದರೆ ಆಶ್ಚರ್ಯ ಪಡಬೇಕಿಲ್ಲ ಎಂದು ದಾವಣಗೆರೆ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ.ಎಂ. ಮಂಜುನಾಥ್ ಹೇಳಿದರು. ನಗರದ ಗುರು ಭವನದಲ್ಲಿ ಜಿ.ಪಂ, ತಾಪಂ. ಹಾಗೂ ಶಾಲಾ ಶಿಕ್ಷಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರ ಸನ್ಮಾನ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಅಜ್ಞಾನ ದಿಂದ ಸುಜ್ಞಾನ ಕಡೆ ಕರೆದುಕೊಂಡು ಹೋಗುವವನು ಒಬ್ಬ ಗುರು ಅಥವಾ ಶಿಕ್ಷಕನಾಗಿರುತ್ತಾನೆ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿಯಾದ ಶಿಕ್ಷಕರನ್ನು ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸ ಲಾಯಿತು. ಈ ಸಮಯದಲ್ಲಿ ಪದವೀಧರೇತರ ಮುಖ್ಯ ಶಿಕ್ಷಕರ ಸಂಘದ ಬೀರಪ್ಪ, ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಕುಬೇಂದ್ರಪ್ಪ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವೀರೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷಎಚ್.ಚಂದ್ರಪ್ಪ, ಕಾರ್ಯದರ್ಶಿ ಶರಣಕುಮಾರ್ ಹೆಗಡೆ, ಸರಕಾರಿ ನೌಕರರ ಸಂಘದ ಅಧ್ಯಕ್ಷ ವಿಜಯ ಮಹಾಂತೇಶ್, ಬಿ.ಆರ್.ಸಿ ಕೃಷ್ಣಪ್ಪ, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಈಶಪ್ಪ ಬೂದಿಹಾಳ, ಸರಕಾರಿ ನೌಕರ ಸಂಘದ ನಿಕಟ ಪೂರ್ವಅಧ್ಯಕ್ಷ ಎ.ಕೆ.ಭೂಮೇಶ್ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಆಧಾರ್ ಅಪ್‌ಡೇಟ್‌ಗೆ ಡಿಸಿ ಸೂಚನೆ

ಶಿವಮೊಗ್ಗ: ಸಾಮಾಜಿಕ ಭದ್ರತಾ ಯೋಜನೆಯ ಪಿಂಚಣಿಗಳಾದ ವೃದ್ದಾಪ್ಯ ಯೋಜನೆ, ವಿಧವಾ ಯೋಜನೆ, ಅಂಗವಿಕಲ ಯೋಜನೆ, ಸಂಧ್ಯಾ ಸುರಕ್ಷಾ ಯೋಜನೆ, ಮನಸ್ವಿನಿ, ಮೈತ್ರಿ ಯೋಜನೆಗಳ ಮಾಸಿಕ ಪಿಂಚಣಿಯನ್ನು ಫಲಾನುಭವಿಗಳಿಗೆ ಆಧಾರ್ ಆಧಾರಿತ ನೇರ ಹಣ ಸಂದಾಯ ಯೋಜನೆ (ಡಿಬಿಟಿ) ಮೂಲಕ ಪಾವತಿಸಲಾಗುತ್ತದೆ. ಆಧಾರ್ ಡೃಢಿಕರಣ ವಿಫಲವಾದ 2937 ಫಲಾನುಭವಿಗಳು ಮತ್ತು ಹೆಸರು ಹೊಂದದ 21 ಫಲಾನುಭವಿಗಳಿಗೆ ಕಳೆದ ಮಾರ್ಚ್-2024 ರಿಂದ ಮಾಸಿಕ ಪಿಂಚಣಿ ಸಂದಾಯವಾಗಿರುವುದಿಲ್ಲ. ಕೂಡಲೇ ಮಂಜೂರಾತಿ ಆದೇಶ ಪತ್ರ, ಆಧಾರ್ ಕಾರ್ಡ್, ಪಾಸ್ ಪುಸ್ತಕ ಮತ್ತು ಎನ್.ಪಿ.ಸಿ.ಐ. ಮ್ಯಾಪಿಂಗ್ ಪ್ರತಿಯೊಂದಿಗೆ ತಾಲೂಕು ಕಛೇರಿ/ನಾಡ ಕಛೇರಿಗೆ ಭೇಟಿ ನೀಡಿ ಅಪ್‌ಡೇಟ್ ಮಾಡಿಸುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಶಾಲೆಗಳಲ್ಲಿ ಮಕ್ಕಳಿಗೆ ಓದುವ ಅಭಿಯಾನ

ಚಂದ್ರಗುತ್ತಿ: ಶಾಲಾ ಮಕ್ಕಳನ್ನು ಶೈಕ್ಷಣಿಕವಾಗಿ ಬೆಳೆಸಲು ಶಿಕ್ಷಣ ಇಲಾಖೆಯು ಶಾಲೆಗಳಲ್ಲಿ ಮಕ್ಕಳಿಗೆ ಓದುವ ಅಭಿಯಾನವನ್ನು ಜಾರಿಗೊಳಿಸಿದೆ. ಎಂದು ಕತವಾಯಿ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಗಣೇಶ್ ಪಿ.ನಾಯ್ಕ ಹೇಳಿದರು. ಚಂದ್ರಗುತ್ತಿ ಸಮೀಪದ ಕತವಾಯಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಓದುವ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು, ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಆಧುನಿಕ ಮೊಬೈಲ್ ಆಕರ್ಷಣೆಗೆ ಮಾರುಹೋಗುತ್ತಿದ್ದಾರೆ. ಇದರಿಂದ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಶಾಲಾ ಹಂತದಲ್ಲೇ ವಿದ್ಯಾರ್ಥಿಗಳು ಜ್ಞಾನ ವೃದ್ಧಿಪಡಿಸಿಕೊಳ್ಳಲು ಓದುವ ಅಭಿಯಾನ ಸಹಕಾರಿಯಾಗಿದೆ ಎಂದರು.ಅನೇಕ ಮಹಾನುಭಾವರು ಬರೆದಂತಹ ಕಥೆ,ಕಾದಂಬರಿ, ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆ, ಸಾಮಾಜಿಕ, ಸಾಂಸ್ಕೃತಿಕ ವಿಷಯಗಳು ಇರುವಂತಹ ಪುಸ್ತಕಗಳನ್ನು ಮಕ್ಕಳು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂಬುವ ದೃಷ್ಟಿಯಿಂದ ಶಿಕ್ಷಣ ಇಲಾಖೆ ವಿನೂತನವಾಗಿ ಓದುವ ಅಭಿಯಾನವನ್ನು ಅನುಷ್ಠಾನಗೊಳಿಸಿದ್ದು, ಅತ್ಯಂತ ಶ್ಲಾಘನೀಯ ಎಂದ ಅವರು 21 ದಿನಗಳ ಕಾಲ ಶಾಲೆಗಳಲ್ಲಿ ಓದುವ ಅಭಿಯಾನ ನಡೆಯಲಿದೆ ಎಂದು ತಿಳಿಸಿದರು. ಸಂದರ್ಭದಲ್ಲಿ ಶಾಲೆಯ ಸಹಶಿಕ್ಷಕ ಎಸ್ ಲೋಕಪ್ಪ, ಉಪಸ್ಥಿತರಿದ್ದರು.

ವಿರಾಮ
ಪ್ರತಿ ಭಾನುವಾರ

ಜಿಲ್ಲಾಡಳಿತದಿಂದ ಶಿಕ್ಷಕರ ದಿನಾಚರಣೆ | ಶಾಸಕ ಚನ್ನಬಸಪ್ಪ ಚಾಲನೆ

ಶಿಕ್ಷಣದಿಂದ ಸಮಾಜದ ಉದ್ಧಾರ

ಶಿವಮೊಗ್ಗ: ಶಿಕ್ಷಣ ಅತ್ಯಂತ ಮಹತ್ವವಾದ ಕ್ಷೇತ್ರ. ಶಿಕ್ಷಣದ ಮೌಲ್ಯದಿಂದಲೇ ಸಮಾಜದ ಉದ್ದಾರ ಸಾಧ್ಯವಾಗಿದ್ದು ಮೌಲ್ಯಾಧಾರಿತ ಶಿಕ್ಷಣಕ್ಕೆ ಇನ್ನಷ್ಟು ಶಕ್ತಿ ತುಂಬಬೇಕೆಅದು ಶಾಸಕರಾದ ಎಸ್ ಎನ್.ಚನ್ನಬಸಪ್ಪ ಹೇಳಿದರು.

ಜಿಲ್ಲಾಡಳಿತ, ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಗುರುವಾರ ಕುವೆಂಪು ರಂಗಮಂದಿರದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣ ಕ್ಷೇತ್ರದ ಹಿರಿಮೆ ಮತ್ತು ಗರಿಮೆಯನ್ನು ಹೆಚ್ಚಿಸಿದ ಮಹಾನ್ ವ್ಯಕ್ತಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್. ಅವರು ಬ್ರಿಟಿಷರು ಸೇರಿದಂತೆ ಯಾರೇ ಆಗಲಿ ಭಾರತೀಯ ಪರಂಪರೆಯನ್ನು ಅಧ್ಯಯನ ಮಾಡದೇ ನಮ್ಮ ದೇಶವನ್ನು ಟೀಕಿಸಬೇಡಿ ಎಂದು ಉತ್ತರ ನೀಡಿದವರು. ಪ್ರಸ್ತುತ ಶಿಕ್ಷಕರು ಮೌಲ್ಯಾಧಾರಿತ ಶಿಕ್ಷಣಕ್ಕೆ ಇನ್ನಷ್ಟು ಶಕ್ತಿ ನೀಡಬೇಕು. ಶಿಕ್ಷಕರ ಉತ್ತಮ ಸಾಧನೆಗಾಗಿ ಇಂದು ಪ್ರಶಸ್ತಿ ನೀಡುವ ಮೂಲಕ ಗೌರವ ಸಮರ್ಪಣೆ ಮಾಡಲಾಗಿದೆ. ಎಲ್ಲ ಶಿಕ್ಷಕರು ಅತ್ಯುತ್ತಮ ಕೆಲಸ ಮಾಡಿದ್ದು ಪ್ರಶಸ್ತಿ ಪ್ರದಾನ ಒಂದು ಸಾಂಕೇತಿಕ ಮಾತ್ರ ಎಂದರು.

ವಿಧಾನ ಪರಿಷತ್ ಶಾಸಕಿ ಬಲ್ಕೀಶ್ ಬಾನು ಮಾತನಾಡಿ, ಶಿಕ್ಷಕಿಯಾಗಿ ಸೇವೆ ಸಲ್ಲಿಸಿ, ರಾಜಕೀಯಕ್ಕೆ ಪಾದಾರ್ಪಣೆ ಮಾಡಿರುವುದು ಹೆಮ್ಮೆ ಎನಿಸುತ್ತಿದೆ. ಶಿಕ್ಷಕರು ನಿರಂತರ ವಿದ್ಯಾರ್ಥಿಯಾಗಿರಬೇಕು. ಶಿಕ್ಷಕ ವೃತ್ತಿ ಎಲ್ಲರ ಜೀವನ ಬೆಳೆಸುವ ಶ್ರೇಷ್ಠ ವೃತ್ತಿ. ನಮ್ಮ ವೃತ್ತಿಯನ್ನು ನಾವು ಪ್ರೀತಿಸಬೇಕು ಎಂದರು.

ಎಂಎಲ್‌ಸಿ ಡಿ.ಎಸ್.ಅರುಣ್ ಮಾತನಾಡಿ, ಶಿಕ್ಷಕರು ವಿದ್ಯಾರ್ಥಿಗಳಸನ್ನು ಭಾವನಾತ್ಮಕವಾಗಿ ಜೋಡಿಸುವ ಕೆಲಸ ಮಾಡಬೇಕು. ಹಾಗೂ ನೀತಿಪಾಠಗಳು ಆಗಬೇಕೆಂದರು. ಎಂಎಲ್‌ಸಿ ಡಾ.ಧನಂಜಯ ಸರ್ಜಿ ಮಾತನಾಡಿ, ಸತ್ಯದೆಡೆ, ಬೆಳಕಿನೆಡೆ, ಅಮರತ್ವದ ಕಡೆ ಕರೆದುಕೊಂಡು ಹೋಗುವ ಅದ್ಭುತ ಶಕ್ತಿ ಗುರುಗಳಿಗಿದೆ. ಪಾಠ ಮಾಡುವ ಶಿಕ್ಷಕರು ತಮ್ಮ ಆರೋಗ್ಯ ಮತ್ತು ಒತ್ತಡ ನಿರ್ವಹಣೆ ಕುರಿತು ಸಲಹೆಗಳನ್ನು ನೀಡಿದರು.

ನಗರದ ಕುವೆಂಪು ರಂಗಮಂದಿರದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲೆಯ 21 ಶಿಕ್ಷಕರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ವಿಧಾನ ಪರಿಷತ್ ಸದಸ್ಯರಾದ ಎಸ್.ಎಲ್ ಭೋಜೇಗೌಡ ಮಾತನಾಡಿ, ಜಿಲ್ಲೆಯು ಶೈಕ್ಷಣಿಕ ಕ್ಷೇತ್ರದಲ್ಲಿ ಅಭಿವೃದ್ದಿ ಹೊಂದುತ್ತಿದ್ದು ಶಿಕ್ಷಕರ ನ್ಯಾಯಯುತ ಬೇಡಿಕೆ ಈಡೇರಿಸಬೇಕಿದೆ. ಶಿಕ್ಷಕರ ಜೊತೆ ನಾವಿದ್ದೇವೆ. ಶಿಕ್ಷಕರ ಧ್ವನಿಯಾಗಿ ಕೆಲಸ ಮಾಡುತ್ತೇನೆ ಎಂದರು.

ಇದೇ ವೇಳೆ 21 ಶಿಕ್ಷಕರಿಗೆ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು. ಸೂಡಾ ಅಧ್ಯಕ್ಷ ಹೆಚ್. ಎಸ್.ಸುಂದರೇಶ್, ಗ್ಯಾರಂಟಿ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಚಂದ್ರಭೂಪಾಲ್, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಿಥುನ್ ಕುಮಾರ, ಡಿಡಿಪಿಯು ಚಂದ್ರಪ್ಪ ಗುಂಡಪಲ್ಲಿ, ಡಿಡಿಪಿಐ ಮಂಜುನಾಥ್ ಇದ್ದರು.

ಶಿಕ್ಷಕರ ಸಾಧನೆ ಕುರಿತ ಸಾಕ್ಷ್ಯಚಿತ್ರ ಅಗತ್ಯ

ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಮಾತನಾಡಿ, ಉತ್ತಮ ಶಿಕ್ಷಕ ಪ್ರಶಸ್ತಿ ಮಾನದಂಡಗಳಲ್ಲಿ ಕೆಲವು ಬದಲಾವಣೆ ಆಗಬೇಕು. ಶಿಕ್ಷಕರ ಸಾಧನೆ ಕುರಿತ ಸಾಕ್ಷ್ಯಚಿತ್ರ ತೋರಿಸಿದಲ್ಲಿ ಅದು ಇತರರಿಗೆ ಮಾದರಿ ಆಗುತ್ತದೆ ಎಂದು ಹೇಳಿದರು.

ರಂಗದಲ್ಲಿ ಒಬ್ಬ ಕಲಾವಿದ, ಸಂಘಟನೆ ಸಾಧಕ ಈ ಶಿಕ್ಷಕ

ರಮೇಶ್ ಹೆಗಡೆ ಗುಂಡೂಮನೆ ಸಾಗರ

2021 ರಲ್ಲಿ ಸರಕಾರಿ ನೌಕರರ ಸಾಂಸ್ಕೃತಿಕ ಸ್ಪರ್ಧೆಯ ನಾಟಕ ತಂಡವೊಂದು ರಾಜ್ಯಮಟ್ಟದಲ್ಲಿ ಬಹುಮಾನಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿತ್ತು, ಕೆರೆಗೆ ಹಾರ ಆ ನಾಟಕದ ಪ್ರಧಾನ ಪಾತ್ರವ ಹಿಸಿರುವ ಆ ಶಿಕ್ಷಕ ಯಾವುದೋ ನಾಟಕ ಕಂಪನಿಯ ವೃತ್ತಿ ಕಲಾ ವಿದನೇ ಇರಬೇಕು ಎನ್ನುವ ಚರ್ಚೆ ಕೂಡ ಆಗಿತ್ತು ಆದರೆ ಅವರು ವೃತ್ತಿ ಕಲಾವಿದರಲ್ಲ ಒಬ್ಬ ಶಿಕ್ಷಕ.

ಹೌದು, ಅವರು ಕೇವಲ ನಾಲ್ಕು ಗೋಡೆಗಳ ನಡುವೆ ಮಕ್ಕಳಿಗೆ ಪಾಠ ಮಾತ್ರ ಹೇಳಿಕೊಡುವ ಶಿಕ್ಷಕರಲ್ಲ, ನಾಟಕ ಪ್ರದರ್ಶನಗಳಲ್ಲಿ ಒಬ್ಬ ಉತ್ತಮ ಕಲಾವಿದ, ಅದು ಕ್ರೀಡೆ ಇರಲಿ, ಜಾನಪದ ಕ್ಷೇತ್ರವಿರಲಿ ಅಥವಾ ಯಾವುದೇ ಸಾಮಾಜಿಕವಾದ ಕಾರ್ಯಕ್ರಮವಿರಲಿ ಅದನ್ನು ಸಂಘಟಿಸುವಲ್ಲಿ ಒಬ್ಬ ಉತ್ತಮ ಸಂಘಟಕ, ಶಾಲೆಯಲ್ಲಿ ಅತ್ಯುತ್ತಮ ಬೋಧಕ. ಅವರೇ ಸಾಗರ ತಾಲೂಕಿನಿಂದ ಹಿರಿಯ ಪ್ರಾಥಮಿಕ ಶಾಲೆಯ ಜಿಲ್ಲಾ ಪ್ರಶಸ್ತಿಗೆ ಭಾಜನರಾಗಿರುವ ಯಡಜಿಗಳೆಮನೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಸತ್ಯನಾರಾಯಣ ಸಿರಿವಂತೆ.

ಈ ಶಾಲೆಯಲ್ಲಿ ದೈಹಿಕ ಶಿಕ್ಷಕರಿಲ್ಲ, ಆದರೆ ಕಳೆದ ಐದು ವರ್ಷಗಳಿಂದ ಈ ಶಾಲೆ ಕ್ರೀಡೆಯಲ್ಲಿ ಸಮಗ್ರ ಪ್ರಶಸ್ತಿ ಗಳಿಸುತ್ತಿದೆ, ಕ್ರೀಡೆಯಲ್ಲಿ ಮಾತ್ರವಲ್ಲ ಪ್ರತಿಭಾ ಕಾರಂಜಿಯಲ್ಲೂ ಅದೇ ಸಾಧನೆ ಇದೆ ಇದರ ಹಿಂದೆ ಆ ಶಾಲೆಯಲ್ಲಿರುವ ಮೂವರ ಪರಿಶ್ರಮ ವಿದ್ದರೂ ಸತ್ಯನಾರಾಯಣರವರ ಬದ್ಧತೆ ಎದ್ದು ತೋರುತ್ತದೆ.

ಒಬ್ಬ ಶಿಕ್ಷಕನಾಗಿ ಹಲವರ ಬದುಕಿಗೆ ಬೇರೆಬೇರೆ ಕ್ಷೇತ್ರದ ಸಾಧನೆಗೆ ದಾರಿ ಮತ್ತು ಗುರಿ ತೋರುವ ಈ ರೀತಿಯ ಗುರುಗಳ ಅನಿವಾರ್ಯತೆ ಇಂದಿನ ಶಿಕ್ಷಣ ವ್ಯವಸ್ಥೆಗೆ ಬೇಕಿದೆ ಅಂತಹ ಶಿಕ್ಷಕರಲ್ಲಿ ಸತ್ಯನಾರಾಯಣ ಒಬ್ಬರು.

ಯಾವುದೇ ಶಿಕ್ಷಕನಲ್ಲಿ ಕಲಾ ಹೃದಯವಿದೆ ಎಂದಾಗ ಸಹಜವಾಗಿಯೇ ಮಕ್ಕಳು ಬಹುಬೇಗ ಇಷ್ಟಪಡುತ್ತಾರೆ. ಮತ್ತು ಪೋಷಕರು ಮೆಚ್ಚುತ್ತಾರೆ. ಈಗಾಗಲೆ ಕಲಾ ಸಿಂಚನ ಬಳಗದಂತಹ ಸಂಘಟನೆಯೊಂದಿಗೆ ಸಾಂಸ್ಕೃತಿಕವಾಗಿಯೂ ಗುರುತಿಸಿಕೊಂಡಿರುವ ಸತ್ಯನಾರಾಯಣ ಉತ್ತಮ ಕಲಾವಿದರ ತಂಡ ನೀಡಿದ ಹಿರಿಮೆ ಹೊಂದಿದ್ದಾರೆ. ಒಬ್ಬ ಶಿಕ್ಷಕನಾಗಿ ಜನರೊಂದಿಗೆ ಹೊಣೆಗಾರಿಕೆ ಅರಿತು ಇಲಾಖೆಯ ಗೌರವ ಹೆಚ್ಚಿಸುವ ಜತೆಗೆ ಮಕ್ಕಳಿಗೆ ನ್ಯಾಯ ಒದಗಿಸುತ್ತಿರುವ ಸೂಕ್ತ ವ್ಯಕ್ತಿಗೆ ಜಿಲ್ಲೆ ಪ್ರಶಸ್ತಿ ದೊರೆತಿದೆ.

ಪುರದಾಳು ಗ್ರಾಮದಲ್ಲಿ 7ರಿಂದ ಅದ್ದೂರಿ ವಿನಾಯಕೋತ್ಸವ

ಶಿವಮೊಗ್ಗ: ಉದ್ಭವ ಬಸವೇಶ್ವರ ದೇವಸ್ಥಾನ ಜೀರ್ಣೋದ್ಧಾರ ಸಮಿತಿ, ಗಣೇಶೋತ್ಸವ ಸೇವಾ ಸಮಿತಿಯಿಂದ ತಾಲ್ಲೂಕಿನ ಪುರದಾಳು ಗ್ರಾಮದಲ್ಲಿ ಸೆ.7 ರಿಂದ 11ರವರೆಗೆ ಸುವರ್ಣ ಮಹೋತ್ಸವ, ಸಿದ್ಧಿ ವಿನಾಯಕ ಸ್ವಾಮಿ ಪ್ರತಿಷ್ಠಾಪನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.7 ರಂದು ಬೆಳಿಗ್ಗೆ 10.30ಕ್ಕೆ ಗಂಗಾಪೂಜೆ, ವಿನಾಯಕ ಪ್ರತಿಷ್ಠಾಪನೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ಇರಲಿದೆ. ಅದೇ ದಿನ ರಾತ್ರಿ 7 ಗಂಟೆಯಿಂದ ಕಮಲೇಶ್ವರ ಬಾಲಮೇಳ ಯಕ್ಷಗಾನ ನಡೆಯಲಿದೆ. ಸೆ. 8 ರಂದು ಬೆಳಿಗ್ಗೆ 10.30ಕ್ಕೆ ಗಣಹೋಮ, ಮಹಾಮಂಗಳಾರತಿ ಇರಲಿದೆ. ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಸೆ.9 ರಂದು 10.30ಕ್ಕೆ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಹಾಗೂ ಪುರುಷರಿಗೆ ಗ್ರಾಮೀಣ ಕ್ರೀಡೆಗಳನ್ನು ಆಯೋಜಿಸಲಾಗಿದೆ. ಸಂಜೆ 6 ಗಂಟೆಗೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಬಹುಮಾನ ವಿತರಣೆ ಹಾಗೂ ಶಾಲಾ ಮಕ್ಕಳಿಂದ ಸಾಂಕ್ಕತಿಕ ಕಾರ್ಯಕ್ರಮ ಇರಲಿದೆ. ಸೆ. 10 ರಂದು ಸಂಜೆ 7 ಗಂಟೆಗೆ 'ಶಿವಮೊಗ್ಗ ಬ್ರದರ್ಸ್ ಆರ್ಕೆಸ್ಟ್ರಾ' ಇವರಿಂದ ಸಂಗೀತ ಸಂಜೆ ಕಾರ್ಯಕ್ರಮ ಇರಲಿದೆ. ಸೆ. 11 ರಂದು ಕೊಮ್ಮನಾಡು ಸೂರ್ಯ ಡಿ.ಜೆ. ಯೊಂದಿಗೆ ಅದ್ದೂರಿ ರಾಜಬೀದಿ ಉತ್ಸವ ಇರಲಿದೆ ಎಂದು ತಿಳಿಸಿದ್ದಾರೆ.

ಶಿಕ್ಷಣ ವ್ಯವಸ್ಥೆ ಗಟ್ಟಿತನದಿಂದ ದೇಶ ಅಭಿವೃದ್ಧಿ: ಶಾಸಕ

ಹೊಸನಗರ: ಶಿಕ್ಷಣ ವ್ಯವಸ್ಥೆಯು ಬಲಗೊಂಡಷ್ಟು ದೇಶದ ಪ್ರಗತಿಯ ವೇಗ ಹೆಚ್ಚುತ್ತದೆ ಅದರಲ್ಲಿ ಭಾರತ ದೇಶ ಶಿಕ್ಷಣ ವ್ಯವಸ್ಥೆಯಲ್ಲಿ ಗಟ್ಟಿತನದಲ್ಲಿದೆ ಎಂದು ಶಾಸಕ ಬೇಳೂರು ಗೋಪಾಲಕೃಷ್ಣ ತಿಳಿಸಿದರು. ಇಲ್ಲಿನ ಈಡಿಗರ ಭವನದಲ್ಲಿ ಗುರುವಾರ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹಿಂದಿನ ಕಾಲದ ಶಿಕ್ಷಣ ವ್ಯವಸ್ಥೆಗೂ ಇಂದಿನ ವ್ಯವಸ್ಥೆಗೂ ಅಜಗಜಾಂತರ ವ್ಯವಸ್ಥೆಯಿದೆ. ಹಿಂದೆ ಮಕ್ಕಳಿಗೆ ಶಿಕ್ಷೆ ನೀಡುವುದು ಸಾಮಾನ್ಯವಾಗಿತ್ತು. ಈಗ ಹಾಗೆ ಮಾಡುವಂತಿಲ್ಲ. ಶಿಕ್ಷಣದ ಪರಿಕಲ್ಪನೆಯಲ್ಲಿಯೂ ಸಾಕಷ್ಟು ಬದಲಾವಣೆಗಳಾಗಿವೆ ಎಂದ ಅವರು ತಮ್ಮ ಶಾಲಾದಿನಗಳನ್ನು ನೆನಪು ಮಾಡಿಕೊಂಡರು

ಶಾಸಕ ಆರಗಜ್ಞಾನೇಂದ್ರ, ಮಾತನಾಡಿ, ಎಸ್.ರಾಧಕೃಷ್ಣನ್ ಅವರಂತಹ ಮೇರು ವ್ಯಕ್ತಿತ್ವ ಹೊಂದಿದವರು ನಮ್ಮದೇಶದಲ್ಲಿದ್ದರು ಎನ್ನುವುದು ಪ್ರತಿಯೊಬ್ಬರ ಭಾರತೀಯನಿಗೂ ಹೆಮ್ಮೆಯ ವಿಷಯ. ದೇಶ ಶಿಕ್ಷಣ ಕ್ಷೇತ್ರದಲ್ಲಿಗುರುತರ ಸಾಧನೆ ಮಾಡಿದ್ದು, ಹಲವು ಕ್ಷೇತ್ರಗಳಲ್ಲಿ ಭಾರತೀಯರು ಪ್ರಸಿದ್ಧರಾಗಿದ್ದಾರೆ. ಭಾರತದ ಶಿಕ್ಷಣ ವ್ಯವಸ್ಥೆಯಗಟ್ಟಿತನ ಪ್ರಪಂಚಕ್ಕೆ ಅರಿವಾಗಿದೆ ಎಂದರು.

ಉತ್ತಮ ಶಿಕ್ಷಕ ಪ್ರಶಸ್ತಿ, ನಿವೃತ್ತ ಶಿಕ್ಷಕರಿಗೆ ಬೀಳ್ಕೊಡುಗೆ, ಸೇವಾವಧಿಯಲ್ಲಿ ಮೃತರಾದ ಶಿಕ್ಷಕರ ಕುಟುಂಬಕ್ಕೆ ಸ್ಮರಣಿಕೆ, ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಸಾಧನೆ ಮಾಡಿ ವಿದ್ಯಾರ್ಥಿಗಳ ಪೋಷಕರಿಗೆ ಅಭಿನಂದನೆ ನಡೆಯಿತು. ಬಿಇಒ ಎಚ್.ಆರ್. ಕೃಷ್ಣಮೂರ್ತಿ ಸ್ವಾಗತಿಸಿದರು. ತಹಸೀಲ್ದಾರ್ ಎಚ್.ಜೆ.ರಶ್ಮಿ, ತಾ.ಪಂ. ಇಒ ನರೇಂದ್ರಕುಮಾರ್, ರಾಜ್ಯ ಸರಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಬಸವಣ್ಯಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಆರ್.ಸುರೇಶ್, ಶಿಕ್ಷಕರ ಪತ್ತಿನ ಸಹಕಾರಿ ಸಂಘದ ಕಾರ್ಯದರ್ಶಿ ಧರ್ಮಪ್ಪ, ತಿರುಪತಿ ನಾಯ್ಕ್, ರೇಣುಕೇಶ್, ಕಾರ್ಯದರ್ಶಿ ಕೆ.ಜಿ.ಪುಟ್ಟಸ್ವಾಮಿ ಸೇರಿದಂತೆ ಶಿಕ್ಷಕರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹೊಸನಗರದಲ್ಲಿ ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿಎಸ್‌ಎಸ್‌ಎಲ್‌ಸಿ ಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಿತು.

ಶಿಕ್ಷಕರು ಆದರ್ಶ ಪ್ರಜೆಗಳನ್ನು ರೂಪಿಸುವ ಗುರುತರ ಜವಾಬ್ದಾರಿಯನ್ನು ಹೊಂದಿದ್ದಾರೆ. ಉತ್ತಮ ವ್ಯಕ್ತಿತ್ವ ನಿರ್ಮಾಣ ಮಾಡುವುದಷ್ಟೇ ಅಲ್ಲ, ಇಡೀ ವ್ಯವಸ್ಥೆಯನ್ನು ಬದಲಾಯಿಸುವ ಶಕ್ತಿ ಶಿಕ್ಷಕರಿಗೆ ಇದೆ. ಈ ಕಾರಣಕ್ಕೆ ಶಿಕ್ಷಕರು ಜವಾಬ್ದಾರಿ ಅರಿತು ಕೆಲಸ ಮಾಡಬೇಕು.

-ಬೇಳೂರು ಗೋಪಾಲಕೃಷ್ಣ, ಶಾಸಕ

ಕುವೆಂಪು ಕೇವಲ ವ್ಯಕ್ತಿಯಲ್ಲ ಯೋಚನಾ ಕ್ರಮ

ತೀರ್ಥಹಳ್ಳಿ: ಕುವೆಂಪು ಅವರ ವಿಶ್ವಮಾನವ ಸಂದೇಶಗಳು ಎಲ್ಲಾ ಕಾಲಕ್ಕೂ ಪ್ರಸ್ತುತವಾಗಿದ್ದು, ಅದನ್ನು ನಿರಂತರವಾಗಿ ತಲುಪಿಸುವ ಕೆಲಸವಾಗಬೇಕು. ಈ ದಿಸೆಯಲ್ಲಿ ವಿಶ್ವಮಾನವ ಸಂದೇಶಗಳಿರುವ ಫಲಕಗಳ ಅನಾವರಣ ಒಂದು ಉತ್ತಮ ಕಾರ್ಯ ಎಂದು ಶಾಸಕ ಆರಗ ಜ್ಞಾನೇಂದ್ರ ಹೇಳಿದರು.

ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದಿಂದ ಕುಪ್ಪಳಿಯಲ್ಲಿ ನಿರ್ಮಿಸಲಾಗಿರುವ ಕುವೆಂಪುರವರ ವಿಶ್ವಮಾನವ ಸಂದೇಶಗಳ ಕನ್ನಡ ಹಾಗೂ ಇಂಗ್ಲೀಷ್ ಭಾಷೆಯ ಫಲಕಗಳನ್ನು ಅನಾವರಣಗೊಳಿಸಿ ಮಾತನಾಡಿದರು.

ಕುವೆಂಪು ವಿವಿ ಉಪ ಕುಲಪತಿ ಶರತ್ ಅನಂತಮೂರ್ತಿ ಮಾತನಾಡಿ, ಕುವೆಂಪು ಸಂದೇಶಗಳನ್ನು ಬಿತ್ತುವಲ್ಲಿ ಕುಪ್ಪಳಿ ಹೃದಯ ಭಾಗ. ಕುವೆಂಪು ಒಬ್ಬರು ಕೇವಲ ವ್ಯಕ್ತಿಯಲ್ಲ. ಅದೊಂದು ಯೋಚನಾ ಕ್ರಮ. ಇವತ್ತು ಶಿಕ್ಷಕರ ದಿನಾಚರಣೆಯಾಗಿದ್ದು, ಕುವೆಂಪು ಅವರಿಗಿಂತ ದೊಡ್ಡ ಶಿಕ್ಷಕ ಮತ್ತೊಬ್ಬರಿಲ್ಲ. ಕುವೆಂಪು ಅವರ ವಿಶ್ವಮಾನವ ತತ್ವಗಳು ಇಡೀ ಜಗತ್ತಿಗೇ ಒಂದು ಬೆಳಕಾಗಿವೆ ಎಂದರು.

ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್. ಶಂಕರ್, ಕರ್ನಾಟಕ ಏಕೀಕರಣ ಹಾಗೂ ಮೈಸೂರು ರಾಜ್ಯ ಕರ್ನಾಟಕವಾಗಬೇಕೆಂಬ ಸಂದರ್ಭದಲ್ಲಿ ಕುವೆಂಪು ಅವರ ಕೊಡುಗೆಗಳನ್ನು ಪ್ರಸ್ತಾಪಿಸಿದರು. ತಾವು ನಂಬಿದ ತತ್ವ , ಸಿದ್ಧಾಂತಗಳಿಗೆ ಕಟಿಬದ್ದರಾಗಿದ್ದ ಕುವೆಂಪುರವರು ಮಹಾರಾಜನ ಮಗನಿಗೆ ಅರಮನೆಗೆ ಬಂದು ಪಾಠ ಮಾಡುವುದಕ್ಕೆ ಒಪ್ಪಲಿಲ್ಲ. ಉಳ್ಳವರು, ಇಲ್ಲದವರು ಒಂದೇ ಕಡೆಯಲ್ಲಿ ಸಮಾನವಾಗಿ ಓದಬೇಕು ಎಂಬುದು ಅವರ ಚಿಂತನೆಯಾಗಿತ್ತು. ಈ ಕಾರಣದಿಂದಾಗಿಯೇ ಎರಡನೇ ಅವಧಿಗೆ ಉಪ ಕುಲಪತಿಯಾಗುವ ಅವಕಾಶವೂ ಕುವೆಂಪುಗೆ ತಪ್ಪಿಹೋಯಿತು ಎಂದು ಅಭಿಪ್ರಾಯಪಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳ್ ಪ್ರಕಾಶ್ ಅವರು, ಕುಪ್ಪಳಿಗೆ ದೇಶವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಹೀಗೆ ಬಂದವರಿಗೆ ಕುವೆಂಪು ಪರಿಚಯ, ಅವರ ವಿಶ್ವಮಾನವ ಸಂದೇಶಗಳು, ವಿಶ್ವ ಮಾನವ ಗೀತೆ ಯುಳ್ಳ ಕನ್ನಡ ಹಾಗೂ ಇಂಗ್ಲೀಷ್ ಭಾಷೆಯ ಫಲಕ ಸ್ಥಾಪಿಸಲಾಯಿತು ಎಂದರು.

ವೇದಿಕೆಯಲ್ಲಿ ರಂಗಕರ್ಮಿ ಮೈಸೂರು ಸಿ. ಬಸವಲಿಂಗಯ್ಯ, ಕುವೆಂಪು ರಾಷ್ಟ್ರೀಯ ಪ್ರಶಸ್ತಿ ದಾನಿಗಳಾದ ಎಂ.ಸಿ. ನರೇಂದ್ರ ಇದ್ದರು.

ವಿಮಾನ ನಿಲ್ದಾಣದಲ್ಲಿ ಇಂಧನ ಘಾರಂಗೆ ಮನವಿ

ಶಿವಮೊಗ್ಗ: ವಿಮಾನ ನಿಲ್ದಾಣದಲ್ಲಿ ಇಂಧನ ಘಾರಂ ಸ್ಥಾಪನೆಗೆ ಆಗುತ್ತಿರುವ ವಿಳಂಬದ ಬಗ್ಗೆ ಸಂಸದ ರಾಘವೇಂದ್ರ ಕೇಂದ್ರ ಪೆಟ್ರೋಲಿಯಂ ಗಮನ ಸೆಳೆದು ತುರ್ತು ಸ್ಥಾಪನೆ ಮಾಡಲು ಮನವಿ ಮಾಡಿದ್ದಾರೆ.

ಗುರುವಾರ ಅವರು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದಿಪ್ ಸಿಂಗ್‌ಪುರಿ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ ಈ ವಿಷಯ ಪ್ರಸ್ತಾಪಿಸಿದರು.

ಪ್ರಸ್ತುತ ದೂರದ ಇಂಧನ ಮೂಲ ಸ್ಟೇಷನ್‌ಗಳಿಂದ ಇಂಧನವನ್ನು ಎತ್ತುವ ವಿಮಾನಯಾನ ಸಂಸ್ಥೆಗಳಿಂದ ಉಂಟಾಗುವ ಹೆಚ್ಚಿನ ಕಾರ್ಯಾಚರಣೆಯ ವೆಚ್ಚವನ್ನು ಕಡಿಮೆ ಮಾಡಲು ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಇಂಧನ ಪಾರ್ಕ್ ಸ್ಥಾಪಿಸುವುದು ಅತ್ಯಗತ್ಯವಾಗಿದ್ದು, ಈ ಬಗ್ಗೆ ಸಚಿವರಿಗೆ ಮನರಿಕೆ ಮಾಡಿದರು.

ಈಗಾಗಲೇ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ವತಿಯಿಂದ ಏಪ್ರಿಲ್-2023 ರಲ್ಲಿ IOCLಗೆ ಒಪ್ಪಂದ ಮಾಡಿಕೊಂಡು, ಅದನ್ನು ಮಂಜೂರು ಮಾಡುವಂತೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಯು ಖಔಅಐಅಧ್ಯಕ್ಷರ ಬಳಿ ಬಾಕಿ ಇದ್ದು ಸದರಿ ಪ್ರಸ್ತಾವನೆಯನ್ನು ಆದಷ್ಟು ಬೇಗನೆ ಇತ್ಯರ್ಥ ಪಡಿಸಲು ಐಣಇಔಅಧ್ಯಕ್ಷರಿಗೆ ಅಗತ್ಯ ನಿರ್ದೇಶನ ನೀಡುವಂತೆ ಸಂಸದರು ಕೋರಿದ್ದಾರೆ.



ಗುರುವಾರ ಅವರು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದಿಪ್ ಸಿಂಗ್‌ಪುರಿ ಅವರನ್ನು ಸಂಸದ ರಾಘವೇಂದ್ರ ಅವರು ದೆಹಲಿಯಲ್ಲಿ ಭೇಟಿ ಮಾಡಿದರು.

ಈ ಬಗ್ಗೆ ಸಚಿವರು ಸಕಾರಾತ್ಮಕ ನಿರ್ಣಯ ಕೈಗೊಳ್ಳುವುದಾಗಿ ಭರವಸೆ ನೀಡಿದ್ದು, ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಇಂಧನ ಘಾರಂ ಸ್ಥಾಪಿಸಿದಲ್ಲಿ ಪ್ರಯಾಣದ ವೆಚ್ಚ ಸಹ ಕಡಿಮೆಯಾಗುವುದರಿಂದ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ ಮತ್ತು ತ್ವರಿತಗತಿಯಲ್ಲಿ ವಿಮಾನಯಾನ ಹಾರಾಡಲು ಅನುಕೂಲವಾಗುತ್ತದೆ. ಹಾಗೂ ಹಲವು ವಿಮಾನಯಾನ ಕಂಪನಿಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ವಿಮಾನಯಾನ ಪ್ರಾರಂಭಿಸಲು ಅನುಕೂಲವಾಗುತ್ತದೆ ಎಂದು ಸಂಸದರು ತಿಳಿಸಿದ್ದಾರೆ.

ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಅವಧಿ ಪೂರ್ಣ

ಶಿಕಾರಿಪುರ: ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪದಾಧಿಕಾರಿಗಳ ಪ್ರಸಕ್ತ ಸಾಲಿನ ಅವಧಿ ಪೂರ್ಣಗೊಂಡಿದ್ದು ಈ ದಿಸೆಯಲ್ಲಿ ನೂತನ ಕಾರ್ಯಕಾರಿ ಮಂಡಳಿ ರಚಿಸುವ ಹಿನ್ನೆಲೆಯಲ್ಲಿ ಆಸಕ್ತರು ಸೆ.7 ರೊಳಗಾಗಿ ಖುದ್ದು ಭೇಟಿಯಾಗಿ ಅರ್ಜಿ ಸಲ್ಲಿಸುವಂತೆ ಸಂಘದ ಜಿಲ್ಲಾಧ್ಯಕ್ಷೆ ಎಚ್.ಕಾಂಚನಾ ಕುಮಾರ್ ಮನವಿ ಮಾಡಿದರು.

ಪಟ್ಟಣದ ಸುದ್ದಿಮನೆಯಲ್ಲಿ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, ರಾಜ್ಯ ಬಣಜಿಗ ಕ್ಷೇಮಾಭಿವೃದ್ಧಿ ಸಂಘ ಬೆಂಗಳೂರು ಸಹಿತ 13 ಜಿಲ್ಲೆಯಲ್ಲಿ ಸಕ್ರೀಯವಾಗಿ ಕಾರ್ಯನಿರ್ವಹಿಸು ತ್ತಿದ್ದು, ಉತ್ತರ ಕರ್ನಾಟಕದಲ್ಲಿ ಸಮಾಜದ ಸಂಘಟನೆ ಅತ್ಯಂತ ಬಲಿಷ್ಠವಾಗಿದೆ. ಶಿವಮೊಗ್ಗ ಜಿಲ್ಲಾದ್ಯಂತ ಸಂಘವನ್ನು ಹೆಚ್ಚು ಕ್ರಿಯಾಶೀಲವಾಗಿಸುವ ದಿಸೆಯಲ್ಲಿ ಈಗಾಗಲೇ ಪ್ರಸಕ್ತ ಸಾಲಿನ 5 ವರ್ಷದ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಅಧ್ಯಕ್ಷ ಪದಾಧಿಕಾರಿಗಳ ನೂತನ ಕಾರ್ಯಕಾರಿ ಮಂಡಳಿ ರಚಿಸಲಾಗುವುದು ಎಂದು ತಿಳಿಸಿದರು.

ತಾಲೂಕಿನಾದ್ಯಂತ 10 ಸಾವಿರ ಅಧಿಕ ಜನಸಂಖ್ಯೆ ಹೊಂದಿರುವ ಬಣಜಿಗ ಸಮಾಜವನ್ನು ಹೆಚ್ಚು ಸಂಘಟನಾತ್ಮಕವಾಗಿ ಒಗ್ಗೂಡಿಸುವ ದಿಸೆಯಲ್ಲಿ ಮಹಿಳಾ ಘಟಕ ಸಹಿತ ವಿವಿಧ ಘಟಕಗಳನ್ನು ರಚಿಸಿ ಚಾಲನೆ ನೀಡಲಾಗುವುದು ತಾಲೂಕಿನಲ್ಲಿ ಬಣಜಿಗ ಬ್ಯಾಂಕ್ ಲಾಭದಾಯವಾಗಿ ಮುನ್ನಡೆ ಯುತ್ತಿದ್ದು ಬಣಜಿಗ ಬಳಗದಲ್ಲಿನ 50 ಕ್ಕೂ ಅಧಿಕ ಸದಸ್ಯರು ಸಮಾಜದ ಸಂಘಟನೆಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಮೊ.9481969677 ಕ್ಕೆ ಸಂಪರ್ಕಿಸುವಂತೆ ಅವರು ತಿಳಿಸಿದರು. ಗೋಷ್ಠಿಯಲ್ಲಿ ರಾಜ್ಯ ಕಾರ್ಯಕಾರಣಿ ಸಮಿತಿ ಸದಸ್ಯ ಹೇಮಂತ ಶೆಟ್ಟರ್ ಮುಖಂಡ ಗಿರೀಶ್ ಧಾರವಾಡದ, ವಿನಯ್ ಮಾರವಳ್ಳಿ,ಪ್ರದೀಪ್ ಮಹಿಳಾ ಘಟಕದ ಅಧ್ಯಕ್ಷೆ ಚಂದನ,ಪ್ರ.ಕಾ ಸುಧಾ, ಖಜಾಂಚಿ ಜ್ಯೋತಿ ಸಿದ್ದಲಿಂಗೇಶ್ ಮತ್ತಿತ್ತರರು ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳು ಕಾರ್ಯಾಲಯ, ಬೆಳಗಾವಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಳಗಾವಿ.
E-MAIL ID:dobcmbelgaumm@gmail.com Telephone: 0831-2407221
ನಂ:ಬಿಸಿಎಂ/ಹೋಮೂಸಿ/ಸಿಆರ್– 05&06/2024–25 ದಿನಾಂಕ: 03–09–2024.

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಳಗಾವಿ ಜಿಲ್ಲೆಯ ಅಧೀನದಲ್ಲಿ ಬರುವ ವಿದ್ಯಾರ್ಥಿನಿಲಯಗಳು/ಆಶ್ರಮ ಶಾಲೆ/ ಮೋರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ 2024–25 ನೇ ಸಾಲಿನ ಹೊರಮೂಲ ಸಿಬ್ಬಂದಿ ಸೇವೆಯನ್ನು ಪೂರೈಸುವ ಏಜೆನ್ಸಿಗಳನ್ನು ಒಂದು ವರ್ಷದ ಮಟ್ಟಿಗೆ ಅಥವಾ ಮುಂದಿನ ಆದೇಶದ ವರೆಗೆ ಆಯ್ಕೆ ಮಾಡುವುದಕ್ಕಾಗಿ ಇ–ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03–10–2024 ವಾಗಿರುತ್ತದೆ. ವಿವರವನ್ನು ಇಲಾಖೆಯ ವೆಬ್ ಸೈಟ್:– https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ವಿರಗಳಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ:0831–2407221 ನ್ನು ಸಂಪರ್ಕಿಸಬಹುದು.

ಸಹಿ/–ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಳಗಾವಿ.
ಸಹಿ/–ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ
DIPR/BGM/RO-NO-755/KSMCA/2024-25

ಕುವೆಂಪು ವಿಶ್ವವಿದ್ಯಾಲಯ
ಪರೀಕ್ಷಾ ವಿಭಾಗ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ–577 451 ಶಿವಮೊಗ್ಗ ಜಿಲ್ಲೆ, ಕರ್ನಾಟಕ
ದೂರವಾಣಿ ಸಂಖ್ಯೆ : 08282-256166, 8050235602,
ಇ–ಮೇಲ್:regexamku@gmail.com
No: KU/ES/SP02/2725/2024-25 / E-portal No : KVU/2024-25/SE0007
ದಿನಾಂಕ: 03.09.2024

ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್ಮೆಂಟ್ ದ್ವಿಲಕೋಟೆ ಪದ್ಧತಿ)
https://kppp.karnataka.gov.in/

ಕುವೆಂಪು ವಿಶ್ವವಿದ್ಯಾನಿಲಯವು ಪರೀಕ್ಷಾ ವಿಭಾಗಕ್ಕೆ DIGITALIZATION of written answer booklets (without cutting or de-threading answer booklets) and digital evaluation of DIGITALIZED answer booklets (on line marking) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯಿದೆ ಪ್ರಕಾರ ಆಹ್ವಾನಿಸುತ್ತದೆ. ಕರ್ನಾಟಕ ಇ–ಆಡಳಿತ ಇಲಾಖೆಯಲ್ಲಿ ನೋಂದಾಯಿಸಿಕೊಂಡಿರುವ ಟೆಂಡರ್ ದಾರರು ಇ–ಹರಾಜು ಮೂಲಕ ಭಾಗವಹಿಸಬಹುದು. ಟೆಂಡರ್ ಡಾಕ್ಯುಮೆಂಟ್ ಗಳನ್ನು ಇ–ಪ್ರೊಕ್ಯೂರ್ಮೆಂಟ್ ವೆಬ್ ಸೈಟ್ https://kppp.karnataka.gov.in ನಿಂದ ಡೌನ್ ಲೋಡ್ ಮಾಡುವುದು. ಅಹ್ರ ಟೆಂಡರ್ ದಾರರು ತಮ್ಮ ಪ್ರಸ್ತಾವನೆಗಳನ್ನು ಇ–ಪ್ರೊಕ್ಯೂರ್ಮೆಂಟ್ ವೇದಿಕೆ ಮುಖಾಂತರ ಇ–ಪೋರ್ಟಲ್ ನಲ್ಲಿ ನಿಗಧಿಪಡಿಸಿರುವ ದಿನಾಂಕದಂದು ಅಥ–ವಾ ಅದರ ಒಳಗೆ ಪ್ರಸ್ತಾವನೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕುಲಸಚಿವರು (ಮೌಲ್ಯಮಾಪನ), ಪರೀಕ್ಷಾ ವಿಭಾಗ ಇವರನ್ನು ಸಂಪರ್ಕಿಸುವುದು. 08282–256166, 8050235602.

ಸಹಿ/– ಕುಲಸಚಿವರು (ಮೌಲ್ಯಮಾಪನ)
ಕುವೆಂಪು ವಿಶ್ವವಿದ್ಯಾಲಯ ಜ್ಞಾನ ಸಹ್ಯಾದ್ರಿ, ಶಂಕರಘಟ್ಟ
ವಾ.ಸಾ.ಸಂ.ಇ./ಶಿ/ನಂ.15-09
ಝೇಂಕಾರ್/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.
ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2024–25/666 ದಿನಾಂಕ:04.09.2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2024–25 ನೇ ಸಾಲಿನ MVS O & M ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1)ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2)ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3)ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4)ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ http://kppp.karnataka.gov.in ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ:06/09/2024 ರಿಂದ Download ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಪ್ರೋಸೆಸಿಂಗ್ ಶುಲ್ಕ : kppp.karnataka.gov.in ನಲ್ಲಿರುವಂತೆ. ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ : 06/09/2024 ಸಮಯ 10:00 ಗಂಟೆಯಿಂದ 20/09/2024 ಸಮಯ 16:00 ಗಂಟೆವರೆಗೆ. ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ : 06/09/2024 ಸಮಯ 16:00 ಗಂಟೆಯಿಂದ 20/09/2024 ಸಮಯ 16:00 ಗಂಟೆವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : 21/09/2024 ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ 24/09/2024 ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ

ಟಿಪ್ಪಣಿ: ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ 8 ದಿವಸದೊಳಗಾಗಿ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರ ಉಮೇದುವಾರಿಕೆಯನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/326/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ: 04/2024–25, ದಿ: 31.08.2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು–570010 ರವರು ಕೆ.ಡಬ್ಲ್ಯು–4ರ ರೀತ್ಯ ಟೆಂಡರ್ ಆಹ್ವಾನಿಸಲಾಗಿದ್ದು, ಎರಡು ಟರ್ನ ಕೀ ಕಾಮಗಾರಿ ಇದ್ದು, ಇವುಗಳ ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) ರೂ 50.00 ಕೋಟಿಗಳು ಮತ್ತು ರೂ.65.00 ಕೋಟಿಗಳು. ಈ ಕಾಮಗಾರಿಗಳನ್ನು ಟರ್ನ್ ಕೀ ಆಧಾರದ ಮೇಲೆ ಕೈಗೊಳ್ಳುವ ಸಲುವಾಗಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್"ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, "ಕೆ.ಪಿ.ಪಿ.ಪಿ" ಪೋರ್ಟಲ್ ಮೂಲಕ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ. ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ.: 10.09.2024 ಸಂಜೆ 5–00 ಗಂಟೆ. ಪೂರ್ವ ಬಿಡ್ಡು ಸಭೆ: 11.09.2024 ಬೆಳಿಗ್ಗೆ 11–00 ಗಂಟೆ – ಅಧೀಕ್ಷಕ ಇಂಜಿನಿಯರ್ ರವರ ಕಛೇರಿ, ಸನೀ ಮತ್ತು ಅಂ.ಅ. ವೃತ್ತ, ಮೈಸೂರು. ಭರ್ತಿ ಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 13.09.2024 ಸಂಜೆ 5–00 ಗಂಟೆ. ಬಿಡ್ ತೆರೆಯುವ ದಿ: 17.09.2024ರ ಬೆಳಿಗ್ಗೆ 11–00 ಗಂಟೆ ನಂತರ. ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ "https://kppp.karnataka.gov.in" ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್‌ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸನೀ ಮತ್ತು ಅಂ.ಅ. ವಿಭಾಗ, ಮೈಸೂರು.
DIPR/DDMYS-515/KSMCA-345/2024-25

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ಬಾಗಲಕೋಟೆ
ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ,
ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ, ಬಾಗಲಕೋಟೆ – 587 104.
ಸಂ: ಆ.ಅ./ತೋವಿವಿಬಾ/ಸಖಕ/ಟೆ.ನಂ–192/2024–25 ದಿನಾಂಕ : 05–09–2024

ಅಲ್ಪಾವಧಿ ಟೆಂಡರ ಪ್ರಕಟಣೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ **ಹಣಕಾಸು ನಿಯಂತ್ರಣಾಧಿಕಾರಿಗಳ ಕಚೇರಿಯ ವಿವಿಧ ಖಾತೆಗಳಿಂದ (Revolving fund & Foundation Fund amount) ಮುದ್ದತ ಠೇವಣಿ (Fixed Deposit)ಯನ್ನು ರಾಷ್ಟ್ರೀಕೃತ ಬ್ಯಾಂಕ್/ಸಾರ್ವಜನಿಕ ಬ್ಯಾಂಕ್/ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಇಡಲು ಹಾಗೂ ಸದರಿ ಮುದ್ದತ ಠೇವಣಿಗಳಿಗೆ ಬ್ಯಾಂಕುಗಳಿಂದ ಬಡ್ಡಿದರ ಪಡೆಯಲು** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ **https://kppp.karnataka.gov.in** ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು. **ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಫೋನ್ ನಂ. 08354–230258.**

ಟೆಂಡರನ ಘಟಣಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟಿಕರಣಕ್ಕಾಗಿ ಕೊನೆಯ ದಿನಾಂಕ	10–09–2024 14.00 ಗಂಟೆಯವರೆಗೆ
2	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	14–09–2024 16.00 ಗಂಟೆಯವರೆಗೆ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	17–09–2024 11.00 ಗಂಟೆಗೆ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	19–09–2024 12.00 ಗಂಟೆಗೆ

ಬಿಡ್‌ದಾರರು **https://kppp.karnataka.gov.in** ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ **corrigendum/addendum** ಬಗ್ಗೆ ಮಾಹಿತಿ ಪಡೆಯಬೇಕು.

ಸಹಿ/–
ಆಸ್ತಿ ಅಧಿಕಾರಿಗಳು, ತೋ.ವಿ.ವಿ., ಬಾಗಲಕೋಟ
ಡಿಐಪಿಆರ್/ಬಾಗಲಕೋಟ/213/ಮಣಿಪಾಲ್/2024–25

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816–2281105 Email:eemitmk@gmail.com
ಐ.ಎಫ್.ಟಿ ಸಂಖ್ಯೆ.03/2024–25 KW-1 & KW-4 (ಏಕ ಲಕೋಟೆ) (ದ್ವಿ–ಲಕೋಟೆ) ದಿನಾಂಕ: 03.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 03.09..2024

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಲೆಕ್ಕ ಶೀರ್ಷಿಕೆ: 4702–ಗಿರಿಜನ ಉಪಯೋಜನೆ, 4702– ಅಣೆಕಟ್ಟು ಮತ್ತು ಪಿಕಪ್ (ಪ್ರಧಾನ ಕಾಮಗಾರಿಗಳು) ಮತ್ತು 2245–08–101–0–01–059–ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆ.ಪಿ.ಪಿ.ಪಿ. ಪೋರ್ಟ್‌ಲ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 03/2024–25, ದಿ: 03–09–2024 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:

1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 05–09–2024 ರಂದು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2. ಅವಶ್ಯ ಟೆಂಡರ್ ಮಾಹಿತಿ/ ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ: 11–09–2024 ಬೆಳ್ಳಗ್ಗೆ 11.30 ಗಂಟೆಯವರೆಗೆ ಸ್ವೀಕರಿಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನ ಮೂಲಕ ದಿನಾಂಕ: 17–09–2024 ಸಾಯಂಕಾಲ 5.00 ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು ದಿನಾಂಕ: 19–09–2024 ಸಾಯಂಕಾಲ 5.05 ಗಂಟೆಗೆ ತೆರೆಯಲಾಗುವುದು. 5. ಆರ್ಥಿಕ ಬಿಡ್ಡನ್ನು ದಿನಾಂಕ: 20–09–2024 ಸಾಯಂಕಾಲ 5.10 ಗಂಟೆಗೆ ತೆರೆಯಲಾಗುವುದು.

ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.
DIPR/TUM/307/KSMCA/2024-25

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com
ಸಂಖ್ಯೆ: ಮಾ.ನ.ಕಾ/ತಾ.ಶಾ/08/2024–25 ದಿನಾಂಕ: 04–09–2024

ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

2024–25ನೇ ಸಾಲಿನ ನಗರಸಭಾ ನಿಧಿ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪೌರಾಯುಕ್ತರು, ನಗರಸಭೆ ಮಾದನಾಯಕನಹಳ್ಳಿ ಇವರ ಹೆಸರಿನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆ/ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆಯಲ್ಲಿ ನೊಂದಾಯಿಸಿದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ಇಂಡೆಂಟ್	ವರ್ಗ
1	INDENT20493(Call-2) INDENT20494(Call-2)	Others
2	INDENT19074(Call-2) INDENT20529(Call-2)	Reserved

ಟೆಂಡರ್‌ನ್ನು ಕೆಪಿಪಿ ಪೋರ್ಟಲ್‌ನಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ ಪ್ರಚುರಪಡಿಸಲಾಗಿದ್ದು, ಇ–ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಆಸಕ್ತ ಬಿಡ್ಡುದಾರರು ಭಾಗವಹಿಸಲು ಕೋರಲಾಗಿದೆ. ಯಾವುದೇ ಮಾಹಿತಿಯನ್ನು ಕೆಪಿಪಿ ಪೋರ್ಟಲ್ ಮುಖಾಂತರವೇ ಪಡೆಯುವುದು.

ಸೂಚನೆ: ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ
ವಾಸಾಸಂಇ/ವಾಪ್ರಾ/1857/ಸ್ಪ್ಯಾನ್/2024–25

ಪುರಸಭಾ ಕಾರ್ಯಾಲಯ, ವಿಜಯಪುರ
ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ
ದೂ: 080–27666100. ವೆಬ್‌ಸೈಟ್: www.vijayapuratown.gov.in
E-Mail: itstaff_ulb_vijaypura@yahoo.co.in
ಸಂಖ್ಯೆ: ಪು.ಸ.ವಿ/ತಾಂ.ಶಾ/ಟೆ.ಪ್ರ/03/2024–25 ದಿನಾಂಕ: 03.09.2024

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮುಖ್ಯಾಧಿಕಾರಿಗಳು, ಪುರಸಭೆ, ವಿಜಯಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು 2024–25ನೇ ಸಾಲಿನ 15ನೇ ಹಣಕಾಸು ಯೋಜನೆ, ಎಸ್.ಎಫ್.ಸಿ ಕುಡಿಯುವ ನೀರು ಯೋಜನೆ ಮತ್ತು ಪುರಸಭಾ ನಿಧಿಯಡಿ ಈ ಕೆಳಕಂಡ ಕಾಮಗಾರಿ ಮತ್ತು ಸೇವೆಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಪ್ಯಾಕೇಜ್ ಸಂ.	ಕೆಲಸದ ವಿವರ
	ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
1	DMA/2024-25/RD/WORK_INDENT23913/CALL-2
	ಸಾಮಾನ್ಯ ವರ್ಗದ ಕಾಮಗಾರಿಗಳು
2	DMA/2024-25/WS/WORK_INDENT23862/CALL-2
3	DMA/2024-25/WS/WORK_INDENT24368/CALL-2
4	DMA/2024-25/SE2891/CALL-2

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮುಖಾಂತರ ಕಾಮಗಾರಿ ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಮೊತ್ತ ಕನಿಷ್ಠ 3.00 ಲಕ್ಷದಿಂದ ಗರಿಷ್ಠ 29.90 ಲಕ್ಷಗಳಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ 12.09.2024ರ 17.00 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ 13.09.2024ರಂದು 17.15 ಗಂಟೆಗೆ ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/– ಆಡಳಿತಾಧಿಕಾರಿ, ಪುರಸಭೆ, ವಿಜಯಪುರ
ಸಹಿ/– ಮುಖ್ಯಾಧಿಕಾರಿ, ಪುರಸಭೆ, ವಿಜಯಪುರ
ವಾಸಸಂಇ/ಸಿಪಿ/ಎಎಎ/1853/2024–25

ಎತ್ತಿನಹೊಳೆ ಯೋಜನೆ: ಬತ್ತಿದ ಕನಸಿಗೆ ಜೀವಜಲದ ಧಾರೆ

← ಮೊದಲಪುಟದಿಂದ

ಎತ್ತಿನಹೊಳೆ ಯೋಜನೆಯ ಮೊದಲ ಹಂತದ ನೀರು ಪೂರೈಕೆಗೆ ಸೆಪ್ಟೆಂಬರ್ 6 ರ ಶುಭ ಶುಕ್ರವಾರದಂದು ಸಿಎಂ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಹೆಬ್ಬನಹಳ್ಳಿ ವಿತರಣಾ ತೊಟ್ಟಿಯ 4 ರಿಂದ 32 ಕಿ.ಮೀ. ದೂರದಲ್ಲಿ ಎಸ್ಕೇಪ್ ಚಾನೆಲ್ ರೂಪಿಸಿದ್ದು, ಅಲ್ಲಿಂದ ನಾಲೆಯ ಮೂಲಕ ವಾಣಿವಿಲಾಸ ಸಾಗರಕ್ಕೆ ನೀರು ಪೂರೈಸಲಾಗುತ್ತದೆ. ನವೆಂಬರ್ 1ರ ವೇಳೆಗೆ ಸುಮಾರು 5 ಟಿಎಂಸಿ ನೀರನ್ನು ಮೇಲಕ್ಕೆ ಎತ್ತಲಾಗುತ್ತದೆ. ಇದು ಕೇವಲ ಪೂರ್ಣಗೊಂಡ ಕಾಮಗಾರಿಗೆ ಚಾಲನೆ ನೀಡುವ ದಿನವಲ್ಲ, ಇದು ಬಯಲುಸೀಮೆಯ 'ಬರಡು' ಎಂಬ ಟೀಕೆಯನ್ನು ತೊಡೆದು ಹಾಕುವ ಗಳಿಗೆ.

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರುವ ಮುನ್ನ ಗ್ಯಾರಂಟಿಗಳ ಭರವಸೆ ನೀಡಿತ್ತು. ಕೇವಲ ಗ್ಯಾರಂಟಿಗಳ ಆಧಾರದಲ್ಲೇ ಈ ಸರಕಾರ ಅಧಿಕಾರಕ್ಕೆ ಬಂದಿದೆ ಎಂಬುದು ಊಹಾಪೋಹದ ಮಾತು. ಗ್ಯಾರಂಟಿಗಳು ಪ್ರಮುಖವಾಗಿದ್ದರೂ, ಅವುಗಳ ಜೊತೆಗೆ ನೀರಾವರಿ, ಕೃಷಿ ಸುಧಾರಣೆ, ಕೈಗಾರಿಕಾಭಿವೃದ್ಧಿ, ನಿರುದ್ಯೋಗ ನಿವಾರಣೆ ಮೊದಲಾದ ಭರವಸೆಗಳು ಜನರ ಗಮನ ಸೆಳೆದಿತ್ತು. ಈ ಪೈಕಿ ಎತ್ತಿನಹೊಳೆ ಯೋಜನೆಯನ್ನು ಪೂರ್ಣಗೊಳಿಸುವ ಬದ್ಧತೆಯನ್ನು ಪ್ರಣಾಳಿಕೆಯಲ್ಲಿ ತಿಳಿಸಲಾಗಿತ್ತು. ಅದರಂತೆ ಒಂದೂವರೆ ವರ್ಷದೊಳಗೆ ಯೋಜನೆಯ ಮೊದಲ ಹಂತದ ನೀರು ಸರಬರಾಜು ಕಾರ್ಯ ಸಾಕಾರಗೊಂಡಿದೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮಾತ್ರವಲ್ಲದೆ, ರಾಮನಗರದ ಕೆಲವು ಭಾಗ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೂ ಜೀವಜಲ ದೊರೆಯಲಿದೆ.

ನೀರಾವರಿ ಪ್ರಗತಿ: 2027ಕ್ಕೆ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸುವುದು ಕಾಂಗ್ರೆಸ್ ಸರಕಾರದ ಆದ್ಯತೆಯ ಮಹತ್ವಕಾಂಕ್ಷೆ. ಪ್ರಣಾಳಿಕೆಯಲ್ಲಿದ್ದ 'ಕಾಂಗ್ರೆಸ್ ಬರಲಿದೆ, ಪ್ರಗತಿ ತರಲಿದೆ' ಎಂಬ ಘೋಷಣೆಯಂತೆಯೇ ಈಗ ಎತ್ತಿನಹೊಳೆಯ ನೀರಿನ ಮೂಲಕ ನೀರಾವರಿಗೆ ಪ್ರಗತಿ ತರಲಾಗುತ್ತಿದೆ. ಯೋಜನೆಯಡಿ ಒಟ್ಟು 24.01 ಟಿಎಂಸಿ ನೀರನ್ನು ಕುಡಿಯುವ ನೀರು ಹಾಗೂ ಕೆರೆಗಳನ್ನು ತುಂಬಿಸಲು ಬಳಸಿಕೊಳ್ಳಲಾಗುತ್ತದೆ. ಇದರಿಂದ ಬರ ಪೀಡಿತವಾದ 29 ತಾಲೂಕುಗಳ 6,657 ಗ್ರಾಮಗಳ 75.59 ಲಕ್ಷ ಜನರ ದಾಹ ತೀರಲಿದೆ. ಜೊತೆಗೆ 5 ಜಿಲ್ಲೆಗಳ 527 ಕೆರೆಗಳ ಅಂತರ್ಜಲ ಮರುಪೂರಣ ಕಾರ್ಯವೂ ನಡೆಯಲಿದೆ. ಇದಕ್ಕಾಗಿ ರಾಜ್ಯ ಸರಕಾರ ಖರ್ಚು ಮಾಡುತ್ತಿರುವುದು ಬರೋಬ್ಬರಿ 23,251 ಕೋಟಿ ರುಪಾಯಿ!

2011–12ರಲ್ಲಿ ಅಂದಿನ ಬಿಜೆಪಿ ಸರಕಾರ ರಾಜಕೀಯ ಲಾಭದ ದೃಷ್ಟಿಯಿಂದ ದೂರದೃಷ್ಟಿ ಇಲ್ಲದೆ ಯೋಜನೆ ರೂಪಿಸಿದ್ದರಿಂದ ಅದು ಬದ್ಧತೆಯಿಂದ ಮುಂದುವರಿಯಲಿಲ್ಲ. ಬಳಿಕ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರ, ಯೋಜನೆಯ ಮೊತ್ತವನ್ನು ಹೆಚ್ಚಿಸಿ, 2014 ರ ಫೆಬ್ರವರಿಯಲ್ಲಿ ಅನುಮೋದನೆ ನೀಡಿತು. ನಂತರ ಚಿಕ್ಕಬಳ್ಳಾಪುರದಲ್ಲಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಗಿತ್ತು.

ಅಂದು ಆರಂಭವಾದ ಯೋಜನೆ, ನಡುವೆ ಬಿಜೆಪಿ ಸರ್ಕಾರ ಇದ್ದ ಅವಧಿಯಲ್ಲೂ ಪೂರ್ಣಗೊಳ್ಳಲಿಲ್ಲ. ಮತ್ತೆ ಈ ಯೋಜನೆಗೆ ಚುರುಕು ನೀಡಲು ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರಬೇಕಾಯಿತು. ಅದರಂತೆ ಈಗ ಕಾಮಗಾರಿಗೆ ವೇಗ ನೀಡಿ ನೀರೆತ್ತುವ ಕಾರ್ಯವನ್ನು ನನಸು ಮಾಡಲಾಗಿದೆ. ಇದು ಬಯಲುಸೀಮೆಯ ನೀರಾವರಿ ಕ್ರಾಂತಿ ಯಲ್ಲಿ ಆರಂಭದ ಹೆಜ್ಜೆ. ಈ ಹೆಜ್ಜೆಯನ್ನು ಇನ್ನಷ್ಟು ಮುಂದಕ್ಕೆ ಒಯ್ದು, ಎತ್ತಿನಹೊಳೆ ಯೋಜನೆಯನ್ನು ಈ ಸರಕಾರದ ಅವಧಿಯಲ್ಲೇ ಪೂರ್ಣಗೊಳಿಸುವುದು ನಮ್ಮ ಮುಂದಿನ ಗುರಿ ಮತ್ತು ಸವಾಲು. ಅದಕ್ಕಾಗಿ ಜನಬಲವೊಂದಿದ್ದರೆ ಸಾಕು.

ದೇವಸ್ಥಾನ ನಿರ್ಮಾಣಕ್ಕೆ ಗೃಹಲಕ್ಷ್ಮಿ ಹಣ

ಕೊಪ್ಪಳ: ಜಿಲ್ಲೆಯ ಕುಕನೂರು ತಾಲೂಕು ಹಿರೇಬಿಡನಾಳ ಗ್ರಾಮದ ಮಹಿಳೆಯರು ತಮ್ಮ ಊರಿನ ದೇವಸ್ಥಾನ ನಿರ್ಮಾಣಕ್ಕೆ ಗೃಹಲಕ್ಷ್ಮಿ ಯೋಜನೆ ಹಣ ದೇಣಿಗೆ ನೀಡಿದ್ದಾರೆ. ಗ್ರಾಮದ ಶರಣಬಸವೇಶ್ವರ ದೇವಸ್ಥಾನ ನಿರ್ಮಾಣಕ್ಕೆ 50ಕ್ಕೂ ಹೆಚ್ಚು ಮಹಿಳೆಯರು ತಮ್ಮ ಒಂದು ತಿಂಗಳ ಗೃಹಲಕ್ಷ್ಮಿ ಯೋಜನೆಯ ಹಣ ದೇಣಿಗೆ ನೀಡುವುದಾಗಿ ಒಪ್ಪಿಕೊಂಡಿದ್ದಾರೆ.

ಕರ್ನಾಟಕ ಸರ್ಕಾರ
ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ದೂರವಾಣಿ ಸಂಖ್ಯೆ: 08352–276996
ವೆಬ್‌ಸೈಟ್:www.vijayapur.uda.gov.in
ಇ–ಮೇಲ್:bdacommissionerbijapur@gmail.com
ಸಂಖ್ಯೆ: ನಪ್ರಾವಿ/GIS/ಮ.ಯೋ/2024–25/492 ದಿನಾಂಕ:02.09.2024

ಸಾರ್ವಜನಿಕ ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ(10) ರಡಿಯಲ್ಲಿ)

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ (10) ರನ್ವಯ ವಿಜಯಪುರ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅಮೃತ್ ಯೋಜನೆಯಡಿಯಲ್ಲಿ GIS ಆಧಾರಿತ ಮಹಾಯೋಜನೆ–2041 (ಪರಿಷ್ಕೃತ–3) ತಯಾರಿಕೆ ಕುರಿತು ಪ್ರಾಧಿಕಾರದ ಉದ್ದೇಶವನ್ನು ವ್ಯಕ್ತಪಡಿಸಿ ಸಾರ್ವಜನಿಕರಿಂದ ಸಲಹೆ/ಸೂಚನೆಗಳನ್ನು ಆಹ್ವಾನಿಸುವ ಕುರಿತು.

ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂ: ನಇ/29/ಬೆಮಪ್ರಾ/2022 ದಿ: 26.04.2022 ರಂದು ವಿಜಯಪುರ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ–2031 (ಪ–2) ಕ್ಕೆ ಅಂತಿಮ ಅನುಮೋದನೆ ನೀಡಲಾಗಿದೆ. ಕೇಂದ್ರ ಸರ್ಕಾರದ ಅಮೃತ್ ಅಭಿಯಾನದ "Formulation of GIS based Master Plan" ಯೋಜನೆಯಡಿಯಲ್ಲಿ ವಿಜಯಪುರ ನಗರವು ಒಳಗೊಂಡಿರುವುದರಿಂದ GIS ತಂತ್ರಜ್ಞಾನ ಬಳಸಿ ಮಹಾಯೋಜನೆ ಸಿದ್ಧಪಡಿಸಬೇಕಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ (1) ರನ್ವಯ ವಿಜಯಪುರ ಮಹಾಯೋಜನೆ–2041 (ಪರಿಷ್ಕೃತ–3) ತಯಾರಿಸುವ ಉದ್ದೇಶ ಹೊಂದಿರುತ್ತದೆ ಎಂಬ ವಿಷಯವನ್ನು ಸಾರ್ವಜನಿಕರ ಗಮನಕ್ಕೆ ಪ್ರಕಟನೆ ಮಾಡಲಾಗಿದೆ.

ಈ ಸಂಬಂಧ ಸಾರ್ವಜನಿಕರು ತಮ್ಮ ಸಲಹೆ /ಸೂಚನೆಗಳು ಇದ್ದಲ್ಲಿ ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 60 ದಿನಗಳ ಒಳಗಾಗಿ ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮೂಲಕ ಆಯುಕ್ತರು, ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ ರವರಿಗೆ ಸಲ್ಲಿಸುವಂತೆ ಹಾಗೂ 60 ದಿನಗಳ ನಂತರ ಬಂದ ಯಾವುದೇ ಸಲಹೆ / ಸೂಚನೆಗಳನ್ನು ಸ್ವೀಕರಿಸಲಾಗುವುದಿಲ್ಲ ಎಂಬ ಮಾಹಿತಿಯನ್ನು ತಿಳಿಸಲಾಗಿದೆ.

ಸಹಿ/– ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ವಾಸಾಸಂಇ/ವಿಜಯಪುರ/223/ಕೆಎಸ್‌ಎಂಸಿಎ/2024–25

ಜಿಲ್ಲಾ ಪಂಚಾಯತ ಕಾರ್ಯಾಲಯ,
ಪಿ.ಎಂ. ಪೋಷಣ್, ಕಾರವಾರ, ಉತ್ತರ ಕನ್ನಡ
ನಂ.ಅದಾ/ಆ.ಸಾಗಾಣಿಕೆ.ಟೆಂಡರ್/ಪತ್ರಿಕಾ ಪ್ರಕಟಣೆ/2024–25 ದಿನಾಂಕ: 03–09–2024.

ಟೆಂಡರ್ ಪ್ರಕಟಣೆ

ಪಿ.ಎಂ.ಪೋಷಣ್(ಮ.ಉ.ಯೋ) ಕಾರ್ಯಕ್ರಮದಡಿಯಲ್ಲಿ 2024–25 ನೇ ಸಾಲಿಗೆ ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರ ಮತ್ತು ಜೊಯ್ಡಾ ಹೀಗೆ 02 ತಾಲ್ಲೂಕುಗಳಲ್ಲಿ ಆಯಾ ತಾಲೂಕಿನ ಸಗಟು ಮಳಿಗೆ ಕೇಂದ್ರಗಳಿಂದ ತಾಲೂಕಿನ ಸರಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಅಡುಗೆ ಕೇಂದ್ರಗಳಿಗೆ ಆಹಾರ ಪದಾರ್ಥಗಳಾದ ಅಕ್ಕಿ, ತೊಗರಿಬೇಳೆ, ಪಾಮೆಎಣ್ಣೆ ಹಾಗೂ ಉಪ್ಪುಗಳನ್ನು ಸಾಗಾಣಿಕೆ ಮಾಡುವ ಸಂಬಂಧ ಅರ್ಹ ಟೆಂಡರದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವಿಳಾಸ: (https://kppp.karnataka.gov.in) ಮೂಲಕ ಅರ್ಜಿ ಆಹ್ವಾನಿಸಿದ್ದು ಟೆಂಡರ ದಸ್ತಾವೇಜನ್ನು 23–09–2024 ರ ಸಾಯಾಂಕಾಲ 5:30 ಗಂಟೆಯೊಳಗೆ ಅಪಲೋಡ್ ಮಾಡಲು ಅವಕಾಶವಿರುತ್ತದೆ.

(1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವಿಳಾಸ: (https://kppp.karnataka.gov.in) ಮುಖಾಂತರ ಟೆಂಡರ್ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 09–09–2024 ರಿಂದ 23–09–2024 ಸಾಯಾಂಕಾಲ 5:30 ಗಂಟೆಯವರೆಗೆ (2) ತಾಂತ್ರಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ಸಮಯ: 25–09–2024 ಪೂರ್ವಾಹ್ನ 11:00 ಗಂಟೆಗೆ (3) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ಸಮಯ: 27–09–2024 ಪೂರ್ವಾಹ್ನ 11:00 ಗಂಟೆಗೆ

ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಟೆಂಡರ್‌ಗೆ ಅರ್ಜಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವಿಳಾಸ: (https://kppp.karnataka.gov.in) ಸಹಾಯವಾಣಿ ಕೇಂದ್ರ: +91–8046010000 +91–8068948777 ಮುಖಾಂತರ ಸಲ್ಲಿಸತಕ್ಕದ್ದು.

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ ಉತ್ತರ ಕನ್ನಡ, ಕಾರವಾರ.
DIPR/ADK/KSMCA/322/24-25 Dt.05.09.2024

ಜಿಲ್ಲಾ ಪಂಚಾಯತ ಧಾರವಾಡ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರವರ ಕಚೇರಿ, ಗ್ರಾ.ಕು.ನೀ&ನೈ ವಿಭಾಗ, ಧಾರವಾಡ
ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ./ಇ–ಟೆಂಡರ/2024–25/759 ದಿನಾಂಕ: 05.09.2024

ಅಲ್ಪಾವಧಿ ಸರ್ವಿಸ್ ಟೆಂಡರನ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವಿಷಯ: ಸರ್ವಿಸ್ ಟೆಂಡರನ ಪ್ರಕಟಣೆ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಡಿ ಧಾರವಾಡ ಜಿಲ್ಲೆಯ ಈ ಕೆಳಗಾಣಿಸಿದ ಕಾಮಗಾರಿಯ ಸರ್ವಿಸ್ ಟೆಂಡರ ಕರೆಯಲಾಗಿದೆ.

ಕಾಮಗಾರಿಯ ವಿವರ ಈ ಕೆಳಗಿನಂತಿದೆ.

ಧಾರವಾಡ ಜಿಲ್ಲೆ: ವರ್ಗ: ಸಾಮಾನ್ಯ: Indent No: RWSSD/2024-25/SE0610
ಗರಿಷ್ಠ ಮೊತ್ತ: 80.00 ಲಕ್ಷಗಳು
ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ (Calander of Events)
1) ಖಾಲಿ ಟೆಂಡರ ಫಾರ್ಮಗಾಗಿ ಇ–ಪ್ರೊಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೈಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 06.09.2024 ರಿಂದ ದಿನಾಂಕ: 13.09.2024 ಸಾಯಂಕಾಲ 4.00 ಘಂಟೆಗೆ
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14.09.2024 ಸಾಯಂಕಾಲ 4.30 ಘಂಟೆಗೆ
3) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ

ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ kppp.karnataka.gov.in login ನಲ್ಲಿ ಪಡೆಯಬಹುದು. ಟೆಂಡರ ಫಾರ್ಮಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಆಸಕ್ತ ಗುತ್ತಿಗೆದಾರರು ವಿವರಗಳನ್ನು ಮತ್ತು ಷರತ್ತುಗಳನ್ನು ವೆಬ್‌ಸೈಟ್ kppp.karnataka.gov.in login ನಲ್ಲಿ ಲಾಗ್‌ಇನ್ ಮಾಡಿ ನೋಡಬಹುದು. ಸದರಿ ಟೆಂಡರನಲ್ಲಿ ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರಮೆಂಟ ವೆಬಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/–
ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾ.ಕು.ನೀ & ನೈ. ವಿಭಾಗ, ಧಾರವಾಡ
ಡಿಐಪಿಆರ್/ಧಾರವಾಡ/356/ಮಣಿಪಾಲ್/2024–25

ಮಹದಾಯಿ: ದೆಹಲಿಗೆ ಸರ್ವಪಕ್ಷ ನಿಯೋಗ

← ಮೊದಲಪುಟದಿಂದ

ಕೋವಿಡ್ ಹಗರಣ; ವರದಿ ಬಂದ ಬಳಿಕ ಕ್ರಮ: ಕರೋನಾ ಹಗರಣದಲ್ಲಿ ಬಿಜೆಪಿ ನಾಯಕರಿಗೆ ಇನ್ನೊಂದು ತಿಂಗಳು ತಾತ್ಕಾಲಿಕ ರಿಲೀಫ್ ಸಿಕ್ಕಿದ್ದು, ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿ ನೀಡುವ ವರದಿಯ ಆಧಾರದಲ್ಲಿ ಮುಂದಿನ ಕ್ರಮವಹಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಕರೋನಾ ಹಗರಣಕ್ಕೆ ಸಂಬಂಧಿಸಿದಂತೆ ನ್ಯಾ.ಮೈಕಲ್ ಡಿ ಕುನ್ಹಾ ಅವರು ನೀಡಿರುವ ಮಧ್ಯಂತರ ವರದಿಯ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಸ್ತಾಪಿಸಿದರು. ವರದಿಯಲ್ಲಿರುವ ಅಂಶಗಳು, ನೀಡಿರುವ ಶಿಫಾರಸು ಸೇರಿದಂತೆ ವಿವಿಧ ಅಂಶಗಳನ್ನು ಪರಿಶೀಲಿಸಿ ಮುಂದೆ ಯಾವ ರೀತಿಯ ಕ್ರಮವಹಿಸಬಹುದು ಎನ್ನುವ ಬಗ್ಗೆ ವರದಿ ನೀಡುವಂತೆ ಸೂಚನೆ ನೀಡಿದ್ದಾರೆ. ಆಯೋಗ ನೀಡಿರುವ ವರದಿಯಲ್ಲಿ ಐದಾರು ಸಂಪುಟಗಳಿವೆ. ಆ ಎಲ್ಲವನ್ನೂ ವಿಶ್ಲೇಷಣೆ ಮಾಡಿ ಮುಂದಿನ ಹೆಜ್ಜೆ ಇಡಲು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಮಧ್ಯಂತರ ವರದಿಯಲ್ಲಿ ಸಾವಿರಾರು ಕೋಟಿ ಅವ್ಯವಹಾರವಾಗಿರುವ ಬಗ್ಗೆ ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ. ಕೆಲವೊಂದಿಷ್ಟು ಕಡತ ಕಣ್ಮರೆಯಾಗಿರುವ ಬಗ್ಗೆ ಪ್ರಸ್ತಾಪವಾಗಿದೆ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಕೊಟ್ಟ ವರದಿ, ಹಲವಾರು ವಿವರವನ್ನೂ ಗಮನಿಸಿದ್ದು, ಏನು ಕ್ರಮ ಕೈಗೊಳ್ಳಬೇಕೆಂದು ಮುಂದೆ ತಿಳಿಸಲಾಗುತ್ತದೆ ಎಂದು ತಿಳಿದುಬಂದಿದೆ. ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಹಾಗೂ ಅಪರ ಮುಖ್ಯ ಕಾರ್ಯದರ್ಶಿಗೆ ವರದಿಯ ಅಧ್ಯಯನ ಜವಾಬ್ದಾರಿ ನೀಡಿದ್ದು, ತಿಂಗಳೊಳಗೆ ಶಿಫಾರಸು ಮಾಡಲು ಸೂಚನೆ ನೀಡಲಾಗಿದೆ. ಪ್ರಮುಖವಾಗಿ ಕರೋನಾ ಹೆಸರಲ್ಲಿ ಸಾವಿರಾರು ಕೋಟಿ ರು. ಅವ್ಯವಹಾರವಾಗಿದೆ, ಅನೇಕ ಕಡತ ಕಾಣಿಸುತ್ತಿಲ್ಲ. ಕೆಲವೊಂದಷ್ಟು ಕಡತಗಳನ್ನು ಆಯೋಗದ ಮುಂದೆ ಹಾಜರು ಪಡಿಸಿಲ್ಲ. ಯಾರು ಕಡತ ಕೊಟ್ಟಿಲ್ಲ, ಏಕೆ ಕೊಟ್ಟಿಲ್ಲ ಎಂದು ವಿಶ್ಲೇಷಣೆ ಮಾಡಲಾಗುತ್ತದೆ. ನಂತರ ಸಂಪುಟದ ಮುಂದೆ ವಿಶ್ಲೇಷಣೆಯನ್ನು ಹಾಜರುಪಡಿಸಲು ತಿಳಿಸಲಾಗಿದೆ. ವಿಚಾರಣೆ ಆಯೋಗಕ್ಕೆ ಆರು ತಿಂಗಳ ವಿಸ್ತರಣೆ ಅವಕಾಶ ನೀಡಲಾಗಿದೆ.

ಕೆಂಪಣ್ಣ ವರದಿ ಬಗ್ಗೆಯೂ ಸಂಪುಟದಲ್ಲಿ ಚರ್ಚಿಸಿ

ಕೇಂದ್ರದ ಜತೆ ಸಂಘರ್ಷ ಬಿಡಿ

ಶಿವಮೊಗ್ಗ: ಕೇಂದ್ರದ ಜೊತೆ ಸಂಘರ್ಷ ಬಿಟ್ಟು ಅಭಿವೃದ್ಧಿಯತ್ತ ಯೋಚಿಸಿ ಎಂದು ರಾಜ್ಯ ಸರಕಾರಕ್ಕೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸಲಹೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು. ಕೋವಿಡ್ ವರದಿಯಲ್ಲಿ ಏನಿದೆ ಗೊತ್ತಿಲ್ಲ. ಸಂಪುಟದಲ್ಲಿ ಈ ಬಗ್ಗೆ ಚರ್ಚೆ ನಡೆಯಿತು ಎಂದು ಮಾಧ್ಯಮದಲ್ಲಿ ನೋಡಿದ್ದೇನೆ. ಕೆಂಪಣ್ಣ ವರದಿ ಬಗ್ಗೆಯೂ ಸಂಪುಟದಲ್ಲಿ ಇಟ್ಟು ಅದನ್ನು ಚರ್ಚೆ ಮಾಡಲಿ. ಕೆಂಪಣ್ಣ ವರದಿಯನ್ನು ಏಕೆ ಬಿಟ್ಟಿದ್ದಾರೆ ಎಂದು ಪ್ರಶ್ನಿಸಿದರು.

ವಿಐಎಸ್‌ಎಲ್ ನಿರ್ವಹಣೆಗೆ 15 ಸಾವಿರ ಕೋಟಿ ರು. ಅಗತ್ಯ: ಭದ್ರಾವತಿ ವಿಐಎಸ್‌ಎಲ್ ನಿರ್ವಹಣೆಗೆ ಇನ್ನೂ ಬಹಳ ಕೆಲಸವಿದೆ. 15 ಸಾವಿರ ಕೋಟಿ ಬೇಕಾಗಬಹುದು. ರೋಗಗ್ರಸ್ಥ ಕಾರ್ಖಾನೆಯ ಪಟ್ಟಿಗೆ ಈಗಾಗಲೇ ಅದು ಸೇರಿದ್ದು, ಪ್ರಧಾನಿ ಮತ್ತು ಆರ್ಥಿಕ ಇಲಾಖೆ ಮನವೊಲಿಸಿ ನಾನು ನೀಡಿದ ಮಾತಿನಂತೆ ಕಾರ್ಮಿಕರ ಹಿತದೃಷ್ಟಿಯಿಂದ ಮತ್ತು ವಿಶ್ವೇಶ್ವರಯ್ಯನವರ ಹೆಸರು ಉಳಿಸಲು ವಿಐಎಸ್‌ಎಲ್ ಪುನರುಜ್ಜೀವನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಹೈಕೋರ್ಟ್ ತೀರ್ಪು ಬರಲಿ: ಮುಡಾ ಹಗರಣ, ಆಯುಕ್ತ ದಿನೇಶ್ ಕುಮಾರ್ ಅಮಾನತು ವಿಚಾರದ ಬಗ್ಗೆ ಮಾತನಾಡಿ, ಈ ಬಗ್ಗೆ ನನಗಿಂತ ಹೆಚ್ಚು ಮಾಧ್ಯಮದವರಿಗೆ ಎಲ್ಲಾ ಗೊತ್ತಿದೆ. ಮಾಧ್ಯಮದವರೇ ಎಲ್ಲಾ ಹೇಳ್ತಿದ್ದಾರೆ. ಈಗಾಗಲೇ ಹೈಕೋರ್ಟ್ ನಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ವಾದ –ಪ್ರತಿವಾದ ಆಗಿದೆ. ಸಿದ್ದರಾಮಯ್ಯ ಅವರ ಪರ ವಕೀಲರು ವಾದ ಮಾಡಲು ಇನ್ನೂ ಸಮಯ ಕೇಳ್ತಿದ್ದಾರೆ. ಹೈಕೋರ್ಟ್ ತೀರ್ಪು ಬರಲಿ ಎಂದರು. ಅಧಿಕಾರಕ್ಕೆ ಬಂದ ಒಂದು ವರ್ಷದಲ್ಲೇ ಅಭಿವೃದ್ಧಿಯ ಚರ್ಚೆಯಾಗುತ್ತಿಲ್ಲ. ಹಗರಣಗಳ ಚರ್ಚೆಯಾಗುತ್ತಿದೆ. ಚುನಾವಣೆಗೂ ಮುನ್ನ ರಾಜ್ಯದೆಲ್ಲೆಡೆ ಅಪಾರ ಪ್ರಚಾರ ಮಾಡಿ ಗ್ಯಾರಂಟಿ ಘೋಷಣೆ ಮಾಡಿ ಅಧಿಕಾರ ಪಡೆದಿದ್ದಾಯಿತು. ಅದರಲ್ಲಿ ತಪ್ಪೇನಿಲ್ಲ. ಆದರೆ, ಜನತೆಗೆ ನೀಡಿದ ಮಾತನ್ನು ಮರೆತಿದ್ದೀರಿ. ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಹಣ ಬಳಕೆಯಾಗುತ್ತಿದೆಯೇ ಎನ್ನುವುದು ದೊಡ್ಡ ಪ್ರಶ್ನೆಯಾಗಿದೆ. ಅಭಿವೃದ್ಧಿಗೆ ಪೂರಕವಾದ ಯೋಜನೆಗಳು ಇಲ್ಲವೇ ಇಲ್ಲ ಎಂದರು. ಭ್ರಷ್ಟಾಚಾರದ ಮಾತುಗಳೇ ಕಾಂಗ್ರೆಸ್ ಸರ್ಕಾರದಲ್ಲಿ ಮುನ್ನೆಲೆಗೆ ಬರುತ್ತಿವೆ. ಅವರ ಪಕ್ಷದವರೇ ಈ ಸರ್ಕಾರದಲ್ಲಿ 40 ಪರ್ಸೆಂಟ್ ಗಿಂತ ಜಾಸ್ತಿ ನೀಡಬೇಕೆಂದು ಹೇಳುತ್ತಿದ್ದಾರೆ. ವರ್ಗಾವಣೆ ದಂಧೆ ನಡೆಯುತ್ತಿದೆ. ವಿವಿಧ ನಿಗಮಗಳಲ್ಲಿ ಈಗಾಗಲೇ ಹಗರಣ ಬಹಿರಂಗವಾಗಿದೆ. ಬಡವರ ಹೆಸರಲ್ಲಿ ಹಣ ಲೂಟಿಯಾಗುತ್ತಿದೆ ಎಂದು ಕೇಂದ್ರ ಸಚಿವರು ಕಿಡಿಕಾರಿದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ ಕರ್ನಾಟಕ ನೀರಾವರಿ ನಿಗಮ ನಿಯಮಿತ, ತುಂ.ಮೆ.ಯೋ ವಿಭಾಗ, ಶಿವಮೊಗ್ಗ,
ಪೋನ್ ನಂ.08182–254832
ಪ್ರಕಟಣೆ ಸಂಖ್ಯೆ: ಕನೀನಿನಿ/ತುಂ.ಮೆ.ಯೋ. ವಿ/ಪಿಬಿ–2/ಟೆಂಡರ್/06 ದಿನಾಂಕ:04.09.2024

SHORT TERM PERCENTAGE TENDER NOTIFICATION
(Through e-Procurement only)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.–ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿ ಬರುವ ಒಂದು(01) ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ.185.15 ಲಕ್ಷಗಳಾಗಿರುತ್ತದೆ.(ಜಿ.ಎಸ್.ಟಿ ಹೊರತುಪಡಿಸಿ)
(2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ/ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ: 09.09.2024 17.30 ಘಂಟೆಯವರೆಗೆ.
(3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 05.09.2024 ರಿಂದ 12.09.2024 ಸಾಯಂಕಾಲ 17.29 ಘಂಟೆಯವರೆಗೆ (ಕಚೇರಿ ವೇಳೆಯಲ್ಲಿ).

ಟೆಂಡರನ್ನು ತೆರೆಯುವ ದಿನಾಂಕ / ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು/ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https:\\eproc.Karanataka.Gov.in ವೆಬ್‌ಸೈಟ್ ನಲ್ಲಿ ಪಡೆಯಬಹುದು.

ಸಹಿ/–
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ತುಂ.ಮೆ.ಯೋ. ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ.28–09/
ಝೇಂಕಾರ್/2024–25

ಟ್ವೀಟೂ-ಖಾರಾ

ಸಿ.ಟಿ.ರವಿ, ಬಿಜೆಪಿ ನಾಯಕ

ರಾಜಕೀಯದ ಆಟಕ್ಕೆ ಶಿಕ್ಷಕರ ದಿನಾಚರಣೆಯಂದೇ ಉತ್ತಮ ಶಿಕ್ಷಕರೊಬ್ಬರನ್ನು ಬಲಿಪಶು ಮಾಡಿದ ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರದ ತುಷ್ಟೀಕರಣ ರಾಜಕೀಯದ ನೀತಿ ತನ್ನ ತುತ್ತತುದಿ ಮುಟ್ಟಿದೆ. ಶಾಲೆ ಮತ್ತು ಶಿಕ್ಷಣ ಮಂಡಳಿ ರೂಪಿಸಿದ ಸಮವಸ್ತ್ರ ನೀತಿಯನ್ನು ಪಾಲಿಸಿದ ಶಿಕ್ಷಕನಿಗೆ ಘೋಷಣೆಯಾದ ಪ್ರಶಸ್ತಿಯನ್ನು ರಾಜಕೀಯ ಹಾಗೂ ಸ್ವಘೋಷಿತ ಬುದ್ಧಿಜೀವಿಗಳ ಒತ್ತಡಕ್ಕೆ ಸಿಲುಕಿ ನಿರಾಕರಿಸಿದ್ದು ಶಿಕ್ಷಣ ಕ್ಷೇತ್ರ ಮತ್ತು ಶಿಕ್ಷಕ ಬಂಧುಗಳಿಗೆ ಮಾಡಿದ ಅನ್ಯಾಯ

ಸುರೇಶ್ ಎಸ್.ಬೆಂಗಳೂರು

ಈ ಯಪ್ಪಾನ್ನ ನಿಮ್ಮ ಬೇಳೆ ಬೇಯಿಸಿಕೊಳ್ಳೋಕೆ ಬಳಸಿಕೊಂಡ್ರಿ ಅಲ್ವಾ ಆವತ್ತು...? ಪಾಪ ಟೀಚರ್‌ನೂ ಹಾಳುಮಾಡಿದ್ರಲ್ಲ ನೀವು (ಬಿಜೆಪಿ)..!

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಲೋಕಾರ್ಪಣೆಗೆ ಸಜ್ಜು | ಇಂದು ಮೊದಲ ಹಂತದ ಕಾಮಗಾರಿ ಉದ್ಘಾಟನೆ | ಆರಂಭಿಕ ವೆಚ್ಚದ ಕಾಮಗಾರಿಗೆ 23 ಸಾವಿರ ಕೋಟಿ ರು. ವ್ಯಯ

ಸವಾಲುಗಳ ಮೀರಿ ಸಜ್ಜಾದ ಎತ್ತಿನಹೊಳೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ ಬಹುನಿರೀಕ್ಷಿತ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಹಂತ-1 ಲೋಕಾರ್ಪಣೆಗೆ ಸಜ್ಜಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಈ ಯೋಜನೆಯ ಮೊದಲ ಹಂತಕ್ಕೆ ಚಾಲನೆ ನೀಡುವ ಮೂಲಕ ಏಳು ಜಿಲ್ಲೆಗಳ ಬಹುದಿನದ ಕನಸು ನನಸಾಗಿದೆ.

ಈ ಹಿಂದೆ ಕುಂಟುತ್ತಾ ಸಾಗಿದ್ದ ಎತ್ತಿನ ಹೊಳೆ ಯೋಜನೆಯನ್ನು ಸವಾಲಾಗಿ ಸ್ವೀಕರಿಸಿದ ರಾಜ್ಯ ಸರಕಾರ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಯೋಜನೆಯ ಕಾಮಗಾರಿಗೆ ವೇಗ ನೀಡಿದರು. ಇದರ ಫಲವಾಗಿ ಮೊದಲ ಹಂತದ ಯೋಜನೆಗೆ ಶುಕ್ರವಾರ ಚಾಲನೆ ಸಿಗಲಿದ್ದು, ಮುಂದಿನ ಮೂರು ವರ್ಷದಲ್ಲಿ ಇಡೀ ಯೋಜನೆ ಪೂರ್ಣ ಗೊಳ್ಳಲಿದೆ.

ಪಶ್ಚಿಮಘಟ್ಟದ ಮೇಲ್ಭಾಗದಲ್ಲಿ ಹರಿಯುವ ಎತ್ತಿನ ಹೊಳೆ, ಕಾಡುಮನೆ ಹೊಳೆ, ಕೇರಿ ಹೊಳೆ ಮತ್ತು ಹೊಂಗದಹಳ್ಳದಿಂದ ಮುಂಗಾರು ಮಳೆ ಅವಧಿಯಲ್ಲಿ 24.01 ಟಿಎಂಸಿ ಪ್ರಮಾಣದ ಪ್ರವಾಹದ ನೀರನ್ನು 7 ಜಿಲ್ಲೆಗಳಿಗೆ ಹರಿಸುವ ಎತ್ತಿನ ಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಾಗಿದೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರಿನ ಬರಪೀಡಿತ 29 ತಾಲೂಕುಗಳ 38 ಪಟ್ಟಣ ಪ್ರದೇಶಗಳ ಹಾಗೂ 6,657 ಗ್ರಾಮಗಳ ಸುಮಾರು 75.59 ಲಕ್ಷ ಜನರಿಗೆ ಮತ್ತು ಜಾನುವಾರುಗಳಿಗೆ 14.056 ಟಿಎಂಸಿ ಕುಡಿಯುವ ನೀರನ್ನು ಈ ಯೋಜನೆಯಲ್ಲಿ ಒದಗಿಸಲಾಗಿದೆ. ಇದರೊಂದಿಗೆ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಹಾಸನ, ತುಮಕೂರು ವ್ಯಾಪ್ತಿಯಲ್ಲಿ 527 ಕೆರೆಗಳಿಗೆ 9.953 ಟಿಎಂಸಿ ಪ್ರಮಾಣದ ನೀರನ್ನು ಕೆರೆಗಳ ಸಾಮರ್ಥ್ಯದ ಶೇ.50ರಷ್ಟು ತುಂಬಿಸಿ ಅಂತರ್ಜಲ ಮರುಪೂರಣ ಮಾಡುವ ಲೆಕ್ಕಾಚಾರದಲ್ಲಿ ಸರಕಾರವಿದೆ.

ಮೂಲ ವೆಚ್ಚಕ್ಕೆ ಮೂರು ಪಟ್ಟು ಹೆಚ್ಚಳ

ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿತ್ತು. ಆದರೆ ಅದಾದ ಬಳಿಕ ಸರಕಾರಗಳ ನಿರಾಸಕ್ತಿ ಅನುದಾನದ ಸಮಸ್ಯೆಯಿಂದ ಆಮೆಗತಿಯಲ್ಲಿ ಯೋಜನೆ ಸಾಗಿತ್ತು. ಯೋಜನೆಯ ಮೂಲ ಅಂದಾಜು ಮೊತ್ತ 8,323.50 ಕೋಟಿಗಳಾಗಿತ್ತು. ಈ ಸಂಬಂಧ ಸರಕಾರ 2012ರ ಜುಲೈ 13ರಂದು ಆದೇಶ ಹೊರಡಿಸಿತ್ತು. ದರ ಪರಿಷ್ಕರಣೆ ಮತ್ತು ಭೂಸ್ವಾಧೀನ ದಿಂದಾಗಿ 12,912.36 ಕೋಟಿಗಳ ಮೊತ್ತದ ಪರಿಷ್ಕೃತ ಯೋಜನಾ ವರದಿಗೆ 2014ರ ಫೆಬ್ರವರಿ 17ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

ಪ್ರಸ್ತುತ ವಿಯರ್-1 ರಿಂದ 8ರ ಒಟ್ಟಾರೆ 79.50 ಕ್ಯುಮೆಕ್ ನೀರನ್ನೆತ್ತಿ ವಿತರಣಾ ತೊಟ್ಟಿ-3 ರವರೆಗೆ ಪೂರೈಸಿ ತದನಂತರ ವಿತರಣಾ ತೊಟ್ಟಿ-3 ರಿಂದ ನೀರನ್ನೆತ್ತಿ ವಿತರಣಾ ತೊಟ್ಟಿ-4 ರ ಮುಖಾಂತರ ಗುರುತ್ವ ಕಾಲುವೆಗೆ 79.50 ಕ್ಯುಮೆಕ್ ನೀರನ್ನು ಹರಿಸಲು ಯೋಜಿಸಲಾಗಿದೆ. ಗುರುತ್ವ ಕಾಲುವೆಯು ಒಟ್ಟು 252.61 ಕಿ.ಮೀ ಉದ್ದವಿದ್ದು, ಈ ಪೈಕಿ 164.47 ಕಿ.ಮೀ ಪೂರ್ಣಗೊಂಡಿದ್ದು, 25.87 ಕಿ.ಮೀ ಪ್ರಗತಿಯಲ್ಲಿದೆ.

ಗುರುತ್ವ ಕಾಲುವೆಯ 42 ಕಿ.ಮೀ ವರಗಿನ ಕಾಮಗಾರಿ ಯಾವುದೇ ಅಡೆತಡೆಯಿಲ್ಲದೆ ಪೂರ್ಣಗೊಂಡಿದ್ದು, ನಂತರದ ಕಾಮಗಾರಿ ಅರಣ್ಯ ಮತ್ತು ಭೂಸ್ವಾಧೀನ ಸಮಸ್ಯೆಯಿಂದಾಗಿ ಪೂರ್ಣ ಗೊಂಡಿರದ ಕಾರಣ, ಗುರುತ್ವ ಕಾಲುವೆಯ 32.50 ಕಿ.ಮೀ ನಲ್ಲಿರುವ ನಾಲಾ ಎಸ್ಕೇಪ್ ಮೂಲಕ ಸುಮಾರು 132.50 ಕಿ.ಮೀ ದೂರದಲ್ಲಿರುವ ವಾಣಿ ವಿಲಾಸ ಸಾಗರಕ್ಕೆ ವೇದಾ ವ್ಯಾಲಿಯ ಮುಖಾಂತರ ತಾತ್ಕಾಲಿಕವಾಗಿ 1500 ಕ್ಯೂಸೆಕ್ ನೀರನ್ನು ಹರಿಸಲು ಕಾರ್ಯಕ್ರಮ ರೂಪಿಸಲಾಗಿದೆ.

ಪರೀಕ್ಷಾರ್ಥ ಚಾಲನೆ ಯಶಸ್ವಿ

ನವೆಂಬರ್-2023ರಿಂದಲೇ ಪೂರ್ವ ಪರೀಕ್ಷಾರ್ಥ ಚಾಲನಾ ಚಟುವಟಿಕೆ ಕೈಗೊಳ್ಳಲಾಗಿದ್ದು, ವಿಯರ್-4 ಹಾಗೂ 5 ರಿಂದ ನೀರನ್ನೆತ್ತಿ ವಿತರಣಾ ತೊಟ್ಟಿ -3 ರವರೆಗೆ ನೀರನ್ನು ಪೂರೈಸಲಾಗಿತ್ತು. ಪ್ರಸ್ತುತ ಇವುಗಳ ಜೊತೆ ವಿಆರ್-1 ರಿಂದ 8 ರಿಂದಲೂ ಸಹ ನೀರನ್ನೆತ್ತಿ ವಿತರಣಾ ತೊಟ್ಟಿ - 4ರವರೆಗೆ ಪೂರೈಸಿ, ಅಲ್ಲಿಂದ ಗುರುತ್ವ ಕಾಲುವೆಗೆ ಆಗಸ್ಟ್ 26 ರಂದು ನೀರು ಹರಿಸಲಾಗಿದ್ದು, ಗುರುತ್ವ ಕಾಲುವೆಯಲ್ಲಿನ ನೀರು 32.50 ಕಿ.ಮೀ ನಲ್ಲಿರುವ ನಾಲಾ ಎಸ್ಕೇಪ್ ಮೂಲಕ ವೇದಾ ವ್ಯಾಲಿಯನ್ನು ಪ್ರವೇಶಿಸಿ ಈಗಾಗಲೇ ಹಳೇಬೀಡು ಕೆರೆ ತುಂಬಿ ಕೋಡಿ ಬಿದ್ದು ತದನಂತರ ಬೆಳವಾಡಿ ಕೆರೆ ಪ್ರವೇಶಿಸಿದ್ದು ಇಲ್ಲಿಂದ ವಾಣಿ ವಿಲಾಸ ಸಾಗರದತ್ತ ನೀರು ಹರಿದಿದೆ.

ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಹೆಬ್ಬನಹಳ್ಳಿಯಲ್ಲಿ (ವಿತರಣಾ ತೊಟ್ಟಿ-4) ಮಹತ್ವಾಕಾಂಕ್ಷೆಯ ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಪೂರೈಕೆ ಯೋಜನೆಯ ಮೊದಲನೇ ಹಂತ ಲೋಕಾರ್ಪಣೆಗೊಳ್ಳಲಿರುವ ಹಿನ್ನೆಲೆಯಲ್ಲಿ ಗುರುವಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

2027ರ ಅಂತ್ಯಕ್ಕೆ ಕಾಮಗಾರಿ ಪೂರ್ಣ

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗಾಗಿ ಜುಲೈ-2024ರ ಅಂತ್ಯದವರೆಗೆ ಒಟ್ಟಾರೆ ಸಂಚಿತ 16,152.05 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದ್ದು, ಪ್ರಸಕ್ತ ವಿಆರ್-3 ಅನ್ನು ಹೊರತುಪಡಿಸಿ, ಉಳಿದ ಎಲ್ಲಾ ವಿಆರ್‌ಗಳಿಂದ ನೀರನ್ನೆತ್ತಿ ಗುರುತ್ವ ಕಾಲುವೆಗೆ ಪೂರೈಸಲು ಯೋಜಿಸಲಾಗಿದೆ. 2027ರ ಮಾರ್ಚ್ 31ರ ಅಂತ್ಯಕ್ಕೆ ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ.

ಯೋಜನೆ ಪ್ರಮುಖಾಂಶ

- ಯೋಜನೆಯ ಅಂದಾಜು ವೆಚ್ಚ -23,251.66 ಕೋಟಿ
- ಇಲ್ಲಿಯವರೆಗಿನ ಸಂಚಿತ ವೆಚ್ಚ- 16,152.05 ಕೋಟಿ

ಹಂತ 1ರ ಕಾಮಗಾರಿ

- ನದಿ ಪಾತ್ರದ ಕಾಮಗಾರಿ - 4115.33 ಕೋಟಿ (7 ಪ್ಯಾಕೇಜ್) (ಏತ ಸಲಕರಣೆ)

ಹಂತ 2ರ ಕಾಮಗಾರಿ

- ಗುರುತ್ವ ಮುಖ್ಯ ಕಾಲುವೆ : 8638.37 ಕೋಟಿ (33 ಪ್ಯಾಕೇಜ್)
- ಫೀಡರ್ ಪೈಪ್ ಲೈನ್ ಕಾಮಗಾರಿ - 8858.25 ಕೋಟಿ (13 ಪ್ಯಾಕೇಜ್)
- ಸಮತೋಲನ ಜಲಾಶಯ : 592.34 ಕೋಟಿ (1 ಪ್ಯಾಕೇಜ್)

ಹಂತ-2 ರಲ್ಲಿ: ಗುರುತ್ವ ಕಾಲುವೆ

- ಒಟ್ಟು ಕಾಲುವೆ ಉದ್ದ : 252.61 ಕಿ.ಮೀ
- ಪೂರ್ಣಗೊಂಡ ಕಾಲುವೆ : 164.47 ಕಿ.ಮೀ
- ಪ್ರಗತಿಯಲ್ಲಿರುವ ಕಾಲುವೆ : 25.87 ಕಿ.ಮೀ

ಯೋಜನೆ ಸಂಪೂರ್ಣಕ್ಕೆ ಹಮ್ಮಿಕೊಂಡಿರುವ ಗುರಿ

- 2025, ಮಾರ್ಚ್31 ರ ಅಂತ್ಯಕ್ಕೆ ಎಲ್ಲಾ ಲಿಫ್ಟ್ ಕಾಮಗಾರಿ ಪೂರ್ಣಗೊಳಿಸಿ 85 ಕ್ಯುಮೆಕ್ ನೀರನ್ನು ಮೇಲೆತ್ತಿ ಗುರುತ್ವ ಕಾಲುವೆ ಸರಪಳಿ 100 ಕಿ.ಮೀ ವರೆಗೆ ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿನ ನಾಲೆಗೆ ಹರಿಸುವುದು ಹಾಗೂ ಲಕ್ಕೇನಹಳ್ಳಿ ಸಮತೋಲನಾ ಜಲಾಶಯದ ನಿರ್ಮಾಣ ಕಾಮಗಾರಿ ಪ್ರಾರಂಭಿಸುವುದು.
- 2026ರ ಸೆಪ್ಟೆಂಬರ್ ಅಂತ್ಯಕ್ಕೆ ಪಾವಗಡ-ಮಧುಗಿರಿ ಫೀಡರ್, ಗೌರಿಬಿದನೂರು ಮತ್ತು ಟಿ.ಜಿ ಹಳ್ಳಿ-ರಾಮನಗರ ಫೀಡರ್ ನಾಲೆಗೆ ನೀರು ಹರಿಸುವುದು.
- 2026ರ ವೇಳೆಗೆ ಎಲ್ಲಾ ಫೀಡರ್ ಕಾಮಗಾರಿ ಪೂರ್ಣಗೊಳಿಸಿ ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವುದು ಹಾಗೂ ಲಕ್ಕೇನಹಳ್ಳಿ ಸಮತೋಲನಾ ಜಲಾಶಯದ ಬಾಕಿ ಶೇ.50 ರಷ್ಟು ಕಾಮಗಾರಿ ಪೂರ್ಣಗೊಳಿಸುವುದು.

ಜರ್ಮನ್ ತಂತ್ರಜ್ಞಾನದ ಟೆಲಿಮೀಟರ್ ವ್ಯವಸ್ಥೆ

ಎತ್ತಿನಹೊಳೆ ಯೋಜನೆಯ ಜಲಾನಯನ ಪ್ರದೇಶದಲ್ಲಿ ನಿರ್ಮಿಸಲಾಗಿರುವ 8 ವಿಆರ್‌ಗಳ ಹತ್ತಿರ ನೀರಿನ ಹರಿವನ್ನು ನಿಖರವಾಗಿ ಅಳೆಯುವ ಉದ್ದೇಶದಿಂದ ಜರ್ಮನ್ ತಂತ್ರಜ್ಞಾನನ್ನೊಳಗೊಂಡ ಟೆಲಿಮೀಟರ್ ವ್ಯವಸ್ಥೆಯನ್ನು 2018 ರಲ್ಲಿ ಸ್ಥಾಪಿಸಲಾಗಿದೆ. ಪ್ರಸಕ್ತ ಸಾಲಿನ ಮುಂಗಾರಿನ ಹಂಗಾಮಿನಲ್ಲಿ ಜೂನ್-1 ರಿಂದ ಆಗಸ್ಟ್-31 ರವರೆಗೆ 14.13 ಟಿ.ಎಂ.ಸಿ ನೀರು ದಾಖಲಾಗಿದೆ.

ಸಮಾಚಾರ ಸಣ್ಣದಲ್ಲ

ರಾಜ್ಯದಲ್ಲಿ ಸಿಎಂ ಕುರ್ಚಿ ಖಾಲಿ ಇಲ್ಲ

ದಾಂಡೇಲಿ: ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ ಎಂದು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾದ ಆರ್.ವಿ. ದೇಶಪಾಂಡೆ ಅವರು ಹೇಳಿದರು.



ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿ ಮಾತನಾಡಿ, ಪ್ರತಿಯೊಬ್ಬರೂ ಜೀವನದಲ್ಲಿ ಒಂದು ಗುರಿಯನ್ನು ಇಟ್ಟುಕೊಳ್ಳುವುದು ಸಹಜ. ರಾಜ್ಯದಲ್ಲಿ ಈಗ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಇದ್ದಾರೆ. ಹಾಗಿರುವಾಗ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ ಎಂದು ಸ್ಪಷ್ಟಪಡಿಸಿದರು.

ಹೋಟೆಲ್‌ಗೆ ನುಗ್ಗಿದ ಟಿಪ್ಪರ್: ಇಬ್ಬರ ಸಾವು

ಚಿಕ್ಕಬಳ್ಳಾಪುರ: ಚಿಂತಾಮಣಿಯಲ್ಲಿ ಬೆಳಗ್ಗೆ ಟಿಪ್ಪರ್ ಲಾರಿಯೊಂದು ರಸ್ತೆ ಬದಿಯ ಹೋಟೆಲ್‌ಗೆ ನುಗ್ಗಿದ ಪರಿಣಾಮ ಇಬ್ಬರು ಸ್ಥಳದಲ್ಲಿ ಮೃತಪಟ್ಟಿದ್ದಾರೆ. ಮೃತರನ್ನು ಚಿಂತಾಮಣಿ ತಾಲೂಕಿನ ಮಾಡಿಕೆರೆಯ ಶಿವಾನಂದ, ಕೋಲಾರ ಜಿಲ್ಲೆಯ ವೆಲಗಲಬುರೆ ಗ್ರಾಮದ ಶಾಂತಕುಮಾರ್ ಎಂದು ಗುರುತಿಸಲಾಗಿದೆ. ಮೃತರಿಬ್ಬರೂ ಹೋಟೆಲ್ ಕಾರ್ಮಿಕರು ಎಂದು ತಿಳಿದುಬಂದಿದೆ.ಚಿಂತಾಮಣಿಯಿಂದ ಕೋಲಾರ ಕಡೆ ಹೋಗುತ್ತಿದ್ದ ಜಲ್ಲಿ ತುಂಬಿದ್ದ ಟಿಪ್ಪರ್ ಲಾರಿ ಚಾಲಕನ ಅತಿವೇಗದ ಕಾರಣ ದರ್ಶಿನಿ ಫಾಸ್ಟ್ ಫುಡ್ ಹೋಟೆಲ್‌ಗೆ ನುಗ್ಗಿದೆ. ಡಿಕ್ಕಿಯ ರಭಸಕ್ಕೆ ಕ್ಯಾಷಿಯರ್ ಕುರ್ಚಿಯಲ್ಲಿ ಕೂತಿದ್ದ ಮಾಲೀಕ ಮತ್ತು ಅಲ್ಲಿಯೇ ತರಕಾರಿ ಹಚ್ಚುತ್ತಿದ್ದ ಭಟ್ಟರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಸಿದ್ದರಾಮಯ್ಯ ಪರ ಹೈಕಮಾಂಡ್: ಸಚಿವ

ಹಾವೇರಿ: ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ. ಹೈಕಮಾಂಡ್ ಹಾಗೂ ನಾವೆಲ್ಲರೂ ಅವರ ಪರವಿದ್ದೇವೆ. ನಮ್ಮ ಸರಕಾರವನ್ನು ಅಲುಗಾಡಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಸಣ್ಣ ನೀರಾವರಿ ಮತ್ತು ವಿಜ್ಞಾನ ತಂತ್ರಜ್ಞಾನ ಸಚಿವ ಎನ್. ಎಸ್. ಬೋಸರಾಜು ಸ್ಪಷ್ಟವಾಗಿ ಹೇಳಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು, ನೂರು ಸುಳ್ಳು ಹೇಳುತ್ತಿರುವ ಬಿಜೆಪಿಯವರು, ಅದನ್ನೇ ನಿಜಮಾಡಲು ಹೊರಟಿದ್ದಾರೆ. ಕಾಂಗ್ರೆಸ್ ಸರಕಾರದ ಜನಪ್ರಿಯತೆ ಕಂಡು, ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರಿಗೆ ಆತಂಕ ಶುರುವಾಗಿದೆ ಎಂದರು.

ಡೆಂಘೀ ಜ್ವರಕ್ಕೆ ವಿದ್ಯಾರ್ಥಿನಿ ಬಲಿ

ಸಿದ್ದಾಪುರ: ಡೆಂಘೀ ಜ್ವರಕ್ಕೆ 6ನೇ ತರಗತಿ ವಿದ್ಯಾರ್ಥಿನಿಯೊಬ್ಬಳು ಬಲಿಯಾದ ಘಟನೆ ಕೊಪ್ಪಳ ಜಿಲ್ಲೆಯ ಕಾರಟಗಿ ತಾಲೂಕಿನ ಸಿದ್ದಾಪುರ ಎಂಬಲ್ಲಿ ಗುರುವಾರ ನಡೆದಿದೆ. ಸಿದ್ದಾಪುರದ ಖಾಸಗಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸುಫೀಯಾ ಡೆಂಘೀಗೆ ಬಲಿಯಾದ ವಿದ್ಯಾರ್ಥಿನಿ. ಸೂಫಿಯಾಳಿಗೆ ಸೆ.2ರ ಸೋಮವಾರ ಜ್ವರ ಕಾಣಿಸಿಕೊಂಡ ಹಿನ್ನೆಲೆ ಗ್ರಾಮದ ಖಾಸಗಿ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆದಿದ್ದಳು. ಆದರೆ ಜ್ವರ ಕಡಿಮೆಯಾಗದ ಕಾರಣ ಸಿಂಧನೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಅಲ್ಲಿಯೂ ಸಹ ಆರೋಗ್ಯದಲ್ಲಿ ಚೇತರಿಕೆ ಕಾಣದೆ ಮಂಗಳವಾರ ಬಳ್ಳಾರಿ ಜಿಲ್ಲೆಯ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೂ, ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ಬೆಳಗ್ಗೆ ವಿದ್ಯಾರ್ಥಿನಿ ಮೃತಪಟ್ಟಿದ್ದಾಳೆ.

{ಎನ್. ಎಸ್. ಬೋಸರಾಜು} ಸಚಿವ

ಬಿಜೆಪಿಯವರು ರಾಜ್ಯದಲ್ಲಿ ಆಪರೇಷನ್ ಕಮಲ ಶುರು ಮಾಡಿದ್ದಾರೆ. ಇದು, ನೂರಕ್ಕೆ ನೂರರಷ್ಟು ನಮಗೆ ಗೊತ್ತಿದೆ. ನಮ್ಮದೇ 9 ಶಾಸಕರು, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಎಲ್ಲವನ್ನೂ ಹೇಳಿದ್ದಾರೆ. ರಾಜಭವನವನ್ನು ದುರುಪಯೋಗ ಪಡಿಸಿಕೊಂಡು ಬಿಜೆಪಿಯವರು ಸರಕಾರಕ್ಕೆ ಮಸಿ ಬಳಿಯುವ ಪ್ರಯತ್ನ ಮಾಡುತ್ತಿದ್ದಾರೆ.

ಚಾಚೂ ತಪ್ಪದೆ ನಿಯಮಗಳು ಪಾಲನೆ ಮಾಡಿದ ಜೈಲಾಧಿಕಾರಿಗಳು

ದರ್ಶನ್ ಭೇಟಿಯಾದ ಪತ್ನಿ, ಸಹೋದರ

ಬಳ್ಳಾರಿ: ಇಲ್ಲಿನ ಕೇಂದ್ರ ಕಾರಾಗೃಹದಲ್ಲಿರುವ ನಟ ದರ್ಶನ್ ಅವರೊಂದಿಗೆ ಪತ್ನಿ ವಿಜಯಲಕ್ಷ್ಮೀ ಮತ್ತು ಸಹೋದರ ದಿನಕರ್ ಅವರು ಗುರುವಾರ ಮಾತುಕತೆ ನಡೆಸಿದರು. ವಿಜಯಲಕ್ಷ್ಮೀ ಅವರು ವಾರದೊಳಗೆ ಎರಡನೇ ಬಾರಿಗೆ ಪತಿಯನ್ನು ನೋಡಲು ಬಳ್ಳಾರಿ ಜೈಲಿಗೆ ಆಗಮಿಸಿದರು. ಈ ವೇಳೆ ಜೈಲು ಅಧಿಕಾರಿಗಳು ಚಾಚೂ ತಪ್ಪದೆ ನಿಯಮಗಳನ್ನು ಪಾಲನೆ ಮಾಡಿದರು. ಸಂಜೆ 4.30ರಿಂದ 5.30ಕ್ಕೆ ಭೇಟಿಗೆ ಅವಕಾಶ ನೀಡಲಾಗಿತ್ತು. 20 ನಿಮಿಷ ಮುಂಚಿತವಾಗಿಯೇ ಬಂದು ವಿಸಿಟರ್ಸ್ ರೂಂ ನಲ್ಲಿ ವಿಜಯಲಕ್ಷ್ಮೀ ಅವರು ಕಾದು ಕುಳಿತಿದ್ದರು. ದರ್ಶನ್‌ರನ್ನು 4.29ಕ್ಕೆ ಹೈ ಸೆಕ್ಯೂರಿಟಿ ಸೆಲ್ ನಿಂದ ವಿಸಿಟರ್ಸ್ ರೂಮ್ ಗೆ ಕರೆತರಲಾಯಿತು. ಈ ವೇಳೆ ಮುಖ ಭಾವನೊಂದ ಹಾಗೆ ಕಂಡು ಬಂದಿದೆ. 4.30ರಿಂದ 5 ಗಂಟೆಯ ವರೆಗೆ ದರ್ಶನ್ ದಂಪತಿ ಮಾತುಕತೆ ನಡೆಸಿದ್ದು, ಪ್ರಕರಣದ ಕುರಿತು ಚರ್ಚಿಸಿದ್ದಾರೆ ಎಂದು ತಿಳಿದು ಬಂದಿದೆ. ಜೈಲು ನಿಯಮದ ಪ್ರಕಾರ ಕೇವಲ 30 ನಿಮಿಷ ಮಾತನಾಡಲು ಅವಕಾಶವಿದೆ. ಹೆಚ್ಚಿನ ಸಮಯ ಮಾತನಾಡಬೇಕಾದರೆ ಜೈಲು ಅಧೀಕ್ಷಕರ ಅನುಮತಿ ಕಡ್ಡಾಯವಾಗಿದೆ.

ಮದುವೆಗೆ ಪಟ್ಟು ಹಿಡಿದ ಮಹಿಳೆ

ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಸೆರೆಯಾಗಿರುವ ಆರೋಪಿ ನಟ ದರ್ಶನ್‌ನನ್ನು ನೋಡಬೇಕು, ಮಾತನಾಡಬೇಕು ಎಂದು ಮಹಿಳಾ ಅಭಿಮಾನಿಯೊಬ್ಬರು ಪಟ್ಟು ಹಿಡಿದ ಘಟನೆ ಜೈಲಿನ ಎದುರು ನಡೆದಿದೆ. ಕಲಬುರಗಿ ಮೂಲದ ಬೆಂಗಳೂರಿನ ಆರ್ ಆರ್ ನಗರ ನಿವಾಸಿ ಲಕ್ಷ್ಮೀ ಎನ್ನುವ ಮಹಿಳೆ ಬೆಂಗಳೂರಿನಿಂದ ಬಳ್ಳಾರಿಗೆ ಗುರುವಾರ ಬೆಳಗ್ಗೆ ಆಗಮಿಸಿ, ನಟ ದರ್ಶನ್ ಅವರನ್ನು ನೊಡಲೇಬೇಕೆಂದು ಹಠಹಿಡಿದು, ಜೈಲು ಸಿಬ್ಬಂದಿ ಜತೆ ವಾಗ್ವಾದಕ್ಕಿಳಿದಿದ್ದಾರೆ. ಈ ವೇಳೆ ಜೈಲಿನ ಭದ್ರತಾ ಸಿಬ್ಬಂದಿ ದರ್ಶನ್ ನೋಡಲು ಸಂಬಂಧಿಗಳಿಗೆ ಮಾತ್ರ ಅವಕಾಶವಿದೆ ಎಂದು ತಿಳಿಸುತ್ತಿದ್ದಂತೆ ನಾನು ದರ್ಶನ್ ಅವರನ್ನು ಮದುವೆ ಆಗುವುದಕ್ಕೂ ಸಿದ್ಧವಾಗಿ ಬಂದಿರುವೆ ಎಂದಿದ್ದಾಳೆ. ವಿಜಯಲಕ್ಷ್ಮಿ ರೀತಿ ನಾನೂ ಮದುವೆಯಾಗು ತ್ತೇನೆ. ನನಗೆ ದರ್ಶನ್ ಅಂದರೆ ಇಷ್ಟ. ಬೆಂಗಳೂರಿನ ಪರಪ್ಪನ ಅಗ್ರಹಾರಕ್ಕೆ ಹೋದರೂ ಅಲ್ಲೂ ಬಿಡಲಿಲ್ಲ. ಈಗ ಇಲ್ಲಿಗೆ ಬಂದಿರುವೆ. ನಟ ದರ್ಶನ್‌ಗೆ ಹಣ್ಣು ಕೊಟ್ಟು ನೋಡಿ ಹೋಗುವೆ ಎಂದು ಪಟ್ಟು ಹಿಡಿದಿದ್ದ ಲಕ್ಷ್ಮೀಯನ್ನು ಜೈಲಿನ ಸಿಬ್ಬಂದಿ ಮನವೊಲಿಸಿ ವಾಪಸ್ ಕಳುಹಿಸಿದ್ದಾರೆ.

ಅಂತರ್ಜಲ ಹೆಚ್ಚಳಕ್ಕೆ ಎತ್ತಿನ ಹೊಳೆ ಸಹಕಾರಿ: ಡಿಸಿಎಂ

ಗೌರಿ ಹಬ್ಬದಂದು ಗಂಗೆಯ ಪೂಜೆ

ಬೆಂಗಳೂರು: ಈ ಬಾರಿಯ ಗೌರಿ ಹಬ್ಬದಂದು ಗಂಗೆ ಮಾತೆಗೆ ಪೂಜೆ ಮಾಡುತ್ತಿರುವುದು ವಿಶೇಷವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ಮಾತನಾಡಿದ ಅವರು, ಎತ್ತಿನಹೊಳೆ ಯೋಜನೆ ಮೊದಲ ಹಂತದ ಕಾಮಗಾರಿ ಶುಕ್ರವಾರ ಉದ್ಘಾಟನೆಯಾಗುತ್ತಿದೆ. ಇಲ್ಲಿಂದ 24 ಟಿಎಂಸಿ ನೀರನ್ನು ಎತ್ತಿ ಬರ ಪೀಡಿತ ಪ್ರದೇಶಗಳಲ್ಲಿ ಕುಡಿಯುವ ಉದ್ದೇಶಕ್ಕೆ ಪೂರೈಸಲಾಗುತ್ತಿದೆ. ಡಿಪಿಆರ್ ಮಾಡಿದ ಎಂಜಿನಿಯರ್‌ಗಳಿಂದ ತಂತ್ರಜ್ಞರು, ಯೋಜನೆಗಾಗಿ ಜಮೀನು ನೀಡಿದ ರೈತರು ಎಲ್ಲರ ಪಾತ್ರ ಪ್ರಮುಖವಾಗಿದೆ ಎಂದು ತಿಳಿಸಿದರು.

ಈ ಯೋಜನೆಗೆ ಬಳಸಲಾಗಿರುವ ಯಂತ್ರ, ನೀರೆತ್ತುವ ತಂತ್ರಜ್ಞಾನ ನೋಡಿದರೆ ಒಂದು ವಿಸ್ಮಯ. ಹೆಚ್ಚಿನ ಹಣ ಖರ್ಚು ಮಾಡಿ ಯೋಜನೆ ಮಾಡಲಾಗಿದ್ದು, ಅಂತರ್ಜಲ ಹೆಚ್ಚಳಕ್ಕೆ ಈ ಯೋಜನೆ ಸಹಕಾರಿಯಾಗಿದೆ. ಈ ಯೋಜನೆಯಿಂದ ನೀರು ತರಲು ಸಾಧ್ಯವಿಲ್ಲ. ನೀರು ಬಂದರೆ ಮೀಸೆ ಬೋಳಿಸಿಕೊಳ್ಳುತ್ತೇನೆ ಎಂದೆಲ್ಲಾ ಕೆಲವರು ಟೀಕೆ ಮಾಡಿದ್ದರು. ಹೀಗಾಗಿ ನಾನು ಈ ಯೋಜನೆಯನ್ನು ಸವಾಲಾಗಿ ಸ್ವೀಕರಿಸಿ ಮೊದಲ ಹಂತದ ಕಾಮಗಾರಿ ಮುಗಿಸಿ ನೀರನ್ನು ಎತ್ತಿದ್ದೇವೆ ಎಂದು ತಿಳಿಸಿದರು. ಈ ಯೋಜನೆ ಮಾರ್ಗದಲ್ಲಿ ಕೆಲವು ಅರಣ್ಯ ಪ್ರದೇಶಗಳಲ್ಲಿ ಸಮಸ್ಯೆಯಿರುವ ಕಾರಣ ನೀರನ್ನು ವಾಣಿ ವಿಲಾಸ ಅಣೆಕಟ್ಟೆಗೆ ಹರಿಸಲಾಗುತ್ತಿದೆ. ಈ ಸಮಸ್ಯೆ ಬಗೆಹರಿದು ಕಾಮಗಾರಿ ಮುಗಿದರೆ ಈ ವರ್ಷದೊಳಗೆ ತುಮಕೂರಿನವರೆಗೆ ನೀರನ್ನು ತರಲಾಗು ವುದು. ಯೋಜನೆಯ ಉದ್ಘಾಟನೆ ಒಂದು ಹಬ್ಬವಾಗಿದೆ. ಗೌರಿ ಹಬ್ಬ ಪ್ರತಿವರ್ಷ ಬರುತ್ತದೆ. ಆದರೆ ಶುಕ್ರವಾರ ಗೌರಿ ಹಬ್ಬದ ದಿನ ಗಂಗೆ ಪೂಜೆ ಮಾಡುವುದು ಬಹಳ ವಿಶೇಷ. ಎಲ್ಲಾ ಪಕ್ಷದ ನಾಯಕರಿಗೆ, ಶಾಸಕರು, ರೈತ ಮುಖಂಡರು ಕಾರ್ಯಕ್ರಮಕ್ಕೆ ಬಂದು ಈ ಗಳಿಗೆಗೆ ಸಾಕ್ಷೀಯಾಗಬೇಕು ಎಂದು ಮನವಿ ಮಾಡುತ್ತೇನೆ ಎಂದರು.

ಬಿಜೆಪಿಯವರು ಏನು ಮಾಡಿದ್ದರು?

ಬೆಂಗಳೂರು ಗಾರ್ಬೇಜ್ ಸಿಟಿಯಾಗುತ್ತಿದೆ ಎಂಬ ಬಿಜೆಪಿ ಟೀಕೆಗೆ ಪ್ರತಿಕ್ರಿಯಿಸಿ, ಬಿಜೆಪಿ ಇರುವುದೇ ಟೀಕೆ ಮಾಡಲು, ರಾಜಕಾರಣ ಮಾಡಲು. ಈ ಸಮಸ್ಯೆಗೆ ಪರಿಹಾರ ನೀಡಲು ನಾನು ಪ್ರಯತ್ನವಾದರೂ ಮಾಡುತ್ತಿದ್ದೇನೆ. ಈ ಬಗ್ಗೆ ಅಧ್ಯಯನ ಮಾಡಲು, ಚೆನ್ನೈ, ಹೈದರಾಬಾದ್, ಮುಂಬೈಗೆ ಭೇಟಿ ನೀಡಿದ್ದೆ. ನಗರದ ಹೊರಗೆ ಕಸ ವಿಲೇವಾರಿಗೆ ನಾಲ್ಕು ಕಡೆಗಳಲ್ಲಿ ಜಾಗ ಹುಡುಕಲಾಗಿದೆ. ಹೀಗೆ ನನ್ನದೇ ಆದ ಪ್ರಯತ್ನ ಮಾಡುತ್ತಿದ್ದೇನೆ. ಅವರು ಏನು ಮಾಡಿದ್ದಾರೆ? ಎಂದು ಡಿಸಿಎಂ ಡಿಕೆಶಿ ಪ್ರಶ್ನಿಸಿದರು.

ದಸರಾ ಮಹೋತ್ಸವದ ಗಜಪಡೆಯ ಎರಡನೇ ತಂಡ ಗುರುವಾರ ಮೈಸೂರಿನ ಅರಮನೆ ಆವರಣಕ್ಕೆ ಆಗಮಿಸಿದವು. ಪ್ರಶಾಂತ, ಮಹೇಂದ್ರ, ಸುಗ್ರೀವ, ಲಕ್ಷ್ಮಿ ಹಾಗೂ ಹಿರಣ್ಯ ಆನೆಗಳನ್ನು ಸಂಪ್ರದಾಯದ ಪ್ರಕಾರ ಪೂಜೆ ಸಲ್ಲಿಸಿ ಬರಮಾಡಿಕೊಳ್ಳಲಾಯಿತು.

ಕಲಬುರಗಿಯಲ್ಲಿ ಮುಂದಿನ ಸಚಿವ ಸಂಪುಟ ಸಭೆ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಹಾಗೂ ಕೈಗೊಳ್ಳಬೇಕಿರುವ ಜನಪರ ಕೆಲಸಗಳ ಕುರಿತು ಸಮಗ್ರ ಚರ್ಚೆ ನಡೆಸಲು ಮುಂದಿನ ಸಚಿವ ಸಂಪುಟ ಸಭೆಯನ್ನು ಕಲಬುರಗಿಯಲ್ಲಿ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಂಪುಟದ ಎಲ್ಲ ಸಚಿವರು ಒಪ್ಪಿದ್ದಾರೆ ಎಂದು ಗ್ರಾಮೀಣಾಭಿವೃದ್ಧಿ - ಪಂಚಾಯತ್‌ರಾಜ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು ಈ ಭಾಗದ ಜನರ ಆಶೋತ್ತರಗಳಿಗೆ ಸ್ಪಂದಿಸುವ ಉದ್ದೇಶದಿಂದ ಸಿಎಂ ಅವರಿಗೆ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸಲು ಮನವಿ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಸಿಎಂ ಹಾಗೂ ಸಚಿವರು ಸಭೆ ನಡೆಸಲು ಒಪ್ಪಿಗೆ ಸೂಚಿಸಿದ್ದು ಸಭೆಯ ದಿನಾಂಕ ಸದ್ಯದಲ್ಲೇ ನಿಗದಿಪಡಿಸಲಾಗುವುದು ಎಂದಿದ್ದಾರೆ.

ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸುವುದರಿಂದ ಶಿಕ್ಷಣ, ಆರೋಗ್ಯ, ಮೂಲಭೂತ ಸೌಲಭ್ಯದಂತ ಕ್ಷೇತ್ರಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಇದರಿಂದ ಮಹತ್ತರ ಬೆಳವಣಿಗೆಯಾಗಲಿದೆ.ಈ ಭಾಗದ ಅಭಿವೃದ್ಧಿಗೆ ನಾನು ಹಾಗೂ ನಮ್ಮ ಸರ್ಕಾರ ಸದಾ ಬದ್ಧವಾಗಿದ್ದು ಉದ್ದೇಶಿತ ಸಭೆ ನಮ್ಮೆಲ್ಲ ಆಶೋತ್ತರಗಳಿಗೆ ಸ್ಪಂದಿಸಲಿದೆ.

-ಪ್ರಿಯಾಂಕ್ ಖರ್ಗೆ ಸಚಿವ

ಚಾಮುಂಡಿಬೆಟ್ಟ ಪ್ರಾಧಿಕಾರದ ಸಭೆ ನಿರ್ಣಯಕ್ಕೆ ಆಕ್ಷೇಪ

ಕಾನೂನು ಹೋರಾಟ ನಿಲ್ಲದು: ಯದುವೀರ

ಮೈಸೂರು: ಚಾಮುಂಡಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಕೈಗೊಂಡ ಕೆಲ ನಿರ್ಣಯಗಳ ಬಗ್ಗೆ ರಾಜವಂಶಸ್ಥ ಹಾಗೂ ಸಂಸದ ಯದುವೀರ ಒಡೆಯರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಾಧಿಕಾರದ ವಿಚಾರವಾಗಿ ಈಗಾಗಲೇ ಕೋರ್ಟ್‌ನಿಂದ ತಡೆಯಾಜ್ಞೆ ಇದ್ದರೂ ಸಿಎಂ ಸಮ್ಮುಖ ನಿರ್ಣಯ ಕೈಗೊಂಡಿರುವುದು ಆಕ್ಷೇಪಾರ್ಹ. ಆ ನಿರ್ಣಯಗಳು ಊರ್ಜಿತವಾಗುವುದಿಲ್ಲ.ನಾವು ಕಾನೂನಾತ್ಮಕ ಹೋರಾಟ ಮುಂದುವರೆಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಶಿಕ್ಷಕರ ಪ್ರಶಸ್ತಿಗೆ ತಡೆ : ಉಡುಪಿಯಲ್ಲಿ ಶಿಕ್ಷಕರೊಬ್ಬರಿಗೆ ಪ್ರಶಸ್ತಿ ಪ್ರಕಟಿಸಿದ ಬಳಿಕ ತಡೆ ಹಿಡಿದಿರುವ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಶಿಕ್ಷಕರು ಎಲ್ಲಾ ವಿದ್ಯಾರ್ಥಿಗಳನ್ನು ಸಮಾನವಾಗಿ ಕಾಣುತ್ತಾರೆ. ಹಾಗಾಗಿ ಎಲ್ಲರೂ ಸಮವಸ್ತ್ರ ಧರಿಸಿಕೊಂಡು ಬನ್ನಿ ಎಂದು ಹೇಳಿದ್ದಾರೆ. ಆದರೆ, ಇದನ್ನೇ ಮುಂದಿಟ್ಟುಕೊಂಡು ಪ್ರಕಟಿಸಿದ್ದ ಪ್ರಶಸ್ತಿಯನ್ನು ತಡೆ ಹಿಡಿದಿರುವುದು ಸರಿಯಲ್ಲ ಎಂದರು.

- ಚಾಮುಂಡಿಬೆಟ್ಟ ಪ್ರಾಧಿಕಾರದ ಸಭೆ ನಿರ್ಣಯಕ್ಕೆ ಆಕ್ಷೇಪ
- ಸಿಎಂ ವಿರುದ್ಧ ಸಂಸದ ಯದುವೀರ ಒಡೆಯರ್ ಗರಂ

ನಮ್ಮನ್ನು ಕೋಮುವಾದಿ ಎನ್ನುತ್ತಾರೆ. ಹಿಜಾಬ್ ಧರಿಸಿಕೊಂಡು ಶಾಲೆಗೆ ಬರಬೇಡಿ ಎಂದು ಹೇಳಿದ್ದ ಶಿಕ್ಷಕರಿಗೆ ಪ್ರಶಸ್ತಿ ತಡೆ ಹಿಡಿದಿದ್ದಾರೆ. ಈ ಮೂಲಕ ನಿಜವಾದ ಕೋಮುವಾದಿ ಯಾರು ಎಂದು ಸರಕಾರ ತೋರಿಸಿದೆ. ಈ ಕೂಡಲೇ ನಿರ್ಧಾರ ಹಿಂಪಡೆದು ಆ ಪ್ರಶಸ್ತಿಯನ್ನು ಶಿಕ್ಷಕರಿಗೆ ಕೊಡದಿದ್ದರೆ ನಾವು ಹೋರಾಟ ಮಾಡಬೇಕಾಗುತ್ತದೆ.

-ಯದುವೀರ ಒಡೆಯರ್ ಸಂಸದ

ಉಮಾಶ್ರೀ ಸೇರಿ ಮೂವರಿಗೆ ಡಾಕ್ಟರೇಟ್

ಬಳ್ಳಾರಿ: ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಿಂದ ಈ ಬಾರಿ ನಟಿ ಹಾಗೂ ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಸೇರಿದಂತೆ ಮೂವರಿಗೆ ಗೌರವ ಡಾಕ್ಟರೇಟ್ ಘೋಷಣೆ ಮಾಡಿದೆ. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ 12ನೇ ವಾರ್ಷಿಕ ಘಟಿಕೋತ್ಸವದ ಕಾರ್ಯಕ್ರಮವು ಶುಕ್ರವಾರ ನಡೆಯಲಿದ್ದು, ಈ ಮೂವರು ಸಾಧಕರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುತ್ತದೆ ಎಂದು ವಿವಿ ಕುಲಪತಿ ಡಾ. ಎಂ. ಮುನಿಸ್ವಾಮಿ ತಿಳಿಸಿದ್ದಾರೆ.

ರಂಗಭೂಮಿ, ಕಲೆ ಮತ್ತು ಸಮಾಜ ಸೇವೆ ವಿಭಾಗದಲ್ಲಿ ಸಾಧನೆ ಮಾಡಿದ ನಟಿ ಉಮಾಶ್ರೀ, ಕೈಗಾರಿಕೆ ಮತ್ತು ಸಮಾಜ ಸೇವೆ ವಿಭಾಗದಲ್ಲಿ ಕೈ ಜೋಡಿಸಿದ ಎಸ್.ಕೆ.ಮೋದಿ, ಧಾರ್ಮಿಕ ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ನಿರಂತರ ಸೇವೆಗಾಗಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುವುದು. ಸೆ.6ರಂದು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯುವ ಘಟಿಕೋತ್ಸವವ ಕಾರ್ಯಕ್ರಮದಲ್ಲಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು ಎಂದು ವಿವಿ ಕುಲಪತಿ ತಿಳಿಸಿದರು.

ರಾಜ್ಯ ಸರಕಾರದಿಂದ 4 ಲಕ್ಷ ರು. ಪರಿಹಾರಕ್ಕೆ ಈಶ್ವರ ಖಂಡ್ರೆ ಸೂಚನೆ

ಅತ್ಯಾಚಾರ, ಕೊಲೆ ಪ್ರಕರಣ: ಯುವತಿ ಕುಟುಂಬಕ್ಕೆ ಸಾಂತ್ವನ

ಬಸವಕಲ್ಯಾಣ: ಗುಣತೀರ್ಥವಾಡಿಯ ಯುವತಿ ಭಾಗ್ಯಶ್ರೀ ಅತ್ಯಾಚಾರ ಮತ್ತು ಕೊಲೆ ಘಟನೆ ಎಲ್ಲರ ಮನ ಕಲಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಗ್ರಾಮಕ್ಕೆ ಗುರುವಾರ ಭೇಟಿ ನೀಡಿದ ಅವರು, ಯುವತಿಯ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಇದು ಅತ್ಯಂತ ಪೈಶಾಚಿಕ ಕೃತ್ಯವಾಗಿದ್ದು ಭಾಗ್ಯಶ್ರೀ ಆತ್ಮಕ್ಕೆ ಶಾಂತಿ ಸಿಗಲಿ. ಆಕೆಯ ಅಗಲಿಕೆಯ ನೋವು ಭರಿಸುವ ಶಕ್ತಿ ಕುಟುಂಬಸ್ಥರಿಗೆ ನೀಡಲೆಂದು ಪ್ರಾರ್ಥಿಸಿದರು. ಬಡವರಾಗಿರುವ ಯುವತಿಯ ಕುಟುಂಬಕ್ಕೆ ಸಚಿವ ಈಶ್ವರ ಖಂಡ್ರೆ ವೈಯಕ್ತಿಕವಾಗಿ ಸಹಾಯ ನೀಡಿದ್ದು, ಸರಕಾರದ ವತಿಯಿಂದ ಹೆಚ್ಚಿನ 4 ಲಕ್ಷ ರು. ಪರಿಹಾರ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಪೊಲೀಸರು ಕೊಲೆ ಆರೋಪಿಗಳನ್ನು ಈಗಾಗಲೇ ಬಂಧಿಸಿದ್ದು, ಆರೋಪಿಗಳಿಗೆ ಕಠಿಣ ಶಿಕ್ಷೆ ಆಗುವಂತೆ ನೋಡಿಕೊಳ್ಳಲು ಜಿಲ್ಲಾ ಪೊಲೀಸ್ ವರಿಷ್ಠರಿಗೆ ಸೂಚಿಸಿರುವುದಾಗಿ ಸಚಿವರು ತಿಳಿಸಿದರು.

ಅತ್ಯಾಚಾರ ಎಸಗಿ, ಕೊಲೆ; ಮೂವರ ಬಂಧನ: ಬೀದರ್ ಜಿಲ್ಲೆಯ ಗುಣತೀರ್ಥವಾಡಿ ಗ್ರಾಮದಲ್ಲಿ 19 ವರ್ಷದ ಯುವತಿಯೊಬ್ಬಳು ಮನೆಯಿಂದ ನಾಪತ್ತೆಯಾದ ಕೆಲವೇ ದಿನಗಳಲ್ಲಿ ಶವವಾಗಿ ಪತ್ತೆಯಾಗಿದ್ದಾಳೆ. ಆಕೆಯ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆ.19 ರಂದು ನಡೆದ ಈ ಘಟನೆಗೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಯುವತಿ ತಲೆ ಮೇಲೆ ಕಲ್ಲುಹಾಕಿ ಕೊಂದು ನಂತರ ಆಕೆಯ ದೇಹವನ್ನು ಪೊದೆಯಲ್ಲಿ ಎಸೆದಿದ್ದಾರೆ. ದುಷ್ಕರ್ಮಿಗಳು ಹತ್ಯೆಗೂ ಮುನ್ನ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಣತೀರ್ಥವಾಡಿಯ ಯುವತಿ ಭಾಗ್ಯಶ್ರೀ ಮನೆಗೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ವಿಶ್ವವಾಣಿ

ಸಂಪಾದಕೀಯ

ದರ್ಶನ್ ಪ್ರಕರಣ ಪಾಠವಾಗಲಿ

ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ಮತ್ತು ಇತರ 16 ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಲಾಗಿದೆ. ದೇಶಾದ್ಯಂತ ಸಂಚಲನ ಸೃಷ್ಟಿಸಿದ ಪ್ರಕರಣವೀಗ ವಿಚಾರಣೆಯ ಹಂತಕ್ಕೆ ಬಂದಿದೆ. 3991 ಪುಟಗಳ ಆರೋಪಪಟ್ಟಿಯಲ್ಲಿ ದರ್ಶನ್ ಮತ್ತು ತಂಡ ರೇಣುಕಾಸ್ವಾಮಿಗೆ ನೀಡಿದ ಚಿತ್ರಹಿಂಸೆಯ ಬಗ್ಗೆ ಸವಿವರ ಉಲ್ಲೇಖವಿದೆ. ಇದನ್ನು ಗಮನಿಸಿದರೆ ಸಾರ್ವಜನಿಕ ಜೀವನದಲ್ಲಿರುವ ಒಬ್ಬ ವ್ಯಕ್ತಿ ಇಷ್ಟೊಂದು ಕ್ರೂರವಾಗಿ ವರ್ತಿಸಲು ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ತನ್ನ ಗೆಳತಿ ಪವಿತ್ರಾ ಗೌಡಳಿಗೆ ಅಶ್ಲೀಲ ಸಂದೇಶ ರವಾನಿಸಿದ ರೇಣುಕಾಸ್ವಾಮಿ ಮೇಲೆ ದರ್ಶನ್ ಸಿಟ್ಟು ಇಷ್ಟೊಂದು ವಿಕೋಪಕ್ಕೆ ಹೋಗುವಾಗ ಅಲ್ಲಿದ್ದ ಯಾರೊ ಬ್ಬರೂ ಮಧ್ಯಪ್ರವೇಶಿಸಿ ಕೊಲೆ ಕೃತ್ಯ ತಪ್ಪಿಸುವ ಮಾಡಿಲ್ಲ ಎನ್ನುವುದು ಗಮನಾರ್ಹ. ಹಾಗೆ ನೋಡಿದರೆ ಕೊಲೆಯಾದ ರೇಣುಕಾಸ್ವಾಮಿಯೂ ನಟನ ಮೇಲಿನ ಅಭಿಮಾನಕ್ಕಾಗಿ, ಆತನ ಕೌಟುಂಬಿಕ ಜೀವನ ಹಾಳಾಗ ಬಾರದೆಂಬ ಉದ್ದೇಶದಿಂದಲೇ ಈ ಕುಕೃತ್ಯ ಎಸಗಿದ್ದ. ಆದರೆ ಸಾಮಾನ್ಯ ವ್ಯಕ್ತಿಯೊಬ್ಬ ಸತ್ತರೂ ತನಗೆ ಏನೂ ಆಗದು, ಕೊಲೆ ಮಾಡಿಯೂ ತಾನು ಕಾನೂನಿನ ಕೈಯಿಂದ ಪಾರಾಗಬಲ್ಲೆ ಎಂಬ ದರ್ಶನ್ ಅಹಂಕಾರ ಮತ್ತು ಹಣದ ಮದ ಈ ಕೃತ್ಯಕ್ಕೆ ಮೂಲ ಪ್ರೇರಣೆ ಎನ್ನುವುದು ಸುಸ್ಪಷ್ಟ. ತನ್ನ ಪತ್ನಿ ವಿಜಯಲಕ್ಷ್ಮಿ ಮೇಲೆ ತೀವ್ರ ಸ್ವರೂಪದ ಹಲ್ಲೆ ನಡೆಸಿ, ಸಿಗರೇಟಿನಿಂದ ಸುಟ್ಟ ಸಂದರ್ಭದಲ್ಲಿ ದರ್ಶನ್ ಮೊದಲ ಬಾರಿ ಜೈಲುಪಾಲಾಗಿದ್ದರು. ಅಂದು ಈ ಪ್ರಕರಣ ತಾರ್ಕಿಕ ಅಂತ್ಯ ಕಂಡು ದರ್ಶನ್‌ಗೆ ಶಿಕ್ಷೆಯಾಗಿದ್ದರೆ, ಈ ನಟನಿಗೆ ಕಾನೂನಿನ ಬಗ್ಗೆ ಭಯ, ಗೌರವ ಇರುತ್ತಿತ್ತು. ಆದರೆ ತಪ್ಪಿನ ಮೇಲೆ ತಪ್ಪುಗಳನ್ನು ಮಾಡಿದರೂ, ಲಕ್ಷಾಂತರ ಅಭಿಮಾನಿಗಳ ರಕ್ಷೆ ತನಗಿದೆ ಎಂಬ ಹುಂಬತನದಲ್ಲಿ ದರ್ಶನ್ ಮಾಡಬಾರದ ಕೆಲಸ ಮಾಡಿದಂತಿದೆ. ಈ ಪ್ರಕರಣದಲ್ಲಿ ನೀಡುವ ಶಿಕ್ಷೆ ಇಡೀ ಸಮಾಜಕ್ಕೆ ಸಂದೇಶ ರವಾನಿಸುವಂತಿ ರಬೇಕು. ಎಲ್ಲೋ ಕುಳಿತು, ನಕಲಿ ಐಡಿ ಸೃಷ್ಟಿಸಿಕೊಂಡು ಸೋಶಿಯಲ್ ಮೀಡಿಯಾದಲ್ಲಿ ಮನಬಂದಂತೆ ಕಮೆಂಟ್ ಮಾಡುವವರಿಗೂ ಈ ಪ್ರಕರಣ ಪಾಠವಾಗಬೇಕು. ಇಂಥವರ ಮೇಲೂ ಪೊಲೀಸರು ಕಠಿಣ ಕ್ರಮ ಜರುಗಿಸಬೇಕು.

ಸೊಂಪಾದಕೀಯ

ಪಕ್ಷಾಂತರಿಗಳಿಗಿಲ್ಲ ಪಿಂಚಣಿ

ನಮ್ಮ ದೇಶದ ರಾಜಕೀಯದಲ್ಲಿ ಇತ್ತೀಚಿನ ಕೆಲವು ವರ್ಷಗಳಿಂದ ಚಾಲ್ತಿಯಲ್ಲಿರುವ ವಿಷಯ ಎಂದರೆ ಅದು ಶಾಸಕರ 'ಕುದುರೆ ವ್ಯಾಪಾರ'. ಇದಕ್ಕೆ 'ಪಕ್ಷಾಂತರ' ಎಂಬ ಡೀಸೆಂಟ್ ಹೆಸರೂ ಉಂಟು. ತಮಗೆ ಬೇಕಾದಾಗ ತಮ್ಮ ಅವಶ್ಯಕತೆಗಳಿಗೆ ತಕ್ಕಂತೆ ಒಂದು ಪಕ್ಷವನ್ನು ಬಿಟ್ಟು ಇನ್ನೊಂದು ಪಕ್ಷಕ್ಕೆ ಹಾರುವ ಈ ಪಕ್ಷಾಂತರಿ ಗಿಳಿಗಳಿಗೆ ಇದುವರೆಗೂ ಹೇಳೋರು ಕೇಳೋರು ಯಾರೂ ಇಲ್ಲ ಎಂಬಂತಾಗಿತ್ತು. ಅದರಲ್ಲೂ ಕೇಂದ್ರದಲ್ಲಿ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಬೇರೆ ಬೇರೆ ರಾಜ್ಯಗಳಲ್ಲಿ ಇರುವ ಬೇರೆ ಪಕ್ಷದ ಸರಕಾರಗಳನ್ನು ಉರುಳಿಸಲು 'ಆಪರೇಷನ್ ಕಮಲ' ಎಂಬ ಹೆಸರಿನಲ್ಲಿ ಈ ಪಕ್ಷಾಂತರ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಈ ಪ್ರಕ್ರಿಯೆಯಲ್ಲಿ ಸಾಮಾನ್ಯವಾಗಿ ಬಹುತೇಕ ಹಣವೇ ಕೆಲಸ ಮಾಡುತ್ತಿತ್ತು. ಅದರ ಜತೆಗೆ



ಬೆದರಿಕೆ ಒಡ್ಡಿ ಪಕ್ಷಾಂತರ ಮಾಡಿಸಿದ ಉದಾಹರಣೆಗಳೂ ಇವೆ. ಇದರಿಂದಾಗಿ ದೇಶದ ಅನೇಕ ರಾಜ್ಯಗಳಲ್ಲಿ ಬಲಿಷ್ಠವಾಗಿದ್ದ ಅನೇಕ ಸರಕಾರಗಳು ಉರುಳಿ ಬಿದ್ದಿದ್ದವು. ಇದು ಬಿಜೆಪಿ ಬಿಟ್ಟು ಇತರ ಪಕ್ಷಗಳ ಕೊರಳಿಗೆ ಉರುಳಾಗಿತ್ತು. ಅದರಲ್ಲೂ ಕಾಂಗ್ರೆಸ್ ಇದರ ಸಂತ್ರಸ್ತ ಪಕ್ಷ ಆಗಿದ್ದು ಬಹಳಷ್ಟು ಬಾರಿ. ಹಾಗಾಗಿ ಈಗ ಕನಿಷ್ಠ ಪಕ್ಷ ಒಂದು ರಾಜ್ಯದಲ್ಲಾದರೂ ಈ ಪಕ್ಷಾಂತರವನ್ನು ತಡೆಯಲು ಕಾಂಗ್ರೆಸ್ ಪ್ರಯತ್ನ ಮಾಡುತ್ತಿದೆ. ಹಿಮಾಚಲ ಪ್ರದೇಶದ ಕಾಂಗ್ರೆಸ್ ಸರಕಾರ ಪಕ್ಷಾಂತರ ನಿಷೇಧ ಕಾಯ್ದೆ ಅಡಿ ಅನರ್ಹಗೊಳ್ಳುವ ಶಾಸಕರಿಗೆ ಪಿಂಚಣಿ ಸೌಲಭ್ಯ ಇಲ್ಲ ಎಂಬ ವಿಧೇಯಕವನ್ನು ಹೊರಡಿಸಿದೆ. ಇದರಿಂದಾಗಿ ತಾವು ಇರುವ ಪಕ್ಷಕ್ಕೆ ವಿಧೇಯರಾಗದ ಪಕ್ಷಾಂತರಿ ಶಾಸಕರ ಪಿಂಚಣಿಗೆ ಕತ್ತರಿ ಬೀಳಲಿದೆ. ಮೊನ್ನೆ ಹರಿಯಾಣದ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖು ಅವರು ಸದನದಲ್ಲಿ ಇನ್ನು ಮುಂದೆ ಪಕ್ಷಾಂತರಿ ಶಾಸಕರಿಗೆ ಸುಖ ಇಲ್ಲ ಎನ್ನುವುದನ್ನು ಒತ್ತಿ ಹೇಳಿದ್ದಾರೆ. ಅಲ್ಲದೆ ದೇಶದಲ್ಲೇ ಇಂಥ ಮೊದಲ ವಿಧೇಯಕವನ್ನು ಮಂಡಿಸುವ ಮೂಲಕ ಹಿಮಾಚಲ ಪ್ರದೇಶ ಸರಕಾರ ಎಲ್ಲರ ಗಮನ ಸೆಳೆದಿದೆ. ಆದರೆ ಕೋಟಿಗಟ್ಟಲೆ ಹಣಕ್ಕೆ ತಮ್ಮನ್ನು ತಾವು ಮಾರಿಕೊಳ್ಳುವ ಪಕ್ಷಾಂತರಿ ಶಾಸಕರು ಸರಕಾರ ಕೊಡುವ ಚಿಲ್ಲರೆ ಪಿಂಚಣಿ ಹಣಕ್ಕೆ ಆಸೆಪಟ್ಟು ಪಕ್ಷಾಂತರದಿಂದ ಸಿಗುವ ದೊಡ್ಡ ಮೊತ್ತವನ್ನು ನಿರಾಕರಿಸಿ, ತಮ್ಮ ಪಕ್ಷಕ್ಕೆ ನಿಷ್ಠರಾಗಿರುತ್ತಾರೋ ಎನ್ನುವುದು ಮುಂದಿನ ಪ್ರಶ್ನೆ.

ಸಂಪಾದಕರ ಸದ್ಯಶೋಧನೆ

ವಿಮಾನಕ್ಕೆ ಹಕ್ಕಿ ಅಪ್ಪಳಿಸಿದಾಗ..

ವಿಮಾನವನ್ನು ಲೋಹದ ಹಕ್ಕಿ ಅಂತ ಕರೆಯುತ್ತಾರಷ್ಟೇ. ಆದರೆ ವಿಮಾನಕ್ಕೆ ಬಹಳ ದೊಡ್ಡ ವೈರಿ ಅಂದರೆ ಹಕ್ಕಿಗಳು. ವಿಮಾನ ಟೇಕಾಫ್ ಆಗುವಾಗ ಅಥವಾ ಲ್ಯಾಂಡ್ ಆಗುವಾಗ, ಹಕ್ಕಿಗಳು ವಿಮಾನಕ್ಕೆ ಡಿಕ್ಕಿ ಹೊಡೆದರೆ, ಪರಿಣಾಮವನ್ನು ಊಹಿಸಲು ಆಗುವುದಿಲ್ಲ. ಸಾಮಾನ್ಯವಾಗಿ ಟೇಕಾಫ್ ಆಗುವಾಗ ಹಕ್ಕಿಗಳು ವಿಮಾನದ ಮೂತಿಗೆ ಅಥವಾ ಪೈಲಟ್ ಮುಂಬದಿಗಿರುವ ವಿಂಡ್ ಸ್ಕ್ರೀನ್‌ಗೆ, ಇಲ್ಲವೇ ವಿಮಾನದ ಎರಡೂ ಕಡೆಗಳಲ್ಲಿರುವ ಎಂಜಿನ್‌ಗಳಿಗೆ ಡಿಕ್ಕಿ ಹೊಡೆಯುತ್ತವೆ. ಒಂದು ಹಕ್ಕಿ ಅಥವಾ ಗುಂಪಿನಲ್ಲಿರುವ ನಾಲ್ಕೈದು ಹಕ್ಕಿಗಳು ಡಿಕ್ಕಿ ಹೊಡೆಯಬಹುದು. ಅಂಥ ಸಂದರ್ಭದಲ್ಲಿ ವಿಂಡ್ ಸ್ಕ್ರೀನ್ ಒಡೆದುಹೋಗುತ್ತದೆ. ವಿಮಾನದ ಮೂತಿಗೆ ಡಿಕ್ಕಿ ಹೊಡೆದರೆ, ಅದು ಜಖಂ ಆಗಬಹುದು. ವಿಮಾನದ ಎರಡೂ ಕಡೆಗಳಲ್ಲಿರುವ ಒಂದು ಎಂಜಿನ್ ಅಥವಾ ಎರಡಕ್ಕೂ ಡಿಕ್ಕಿ ಹೊಡೆದರೆ ಅದರ ಬ್ಲೇಡುಗಳಿಗೆ ಧಕ್ಕೆಯಾಗುತ್ತವೆ. ಹಕ್ಕಿಗಳನ್ನು ಎಂಜಿನ್ ಜೋರಾಗಿ ಸೆಳೆದುಕೊಳ್ಳುವುದರಿಂದ, ಪರಿಣಾಮ ಇನ್ನಷ್ಟು ಬಲವಾಗಿರುತ್ತದೆ. ವಿಮಾನದ ಎಂಜಿನ್‌ಗೆ ಡಿಕ್ಕಿಯಾಗುತ್ತಿದ್ದಂತೆ, ಎಂಜಿನ್ ಘಾಸಿಗೊಂಡು ಬೆಂಕಿ ಕಾಣಿಸಿಕೊಳ್ಳಬಹುದು. ಅಂಥ ಸಂದರ್ಭಗಳಲ್ಲಿ ಎಮರ್ಜೆನ್ಸಿ ಲ್ಯಾಂಡ್ ಮಾಡುತ್ತಾರೆ. ಪೈಲಟ್ ಮುಂದಿನ ವಿಂಡ್ ಸ್ಕ್ರೀನ್‌ಗೆ ಹೊಡೆದಾಗ, ಅದು ಒಡೆದು ಪೈಲಟ್‌ಗೆ ಜೋರಾಗಿ ಗಾಳಿ ಅಪ್ಪಳಿಸುವುದರಿಂದ, ಆತನಿಗೆ ಎಮರ್ಜನ್ಸಿ ಲ್ಯಾಂಡಿಂಗ್ ಮಾಡದೇ ಬೇರೆ ಮಾರ್ಗವೇ ಇರುವುದಿಲ್ಲ. ಹಾರುತ್ತಿರುವ ವಿಮಾನಕ್ಕೆ ಹಕ್ಕಿ ಅಪ್ಪಳಿಸಿದರೆ (Bird hit) ವಿಮಾನಕ್ಕೆ ಭಾರಿ ಹಾನಿಯಾಗುವುದಂತೂ ನಿಶ್ಚಿತ. ಏರ್‌ಲೈನ್ ಸಂಸ್ಥೆಗೆ ಕನಿಷ್ಠ ಹತ್ತಾರು ಕೋಟಿ ರುಪಾಯಿಗಳಷ್ಟು ನಷ್ಟವಾಗುವುದು ಗ್ಯಾರಂಟಿ. ಅಲ್ಲಿ ತನಕ ಆ ವಿಮಾನ ಹಾರಾಟಕ್ಕೆ ಅಯೋಗ್ಯ, ನೆಲದ ಮೇಲೆ ನಿಂತಿರಬೇಕಾಗುತ್ತದೆ. ವಿಂಡ್ ಸ್ಕ್ರೀನ್ ಒಡೆದು ಹೋದರೆ, ಬೇರೆಯದನ್ನು ಹಾಕಬಹುದು. ಆದರೆ ವಿಮಾನದ ಮೂತಿ ನುಜ್ಜುಗುಜ್ಜಾದರೆ ಅಥವಾ ರಂಧ್ರವಾದರೆ, ರಿಪೇರಿ ಮಾಡುವುದು ಕಷ್ಟ ಮತ್ತು ಅದಕ್ಕೆ ಸ್ವಲ್ಪ ಸಮಯವೂ ಹಿಡಿಯುತ್ತದೆ. ಇದರಿಂದ ಏರ್‌ಲೈನ್ಸ್ ಸಂಸ್ಥೆಗೆ ನಷ್ಟ. ವಿಮಾನದ ಅಕ್ಕಪಕ್ಕದ ಎಂಜಿನ್‌ಗಳ ಪೈಕಿ ಯಾವುದಾದರೂ ಒಂದಕ್ಕೆ ಹಕ್ಕಿಗಳು ಬಡಿದರೂ ಅದರ ಪರಿಣಾಮ ಗಂಭೀರ. ಕೆಲವೊಮ್ಮೆ ವಿಮಾನ ಯಾವ ವೇಗದಲ್ಲಿ ಹಾರುತ್ತಿರುವಾಗ ಹಕ್ಕಿಗಳು ಅದಕ್ಕೆ ಅಪ್ಪಳಿಸಿದವು ಎಂಬುದು ಮುಖ್ಯವಾಗುತ್ತದೆ. ಸಾಮಾನ್ಯವಾಗಿ ಲ್ಯಾಂಡ್ ಆಗುವುದಕ್ಕಿಂತ, ಟೇಕಾಫ್ ಆಗುವಾಗ, ವಿಮಾನದ ವೇಗ ಜಾಸ್ತಿ ಇರುತ್ತದೆ. ಆಗ bird hit ಪರಿಣಾಮವೂ ಅಧಿಕವಾಗಿರುತ್ತದೆ. 2009ರ ಜನವರಿ 15ರಂದು ಅಮೆರಿಕದ ನ್ಯೂಯಾರ್ಕ್ ನಗರದ ಹಡ್ಸನ್ ನದಿ ಮೇಲಾದ ಪವಾಡವನ್ನು ವೈಮಾನಿಕ ಇತಿಹಾಸದಲ್ಲಿಯೇ ಮರೆಯುವಂತಿಲ್ಲ. ಲಗ್ವಾರ್ಡಿಯಾ ವಿಮಾನ ನಿಲ್ದಾಣದಿಂದ ಶಾರ್ಲೆಟ್ ಮತ್ತು ಸಿಯಾಟಲ್‌ಗೆ ಹೊರಟಿದ್ದ ವಿಮಾನಕ್ಕೆ, ಟೇಕಾಫ್ ಆದ ಕೆಲ ನಿಮಿಷಗಳಲ್ಲಿ, ವಿಮಾನದ ಎರಡೂ ಕಡೆಗಳಲ್ಲಿರುವ ಎಂಜಿನ್‌ಗೆ ಪಕ್ಷಿಗಳ ಹಿಂಡು ಅಪ್ಪಳಿಸಿತು. ಪರಿಣಾಮ ಅದೆಷ್ಟು ತೀವ್ರವಾಗಿತ್ತೆಂದರೆ, ಪಕ್ಷಿಗಳು ಅಪ್ಪಳಿಸಿದ ಮರುಕ್ಷಣವೇ ವಿಮಾನದ ಎಂಜಿನ್‌ನಿಂದ ಕಪ್ಪು ಹೊಗೆ ಹೊರಹೊಮ್ಮಲಾರಂಭಿಸಿತು. ತಾಂತ್ರಿಕವಾಗಿ ವಿಮಾನ ಹಾರಾಟಕ್ಕೆ ಅನರ್ಹವಾಗಿಬಿಟ್ಟಿತು. ಅಂಥ ಸಂದರ್ಭದಲ್ಲಿ ಪೈಲಟ್ ವಿಮಾನವನ್ನು ಹಾರಿಸುವುದು ಕನಸಿನ ಮಾತು. ಆದರೆ ಅಂದು ಕ್ಯಾಪ್ಟನ್ ಸಲ್ಲಿ, ನ್ಯೂಯಾರ್ಕಿನ ಹಡ್ಸನ್ ನದಿಯ ಮೇಲೆ ಸುರಕ್ಷಿತವಾಗಿ ಲ್ಯಾಂಡ್ ಮಾಡಿ, ಎಲ್ಲರ ಜೀವಗಳನ್ನು ಉಳಿಸಿದ್ದು ಮೈನವಿರೇಳಿಸುವ ಘಟನೆ. ಇದೇ ಪ್ರಸಂಗವನ್ನು ಆಧರಿಸಿ, ಮುಂದೆ ಹಾಲಿವುಡ್ ಸಿನಿಮಾ ಕೂಡ ಆಯಿತು. ಭಾರತದಲ್ಲೂ ವಿಮಾನಗಳಿಗೆ ಹಕ್ಕಿಗಳು ಅಪ್ಪಳಿಸುವ ಘಟನೆಗಳು ಸಾಮಾನ್ಯ. 2023ರಲ್ಲೊಂದೇ ಇಂಥ ಸುಮಾರು 1,371 ಪ್ರಸಂಗಗಳು ಜರುಗಿದ್ದವು. ಅಂದರೆ ಒಂದು ದಿನಕ್ಕೆ ನಾಲ್ಕಕ್ಕೂ ಹೆಚ್ಚು ಇಂಥ ಪ್ರಸಂಗಗಳು.

ಮ್ಯಾರಥಾನ್ ಎಂಬ ದಂಡೆದ್ದು ಓಡುವ ಕ್ರಿಯೆ, ಕ್ರೀಡೆ

ಶಿಶಿರ ಕಾಲ
ಶಿಶಿರ್ ಹೆಗಡೆ
shishirh@gmail.com

ಅನ್ಯಗ್ರಹ ಜೀವಿಗಳು (ಏಲಿಯನ್ನುಗಳು) ಮೇಲಿದ್ದುಕೊಂಡೇ ನಮ್ಮ ವ್ಯವಹಾರಗಳನ್ನು ಒಂದೊಮ್ಮೆ ಗುಟ್ಟಾಗಿ ನೋಡುತ್ತಿದ್ದರೆ, ಅತಿರೇಕವೆನಿಸುವ ನಮ್ಮ ಕೆಲವೊಂದು ನಡೆಗಳು ಅವುಗಳಿಗೆ ಸುಲಭದಲ್ಲಿ ಅರ್ಥವಾಗಲಿಕ್ಕಿಲ್ಲ. ಅವುಗಳಿಗೆ ಕ್ಲಿಷ್ಟವೆನಿಸುವ ಕೆಲವೊಂದು ಅರ್ಥವಾಗಿಬಿಡಬಹುದು. ಚುನಾವಣೆಗಳ ಸಮಯದಲ್ಲಿ ನಾವು ಗುಂಪಾಗಿ ಸೇರುವುದನ್ನು, ನಮ್ಮಲ್ಲಿಯೇ ಒಬ್ಬ ಮನುಷ್ಯ ಅಲ್ಲಿ ಬಂದು ಗಟ್ಟಿಯಾಗಿ ಕಿರಿಚುವುದನ್ನು, ನಂತರದಲ್ಲಿ ಅದರಲ್ಲೊಬ್ಬ ಪ್ರತಿನಿಧಿಯಾಗುವುದನ್ನು ಹೇಗಾದರೂ ಅರ್ಥಮಾಡಿಕೊಂಡಾವು. ಕ್ರಿಕೆಟ್, ಫುಟ್ಬಾಲ್ ಮೊದಲಾದ ಪಂದ್ಯಾವಳಿಗಳಲ್ಲಿ ಲಕ್ಷೋಪಾದಿ ಜನರು ಒಂದು ಕಡೆ ಸೇರಿ ಬೊಬ್ಬೆ ಹಾಕುವುದನ್ನು, ಒಂದಿಷ್ಟು ಮಂದಿ ಮಧ್ಯದಲ್ಲಿ ಓಡಾಡುವುದನ್ನು ಕೂಡ ಅದೇನೋ ಸ್ಪರ್ಧೆ ಎಂದು ಅರ್ಥೈಸಿಕೊಳ್ಳಬಹುದು. ಆದರೆ ಅಪ್ಪಿ ತಪ್ಪಿ ಅವುಗಳೇನಾದರೂ ಮ್ಯಾರಥಾನ್ ಅನ್ನು ನೋಡಿಬಿಟ್ಟರೆ ಗೊಂದಲವಾಗುವುದು ಪಕ್ಕಾ. 'ಈ ಮನುಷ್ಯ ಜೀವಿಗಳು ಅಲ್ಲಲ್ಲಿ ಹೀಗೆ ಏಕೆ ಓಡುತ್ತಾವೋ ಹುಚ್ಚುಮುಂಡೆವು' ಎಂದು ಏಲಿಯನ್ನುಗಳು ತಲೆ ಕೆದರಿಕೊಳ್ಳಬಹುದು. ನೂರು, ಇನ್ನೂರು ಮೀಟರ್ ಓಡುವುದು, ಸ್ಪರ್ಧೆಯಲ್ಲಿ ಯಾರು ಮೊದಲು ಫಿನಿಷ್‌ಲೈನ್ ತಲುಪುತ್ತಾರೋ ಅವರೇ ಜಯಶಾಲಿ ಎನ್ನುವುದು ಎಂಬಿತ್ಯಾದಿಯನ್ನು ಕ್ರೀಡೆ, ಸ್ಪರ್ಧೆ ಎಂದು ಕರೆಯಬಹುದು. ಅದರಲ್ಲೊಬ್ಬ ಶ್ರೇಷ್ಠ ಕ್ರೀಡಾಪಟು ಗುರುತಾಗುತ್ತಾನೆ. ಆದರೆ ಮ್ಯಾರಥಾನ್ ಎಂಬುದನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಗುಂಪಿನಲ್ಲಿ ಸಾವಿರಗಟ್ಟಲೆ ಮಂದಿ ಕೈಕಾಲಿಗೆ ಸಿಕ್ಕುವಷ್ಟು ಕಿಕ್ಕಿರಿದು ಓಡುವುದು. ಒಬ್ಬರ ಹಿಂದೆ ಒಬ್ಬರಂತೆ, ಎಳೆಯರು, ಮುದುಕರು ಎಲ್ಲರೂ. ಓಟಕ್ಕೆ ತಯಾರಾಗಿ ನಿಲ್ಲುವಾಗಲೇ ಅದೆಷ್ಟೋ ಹಿಂದೆ ಸರತಿಯಲ್ಲಿ ನಿಲ್ಲಬೇಕು. ಎಲ್ಲರೂ ಒಟ್ಟಿಗೇ ಆರಂಭಿಸುವುದಿಲ್ಲ. ಪಾಳಿಯಲ್ಲಿ ಗುಂಪಿನಲ್ಲಿ ಓಡಲು ಬಿಡುತ್ತಾರೆ. ಇಲ್ಲಿ ಮೊದಲು ತಲುಪಿದವರಿಗೆ ಬಹುಮಾನವೇನೋ ಇದೆ, ಆದರೆ ಭಾಗವಹಿಸುವವರಿಗೆ ಯಾರಿಗೂ ಮೊದಲು ತಲುಪಬೇಕೆಂಬ ಧಾವಂತವಿಲ್ಲ. ನೈಜೀರಿಯಾ, ಕೀನ್ಯಾ ಮೊದಲಾದ ಆಫ್ರಿಕನ್ ಓಟಗಾರರಿಗೇ ಮೊದಲ ಸ್ಥಾನಗಳು ಎಂದು ಅದ್ಯಾವತ್ತೋ ನಿಗದಿಯಾಗಿದೆ. ಉಳಿದವರಿಗೆ ಓಡುವುದೇ ಕೆಲಸ, ಉದ್ದೇಶ.

ಯಾವುದೇ ಮ್ಯಾರಥಾನ್‌ನಲ್ಲಿ ಭಾಗವಹಿಸುವುದು ಎಂದರೆ 42 ಕಿಲೋಮೀಟರ್ ಓಡಿ ಮುಗಿಸುವುದೇ ಅಲ್ಲಿನ ಉದ್ದೇಶ. ಕೆಲವರಿಗೆ ತಾವು ಭಾಗವಹಿಸಿದ ಹಿಂದಿನ ಮ್ಯಾರಥಾನ್‌ಗಿಂತ ಕಡಿಮೆ ಸಮಯದಲ್ಲಿ ಓಡಬೇಕೆಂಬ ಬಯಕೆಯಿದ್ದರೆ ಇನ್ನುಳಿದ ಬಹುತೇಕರಿಗೆ ಅದ್ಯಾವ ಗಡಿಬಿಡಿಯೂ ಇಲ್ಲ. ಕೆಲವರಿಗೆ ತಮಗೆ ತಾವೇ ಪ್ರತಿಸ್ಪರ್ಧಿಗಳಾದರೆ ಇನ್ನುಳಿದವರಿಗೆ ಓಡಿ ತಲುಪಿ ಮುಗಿಸುವುದೇ ಕ್ರೀಡೆಯ ಗುರಿ. ಒಂದು ಕ್ರಿಯೆಯನ್ನು ಸ್ಪರ್ಧೆಗಲ್ಲದೆ, ಕೇವಲ ಮುಗಿಸುವ ಉದ್ದೇಶದಿಂದಲೇ ಮಾಡುವುದಾದರೆ ಅದು ಕ್ರೀಡೆಯೆನಿಸಿಕೊಳ್ಳುವುದು ಹೇಗೆ? ಅದು ಒಂದು ಕ್ರಿಯೆ, ಗುಂಪಿನಲ್ಲಿ ಮಾಡುವುದರಿಂದ ಯಜ್ಞ ಅನಿಸಿಕೊಳ್ಳುತ್ತದೆಯಲ್ಲವೇ? ಮ್ಯಾರಥಾನ್ ಅದ್ಯಾವುದೂ ಅಲ್ಲ, ಮ್ಯಾರಥಾನ್ ಕ್ರೀಡೆಯೂ ಹೌದು, ನೆಗೆದರಷ್ಟೇ ಕೈಗೆಟುಕುವ ಸಾಹಸವೂ ಹೌದು. ಇದೊಂದು ಧ್ಯಾನ. ಒಬ್ಬ ವ್ಯಕ್ತಿ ತನಗೆ ತಾನೇ ಒಡ್ಡಿಕೊಳ್ಳಬಹುದಾದ ಪರೀಕ್ಷೆ. ಮನಸ್ಸು ಅದೆಷ್ಟು ಪ್ರಮಾಣದಲ್ಲಿ ದೇಹವನ್ನು ದುಡಿಸಿಕೊಳ್ಳಬಹುದೆಂಬ ಕ್ಷಮತೆಯ ಪರೀಕ್ಷೆ. ಅದೊಂದು ಹಠ. ಶೋಕಿಯಲ್ಲ, ಅದೊಂದು ಧ್ಯಾನ.

ಕೆಲವರು ಗುಂಪಿನಲ್ಲಿ 5-10 ಕಿಲೋಮೀಟರ್ ರಸ್ತೆಯಲ್ಲಿ ಓಡಿ ಮ್ಯಾರಥಾನ್ ಓಡಿ ಬಂದೆ ಎಂದು ಓಡಾಡಿಕೊಂಡಿರುತ್ತಾರೆ. ಅಸಲಿಗೆ ಅದ್ಯಾವುದೂ ಮ್ಯಾರಥಾನ್ ಅಲ್ಲ, ಒಂದು ಗುಂಪಿನ ಓಟ ಮ್ಯಾರಥಾನ್ ಅನ್ನಿಸಿಕೊಳ್ಳಬೇಕಾದರೆ ಅದು ಕನಿಷ್ಠ 42.195 ಕಿ.ಮೀ. ದೂರದ್ದಾಗಿರಬೇಕು. ಮೇಲ್ನೋಟಕ್ಕೆ ಅದು ದೊಡ್ಡದು, ಇದು ಚಿಕ್ಕದು ಎಂದೆನಿಸಬಹುದು. ಆದರೆ ಅಸಲಿ ಮ್ಯಾರಥಾನ್‌ಗೂ ಮತ್ತು ಈ 5 ಕಿ.ಮೀ., 10 ಕಿ.ಮೀ.ಗೂ ಅಜಗಜಾಂತರವಿದೆ. ಏಕೆಂದರೆ ದೇಹ ಮತ್ತು ಮನಸ್ಸಿನ ಅಸಲಿ ಪರೀಕ್ಷೆಯಾಗುವುದೇ 20 ಕಿ.ಮೀ. ಓಡಿ ಕ್ರಮಿಸಿದ ನಂತರ. ಸಾಮಾನ್ಯವಾಗಿ ಒಂದು ನಂಬಿಕೆಯಿದೆ- ಮನುಷ್ಯ ದೈಹಿಕವಾಗಿ ಎಲ್ಲ ರೀತಿಯಲ್ಲಿಯೂ ಅಸಮರ್ಥ, ಮನುಷ್ಯ ವಿಕಸನದಲ್ಲಿ ಬಚಾವಾಗಿದ್ದೇ ಮಿದುಳು ಉದ್ಧಾರವಾದದ್ದರಿಂದ ಎಂದು. ಆದರೆ ಮನುಷ್ಯನಲ್ಲಿ ಅನನ್ಯ ದೈಹಿಕ ಶಕ್ತಿಯೊಂದಿದೆ. ಅದೇನೆಂದರೆ ನಿರಂತರ ಓಟ. ನಮ್ಮ ಮ್ಯಾರಥಾನ್ ಓಟಗಾರರು ಓಡುವಷ್ಟು ಕಾಲ, ದೀರ್ಘ ಅಷ್ಟು ವೇಗದಲ್ಲಿ ಓಡುವ ತಾಕತ್ತು ಪ್ರಾಣಿ ಜಗತ್ತಿನ ಕೆಲವೇ ಕೆಲವು ಪ್ರಾಣಿಗಳಿಗೆ ಮಾತ್ರ ಇದೆ. ಅತ್ಯಂತ ವೇಗದಲ್ಲಿ ಓಡುವ ಚೀತಾ ಕೂಡ ಅಷ್ಟು ವೇಗದಲ್ಲಿ ಹೆಚ್ಚೆಂದರೆ ಎರಡೂವರೆ ಕಿಲೋಮೀಟರ್ ಓಡಬಹುದು. ಅದಾದ ಮೇಲೆ ಅವಕ್ಕೆ ತ್ರಾಣ ಉಳಿಯುವುದಿಲ್ಲ. ಸಿಂಹ, ಚಿರತೆ, ಹುಲಿ ಇವುಗಳ ಕಥೆಯೂ ಅಷ್ಟೇ. ಆದರೆ ಮ್ಯಾರಥಾನ್ ಓಡುವ ವ್ಯಕ್ತಿ 42 ಕಿಲೋಮೀಟರ್ ನಿಲ್ಲದೇ ನಿರಂತರ ಓಡಬಲ್ಲ. ನಾಯಿ, ಒಂಟೆ, ಆಸ್ಟ್ರಿಚ್ ಮತ್ತು ಜಿಂಕೆಗೆ ಬಿಟ್ಟರೆ ಉಳಿದ ಬಹುತೇಕ ಪ್ರಾಣಿಗಳಿಗೆ ಇಷ್ಟು ನಿರಂತರ ಓಟ ಸಾಧ್ಯವಿಲ್ಲ.

ಕ್ರಿ.ಪೂ. 490ರಲ್ಲಿ ಗ್ರೀಕರು ಪರ್ಷಿಯನ್ನರನ್ನು ಸೋಲಿಸಿದ್ದರಂತೆ. ಆ ಸುದ್ದಿಯನ್ನು ಗ್ರೀಕಿನ ನಗರವಾದ ಮ್ಯಾರಥಾನ್‌ನಿಂದ ಅಥೆನ್ಸ್‌ಗೆ ಮುಟ್ಟಿಸಲು ದೂತನೊಬ್ಬ ಎಲ್ಲಿಯೂ ನಿಲ್ಲದೆ 42 ಕಿ.ಮೀ. ಓಡಿಯೇ ಹೋಗಿದ್ದನಂತೆ. ಸುದ್ದಿ ಮುಟ್ಟಿಸಿದ ಆತ ಅಲ್ಲಿಯೇ ನೆಲಕ್ಕೆ ಕುಸಿದು ಬಿದ್ದು ಸತ್ತುಹೋದನಂತೆ. ಅದಾದ ನಂತರ ಮ್ಯಾರಥಾನ್ ಅಷ್ಟು ದೂರ ಓಡುವುದು ಇತ್ಯಾದಿಯಾಗಿ ಆರಂಭವಾಯಿತು ಎಂಬುದೊಂದು ಕಥೆ. ಒಟ್ಟಾರೆ ಮನುಷ್ಯನ ದೇಹರಚನೆ ಗ್ರಹಿಸಿದಲ್ಲಿ ನಾವು ದೂರ ಓಡಿ ಕ್ರಮಿಸುವುದನ್ನು ಅನುವಂಶಿಕವಾಗಿಯೇ ಪಡೆದುಕೊಂಡಿದ್ದೇವೆ ಎಂದೆನಿಸುತ್ತದೆ. ನಮ್ಮ ಕಿವಿಯ ರಂಧ್ರ ದೊಡ್ಡದು. ಇದು ಬಹು ದೀರ್ಘಕಾಲ ದೇಹದ ಸಮತೋಲನಕ್ಕೆ ಸಹಾಯಕ. ತಲೆ ನೇರವಿಟ್ಟುಕೊಳ್ಳಲು ಸಾಧ್ಯ. ಅಷ್ಟೇ ಅಲ್ಲ, ಮೈಯಲ್ಲಿ ಕೂದಲಿಲ್ಲ. ಹಾಗಾಗಿ ದೇಹದ ಉಷ್ಣತೆ ನಿರಂತರ ಆರಾಮಾಗಿ ಹೊರಹಾಕಬಹುದು. ಚಿಕ್ಕ ಕೈ, ಚಿಕ್ಕದಾದ ಕಣಕಾಲು ಹೀಗೆ ಪ್ರತಿಯೊಂದು ಅಂಗವೂ ದೂರದ ಓಟಕ್ಕೆ ಹೇಳಿಮಾಡಿಸಿದ್ದು. ಓಡುವುದು ಎಂಬ ಕ್ರಿಯೆ ಸುಲಭದ್ದಲ್ಲ ಎಂದು ಬಾಯಿಬಿಟ್ಟು ಹೇಳಬೇಕಿಲ್ಲ, ನಮಗೆಲ್ಲರಿಗೂ ಗೊತ್ತೇ ಇದೆ. ಓಡುವುದೆಂದರೆ ತ್ರಾಸು, ಸುಸ್ತು. ನಾವು ಓಡುವಾಗ ನಮ್ಮ ಒಂದು ಕಾಲಿನ ಮೇಲೆ, ಪಾದದ ಮೇಲೆ ಎಷ್ಟು ತೂಕದ ಒತ್ತಡ ಬೀಳಬಹುದು ಗೊತ್ತೇ? ನಾವು ಎಲ್ಲ ಭಾರ ಹಾಕಿ ದೇಹದ ತೂಕದೊಂದಿಗೆ ಕಾಲನ್ನು ಒತ್ತುವುದರಿಂದ ನಮ್ಮ ದೇಹದ ಆರರಿಂದ ಎಂಟು ಪಟ್ಟು ತೂಕ ಒಂದೊಂದು ಕಾಲಿನ ಮೇಲೆ ಬೀಳುತ್ತದೆ. ಪಾದ ನಮ್ಮ ತೂಕಕ್ಕೆ ತಕ್ಕಂತೆ ಹೆಜ್ಜೆಗೊಮ್ಮೆ ಹಿಗ್ಗಿ ಕುಗ್ಗುತ್ತದೆ. ಅಖಿಲಿಸ್ ಟೆಂಡನ್- ಕಾಲಿನ ಮೀನಖಂಡದಿಂದ ಹಿಂಗಾಲಿನವರೆಗೆ ಚಾಚಿರುವ ಸ್ನಾಯುರಜ್ಜು. ಅದು ನಾವು ಓಡುವಾಗ ಸ್ಪ್ರಿಂಗ್ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಓಟವೆಂದರೆ ಸ್ನಾಯುಗಳು ಹಿಗ್ಗುವುದು, ಕುಗ್ಗುವುದು, ಮೂಳೆಗಳ ಮೇಲಿನ ನಿರಂತರ ಒತ್ತಡ, ಹೃದಯಕ್ಕೆ, ಶ್ವಾಸಕೋಶಕ್ಕೆ ಹೀಗೆ ದೇಹದ ಎಲ್ಲ ಭಾಗಕ್ಕೂ ಅಷ್ಟೊಂದು ಒತ್ತಡದ ಕೆಲಸ. ಅತ್ಯಂತ ಸಂಕೀರ್ಣ ಸೃಷ್ಟಿಯಾದ ಮನುಷ್ಯದೇಹ ಹೀಗಿರುವ ಕ್ರಿಯೆಯನ್ನು ಸುಮಾರು ಮೂರು-ಮೂರುವರೆ ಗಂಟೆಗಳ ಕಾಲ ನಿರಂತರ ಮಾಡುವುದೆಂದರೆ ತಮಾಷೆಯೇ?

ಇಷ್ಟು ಹೊತ್ತು ಹೇಳಿದ ಮ್ಯಾರಥಾನ್ ಕೇವಲ ರಸ್ತೆಯ ಮೇಲೆ, ನಗರಗಳ ಮಧ್ಯೆ ಓಡುವಂಥವು. ಅದು ಬಿಟ್ಟು ಇನ್ನೊಂದಿಷ್ಟು ವೈವಿಧ್ಯಗಳಿವೆ. ಟ್ರೈಲ್ ಮ್ಯಾರಥಾನ್ ಎಂದರೆ ಗುಡ್ಡ, ಬೆಟ್ಟ, ಕಲ್ಲು ಬಂಡೆ ಹೀಗೆ ರಸ್ತೆಯೇ ಇಲ್ಲದಲ್ಲಿ ಓಡುವುದು. 42 ಕಿಲೋಮೀಟರಿಗಿಂತ ಜಾಸ್ತಿ ದೂರ ಓಡುವ ಮ್ಯಾರಥಾನ್‌ಗಳಿವೆ. ಅವು ಅಲ್ಟ್ರಾ ಮ್ಯಾರಥಾನ್. ಇನ್ನು ಮರಳುಗಾಡಿನಲ್ಲಿ ಓಡುವುದು ಡೆಸರ್ಟ್ ಮ್ಯಾರಥಾನ್. ಡೆಸರ್ಟ್ ಮ್ಯಾರಥಾನ್‌ಗಳಲ್ಲಿಯೇ ಹೆಗ್ಗಳಿಕೆಯ ಮ್ಯಾರಥಾನ್ ಎಂದರೆ Marathon des Sables. ಇದು ಪ್ರತಿ ವರ್ಷ ಸಹಾರಾ ಮರುಭೂಮಿಯಲ್ಲಿ ನಡೆಯುವ ಅಲ್ಟ್ರಾ ಮ್ಯಾರಥಾನ್. ಆರು ದಿನದೊಳಗೆ 250 ಕಿಲೋಮೀಟರ್ ಮರುಭೂಮಿಯನ್ನು ಕ್ರಮಿಸಬೇಕು. ಇದರಲ್ಲಿ ಓಡುವವರು ತಮಗೆ ಬೇಕಾಗುವ ನೀರು, ಆಹಾರ, ಮಲಗುವ ವ್ಯವಸ್ಥೆ ಇವೆಲ್ಲವನ್ನೂ ತಾವೇ ಜತೆಯಲ್ಲಿ ಹೊತ್ತೊಯ್ಯಬೇಕು. ಏಕೆಂದರೆ ಇವರು ಓಡುವ ಮರುಭೂಮಿಯಲ್ಲಿ ಯಾವ ವ್ಯವಸ್ಥೆಯೂ ಇರುವುದಿಲ್ಲ. ಆ ಕಾರಣಕ್ಕಾಗಿ ಇದಕ್ಕೆ ಜಗತ್ತಿನ ಅತ್ಯಂತ ಕಷ್ಟದ ಮ್ಯಾರಥಾನ್ ಎಂಬ ಖ್ಯಾತಿ. ಅಡಿ ಬಿಟ್ಟು ಮಂಗೋಲಿಯಾದ ಗೋಬಿ ಮರುಭೂಮಿಯಲ್ಲಿ ನಡೆಯುವ ಇಷ್ಟೇ ದೂರದ ಮ್ಯಾರಥಾನ್ ಕೂಡ ಅಷ್ಟೇ ಕಷ್ಟದ್ದು. ಅಮೆರಿಕದ 'ಡೆತ್ ವ್ಯಾಲಿ' ಮರುಭೂಮಿಯಲ್ಲಿಯೂ 50 ಡಿಗ್ರಿ ಉಷ್ಣತೆಯಲ್ಲಿ 215 ಕಿಲೋಮೀಟರಿನ ಅಲ್ಟ್ರಾ ಮ್ಯಾರಥಾನ್ ನಡೆಯುತ್ತದೆ.

ಮನುಷ್ಯನ ಸಾಮರ್ಥ್ಯದ ಪರಾಕಾಷ್ಠೆಯ ಪರೀಕ್ಷೆಯನ್ನು ಆ ಮ್ಯಾರಥಾನ್‌ಗಳು ಮಾಡಿವೆ. ಇಯಾನಿಸ್ ಕೊರೋಸ್ (Yiannis Kouros) ಎಂಬ ಗ್ರೀಕ್ ಮ್ಯಾರಥಾನ್ ಓಟಗಾರ 360 ಕಿಲೋಮೀಟರ್ ದೂರವನ್ನು ಒಮ್ಮೆಯೂ ಕೂರದೇ ಓಡಿದ್ದು ಇಂದಿಗೂ ದಾಖಲೆ. ಆತ ಇಷ್ಟು ಕ್ರಮಿಸಲು 24 ಗಂಟೆಗಿಂತ ಜಾಸ್ತಿ ನಿರಂತರ ಓಡಿದ್ದ. ಅದಲ್ಲದೆ ಆತ ಆಸ್ಟ್ರೇಲಿಯಾದ ಸಾವಿರ ಮೈಲಿಯ ಅಲ್ಟ್ರಾ ಮ್ಯಾರಥಾನ್ ಅನ್ನು ಕೂಡ ಐದು ದಿನದಲ್ಲಿ ಓಡಿ ಪೂರೈಸಿದ್ದಾನೆ. ಅದು ಬಿಟ್ಟು 14 ಗಂಟೆಯಲ್ಲಿ ನೂರು ಮೈಲಿ ಓಡಿದವರು ಇತ್ಯಾದಿ ತರಹೇವಾರಿ ದಾಖಲೆ ಮಾಡಿದವರಿದ್ದಾರೆ. ಟಾಮ್ ಎವಾನ್ಸ್ ಎನ್ನುವವನಂತೂ ಉತ್ತರ ಧ್ರುವದ ಘನೀಕೃತ, ಕಷ್ಟಕರವಾದ ಮ್ಯಾರಥಾನ್ ಅನ್ನು ಮೂರುವರೆ ತಾಸಿನಲ್ಲಿ ಮುಗಿಸಿದ್ದಾನೆ. ಇದು ರಸ್ತೆಯ ಮೇಲೆ ಮ್ಯಾರಥಾನ್ ಓಡುವವರ ವೇಗದಷ್ಟೇ ಇದೆ. ಇವೆಲ್ಲ ಮನುಷ್ಯ ಸಾಧ್ಯತೆಯ ಪರಾಕಾಷ್ಠೆಗಳು.

ಮ್ಯಾರಥಾನ್ ಸ್ಪರ್ಧೆಯಷ್ಟೇ ಅಲ್ಲ, ಅದೊಂದು ಮನಸ್ಸು ದೇಹದ ಅಂತರ್ಯುದ್ಧ. ದೇಹ ಒಂದಿಷ್ಟು ಹೊತ್ತು ಓಡಿದ ನಂತರ ಸ್ನಾಯುಗಳು ಸೋತು ಕೇಂದ್ರ ನರಮಂಡಲಕ್ಕೆ ಸುಸ್ತಿನ ಸಂದೇಶ ಕಳುಹಿಸುತ್ತವೆ. ಅದೇ ಸಮಯದಲ್ಲಿ ಸ್ನಾಯುಗಳು ತಮ್ಮಲ್ಲಿನ ನೀರನ್ನು ಕಳೆದುಕೊಳ್ಳುತ್ತವೆ. ಅಕಸ್ಮಾತ್ ನೀರಿನ ಪ್ರಮಾಣ ಒಂದು ಹಂತಕ್ಕಿಂತ ಕೆಳಕ್ಕಿಳಿದರೆ ನಮ್ಮ ಸ್ನಾಯುಗಳು ಹಾಗೆಯೇ ಗಟ್ಟಿಯಾಗಿ ನಿಂತುಬಿಡುತ್ತವೆ. ಮಸಲ್ ಕ್ಯಾಚ್ ಎಂದರೆ ಅದು. ಈ ಮ್ಯಾರಥಾನ್ ಓಡುವಾಗ ಸ್ನಾಯುಗಳು ಸೋಲುವುದು ಅದೆಲ್ಲ ಆಯಿತಲ್ಲ, ಒಂದು ವೇಳೆ ಸರಿಯಾದ ಬಟ್ಟೆ ಧರಿಸಿಲ್ಲ ಎಂದಿಟ್ಟುಕೊಳ್ಳಿ. ಅಂಗಿಯ ಘರ್ಷಣೆಯಿಂದಾಗಿ ಗಂಡಸರ ಮೊಲೆ ತೊಟ್ಟಿನಿಂದ ರಕ್ತ ಸುರಿಯಲು ಶುರುವಾಗಿಬಿಡುತ್ತದೆ. ಮ್ಯಾರಥಾನ್ ಓಡುವವರ ಪ್ರಕಾರ ಮೊದಲ ಇಪ್ಪತ್ತು ಕಿಲೋಮೀಟರ್ ಸುಲಭ. ಅದಾದ ಮೇಲೆ ನಿಧಾನಕ್ಕೆ ದೇಹ ಸೋಲಲು ಶುರುವಾಗುತ್ತದೆ. ಸುಮಾರು 20-25 ಕಿಲೋಮೀಟರ್ ಕ್ರಮಿಸುವಾಗ ಬಹುತೇಕ ಇಡೀ ದೇಹ ಇದನ್ನು ನಿಲ್ಲಿಸುವಂತೆ ಪ್ರತಿರೋಧಕ್ಕೆ ಶುರುಮಾಡಿಬಿಡುತ್ತದೆ. 20ರಿಂದ 30 ಕಿಲೋಮೀಟರ್ ಅತ್ಯಂತ ಕಷ್ಟಕರವಾದದ್ದು. ಇಲ್ಲಿಯೇ ಮನಸ್ಸು ದೇಹದ ಸಾಮರ್ಥ್ಯವನ್ನು ಮೀರಿ ನಡೆಯುವಂತೆ ಮೇಲುಗೈ ಸಾಧಿಸುವುದು. 30 ಕಿಲೋಮೀಟರ್ ದಾಟಿದ ಮೇಲೆ ದೇಹ ಸಂಪೂರ್ಣ ಮನಸ್ಸಿನ ವಶವಾಗಿರುತ್ತದೆ. ಆ ಸಮಯದಲ್ಲಿ ಮನಸ್ಸು ದೇಹದ ಬಹುತೇಕ ಅರಿವನ್ನು ಶೂನ್ಯವಾಗಿಸಿಬಿಡುತ್ತದೆ. ಮುಂದಿನ ಹತ್ತನ್ನೆರಡು ಕಿಲೋಮೀಟರ್ ಎಂದರೆ ಧ್ಯಾನ.

ಮ್ಯಾರಥಾನ್ ಓಟಗಾರ ಪ್ರತಿ ಬಾರಿ ಓಡಿದಾಗಲೂ ಛಲದ ಮೂಲಕ ದೈಹಿಕ ಮಿತಿಯನ್ನು ಪರೀಕ್ಷಿಸುತ್ತಾನೆ ಎಂದೇ ಅರ್ಥ. ಮ್ಯಾರಥಾನ್ ಅನ್ನು ಸಾಮಾನ್ಯವಾಗಿ ಯಾರೂ ಒಂದೇ ಬಾರಿ ಓಡಿ ಬಿಡುವುದಿಲ್ಲ, ಓಡುತ್ತಲೇ ಇರುತ್ತಾರೆ. ಎಲ್ಲೆಲ್ಲಿ ಮ್ಯಾರಥಾನ್ ಇದೆಯೋ ಅಲ್ಲೆಲ್ಲ ಹೋಗಿ ಓಡುತ್ತಾರೆ. ಸ್ವದೇಶವಷ್ಟೇ ಅಲ್ಲ, ವಿದೇಶಗಳಿಗೂ ಮ್ಯಾರಥಾನ್ ಓಡಲೆಂದೇ ಹೋಗುವವರಿದ್ದಾರೆ. ಸ್ನೇಹಿತರಾದ ಕೃಷ್ಣ ರಾವ್ ಅವರು ಮ್ಯಾರಥಾನ್ ಓಡಲೆಂದೇ ಇತ್ತೀಚೆಗೆ ಬೆಂಗಳೂರಿನಿಂದ ಶಿಕಾಗೋಗೆ ಬಂದಿದ್ದರು. ಮ್ಯಾರಥಾನ್‌ನಲ್ಲಿ ಫಿನಿಷ್‌ಲೈನ್ ಮುಟ್ಟುವುದೆಂದರೆ ಅದು ಆ ದಿನದ ಶ್ರಮವಷ್ಟೇ ಅಲ್ಲ, ಅದರ ಹಿಂದೆ ತಿಂಗಳಾನುಗಟ್ಟಲೆ ನಡೆಸಿದ ತಾಲೀಮು, ದೇಹಶಿಸ್ತು, ಕಾಳಜಿ, ದೇಹವನ್ನು ಸಲಹಿ ಅಣಿಗೊಳಿಸಿದ ಸಮರ್ಪಣಾ ಭಾವ ಎಲ್ಲವೂ ಇದೆ. ನಾನೂ ಮ್ಯಾರಥಾನ್ ಓಡುತ್ತೇನೆ ಎಂದು ಅಣಿಯಾಗಲು ಒಂದಿಷ್ಟು ಉತ್ಸಾಹ ಸಾಕು. ಆದರೆ ಶಿಸ್ತು, ಜೀವನ ಪ್ರೀತಿ, ಅಸಲಿ ಛಲವುಳ್ಳವರು ಮಾತ್ರ ಮ್ಯಾರಥಾನ್ ಓಡಿ ಮುಗಿಸಲು ಸಾಧ್ಯ. ನಮ್ಮನ್ನು, ನಮ್ಮ ಮಿತಿಯನ್ನು ಪರೀಕ್ಷಿಸಿಕೊಳ್ಳುವ ಹುಚ್ಚಿರಬೇಕು.

ನ್ಯೂಯಾರ್ಕ್, ಬಾಸ್ಟನ್, ಲಂಡನ್, ಬರ್ಲಿನ್, ಟೋಕಿಯೋ ಇವೆಲ್ಲ ಪ್ರತಿಷ್ಠಿತ ಮ್ಯಾರಥಾನ್‌ಗಳು. ಇವುಗಳಲ್ಲಿ ಓಡಲಿಕ್ಕೆ ಅವಕಾಶ ಸಿಗಬೇಕೆಂದರೆ ಬೇರೆನ್ನೊಂದಿಷ್ಟು ಮ್ಯಾರಥಾನ್ ಓಡಿ ಬಂದಿರಬೇಕು. ಇಲ್ಲದಿದ್ದರೆ 'ನೋ ಎಂಟ್ರಿ'. ನ್ಯೂಯಾರ್ಕ್ ಮ್ಯಾರಥಾನ್‌ನಲ್ಲಿ ಪ್ರತಿ ವರ್ಷ 150 ದೇಶದ ಐವತ್ತು ಸಾವಿರ ಮಂದಿ ಭಾಗವಹಿಸುತ್ತಾರೆ. ಬಹುತೇಕ ಮ್ಯಾರಥಾನ್‌ಗಳಲ್ಲಿಯೂ ಇತ್ತೀಚೆಗೆ ಇಷ್ಟೊಂದು ಮಂದಿ ಓಡುವುದು ಸಾಮಾನ್ಯ. ಮುಂಬೈ ಮ್ಯಾರಥಾನ್ ಕೂಡ ಇತ್ತೀಚೆಗೆ ಬಹಳ ಚಾಲ್ತಿಯಲ್ಲಿದೆ. ಅಲ್ಲಿ ಹಿಂದಿನ ವರ್ಷ ನೂರು ದೇಶದ 40 ಸಾವಿರ ಮಂದಿ ಭಾಗವಹಿಸಿದ್ದರು. ಜಗತ್ತಿನಲ್ಲಿ ಪ್ರತಿ ವರ್ಷ ಸುಮಾರು 11 ಲಕ್ಷ ಮಂದಿ ಮ್ಯಾರಥಾನ್‌ನಲ್ಲಿ ಭಾಗವಹಿಸಿ ಪೂರ್ಣಗೊಳಿಸುತ್ತಾರೆ. ಅದರರ್ಥ ಅಷ್ಟು ಮಂದಿ ತಮ್ಮನ್ನು ತಾವು ಈ ರೀತಿ ಮನೋದೈಹಿಕ ಪರೀಕ್ಷೆಗೊಡ್ಡಿಕೊಳ್ಳುತ್ತಾರೆ ಎಂದರ್ಥ.

ಇದೆಲ್ಲ ಹೇಗಿದೆ ನೋಡಿ. ಅದ್ಯಾರೋ Pheidippides ಎಂಬ ಗ್ರೀಕ್ ರಾಜಭಟ ಸುಮಾರು ಎರಡೂವರೆ ಸಾವಿರ ವರ್ಷದ ಹಿಂದೆ ಅಲ್ಲೆಲ್ಲಿಯೋ 42 ಕಿಲೋಮೀಟರ್ ಓಡಿದ, ಓಡಿದ ನಂತರ ಸತ್ತು ಬೇರೆ ಹೋದ. ಆ ಘಟನೆ ಕ್ರಮೇಣ ಮ್ಯಾರಥಾನ್ ಎಂಬ ಸ್ಪರ್ಧೆಯ ರೂಪವನ್ನು ಬದಲಿಸುತ್ತ, ಪೂರೈಸುವುದೇ ಗುರಿ ಎಂದಾದದ್ದು. ಈಗ ಇದೊಂದು ಕ್ರಿಯೆ, ತಯಾರಿ, ಶಿಸ್ತು, ಪರೀಕ್ಷೆ. ಅದನ್ನು ಎದುರಿಸಲು ಲಕ್ಷಾಂತರ ಮಂದಿ, ಜಗತ್ತಿನ ಯಾವಯಾವುದೋ ಮೂಲೆಯಲ್ಲಿ. ಈಗ ಮ್ಯಾರಥಾನ್ ಎಂದರೆ ಅದೊಂದು ಸಾಮಾಜಿಕ ಅವಶ್ಯಕತೆ. ಜತೆಯಲ್ಲಿ ಪ್ರವಾಸೋದ್ಯಮ, ಆದಾಯ ಇತ್ಯಾದಿ. ಮನುಷ್ಯನ ಇಂಥ ಅವಶ್ಯಕತೆಗಳು ರೂಪುಗೊಂಡು ಬೆಳೆಯುವುದು, ಅನ್ಯೋನ್ಯತರ ರೂಪ ಪಡೆಯುವುದು ಕೌತುಕದ ವಿಷಯವೇ ಅಲ್ಲವೇ?

ಹುಲಿಗಳ ಜತೆ ಬದುಕಲು ಕಲಿಯಬೇಕಿದೆ

ಹುಲಿಗಳು ಬದುಕಲು ತುಂಬಾ ದೊಡ್ಡ ನೈಸರ್ಗಿಕ ಸ್ಥಳ, ಅರ್ಥಾತ್ ಕಾಡು ಬೇಕಾಗುತ್ತದೆ. ಹಾಗಂತ ಜಾಗ ಒಂದಿದ್ದರೆ ಸಾಲದು. ಆ ಜಾಗದಲ್ಲಿ ಬೇಟೆಗೆ ಬಲಿಯಾಗುವ ಪ್ರಾಣಿಗಳೂ ಸಾಕಷ್ಟಿರಬೇಕಾಗುತ್ತದೆ. ಆದರೆ ಕಳೆದೊಂದು ಶತಮಾನದಲ್ಲಿ ಭಾರತದಲ್ಲಿ ಅಪಾರ ಪ್ರಮಾಣದ ಕಾಡು ನಾಶವಾಗಿದೆ.

ಹುಲಿಹೆಜ್ಜೆ
ಅಲೆಕ್ಸ್ ಫಾಕ್ಸ್
vveditoped@gmail.com

ನಾಲ್ಕು ದಶಕಗಳ ಕಾಲ ಹುಲಿಗಳನ್ನು ನೋಡುತ್ತಾ, ಅವುಗಳ ಸಂರಕ್ಷಣೆಗಾಗಿ ಕಾಡುಮೇಡುಗಳನ್ನು ಸುತ್ತಿದ ಉಲ್ಲಾಸ್ ಕಾರಂತರಿಗೆ ಈಗಲೂ ಕಾಡಿನಲ್ಲಿ ಹುಲಿ ಕಂಡರೆ ರೋಮಾಂಚನವಾಗುತ್ತದೆ. 'ಯಾವ ಅತ್ಯದ್ಭುತ ಚಿತ್ರಕಲಾವಿದ ಅಥವಾ ಶಿಲ್ಪಿಯಿಂದಲೂ ಇಂಥ ಸುಂದರ ಪ್ರಾಣಿಯನ್ನು ಸೃಷ್ಟಿಸಲು ಸಾಧ್ಯವಿಲ್ಲ' ಎಂದು ಉಲ್ಲಾಸ್ ಹುಲಿಗಳ ಬಗ್ಗೆ ತುಂಬಾ ಕಕ್ಕುಲಾತಿಯಿಂದ ಮಾತನಾಡುತ್ತಾರೆ. ಅವರು ವನ್ಯಜೀವಿಗಳ ಸಂರಕ್ಷಣೆಗೆಂದೇ ಭಾರತದಲ್ಲಿ 'ಸೆಂಟರ್ ಫಾರ್ ವೈಲ್ಡ್‌ಲೈಫ್ ಸ್ಟಡೀಸ್' ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ. ಅದರ ಮೂಲಕ 1980ರ ದಶಕದಿಂದಲೂ ಹುಲಿಗಳ ಬಗ್ಗೆ ಅಧ್ಯಯನ ಮಾಡುತ್ತಿದ್ದಾರೆ.

ಸರಿಯಾಗಿ ಬೆಳೆದ ವಯಸ್ಕ ಹುಲಿಗಳು 600 ಪೌಂಡ್‌ಗಿಂತ ಹೆಚ್ಚು ಭಾರವಿರುತ್ತವೆ. ಬರೋಬ್ಬರಿ 20 ಅಡಿಗಳಷ್ಟು ದೂರ ಜಿಗಿಯುತ್ತವೆ. ತಮ್ಮ ತೂಕಕ್ಕಿಂತ ಐದು ಪಟ್ಟು ಹೆಚ್ಚು ತೂಕವಿರುವ ದೈತ್ಯ ಪ್ರಾಣಿಯನ್ನು ಕೂಡ ಬೇಟೆಯಾಡುವಷ್ಟು ಶಕ್ತಿ ಅವುಗಳಿಗಿದೆ. ಆದರೆ, ಅವು ಎಷ್ಟೇ ಬಲಶಾಲಿ ಮತ್ತು ಕ್ರೂರ ಪ್ರಾಣಿಯಾಗಿದ್ದರೂ, ಆಹಾರ ಸರಪಳಿಯ ತುತ್ತತುದಿಯಲ್ಲಿ ಕುಳಿತಿರುವುದರಿಂದ ಅವುಗಳ ಬದುಕು ಅಷ್ಟೇ ಅಸ್ಥಿರವಾಗಿದೆ. ಅವುಗಳ ಆವಾಸಸ್ಥಾನ ಅಪಾಯದಲ್ಲಿದೆ. ಒಂದು ಹುಲಿ ಬದುಕಬೇಕು ಅಂದರೆ ವಾರಕ್ಕೆ ಸರಾಸರಿ 100 ಪೌಂಡ್‌ಗಳಷ್ಟು ಮಾಂಸ ತಿನ್ನಬೇಕು. ಅಂದರೆ ಒಂದು ಹುಲಿಗೆ ಒಂದು ವರ್ಷಕ್ಕೆ ಜಿಂಕೆ ಅಥವಾ ಕಡವೆ ಗಾತ್ರದ 50 ದೊಡ್ಡ ಪ್ರಾಣಿಗಳು ಬೇಕು. 'ಇದರರ್ಥ ಹುಲಿಗಳು ಬದುಕಲು ತುಂಬಾ ದೊಡ್ಡ ನೈಸರ್ಗಿಕ ಸ್ಥಳ, ಅರ್ಥಾತ್ ಕಾಡು ಬೇಕಾಗುತ್ತದೆ. ಹಾಗಂತ ಜಾಗ ಒಂದಿದ್ದರೆ ಸಾಲದು. ಆ ಜಾಗದಲ್ಲಿ ಬೇಟೆಗೆ ಬಲಿಯಾಗುವ ಪ್ರಾಣಿಗಳೂ ಸಾಕಷ್ಟಿರಬೇಕಾಗುತ್ತದೆ' ಎನ್ನುತ್ತಾರೆ ಕಾರಂತ್.

ಅಜಮಾಸು ಕಳೆದೊಂದು ಶತಮಾನದಲ್ಲಿ ಭಾರತದಲ್ಲಿ ಅಪಾರ ಪ್ರಮಾಣದ ಕಾಡು ನಾಶವಾಗಿದೆ. ಜನರು ಕೃಷಿಗಾಗಿ, ಸಾಕುಪ್ರಾಣಿಗಳ ಮೇವಿಗಾಗಿ, ವಾಸಕ್ಕಾಗಿ ಹಾಗೂ ದುರಾಸೆಯಿಂದ ದೊಡ್ಡ ಪ್ರಮಾಣದಲ್ಲಿ ಕಾಡು ನಾಶಪಡಿಸಿ ವನ್ಯಜೀವಿಗಳ ಹತ್ತಿರ ಹತ್ತಿರಕ್ಕೆ ಹೋಗಿದ್ದಾರೆ. ಬೇಟೆಯಿಂದಲೂ ಸಾಕಷ್ಟು ಪ್ರಾಣಿಗಳು ನಾಶವಾಗಿವೆ. ಹುಲಿಯಂಥ ಮಾಂಸಾಹಾರಿ ಪ್ರಾಣಿಗಳು ಬದುಕುವುದಕ್ಕೆ ಬೇಟೆಯಾಡುವ ಸಸ್ಯಾಹಾರಿ ಪ್ರಾಣಿಗಳು ಕೂಡ ಜನರ ಕಳ್ಳಬೇಟೆಯ ಚಟಕ್ಕೆ ಹೆಚ್ಚು ಬಲಿಯಾಗಿವೆ. 1900ನೇ ಇಸವಿಯ ವೇಳೆಗೆ ಏಷ್ಯಾ ಹಾಗೂ ಮಧ್ಯಪ್ರಾಚ್ಯ ದೇಶಗಳಲ್ಲಿ ಅಂದಾಜು 1,00,000 ಹುಲಿಗಳಿದ್ದವು. ಇಂದು ಅವುಗಳ ಸಂಖ್ಯೆ ಯಃಕಶ್ಚಿತ್ 4,500ಕ್ಕೆ ಕುಸಿದಿದೆ. ಗಣತಿಯ ಪ್ರಕಾರ ಹುಲಿಗಳ ಸಂಖ್ಯೆ ಏರಿಕೆಯಾಗುತ್ತಿದೆ ಎಂದು ಹೇಳುತ್ತಾರೆ. 2010ರಲ್ಲಿ 3,200 ಇದ್ದ ಹುಲಿಗಳ ಸಂಖ್ಯೆ ಈಗ 4,500ಕ್ಕೆ ಏರಿದೆಯಂತೆ. ಆದರೆ, 'ಪ್ಯಾಂಥೆರಾ' ಎಂಬ ವನ್ಯಜೀವಿ ಸಂರಕ್ಷಣಾ ಸಂಸ್ಥೆಯ ಸಂಶೋಧಕ ಅಭಿಷೇಕ್ ಹರಿಹರ ಅವರ ಪ್ರಕಾರ, 2010ರ ಲೆಕ್ಕವೇ ಬಹುಶಃ ತಪ್ಪಾಗಿತ್ತು. ಆಗಿನಿಂದ ಈಗಿನವರೆಗೆ ಏರಿಕೆಯಾದ ಸಂಖ್ಯೆಯು ಹುಲಿಗಳ ಗಣತಿಯಲ್ಲಿ ಬಳಸುತ್ತಿರುವ ಸುಧಾರಿತ ಪದ್ಧತಿಯ ಫಲವಾಗಿರುವ ಸಾಧ್ಯತೆಯೇ ಹೆಚ್ಚಿದೆ. ಅಂದರೆ, ನಿಜವಾಗಿಯೂ ಹುಲಿಗಳ ಸಂಖ್ಯೆ ಏರಿಕೆಯಾಗಿರುವುದಕ್ಕಿಂತ ಹೆಚ್ಚಾಗಿ ನಮಗೆ ಅವುಗಳ ಲೆಕ್ಕ ಈಗ ಸರಿಯಾಗಿ ಸಿಕ್ಕಿರುವ ಸಾಧ್ಯತೆಯೇ ಕಂಡುಬರುತ್ತಿದೆ. ಅದೇನಾದರೂ ಆಗಿರಲಿ, ಗಮನಾರ್ಹ ಸಂಗತಿ ಏನೆಂದರೆ, ಐತಿಹಾಸಿಕವಾಗಿ ಈ ಭೂಮಿಯಲ್ಲಿ ಎಷ್ಟು ಹುಲಿಗಳು ಓಡಾಡಿಕೊಂಡಿದ್ದವೋ ಅದರ ಪೈಕಿ ಶೇ.7ಕ್ಕಿಂತ ಕಡಿಮೆ ಹುಲಿಗಳು ಇಂದು ಜೀವಂತವಾಗಿವೆ.

ಹುಲಿಗಳು ಜೀವ ಉಳಿಸಿಕೊಳ್ಳಲು ಮನುಷ್ಯರ ಜತೆಗೆ ನೇರವಾಗಿ ನಡೆಸಿದ ಸಂಘರ್ಷವು ಅವುಗಳ ನೆರವಿಗೆ ಬಂದಿಲ್ಲ. ಜಗತ್ತಿನ ಶೇ.70ರಷ್ಟು ಹುಲಿಗಳನ್ನು ಹೊಂದಿರುವ ಭಾರತದಲ್ಲಿ ಮನುಷ್ಯರ ಸಂಖ್ಯೆಯಲ್ಲಿ ಆಗುತ್ತಿರುವ ಅಗಾಧ ಏರಿಕೆ ಮತ್ತು ಅಭಿವೃದ್ಧಿಯ ಪರಿಣಾಮವಾಗಿ ಜನರು ಹಾಗೂ ಹುಲಿಗಳು ದಿನೇದಿನೆ ಹೆಚ್ಚೆಚ್ಚು ಹತ್ತಿರಕ್ಕೆ

ಬರುವಂತಾಗಿದೆ. ಇಂದು ಲಕ್ಷಾಂತರ ಜನರು ಹುಲಿ ಸಂರಕ್ಷಿತ ಅರಣ್ಯಗಳ 'ಬಫರ್ ಜೋನ್'ನಲ್ಲಿ ಬದುಕುತ್ತಿದ್ದಾರೆ. ಅಂದರೆ ಅವರು ಹುಲಿಯ ವಾಸಸ್ಥಾನದ ಸುತ್ತ ಬಹಳ ಸಮೀಪದಲ್ಲಿ ವಾಸಿಸುತ್ತಿದ್ದಾರೆ. ಹೀಗಾಗಿ ಪ್ರತಿ ವರ್ಷ ಭಾರತದಲ್ಲಿ 50ರಿಂದ 60 ಜನರು ಹುಲಿ ದಾಳಿಯಿಂದ ಜೀವ ಕಳೆದುಕೊಳ್ಳುತ್ತಿದ್ದಾರೆ. ಜತೆಗೆ ನೂರಾರು ಸಾಕುಪ್ರಾಣಿಗಳು ಹುಲಿ ದಾಳಿಗೆ ಬಲಿಯಾಗುತ್ತಿವೆ. ಇದರ ಪರಿಣಾಮವಾಗಿ ಜನರಿಗೂ ಹುಲಿಗಳ ಬಗ್ಗೆ ದ್ವೇಷ ಹೆಚ್ಚಾಗಿ, ಅವುಗಳನ್ನು ಸೇಡಿನಿಂದ ಕೊಲ್ಲುವ ಪ್ರಮಾಣ ಹೆಚ್ಚುತ್ತಿರಬಹುದು.

ಉಲ್ಲಾಸ್ ಕಾರಂತರ ಮಗಳು ಕೃತಿ ಕಾರಂತ್ ಕೂಡ ವನ್ಯಜೀವಿ ಸಂರಕ್ಷಣೆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ವನ್ಯಜೀವಿ ಸಂಶೋಧನೆಯಲ್ಲಿ ಅವರು ತಮ್ಮದೇ ಆದ ಹೆಸರು ಗಳಿಸಿದ್ದಾರೆ. ಅವರೀಗ ಸೆಂಟರ್ ಫಾರ್ ವೈಲ್ಡ್‌ಲೈಫ್ ಸ್ಟಡೀಸ್‌ನ ಮುಖ್ಯಸ್ಥೆಯಾಗಿ ಕೆಲಸ ಮಾಡುತ್ತಾ, ಮನುಷ್ಯ ಹಾಗೂ ವನ್ಯಜೀವಿಗಳ ನಡುವಿನ ಸಂಘರ್ಷವನ್ನು ಕಡಿಮೆ ಮಾಡಲು ಸಾಕಷ್ಟು ಸಮಯ ಹಾಗೂ ಸಂಪನ್ಮೂಲಗಳನ್ನು ಖರ್ಚು ಮಾಡುತ್ತಿದ್ದಾರೆ. ಅವರ ಸಂಸ್ಥೆಯ ಒಂದು ಯೋಜನೆಯಡಿ, ಸರಕಾರವು ವನ್ಯಜೀವಿ ದಾಳಿಯಿಂದ ಪ್ರಾಣ ಕಳೆದುಕೊಂಡ ವ್ಯಕ್ತಿಯ ಕುಟುಂಬಗಳಿಗೆ ಪರಿಹಾರ ನೀಡುವುದಕ್ಕೆಂದು ತೆಗೆದಿರಿಸಿದ ಹಣವನ್ನು ಪಡೆಯಲು 2000ಕ್ಕೂ ಹೆಚ್ಚು ಗ್ರಾಮೀಣ ಸಮುದಾಯಗಳಿಗೆ ನೆರವು ನೀಡಲಾಗುತ್ತಿದೆ. ವನ್ಯಜೀವಿ ದಾಳಿಯಿಂದ ಸಾಕುಪ್ರಾಣಿಗಳನ್ನು ಕಳೆದುಕೊಂಡವರಿಗೂ ಸರಕಾರದಿಂದ ಪರಿಹಾರ ಲಭಿಸುವಂತೆ ಮಾಡಲು ಈ ಸಂಸ್ಥೆ ಯತ್ನಿಸುತ್ತದೆ. 'ಈ ಹಣದಿಂದ ಜನರಿಗೆ ಆದ ನಷ್ಟ ಸಂಪೂರ್ಣ ಭರ್ತಿಯಾಗುವುದಿಲ್ಲ. ಅವರಿಗಾದ ಭಾವನಾತ್ಮಕ ಅಥವಾ ಆರ್ಥಿಕ ನಷ್ಟವನ್ನು ಸಂಪೂರ್ಣ ತುಂಬಿಕೊಡಲು ಸಾಧ್ಯವೂ ಇಲ್ಲ. ಆದರೆ ಕನಿಷ್ಠ ಪಕ್ಷ ತಮಗೆ ಎದುರಾದ ಕಷ್ಟವನ್ನು ಎದುರಿಸುವುದಕ್ಕಾದರೂ ಅವರಿಗೆ ಒಂದಷ್ಟು ಸಹಾಯವಾಗುತ್ತದೆ. ಸರಕಾರದ ಈ ಪರಿಹಾರದ ಹಣ ತ್ವರಿತವಾಗಿ ಅವರನ್ನು ತಲುಪದೆ ಇದ್ದರೆ ಅವರು ವನ್ಯಜೀವಿಗಳ ಮೇಲೆ ಸೇಡಿನ ದಾಳಿ ನಡೆಸುವ ಅಥವಾ ಹುಲಿಗಳ ಬಗ್ಗೆ ಇನ್ನಷ್ಟು ದ್ವೇಷ ಬೆಳೆಸಿಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ' ಎನ್ನುತ್ತಾರೆ ಕೃತಿ ಕಾರಂತ್.

ಇವರ ಸಂಸ್ಥೆಯ ಇನ್ನೊಂದು ಕಾರ್ಯಕ್ರಮವು ಸುಮಾರು 1000 ಗ್ರಾಮೀಣ ಶಾಲೆಗಳಲ್ಲಿ ಚಾಲ್ತಿಯಲ್ಲಿದೆ. ಅಲ್ಲಿ ಸ್ಥಳೀಯ ಜೀವಿಪರಿಸರ ವ್ಯವಸ್ಥೆಯಲ್ಲಿ ಹುಲಿ ಹಾಗೂ ಇನ್ನಿತರ ಪ್ರಾಣಿಗಳ ಮಹತ್ವ ಏನು ಎಂಬುದರ ಬಗ್ಗೆ ಮಕ್ಕಳಿಗೆ ತಿಳಿಸುವ ಕೆಲಸ ಮಾಡಲಾಗುತ್ತಿದೆ. ಕೃತಿ ಕಾರಂತ್ ಹೇಳುವಂತೆ, 'ಮಕ್ಕಳಿಗೆ ವನ್ಯಜೀವಿಗಳ ಮಹತ್ವವನ್ನು ತಿಳಿಸಿಕೊಡದೆ ಇದ್ದರೆ ಅವರು ಕಾಡುಪ್ರಾಣಿಗಳ ಬಗ್ಗೆ ಭಯ ಅಥವಾ ದ್ವೇಷ ಬೆಳೆಸಿಕೊಳ್ಳುತ್ತಾರೆ. ಇದು ವನ್ಯಜೀವಿಗಳ ಸಂರಕ್ಷಣೆಗೆ ಮಾರಕ'. ವನ್ಯಜೀವಿ ದಾಳಿಯಿಂದ ರಕ್ಷಿಸಿಕೊಳ್ಳುವ ಉಪಾಯಗಳನ್ನು ಸೆಂಟರ್ ಫಾರ್ ವೈಲ್ಡ್‌ಲೈಫ್ ಸ್ಟಡೀಸ್‌ನವರು ಹಳ್ಳಿಗಳ ಶಾಲೆಯಲ್ಲಿನ ಮಕ್ಕಳಿಗೆ ಹೇಳಿಕೊಡುತ್ತಿದ್ದಾರೆ. ಉದಾಹರಣೆಗೆ, ಸಂಜೆಯ ನಂತರ ಓಡಾಡುವಾಗ ಪ್ರಖರ ಬೆಳಕಿನ ಟಾರ್ಚ್‌ಗಳನ್ನು ಹಿಡಿದುಕೊಂಡು ಹೋಗುವುದು, ಒಬ್ಬೊಬ್ಬರೇ ಸಂಚರಿಸದೆ ಮೂರ್ನಾಲ್ಕು ಜನರು ಒಟ್ಟಿಗೇ ಹೋಗುವುದು, ಕಾಡಿನ ದಾರಿಯಲ್ಲಿ ಸಂಚರಿಸುವಾಗ ಜೋರಾಗಿ ಮಾತನಾಡುತ್ತಾ ಹೋಗುವುದು ಹೀಗೆ ನಾನಾ ತಂತ್ರಗಳನ್ನು ಹೇಳಿಕೊಡಲಾಗುತ್ತದೆ. ಹೀಗೆ ಮಾಡುವುದರಿಂದ ಕಾಡುಪ್ರಾಣಿಗಳು ಮನುಷ್ಯರ ಸಮೀಕ್ಕೆ ಬರುವುದಿಲ್ಲ.

'ಭೂಮಿಯಲ್ಲಿ ಮನುಷ್ಯ ಮಾತ್ರವಲ್ಲ, ಎಲ್ಲಾ ಜೀವಜಂತುಗಳಿಗೂ ಮಹತ್ವವಿದೆ ಎಂಬ ಕರುಣೆಯ ಭಾವನೆಯನ್ನು ಮಕ್ಕಳಿಗೆ ಕಲಿಸುವಲ್ಲಿ ನಾವು ಯಶಸ್ವಿಯಾದರೆ ಅದು ಮನುಷ್ಯರಿಗೂ ಒಳ್ಳೆಯದು, ಹುಲಿಗಳಿಗೂ ಒಳ್ಳೆಯದು. ಆಗ ಇಬ್ಬರೂ ಸುರಕ್ಷಿತವಾಗಿರುತ್ತಾರೆ' ಎನ್ನುತ್ತಾರೆ ಕೃತಿ ಕಾರಂತ್.

(ಲೇಖಕರು ಫ್ರೀಲ್ಯಾನ್ಸ್ ವಿಜ್ಞಾನ ಪತ್ರಕರ್ತರು, ಕ್ಯಾಲಿಫೋರ್ನಿಯಾ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇದು ಸಂತಸದ ಸುದ್ದಿ

ಪಕ್ಷಾಂತರ ಮಾಡುವ ಶಾಸಕರ ಪಿಂಚಣಿಯನ್ನು ರದ್ದುಪಡಿಸುವ ಹೊಸ ವಿಧೇಯಕವನ್ನು ಹಿಮಾಚಲಪ್ರದೇಶ ವಿಧಾನಸಭೆ ಸರ್ವಾನುಮತದಿಂದ ಅಂಗೀಕರಿಸಿದ್ದು ಸಂತಸದ ಸುದ್ದಿ ಮತ್ತು ಇದು ನಿಜಕ್ಕೂ ಸ್ವಾಗತಾರ್ಹ. ಇಂದು, ಒಂದು ಪಕ್ಷದ ಚಿಹ್ನೆಯಡಿ ಚುನಾವಣೆಗೆ ಸ್ಪರ್ಧಿಸಿ ಆಯ್ಕೆಯಾದ ಮೇಲೂ, ಯಾವುದೋ ವೈಯಕ್ತಿಕ ಕಾರಣಕ್ಕಾಗಿ ಇಲ್ಲ ಸಲ್ಲದ ಸಬೂಬು ಹೇಳುತ್ತ, ಬೇರೊಂದು ಪಕ್ಷಕ್ಕೆ ಜಿಗಿಯುವುದು ಕೆಲ ಪುಢಾರಿಗಳಿಗೆ ಚಾಳಿಯಾಗಿಬಿಟ್ಟಿದೆ. ಜನರು ಏನಂದುಕೊಳ್ಳುತ್ತಾರೆ ಎಂಬ ಸಣ್ಣ ಅಳುಕೂ ಇಲ್ಲದೆ ಅವರು ಹೀಗೆ ಬೇಲಿ ಹಾರುವುದು ಅನೇಕ ವರ್ಷಗಳಿಂದ ನಡೆಯುತ್ತಲೇ ಇದೆ. ಜನಪ್ರತಿನಿಧಿಗಳು ತಮ್ಮನ್ನು ಆರಿಸಿ ಕಳಿಸಿದವರಿಗೆ ಉತ್ತರದಾಯಿ ಆಗಿರಬೇಕಲ್ಲವೇ? ಸದ್ಯ ಇರುವ ಪಕ್ಷದಲ್ಲಿ ಉಸಿರುಗಟ್ಟುವ ವಾತಾವರಣವಿದೆ, ಪಕ್ಷ ತಮ್ಮನ್ನು ಮೂಲೆಗುಂಪು ಮಾಡುತ್ತಿದೆ, ಸಚಿವ ಸ್ಥಾನ ಸಿಕ್ಕಿಲ್ಲ ಅಂತಲೋ ಅಥವಾ ಕಾರ್ಯಕರ್ತರ ಒತ್ತಾಸೆಯಿಂದಾಗಿ ಎಂದೋ ಏನೇನೋ ಕಾರಣ ಕೊಟ್ಟು ತಮ್ಮಿಷ್ಟದಂತೆ ನಡೆದುಕೊಳ್ಳುವ ಶಾಸಕರಿಗೆ ನಮ್ಮಲ್ಲೇನೂ ಕಮ್ಮಿಯಿಲ್ಲ. ಪ್ರಹಸನ ಇಷ್ಟಕ್ಕೇ ಮುಗಿಯದು. ಒಂದು ಪಕ್ಷದಲ್ಲಿ ಕೆಲ ಕಾಲವಿದ್ದು, ಅಲ್ಲಿ ಸಿಗಬೇಕಾದ ಮಾನ-ಸಮ್ಮಾನಗಳನ್ನೆಲ್ಲ ಅನುಭವಿಸಿಯೂ ಮತ್ತೊಂದು ಪಕ್ಷಕ್ಕೆ ಜಿಗಿಯುವವರು/ಮಾತೃಪಕ್ಷಕ್ಕೇ ಮರಳುವವರೂ ಸಾಕಷ್ಟಿದ್ದಾರೆ. ತಾವೇನೇ ಮಾಡಿದರೂ, ಪಿಂಚಣಿ ಸೇರಿದಂತೆ ತಮಗೆ ದೊರಕಬೇಕಾದ ಎಲ್ಲ ಸೌಲಭ್ಯಗಳೂ ಸಿಕ್ಕೇ ಸಿಗುತ್ತವೆ ಎಂಬ ಮೊಂಡುಧೈರ್ಯವೇ ಈ ಚಾಳಿಗೆ ಮುಖ್ಯಕಾರಣ. ಈ ವಿಧೇಯಕವನ್ನು ಮತ್ತಷ್ಟು ವಿಸ್ತರಿಸುವ ಅಗತ್ಯವಿದೆ. ಅಂದರೆ, ಕೇವಲ ಪಿಂಚಣಿಯಷ್ಟೇ ಅಲ್ಲ, ಜನಪ್ರತಿನಿಧಿಗಳಿಗೆ ದಕ್ಕುವ ಮಿಕ್ಕ ಭತ್ಯೆಗಳು ಮತ್ತು ಸೌಲಭ್ಯಗಳಿಗೂ ಕಡಿವಾಣ ಬೀಳುವಂತಾಗಬೇಕು. ಜನಪ್ರತಿನಿಧಿಗಳಲ್ಲಿ ಶಿಸ್ತು, ಬದ್ಧತೆ ಮತ್ತು ಜವಾಬ್ದಾರಿಯನ್ನು ಕಾಣುವಂತಾಗಬೇಕಾದರೆ ಮತ್ತು ಒಟ್ಟಾರೆಯಾಗಿ ನಮ್ಮ ಆಳುಗ ವ್ಯವಸ್ಥೆಯು ಸಮರ್ಥವಾಗಿ ಕಾರ್ಯನಿರ್ವಹಿಸಬೇಕು ಎಂದಾದರೆ, ಇಂಥ ನಿಷ್ಠುರ ಕಾನೂನಿನ ಅಗತ್ಯವಿದೆ. ಹಿಮಾಚಲಪ್ರದೇಶ ಸರಕಾರವು ಇಟ್ಟಿರುವ ಈ ಹೆಜ್ಜೆ, ದೇಶದ ಎಲ್ಲ ರಾಜ್ಯಗಳಿಗೂ ಮೇಲ್ಪಂಕ್ತಿಯಾಗಲಿ ಎಂದು ಆಶಿಸೋಣವೇ?

- ಶಂಕರನಾರಾಯಣ ಭಟ್, ಮಾಡಗೇರಿ

ಅಪ್ಪ-ಅಮ್ಮನ ಜಗಳದಲಿ..

'ಅಪ್ಪ-ಅಮ್ಮನ ಜಗಳದಲಿ ಕೂಸು ಬಡವಾಯ್ತು' ಎಂಬ ಗಾದೆಮಾತಿದೆ. ಈಗ ಆಡಳಿತ ಪಕ್ಷ ಮತ್ತು ವಿಪಕ್ಷಗಳಿಂದ ಹೊಮ್ಮುತ್ತಿರುವ ಆರೋಪ-ಪ್ರತ್ಯಾರೋಪಗಳ ಬಾಣಗಳು, ಹೊಡಿ-ಬಡಿ, ಭಂಡ-ಭ್ರಷ್ಟ ಇತ್ಯಾದಿ ತುಟಿಮೀರಿದ ಪದಗಳನ್ನು ಕೇಳುತ್ತಿದ್ದರೆ, ಈ ಗಾದೆಮಾತು ನೆನಪಾಗುತ್ತದೆ. ಕಾರಣ, ಇವರ ಜಗಳದಲ್ಲಿ ಬಡವಾಗುವುದು, ಚುನಾಯಿಸಿ ಕಳಿಸಿದ ಜನರು ಮಾತ್ರವೇ. ತಾವು ಚುನಾಯಿತರಾಗಿರುವುದು ಜನಸೇವೆಗೆ ಎಂಬ ಮೂಲಭೂತ ಸತ್ಯವನ್ನೇ ಇವರೆಲ್ಲಾ ಮರೆತಂತಿದೆ.

- ಸತ್ಯಬೋಧ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ಪರಪ್ಪ ಸಂಗಲಿ, ಬೆಳಗಾವಿ**
ಭಟ್ರೇ, ಈಗಿನ ಹುಡುಗಿಯರು ಬರೀ ರೀಲ್ಸ್ ಮಾಡುವುದರಲ್ಲಿ ಆಸಕ್ತರಾಗಿದ್ದಾರಲ್ಲ?
– ರೀಲ್ ಬಿಡುವುದಕ್ಕಿಂತ ಅದೇ ವಾಸಿ!

● **ಕಿಶನ್ ರಾಜ್ ವಿ., ಮೈಸೂರು**
ಭಟ್ರೇ, ನಿಮಗೆ ಹಣ್ಣು ಅಂದ್ರೆ ಬಹಳ ಇಷ್ಟವಂತೆ?
– ಹಾಗೆಂದು ಹುಣಸೇಹಣ್ಣು ತಂದು ಕೊಡಬೇಡ!

● **ಮಾರುತಿ ಶರ್ಮ, ಹೊನ್ನಾವರ**
ಭಟ್ರೇ, ಸಾಹಿತಿಗಳಿಂದ ಮಾತ್ರ ಕ್ರಾಂತಿ ಸಾಧ್ಯ ಅಂತಾರಲ್ಲ?
– ಆರ್.ಜಿ.ಹಳ್ಳಿ ನಾಗರಾಜ್ ಯಾವಾಗ ಹೊನ್ನಾವರಕ್ಕೆ ಬಂದಿದ್ದ?!

● **ಕೃಷ್ಣಮೂರ್ತಿ ಕೆ.ಕೆ., ಗುಬ್ಬಿ**
ಭಟ್ರೇ, ಮಲ್ಲಿಕಾರ್ಜುನ ಖರ್ಗೆ ಸದಾ ಕನಸಿನಲ್ಲಿ ಬಂದ್ರೆ ಏನರ್ಥ?
– ಗಂಟಲು ಕೆರೆತ ಬಾಧಿಸುತ್ತಿದೆ ಎಂದರ್ಥ!

● **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ನೂರಾರು ದೇಶ ಸುತ್ತಿದ ಬಳಿಕ ನಿಮ್ಮ ಊರೇ ಚೆಂದ ಅಂತ ಅನಿಸುತ್ತಿದೆಯಾ?
– ಅದಕ್ಕೂ ಮುನ್ನವೇ ಹಾಗೆ ಅನಿಸುತ್ತಿತ್ತು!

● **ಹರಿ ಓಂ ಶಾಸ್ತ್ರೀ, ಶಂಕರಪುರ**
ಭಟ್ರೇ, ಮೊಯಿಲಿ ಗದ್ಯ ರಚನೆ ಹಿನ್ನೆಲೆಯಲ್ಲಿ ನೆನಪಾಗುವ ನುಡಿಗಟ್ಟು ಯಾವುದು?
– ಗದ್ಯಂ ವದ್ಯಂ ಪದ್ಯಂ ಹೃದ್ಯಂ!

● **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಅಡುಗೆಮನೆ ಬಿಟ್ಟು ಹೊರಗೇ ಬರದ ಅಮ್ಮ ಇಷ್ಟವಾದ ಗುಂಟೂರು ಹುಡುಗೀನ ಬೇಡ ಅಂತಾರಲ್ಲ?
– ಹಾಗಾದ್ರೆ, ಬ್ಯಾಡಗಿ ಹುಡುಗಿ ನೋಡಬೇಕಿತ್ತು!

● **ಉಮೇಶ್ ಎಂ. ಸಿರಾ, ರಾಮನಗರ**
ಭಟ್ರೇ, ಬಾಂಬ್ ಪತ್ತೆಹಚ್ಚಲು ಪೊಲೀಸರಿಗಿಂತ ಯಾವುದು ಪರಿಣಾಮಕಾರಿ?
– ಸಿಸಿಟಿವಿ!

● **ಗೋವರ್ಧನ ಪಟಗಾರ, ಹೊನ್ನಾವರ**
ಭಟ್ರೇ, ನನ್ನ ಕ್ರಶ್ ವ್ಯಕ್ತಪಡಿಸೋದು ಹೇಗೆ?
– ಅದನ್ನು ಇನ್ನಾದರೂ ವ್ಯಕ್ತಪಡಿಸದಿದ್ದರೆ ಕೃಶನಾಗ್ತೀಯ!

● **ವೀರೇಶ ಪಾಟೀಲ, ಬಾಗಲಕೋಟೆ**
ಭಟ್ರೇ, ನನ್ನನ್ನು ಬಚ್ಚ ಅಂತ ಬೈತಾಳಲ್ಲ?
– ಆ 'ಬೈಗುಳ'ದ ಮುಂದೆ 'ನ್' ಅಂತ ಸೇರಿಸು ಅಂತ ಹೇಳಬೇಕಿತ್ತು!

● **ರಂಗನಾಥ ಬೋರವಿ, (ಇಮೇಲ್ ಮೂಲಕ)**
ಭಟ್ರೇ, ಜನ ಚೇಂಜ್ ಬಯಸ್ತಾರೆ ಅಂತ ನಿಮಗೆ ಅನಿಸುತ್ತಾ?
– ದರ್ಶನ್ ಮರ್ಡರ್ ಮಾಡಿದ್ದರಲ್ಲಿ ಏನು ತಪ್ಪಿದೆ ಅನ್ನೋ ಮಾತನ್ನು ಕೇಳಿದ ನಂತರವೂ ಈ ಪ್ರಶ್ನೆಯಾ?!

ಕಾಂತಾವರದ ಸಾಹಿತ್ಯಪ್ರೇಮಿಗೆ ಎಂಬತ್ತು!

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ಹಳ್ಳಿಯಲ್ಲಿದ್ದುಕೊಂಡು ಸಾಹಿತ್ಯ ಸೇವೆ ಮಾಡಲು ಸಾಧ್ಯವೇ? ವಾಚನಾಲಯ ಮತ್ತು ಇತರ ಸೌಲಭ್ಯಗಳು, ಪ್ರಭುತ್ವದ ಪ್ರೋತ್ಸಾಹ, ಜನಬೆಂಬಲ ಇರುವ ನಗರ ಮತ್ತು ಪಟ್ಟಣಗಳಲ್ಲಿ (ಉದಾ: ಮೈಸೂರು) ಜನರನ್ನು ಒಗ್ಗೂಡಿಸಿ, ಅವರಲ್ಲಿ ಸಾಹಿತ್ಯಾಭಿರುಚಿಯನ್ನು ಬೆಳೆಸುವುದು ಸುಲಭ; ರಸ್ತೆಯೇ ಸರಿಯಾಗಿ ಇಲ್ಲದ, ವಿದ್ಯುತ್ ಸಂಪರ್ಕದ ಕೊರತೆ ಇರುವಂಥ, ಕಾಡಿನ ನಡುವೆ ಇರುವ ಜನವಸತಿಯಲ್ಲಿ ಬೇರು ಬಿಟ್ಟು, ಸ್ಥಳೀಯರನ್ನು ಒಳಗೊಂಡು, ಅವರಲ್ಲಿ ಸಾಹಿತ್ಯ ಪ್ರೇಮವನ್ನು ಬೆಳೆಸುವುದರ ಜತೆಯಲ್ಲೇ, ತಾವೂ ಸಾಹಿತ್ಯದಲ್ಲಿ ಪರಿಶ್ರಮ ಹಾಕುವುದು ನಿಜಕ್ಕೂ ಕಷ್ಟ ಅಲ್ಲವೇ? ಎಂಬತ್ತು ವರ್ಷ ಪೂರೈಸಿದ, ಈಗಲೂ ಕಾದಂಬರಿ ರಚನೆಯಲ್ಲಿ ತೊಡಗಿಕೊಂಡಿರುವ ಈ ಸಾಹಿತ್ಯ ಪ್ರೇಮಿ, ಸಾಹಿತ್ಯ ಪರಿಚಾರಕ, ಕಾದಂಬರಿಕಾರ ಮತ್ತು ಕವಿಯ ಬದುಕನ್ನು ಅವಲೋಕಿಸಿದರೆ ಬೆರಗು ಮೂಡುತ್ತದೆ; ಕುಗ್ರಾಮದಲ್ಲಿದ್ದರೂ ಸಾಹಿತ್ಯಸೇವೆ ಮಾಡಲು ಸಾಧ್ಯ ಎಂಬುದನ್ನು ಇವರು ತೋರಿಸಿಕೊಟ್ಟಿದ್ದಾರೆ.

ದಿನಾಂಕ ನವೆಂಬರ್ 1, 1965. ಮುಖ್ಯ ರಸ್ತೆಯಿಂದ 4 ಕಿ.ಮೀ. ಒಳಗಿರುವ, ದೊಡ್ಡ ವಾಹನಗಳು ತಲುಪಲಾಗದ, ಕಾಂತಾವರ ಎಂಬ ಕುಗ್ರಾಮಕ್ಕೆ ಯುವ ಆಯುರ್ವೇದ ವೈದ್ಯರೊಬ್ಬರು ಬಂದರು. ಸುತ್ತಲೂ ಕಾಡು, ನಡುವೆ ಕಾಲುಹಾದಿ, ಅಲ್ಲಲ್ಲಿ ಗದ್ದೆ ಬಯಲುಗಳು. ಅಲ್ಲಿದ್ದ ಪುಟ್ಟ ಆಯುರ್ವೇದ ಆಸ್ಪತ್ರೆಗೆ ಅರೆಕಾಲಿಕ ವೈದ್ಯಾಧಿಕಾರಿಯಾಗಿ ನಿಯುಕ್ತಗೊಂಡ ಆ ವೈದ್ಯರು ಅಲ್ಲಿಗೆ ಬಂದಾಗ, ಸೂಕ್ತ ವಸತಿಗಾಗಿ ಹುಡುಕಬೇಕಾಯಿತು. ಬಾಡಿಗೆ ರೂಮು ಮಾಡಿಕೊಂಡು, ಅಲ್ಲೇ ಇದ್ದ ಪುಟಾಣಿ ಹಳ್ಳಿ-ಹೋಟೆಲ್‌ನಿಂದ ಊಟ ತರಿಸಿಕೊಂಡು ಜೀವನ ನಡೆಸಲು ಆರಂಭಿಸಿದ ಈ ಕಾಸರಗೋಡಿನ ತರುಣ, ಮುಂದೆ ಕಾಂತಾವರದಲ್ಲಿ ಒಂದು ಸಾಂಸ್ಕೃತಿಕ ಕ್ರಾಂತಿಯನ್ನೇ ಮಾಡಿದರು. ಅವರೇ ಡಾ. ನಾ.ಮೊಗಸಾಲೆ.

ಈಗ 80 ವರ್ಷ ದಾಟಿರುವ ಡಾ.ಮೊಗಸಾಲೆಯವರು, ಕಾಂತಾವರ ಎಂಬ ಪುಟ್ಟ ಹಳ್ಳಿಯಲ್ಲಿ ವಾಸಿಸಿ, ತಾವೂ ಸಾಹಿತ್ಯ ರಚನೆ ಮಾಡಿದರು ಮತ್ತು ಕಾಂತಾವರದಲ್ಲಿ ಅಪರೂಪದ ಸಾಹಿತ್ಯ ಸೇವೆ ನಡೆಸಿದರು. ಕಳೆದ 6 ದಶಕಗಳಲ್ಲಿ ಆ ಪುಟ್ಟ ಹಳ್ಳಿಯಲ್ಲಿ ನಡೆದ ನಾನಾ ವಿಧದ ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಾಡಿನ ಗಣ್ಯರು ಭಾಗವಹಿಸಿದ್ದಾರೆ! 'ಕಾಂತಾರ'ದ ನಡುವೆ ಇರುವ ಕಾಂತಾವರದಂಥ ಕುಗ್ರಾಮದಲ್ಲಿ ಇಷ್ಟು ದೊಡ್ಡ ಮಟ್ಟದ ಸಾಹಿತ್ಯ ಸೇವೆ ನಡೆಯುವುದನ್ನು ಕಂಡು ಬೆರಗಾಗಿದ್ದಾರೆ. ಅದರ ಹಿಂದಿನ ಶಕ್ತಿ ಡಾ.ಮೊಗಸಾಲೆ ಅವರು.

ಇಂದಿಗೂ ಸಣ್ಣ ಹಳ್ಳಿಯಾಗಿರುವ, ದಿನಕ್ಕೆ ಬೆರಳೆಣಿಕೆಯಷ್ಟು ಮಾತ್ರ ಬಸ್‌ಗಳು ಬರುತ್ತಿರುವ, ಕಾಫಿ-ತಿಂಡಿ ನೀಡುವ ಹೋಟೆಲ್ ಸೌಲಭ್ಯವೂ ಸರಿಯಾಗಿ ಇಲ್ಲದಿರುವ ಕಾಂತಾವರದಲ್ಲಿನ ಕನ್ನಡ ಸಂಘದ ಚಟುವಟಿಕೆಗಳ ಕುರಿತು ಹೇಳುವಾಗ, ಡಾ. ನಾ.ಮೊಗಸಾಲೆಯವರ ಸಾಧನೆ, ಛಲ, ಸಂಘಟನಾ ಶಕ್ತಿ, ನಿಷ್ಠೆ, ನಿಯತ್ತು, ಸಾಹಿತ್ಯಪ್ರೇಮಗಳ ಕುರಿತು ಹೇಳಲೇಬೇಕು. ಗದ್ದೆ, ಮರ, ಗಿಡ, ಗುಡ್ಡ, ಕಾಡುಪ್ರದೇಶದ ನಡುವೆ ಇರುವ ಈ ಪುಟ್ಟ ಹಳ್ಳಿಯು ಇಂದು ಕರ್ನಾಟಕದ ಸಾಹಿತ್ಯಕ ಭೂಪಟದಲ್ಲಿ ಪ್ರಮುಖವಾಗಿ ಗುರುತಿಸಿಕೊಂಡಿದೆಯೆಂದರೆ, ಅದಕ್ಕೆ ಅಲ್ಲಿರುವ ಕನ್ನಡ ಸಂಘವೇ ಕಾರಣ ಮತ್ತು ಅದನ್ನು ಕಟ್ಟಿ, ಬೆಳೆಸಿದ ಡಾ.ಮೊಗಸಾಲೆಯವರೇ ಕಾರಣ.

1965ರ ರಾಜ್ಯೋತ್ಸವ ದಿನದಂದು, ಉದ್ಯೋಗ ನಿಮಿತ್ತ ಕಾಂತಾವರಕ್ಕೆ ಕಾಲಿಟ್ಟ ಡಾ. ಮೊಗಸಾಲೆಯವರು, 1966ರಲ್ಲಿ ಅಲ್ಲೊಂದು 'ರೈತ ಯುವಕ ವೃಂದ' ಕಟ್ಟಿದರು. ಅದರ ಮುಖ್ಯ ಉದ್ದೇಶ ಸಾಹಿತ್ಯಕ-ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದೇ ಆಗಿತ್ತು. ಆದರೆ ಕೆಲವು ವರ್ಷಗಳಲ್ಲಿ ಆ ಯುವಕವೃಂದವು ಕಾರಣಾಂತರಗಳಿಂದಾಗಿ ಸಪ್ಪಗಾಯಿತು. ಡಾ.ಮೊಗಸಾಲೆಯುವರು ತಮ್ಮ ಪಾಡಿಗೆ ತಾವು ಕಾದಂಬರಿ, ಸಣ್ಣ ಕಥೆ, ಕವನಗಳನ್ನು ಬರೆಯುತ್ತಾ, ಹಳ್ಳಿಯ ಜನರಿಗೆ ಚಿಕಿತ್ಸೆ ನೀಡುತ್ತಾ ಇದ್ದರು. ಆದರೆ ಮನದಲ್ಲಿ ತುಡಿತ; ಸುತ್ತಮುತ್ತಲಿನ ಜನರಿಗೆ ಸಾಹಿತ್ಯದ ರುಚಿ ಹಿಡಿಸಬೇಕು, ಸಾಹಿತ್ಯ ಸೇವೆ ಮಾಡಬೇಕು ಎಂಬ ಅಭಿಲಾಷೆ. ಕಾಂತಾವರ ವ್ಯಾಪ್ತಿಯ ಬೇಲಾಡಿ ಮತ್ತು ಇತರ ನಾಲ್ಕು ಶಾಲೆಗಳ ಅಧ್ಯಾಪಕರ ಸ್ನೇಹ ಬೆಳೆಸಿ, ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಸಾಹಿತ್ಯಕ ಸಂಘ ಕಟ್ಟಬಹುದು

ಎಂದು ಡಾ.ಮೊಗಸಾಲೆಯವರು ನಿರ್ಧರಿಸಿದರು.

ಆಗ ಜನಿಸಿದ್ದೇ 'ಕಾಂತಾವರ ಕನ್ನಡ ಸಂಘ'. ಇದು ಉದ್ಘಾಟನೆಗೊಂಡದ್ದು 26.5.1976ರಂದು. ಉದ್ಘಾಟನೆಗೆ ಆಗಮಿಸಿದವರು ಹಿರಿಯ ಕವಿ ಎಸ್.ವಿ.ಪರಮೇಶ್ವರ ಭಟ್. ಕನ್ನಡ ಸಂಘವನ್ನು ಆರಂಭಿಸಿದಾಗ, ಜನರನ್ನು ಒಳಗೊಳ್ಳುವ ಅಧಿಕೃತ ಮಾರ್ಗವು ಡಾ.ಮೊಗಸಾಲೆಯವರಿಗೆ ದೊರಕಿತು. ಸುತ್ತಲಿನ ಸಾಹಿತ್ಯಾಸಕ್ತರನ್ನು, ಗಣ್ಯರನ್ನು, ಯುವಕರನ್ನು ಹುರಿದುಂಬಿಸಿ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸತೊಡಗಿದರು. ಕಾಂತಾವರದಲ್ಲಿ ವರ್ಷಕ್ಕೆ ಒಂದೆರಡು ದೊಡ್ಡ ಮಟ್ಟದ ಕಾರ್ಯಕ್ರಮಗಳು ನಡೆಯತೊಡಗಿದಾಗ, ಕರ್ನಾಟಕದವರು ಕಾಂತಾವರದತ್ತ ಮುಖ ಮಾಡಿದರು. ಅಲ್ಲಿ ನಡೆಯುವ ಕಾರ್ಯಕ್ರಮಗಳಿಗೆ, ಕನ್ನಡದ ಎಲ್ಲಾ ಪ್ರಮುಖ ಸಾಹಿತಿಗಳನ್ನು, ಕಲಾವಿದರನ್ನು ಆಹ್ವಾನಿಸಿ, ಆ ಹಳ್ಳಿಯಲ್ಲಿ ನಡೆದ ಸಮಾರಂಭಗಳಲ್ಲಿ ಭಾಗವಹಿಸುವಂತೆ ಮಾಡಿದ ಹಿರಿಮೆ ಈ ಸಂಘಕ್ಕೆ ಇದೆ.

ಮೊದಲಿಗೆ ಕನ್ನಡ ಸಂಘಕ್ಕೆ ಸ್ವಂತ ಕಟ್ಟಡವಿರಲಿಲ್ಲ, ಸನಿಹದ ಬೇಲಾಡಿಯ ಶಾಲೆಯಲ್ಲಿ ಸಂಘದ ಚಟುವಟಿಕೆಗಳು ಆರಂಭಗೊಂಡವು. ಅಲ್ಲಿ ಅಧ್ಯಾಪಕರಾಗಿದ್ದ, ಮುಂದೆ ರಾಷ್ಟ್ರಪ್ರಶಸ್ತಿ ವಿಜೇತರೂ ಆದ ವಿಠಲ ಬೇಲಾಡಿಯವರೂ ಆರಂಭಿಕ ಸದಸ್ಯರಲ್ಲಿ ಒಬ್ಬರು. ಇಂದಿಗೂ ಅವರು ಕನ್ನಡ ಸಂಘಕ್ಕೆ ತಮ್ಮ ಸೇವೆಯನ್ನು ಮುಂದುವರಿಸಿದ್ದಾರೆ. ಪ್ರತಿ ತಿಂಗಳು ಉಪನ್ಯಾಸ, ಹಿರಿಯ ಸಾಹಿತಿಗಳನ್ನು ಆಹ್ವಾನಿಸಿ ಮಾತನಾಡಿಸುವುದು, ಇತರ ಸಾಂಸ್ಕೃತಿಕ ಚಟುವಟಿಕೆಗಳು ಆರಂಭಗೊಂಡವು. ಡಾ.ಮೊಗಸಾಲೆಯವರು ಕನ್ನಡ ಸಂಘದ ಚಟುವಟಿಕೆಗಳನ್ನು ರೂಪಿಸುವಲ್ಲಿ, ಅದಕ್ಕೆ ಅಗತ್ಯವಿರುವ ಸಂಪನ್ಮೂಲಗಳನ್ನು ಸಂಗ್ರಹಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇದರ ನಡುವೆಯೂ ಅವರ ಸಾಹಿತ್ಯ ರಚನೆಯು ನಿರಂತರವಾಗಿ ಮುಂದುವರಿಯಿತು. ಹಲವು ಪ್ರಮುಖ ಕಾದಂಬರಿ, ಕವನಗಳನ್ನು ರಚಿಸಿದರು. ಸಣ್ಣ ಕಥೆಗಳನ್ನು ಬರೆದರು. ಕನ್ನಡ ಸಾಹಿತ್ಯದ ಹಿರಿಮೆಯನ್ನು ವೈಯಕ್ತಿಕವಾಗಿಯೂ ಹೆಚ್ಚಿಸಿದರು.

ಜತೆಯಲ್ಲೇ, ಕಾಂತಾವರ ಕನ್ನಡ ಸಂಘದ ಸಾರಥ್ಯ ಡಾ.ಮೊಗಸಾಲೆಯವರದ್ದು. ಕನ್ನಡ ಸಂಘವು ಮುಖ್ಯವಾಗಿ ಸಾಹಿತ್ಯಕ್ಕೆ, ಜತೆಯಲ್ಲೇ ಕಲೆ ಮತ್ತು ಸಂಸ್ಕೃತಿಗೆ ತನ್ನನ್ನು ಮೀಸಲಿಟ್ಟುಕೊಂಡಿತು. 1979ರಲ್ಲಿ ಕನ್ನಡ ಸಂಘ ಆರಂಭಿಸಿದ 'ಮುದ್ದಣ ಸಾಹಿತ್ಯ ಪ್ರಶಸ್ತಿ'ಯು ಇಂದಿಗೂ ತನ್ನ ಅನನ್ಯತೆಯನ್ನು ಕಾಪಾಡಿಕೊಂಡು ಬಂದಿದೆ. ಕವನಗಳ ಹಸ್ತಪ್ರತಿಗಳನ್ನು ಆಹ್ವಾನಿಸಿ, ಉತ್ತಮ ಕವನಸಂಕಲನಗಳಿಗೆ ಪ್ರಶಸ್ತಿ ನೀಡುವ ಆ ಪ್ರಕ್ರಿಯೆ ವಿಶಿಷ್ಟ. ಈ ಕಾವ್ಯ ಪ್ರಶಸ್ತಿಯ ಆಯ್ಕೆ ಪ್ರಕ್ರಿಯೆ, ಅದರಲ್ಲಿ ಕಾಣುವ ನಿಷ್ಪಕ್ಷಪಾತ ನಿಲುವು, ಗುಣಮಟ್ಟ ಎಲ್ಲವನ್ನೂ ಕಂಡ ಹಾ.ಮಾ.ನಾಯಕರು, 'ಮುದ್ದಣ ಕಾವ್ಯ ಪ್ರಶಸ್ತಿಯು ಕನ್ನಡ ಕಾವ್ಯ ಜಗತ್ತಿಗೆ ಒಂದು ರಹದಾರಿ' ಎಂಬರ್ಥದ ಮಾತುಗಳನ್ನು ಹೇಳಿರುವುದು ಅರ್ಥಪೂರ್ಣ.

ಈ ನಡುವೆ ಕರ್ನಾಟಕದ ಮೊದಲ ಖಾಸಗಿ ಸಾಹಿತ್ಯಕ ಪ್ರಶಸ್ತಿ ಎನಿಸಿರುವ 'ವರ್ಧಮಾನ ಪ್ರಶಸ್ತಿ' ಮತ್ತು 'ವರ್ಧಮಾನ ಉದಯೋನ್ಮುಖ ಪ್ರಶಸ್ತಿ'ಯು 1978ರಲ್ಲಿ ಕಾಂತಾವರಕ್ಕೆ ಹತ್ತಿರದ ಮೂಡಬಿದರೆಯಲ್ಲಿ ಆರಂಭಗೊಂಡಿತು ಮತ್ತು ಅದನ್ನು ಸ್ಥಾಪಿಸುವಲ್ಲಿ ಡಾ.ಮೊಗಸಾಲೆಯವರ ಕೊಡುಗೆ ಹಿರಿದು. ಇತ್ತ ಕನ್ನಡ ಸಂಘದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂದುವರಿದವು. ಸಾಹಿತ್ಯ ಕಾರ್ಯಕ್ರಮದ ಜತೆಯಲ್ಲೇ, ಜನಪದ ಕಲೆ, ನಾಟಕ, ತಾಳಮದ್ದಲೆ ಮತ್ತು ಯಕ್ಷಗಾನದಂಥ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಇನ್ನೊಂದು ವಿಶೇಷ. ಪ್ರತಿ ತಿಂಗಳೂ ಕಾರ್ಯಕ್ರಮ ಮತ್ತು ಪ್ರತಿ ವರ್ಷ ರಾಜ್ಯೋತ್ಸವದ ದಿನದಂದು 'ಕಾಂತಾವರ ಉತ್ಸವ'ಗಳು ಆಯೋಜನೆಗೊಂಡು, ನಾಡಿನ ಹಿರಿಯ ಸಾಹಿತಿಗಳು, ಗಣ್ಯರು ಪಾಲ್ಗೊಂಡರು.

ಇವೆಲ್ಲಾ ಕಾರ್ಯಕ್ರಮಗಳಿಗೆ ಕಾಂತಾವರ, ಮೂಡಬಿದರೆ, ಕಾರ್ಕಳ ಮತ್ತು ಇತರ ಸ್ಥಳಗಳ ಸಹೃದಯಿಗಳು ಸಹಕಾರ ನೀಡಿರುವುದು ಸಹ ವಿಶೇಷ. ಜತೆಗೆ ಸರಕಾರದ ಕೆಲವು ಇಲಾಖೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರ್ಕಳ ಮತ್ತು ಮೂಡಬಿದರೆಯ ಸ್ಥಳೀಯ ಘಟಕಗಳು ಕಾಲದಿಂದ ಕಾಲಕ್ಕೆ, ಸಂದರ್ಭಾನುಸಾರ ಕೊಡುಗೆಯನ್ನು ನೀಡಿವೆ.

ಇಸವಿ 2001. ಕನ್ನಡ ಸಂಘಕ್ಕೆ 25ರ ಸಂಭ್ರಮ. ಸಂಘಕ್ಕೆ ಒಂದು ಕಟ್ಟಡ ಬೇಕು ಎಂಬ ಅಭಿಪ್ರಾಯ ಮೂಡಿ, ಆ ನಿಟ್ಟಿನಲ್ಲಿ ಡಾ.ಮೊಗಸಾಲೆಯವರು ಕಾರ್ಯಪ್ರವೃತ್ತರಾದರು. ಕಾಂತಾವರದವರೇ ಆದ, ಕರ್ನಾಟಕ ಏಕೀಕರಣದ ಹೋರಾಟದಲ್ಲಿ ಪಾಲ್ಗೊಂಡಿದ್ದ ಜಿನರಾಜ ಹೆಗ್ಡೆಯವರ ಜನ್ಮಶತಮಾನೋತ್ಸವದ ವರ್ಷದಲ್ಲಿ, ಅವರ ನೆನಪನ್ನು ಹೊತ್ತು ಕಾಂತಾವರದ ಮುಖ್ಯ ರಸ್ತೆಯಲ್ಲಿ 'ಕನ್ನಡ ಭವನ' ತಲೆ ಎತ್ತಿತು. ಕರ್ನಾಟಕ ಸರಕಾರವು 12 ಲಕ್ಷ ರು. ಕೊಡುಗೆ ನೀಡಿದರೆ, ಸುಮಾರು 13 ಲಕ್ಷ ರು. ಕೊಡುಗೆಯನ್ನು ದೇಣಿಗೆ ರೂಪದಲ್ಲಿ ಸಂಗ್ರಹಿಸಲಾಯಿತು. ಸಂಘದ ಪದಾಧಿಕಾರಿಗಳು, ಸದಸ್ಯರು ಕೈಜೋಡಿಸಿದರು. ನೇತೃತ್ವ ಡಾ.ಮೊಗಸಾಲೆಯವರದು. 2 ಚಾವಡಿ, ಸಭಾಂಗಣ, ಕಚೇರಿಗೆ ಅಗತ್ಯವಿರುವ ಕೊಠಡಿಗಳು, ಮೂರು ಅತಿಥಿ ಕೋಣೆಗಳು ಮೊದಲಾದ ಸೌಲಭ್ಯಗಳನ್ನು ಹೊಂದಿರುವ ಈ ಹಂಚಿನ ಮಾಡಿನ ಸುಂದರ ಕಟ್ಟಡವು, ಸಂಘದ ಚಟುವಟಿಕೆಗಳಿಗೆ ಶಾಶ್ವತ ನೆಲೆಯಾಯಿತು. ಪ್ರತಿ ತಿಂಗಳ ಉಪನ್ಯಾಸಗಳು ಇಲ್ಲೇ ನಡೆಯತೊಡಗಿದವು. 2001ರಲ್ಲಿ ನಡೆದ ರಾಜ್ಯಮಟ್ಟದ ಸಮ್ಮೇಳನವು ಅಭೂತಪೂರ್ವ ಎನಿಸಿತು. ಸಂಘಕ್ಕೆ ಒಂದು ಸ್ವಂತ ಕಟ್ಟಡ ಇದ್ದರೆ, ಹೇಗೆ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ದೊರಕುತ್ತದೆ ಎಂಬುದಕ್ಕೆ, ಕಾಂತಾವರ ಕನ್ನಡ ಸಂಘದ ಕಟ್ಟಡವೇ ಒಂದು ಉದಾಹರಣೆ. ಕಾಡಿನ ನಡುವೆ ಇರುವ ಕಾಂತಾವರದಲ್ಲಿ ನೂರಾರು ಕಾರ್ಯಕ್ರಮಗಳು ಇದುವರೆಗೆ ನಡೆದಿವೆ ಎಂದರೆ, ಅದಕ್ಕೆ ಕನ್ನಡ ಸಂಘದ ಕಟ್ಟಡದ ಸೌಲಭ್ಯ ಮಾತ್ರವಲ್ಲದೆ, ಅದರ ಹಿಂದಿನ ಪ್ರೇರಕ ಶಕ್ತಿಯಾದ ಡಾ. ಮೊಗಸಾಲೆಯವರೂ ಕಾರಣ.

ಡಾ.ಮೊಗಸಾಲೆಯವರ ಪ್ರಕಟಿತ ಸಾಹಿತ್ಯದಲ್ಲಿ 13 ಕವನ ಸಂಕಲನಗಳು, 20ಕ್ಕೂ ಹೆಚ್ಚು ಕಾದಂಬರಿಗಳು ಸೇರಿವೆ. ಇವರಿಗೆ ಸಂದ ಪ್ರಶಸ್ತಿಗಳು, ಗೌರವಗಳು ಸಹ ಹಲವು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಡಿ.ಎಸ್.ಕರ್ಕಿ ಕಾವ್ಯ ಪ್ರಶಸ್ತಿ, ಶಿವರಾಮ ಕಾರಂತ ಪ್ರತಿಷ್ಠಾನದ ಪ್ರಶಸ್ತಿ, ಎಂ.ವಿ.ಸೀ. ಪ್ರಶಸ್ತಿ, ನಿರಂಜನ ಪ್ರಶಸ್ತಿ, ಸಿದ್ದವನಹಳ್ಳಿ ಕೃಷ್ಣ ಶರ್ಮ ಪ್ರಶಸ್ತಿ- ಈ ರೀತಿ ಪಟ್ಟಿ ಮಾಡುತ್ತಾ ಹೋದರೆ, ಪ್ರಮುಖ ಪ್ರಶಸ್ತಿಗಳ ಸಂಖ್ಯೆ 40ನ್ನು ತಲುಪಬಹುದು. ಪ್ರಶಸ್ತಿಗಳಿಗಿಂತ ಮಿಗಿಲಾಗಿ, ಡಾ.ಮೊಗಸಾಲೆಯವರ ಕಾದಂಬರಿಗಳು, ಕನ್ನಡದ ಜನರ ಮನ ಗೆದ್ದಿವೆ, ಅವರು ರಚಿಸಿದ ಕಾವ್ಯವು ಜನರನ್ನು ತಲುಪಿದೆ, ಅವರು ಕಟ್ಟಿದ 'ಕಾಂತಾವರ ಕನ್ನಡ ಸಂಘ'ವು ಅಪರೂಪದ ಸಾಹಿತ್ಯ ಸೇವೆ ನಡೆಸಿದೆ.

ಡಾ.ಮೊಗಸಾಲೆಯವರ ಕುರಿತಾಗಿ ಬಂದಿರುವ ಗ್ರಂಥಗಳ ಸಂಖ್ಯೆಯೇ ಬೆರಗು ಹುಟ್ಟಿಸುವಂಥದ್ದು. ಇವರಿಗೆ ಮೂರು ಅಭಿನಂದನಾ ಗ್ರಂಥಗಳು ಸಮರ್ಪಣೆಗೊಂಡಿವೆ. ಡಾ.ಮೊಗಸಾಲೆಯವರ ನಾಲ್ಕು ಜೀವನ ಚರಿತ್ರೆಗಳೂ ಪ್ರಕಟಗೊಂಡಿವೆ. ಇವರ ಕೃತಿಗಳ ಕುರಿತು ಹತ್ತಕ್ಕೂ ಹೆಚ್ಚು ವಿಮರ್ಶಾ ಗ್ರಂಥಗಳು ಪ್ರಕಟಗೊಂಡಿವೆ. ಇವರ ಕೃತಿಗಳನ್ನು ಆಧರಿಸಿ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪ್ರಬಂಧಗಳು ಮಂಡಿಸಲ್ಪಟ್ಟಿವೆ.

27.8.1944ರಂದು ಕಾಸರಗೋಡಿನ ಹಳ್ಳಿಯೊಂದರಲ್ಲಿ ಜನಿಸಿದ ಡಾ.ಮೊಗಸಾಲೆಯವರು, ಕಳೆದ ಆರು ದಶಕಗಳಿಂದ ಕಾರ್ಕಳದ ಬಳಿಯ ಕಾಂತಾವರದಲ್ಲಿ ನೆಲೆ ನಿಂತಿದ್ದಾರೆ; ಎಂಬತ್ತು ವರ್ಷದ ಈ ಇಳಿವಯಸ್ಸಿನಲ್ಲೂ ಸತತವಾಗಿ ಬರವಣಿಗೆ ಮುಂದುವರಿಸಿದ್ದಾರೆ! ಕಳೆದ ನಾಲ್ಕಾರು ವರ್ಷಗಳಿಂದ ವರ್ಷಕ್ಕೆ ಒಂದು ಅಥವಾ ಎರಡು ಕೃತಿಗಳನ್ನು ರಚಿಸಿದ್ದಾರೆ. 2024ರಲ್ಲಿ ಅವರು ರಚಿಸಿದ ಕಾದಂಬರಿ, ಕಥಾ ಪ್ರಸಂಗಗಳ ಸಂಕಲನ ಪ್ರಕಟಗೊಂಡಿದೆ. ಈಚಿನ ದಿನಗಳಲ್ಲಿ ಒಂದು ಕಾದಂಬರಿಯನ್ನು ರಚಿಸಿದ್ದು, ಅದನ್ನು ಪರಿಷ್ಕರಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ ಮತ್ತು ಈ ಕಾದಂಬರಿಯು ಮುಂದಿನ ವರ್ಷದಲ್ಲಿ ಬೆಳಕು ಕಾಣುವ ನಿರೀಕ್ಷೆಯಲ್ಲಿದೆ. ಬರವಣಿಗೆ, ಸಾಹಿತ್ಯ ಚಿಂತನೆ, ಕಾಂತಾವರ ಕನ್ನಡ ಸಂಘದ ಮೂಲಕ ಸಂಘಟನೆ ಮತ್ತು ಸಾಹಿತ್ಯ ಪರಿಚಾರಿಕೆಯನ್ನು ಮುಂದುವರಿಸಿಕೊಂಡು ಬರುತ್ತಿರುವ ಡಾ.ಮೊಗಸಾಲೆಯವರ ಚೇತನಕ್ಕೆ ನಮೋನಮಃ. ಅವರ ಲೇಖನಿಯಿಂದ ಇನ್ನಷ್ಟು ಕಾದಂಬರಿ ಮತ್ತು ಕವನಗಳನ್ನು ನಾಡು ನಿರೀಕ್ಷಿಸುತ್ತಿದೆ. ಉದಾತ್ತ ಮತ್ತು ಆದರ್ಶ ಎನ್ನಬಹುದಾದ ಸಾಹಿತ್ಯಾಸಕ್ತಿ ಮತ್ತು ಜೀವನಾಸಕ್ತಿ ಎಂದರೆ ಇದೇ ಅಲ್ಲವೇ?

ಸುದ್ದಿಗಿಷ್ಟು ಒಗ್ಗರಣೆ
ಯಗಟಿ ರಘು ನಾಡಿಗ್

● **ಚಂದನವನದಲ್ಲಿ ಮತ್ತೆ 'ಮೀ ಟೂ' ಸದ್ದು: ಸುದ್ದಿ**
– ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎನ್ನಲಾದ ಚಂದನವನದ ಕೆಲ ಚಪಲ ಚೆನ್ನಿಗರಾಯರು ಈ ಸುದ್ದಿಯನ್ನು ಓದಿ ಭಯಗೊಂಡು, ''... ನೀ 'ಮೀಟೂ'ದ ನೆನಪೆಲ್ಲವೂ ಎದೆ ತುಂಬಿ ಝಲ್ಲೆನಿಸಿದೇ...'' ಎಂದು ಶೋಕಗೀತೆಯನ್ನು ಗುನುಗಿಕೊಳ್ಳುತ್ತಿದ್ದಾರಂತೆ!

● **ಪಕ್ಷಾಂತರ ಮಾಡುವ ಶಾಸಕರಿಗೆ ಪಿಂಚಣಿ ರದ್ದು ಮಾಡುವ ವಿಧೇಯಕವನ್ನು ಅಂಗೀಕರಿಸಿದ ಹಿಮಾಚಲ ಪ್ರದೇಶ ವಿಧಾನಸಭೆ: ಸುದ್ದಿ**
– ದುಡ್ಡಿನ ಭಂಡಾರವನ್ನೇ ಗೆಬರಿ ಗೋಣಿಚೀಲಗಳಲ್ಲಿ ತುಂಬಿಕೊಂಡೋರ ಕೈಯಲ್ಲಿದ್ದ ಕಳ್ಳೇಕಾಯಿನ ಮಾತ್ರ ಕಿತ್ಕೊಂಡ ಹಾಗಾಯ್ತು!!

● **ಮತ್ತೊಂದು ನಡಿಗೆಗೆ ಬಿಜೆಪಿ ಸಜ್ಜು; ಯತ್ನಾಳ್ ಆ್ಯಂಡ್ ಟೀಮ್‌ಗೆ ಪಾದಯಾತ್ರೆ ಹೊಣೆ ಒಪ್ಪಿಸಿದ ನಾಯಕರು: ಸುದ್ದಿ**
– 'ನಿಮ್ಮ ನಡಿಗೆ, ಯಾರ ಕಡೆಗೆ? ಗದ್ದುಗೆಯೆಡೆಗೋ, ಜನಹಿತದ ಕಡೆಗೋ?' ಎಂದು ಬಡ ಬೋರೇಗೌಡ ಹೊಲದಲ್ಲಿ ಗುನುಗಿಕೊಂಡಿದ್ದಿನ್ನೂ ಸುದ್ದಿಯಾಗಿಲ್ಲ!

● **ಬಿಜೆಪಿಯ ಪಾದಯಾತ್ರೆ ಯಾವ ರೀತಿಯಲ್ಲಿ, ಯಾವ ಸಮಯದಲ್ಲಿ ನಡೆಯಬೇಕು ಎನ್ನುವ ಬಗ್ಗೆ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ತೀರ್ಮಾನಿಸಲಿದ್ದಾರೆ. ಈ ಪಾದಯಾತ್ರೆ ರಾಜ್ಯದ ಎಲ್ಲಾ ನಾಯಕರ ನೇತೃತ್ವದಲ್ಲಿಯೇ ನಡೆಯಲಿದೆ: ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ**
– ''ಬೊಂಬೆಯಾಟವಯ್ಯಾ, ಇದು ಬೊಂಬೆಯಾಟವಯ್ಯಾ... 'ಅವ್ರು' ಸೂತ್ರಧಾರಿ, 'ಇವ್ರು' ಪಾತ್ರಧಾರಿ, ದಡವ ಸೇರಿಸಯ್ಯಾ...''

● **ಶುಂಠಿ, ಕಾಳುಮೆಣಸಿನ ಬೆಲೆ ಕುಸಿತ: ಸುದ್ದಿ**
– ಹಾಗೆಂದ ಮಾತ್ರಕ್ಕೆ ಇವೆರಡನ್ನೂ ಬಾಯಿತುಂಬಾ ಹಾಕ್ಕೊಂಡು ಜಗಿದು ಚಪ್ಪರಿಸೋಕ್ಕೆ ಆಗಲ್ಲ ನೋಡಿ, ಎಂಥ ದುರದೃಷ್ಟ!!

● **ಒಲಿಂಪಿಯನ್ ಕ್ರೀಡಾತಾರೆಗಳಾದ ವಿನೇಶ್ ಫೋಗಟ್ ಮತ್ತು ಭಜರಂಗ್ ಪುನಿಯಾ ಅವರು ಹರಿಯಾಣ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಾಗುವ ಸಾಧ್ಯತೆಯಿದೆ: ಸುದ್ದಿ**
– ಒಟ್ಟಿನಲ್ಲಿ, ಎದುರಾಳಿಗಳೊಂದಿಗೆ 'ಕುಸ್ತಿ ಆಡೋದು' ತಪ್ಪಿದ್ದಲ್ಲ ಅನ್ನಿ!

● **ಸಮಾಜವಾದಿ ಪಕ್ಷದ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರ ಸೊಸೆ ಅಪರ್ಣಾ ಯಾದವ್ ಅವರನ್ನು ಉತ್ತರ ಪ್ರದೇಶ ಮಹಿಳಾ ಆಯೋಗದ ಉಪಾಧ್ಯಕ್ಷೆಯನ್ನಾಗಿ ನೇಮಿಸಿದ ಯೋಗಿ ಆದಿತ್ಯನಾಥ್ ಸರಕಾರ: ಸುದ್ದಿ**
– 'ಯೇ ಸಿರ್ಫ್ ಟೈಟಲ್‌ಕಾರ್ಡ್ ಹೈ... ಪಿಕ್ಚರ್ ಅಭೀ ಬಾಕಿ ಹೈ ಮೇರೇ ದೋಸ್ತ್' ಎಂದು ಕೇಸರಿಪಡೆಯ ಕಾರ್ಯಕರ್ತರೊಬ್ಬರು ಸಂಭ್ರಮಿಸಿದರಂತೆ!

● **ನಾಲ್ಕನೇ ಬಾರಿಯೂ ಮೋದಿಯೇ ಪ್ರಧಾನಿ; ಇನ್ನೆರಡು ತಿಂಗಳಲ್ಲಿ ರಾಜ್ಯ ಸರಕಾರ ಇರಲ್ಲ: ಸಂಸದ ಬಸವರಾಜ ಬೊಮ್ಮಾಯಿ ಭವಿಷ್ಯ**
– ಈ ಭವಿಷ್ಯವಾಣಿ ಕೇಳಿಸಿಕೊಂಡ 'ಬ್ರಹ್ಮಾಂಡ' ಗುರುಗಳು, 'ವೃತ್ತಿಪರ ರಾಜಕಾರಣಿಗಳೆಲ್ಲಾ ಹೀಗೆ ಭವಿಷ್ಯ ಹೇಳ್ತಾ ಕೂತ್ರೆ, ನಮ್ಮಂಥ ಜ್ಯೋತಿಷಿಗಳು ಮುಂಡಾ ಮೋಚ್ಕಂಡು ಕೂತ್ಕಬೇಕು, ಅಷ್ಟೇ' ಎಂದು ಶಾನೇ ಬೇಜಾರು ಮಾಡ್ಕೊಂಡ್ರಂತೆ!!



ಸ್ವರ್ಗಾರೋಹಣ ವಿವಾದದ ಒಂದು ಇಣುಕು ನೋಟ!

ನುಡಿಸ್ವರ್ಗ
ಜಿ. ಪ್ರತಾಪ್ ಕೊಡಂಚ
vveditoped@gmail.com

ತನ್ನ ಒಡಲಲ್ಲಿನ ಬಗೆಬಗೆಯ ರುಚಿಕರ ತಿಂಡಿ ಮತ್ತು ಅಡುಗೆಗಳಿಂದಾಗಿ ವಿಶ್ವದಾದ್ಯಂತ ಮನೆಮಾತಾಗಿರುವ ಉಡುಪಿ ಈಗ ಇನ್ನೊಮ್ಮೆ ಸುದ್ದಿಯ ಮುನ್ನೆಲೆಗೆ ಬಂದಿದೆ. ಕೃಷ್ಣಾಷ್ಟಮಿಯ ಚಿಣ್ಣರ ವೇಷವೋ, ಹುಲಿ ಕುಣಿತದ ಸ್ಪರ್ಧೆಯೋ, ಮೊಸರು ಕುಡಿಕೆ ಒಡೆಯುವ ವಿಶೇಷ ಸಂಭ್ರಮವೋ ಇದಕ್ಕೆ ಕಾರಣ ಎಂದುಕೊಂಡಿರಾ? ಅದಲ್ಲ. ಹಿಜಾಬ್ ಗಲಾಟೆ? ಛೇ! ಅದೂ ಅಲ್ಲ. ಧಾರಾಕಾರವಾಗಿ ಸುರಿದ ಮಳೆಯೂ ಅಲ್ಲ. ಈ ಸುದ್ದಿಗೆ ಕಾರಣವಾಗಿರುವುದು- 'ಸ್ವರ್ಗವೆನಗೆ ಬೇಡ, ನನಗೂ ಬೇಡ' ಎನ್ನುತ್ತಿರುವ (ಅ)ಸಹನಾಮಣಿಗಳ ಬೊಬ್ಬಿರಿತದ ಸ್ಪರ್ಧೆ! ಅದು ಈಗ ಉಡುಪಿಯಿಂದ ಶುರುವಾಗಿ ಕರ್ನಾಟಕದಾದ್ಯಂತ ಪಸರಿಸುವ ಲಕ್ಷಣ ತೋರುತ್ತಿದೆ.

ಸ್ವರ್ಗಪ್ರಾಪ್ತಿಯ ಗಮ್ಯವನ್ನು ಶತಾಯಗತಾಯ ತಲುಪಲೆಂದು ಕೊಲೆಗೂ ಸನ್ನದ್ಧರಾಗಿರುವವರು(!) ಇರುವ ಇಂದಿನ ಕಾಲಮಾನದಲ್ಲಿ, 'ಸ್ವರ್ಗ ಬೇಡ' ಎನ್ನುವ ಚಳವಳಿಯ ಹಿನ್ನೆಲೆ ಹುಡುಕಿ ಹೊರಟಾಗ ನನಗೆ ಸಿಕ್ಕಿದ್ದು- ಅಲ್ಲಲ್ಲಿನ ಕೆಲ ಮಾಧ್ಯಮಗಳು (ಭಾವಾರ್ಥ) ತಿರುಚಿ ಪ್ರಕಟಿಸಿದ ರೋಚಕ ಶೀರ್ಷಿಕೆಯ ಸುದ್ದಿ; 'ಸಂಸ್ಕೃತ ಭಾಷೆ ಗೊತ್ತಿಲ್ಲದಿದ್ದರೆ, ಸ್ವರ್ಗಕ್ಕೆ ಹೋಗಲು ಸಾಧ್ಯವಿಲ್ಲ' ಎಂಬ ಕೆಂಪಕ್ಷರದ ತಲೆಬರಹದ ಸುದ್ದಿ ಮತ್ತು ಅದರ ಫೋಟೋ, ಸಾಮಾಜಿಕ ಮಾಧ್ಯಮಗಳಲ್ಲಿ ಕಾಣಿಸಿಕೊಂಡ ಪರ-ವಿರೋಧದ ಅನಿಸಿಕೆಗಳ ಪ್ರವಾಹ. ಸಾಧ್ಯವೆನಿಸಿದಷ್ಟು ಒಳ್ಳೆಯ ಕೆಲಸ ಮಾಡಿ, ಸ್ವರ್ಗದಲ್ಲೊಂದು ಜಾಗ ಗಿಟ್ಟಿಸಿಕೊಳ್ಳಬೇಕೆಂಬ ಹಲವು ದಶಕಗಳ ಕನಸೊಂದು ಕ್ಷಣಾರ್ಧದಲ್ಲಿ ಈ ರೀತಿಯ ದುಃಖಾಂತ್ಯ ಕಾಣುತ್ತದೆಂದು ಊಹಿಸಿಯೇ ಇರದಿದ್ದ ನಾನು ಒಮ್ಮೆ ಬೆಚ್ಚಿ ಬೆವರಿದ್ದು ನಿಜ! ನನಗೂ ಸಂಸ್ಕೃತ ಬರೋದಿಲ್ಲ ಮತ್ತು ನನ್ನ ಹೆತ್ತವರೂ, ಹಿತೈಷಿಗಳೂ ನನಗಿನ್ನೂ ಈ ಅರಿವು ಮೂಡಿಸಲಿಲ್ಲವಲ್ಲ ಎಂಬ ಬೇಸರವೂ ಹಠಾತ್ತನೆ ಕಾಣಿಸಿಕೊಂಡಿದ್ದು ಸುಳ್ಳಲ್ಲ!

ಇದೆಂಥಾ ಗ್ರಹಚಾರವಾಯ್ತು ಎಂಬ ಗೊಂದಲದಲ್ಲೇ ಸುದ್ದಿಯ ಮೂಲ ಹುಡುಕಿ ಹೊರಟ ನನಗೆ ಸಿಕ್ಕಿದ್ದು, ಈ ಹೇಳಿಕೆಯನ್ನು ನೀಡಿದ್ದು ಉಡುಪಿಯ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥರು ಎಂಬ ಇನ್ನೊಂದು ಆಘಾತಕಾರಿ ಸುದ್ದಿ. ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಪಣತೊಟ್ಟು, ತಮ್ಮ ನಡುವಿನವರದ್ದೇ ವಿರೋಧವನ್ನು ಎದುರಿಸಿ, ವಿದೇಶಗಳಲ್ಲಿ ವಿರಳ ಸಂಖ್ಯೆಯ ಅನ್ಯಮತೀಯರಾಗಿ ಬದುಕು ಕಟ್ಟಿಕೊಂಡಿರುವ ನಮ್ಮಂಥವರಿಗೊಂದು ವೇದಿಕೆ ಕಲ್ಪಿಸಿ, ನಮ್ಮತನವನ್ನು ಉಳಿಸಿಕೊಳ್ಳಲು ಅವಕಾಶ ಮಾಡಿಕೊಟ್ಟ ಸುಗುಣೇಂದ್ರ ತೀರ್ಥರು ಹೀಗೆಂದಿರಲಿಕ್ಕಿಲ್ಲ ಎನಿಸಿದರೂ, ಮಂಗಳೂರು ಮೂಲದ ಪತ್ರಿಕೆಯೊಂದರ ಈ ತಲೆಬರಹ, ದೇಶವ್ಯಾಪಿ ಪ್ರಸಾರ ಕಾಣುತ್ತಿರುವ ಇಂಗ್ಲಿಷ್ ಪತ್ರಿಕೆಯೊಂದರ ಸುದ್ದಿ ಇದನ್ನು ಹೇಳುತ್ತಿರುವುದನ್ನು ನೋಡಿ ನನ್ನ ಬೆವರುವಿಕೆ ಹೆಚ್ಚಿತು. ಹೀಗೆ ಬೆವರುತ್ತಲೇ, ಆತ್ಮೀಯ ಮಾರ್ಗದರ್ಶಿಗಳೂ ಆಗಿರುವ ಅಮೆರಿಕದ ನ್ಯೂಜೆರ್ಸಿಯ ಪುತ್ತಿಗೆ ಮಠದ ಜವಾಬ್ದಾರಿಯುತ ಸ್ಥಾನದಲ್ಲಿರುವ ಹಿರಿಯ ಸ್ನೇಹಿತರೊಬ್ಬರನ್ನು ಸಂಪರ್ಕಿಸಿ, ಸ್ವಾಮೀಜಿಗಳ ಅಂದಿನ ಮಾತಿನ ಸಂಪೂರ್ಣ ವಿಡಿಯೋ ತುಣುಕನ್ನು ತರಿಸಿಕೊಂಡು 2-3 ಬಾರಿ ಕೇಳಿಸಿಕೊಂಡೆ. ತದನಂತರ, ಒಂದೆರಡು ಪತ್ರಿಕೆಗಳು ವ್ಯಕ್ತಪಡಿಸಿದ ಭಾವಾರ್ಥ, ಸಾಮಾಜಿಕ ಮಾಧ್ಯಮಗಳಲ್ಲಿ ನಮ್ಮವರೇ ಆರಂಭಿಸಿದ ವಾದ-ವಿವಾದ, 'ನನಗೂ ಸ್ವರ್ಗ ಬೇಡ' ಎಂಬ ಸ್ವರ್ಗ ನಿರಾಕರಣ ಚಳವಳಿ ಅರ್ಥಹೀನ ಎನಿಸಿದ್ದಂತೂ ನಿಜ.

ಇಷ್ಟಕ್ಕೂ, ಅದ್ಯಾವ ಸಂದರ್ಭ? ಸ್ವಾಮೀಜಿಗಳು ಅಲ್ಲಿ ಹೇಳಿದ್ದೇನು? ಎಂಬುದನ್ನು ಒಮ್ಮೆ ನೋಡೋಣ. ಶ್ರೀಕೃಷ್ಣ ಜನ್ಮಾಷ್ಟಮಿಯ ಸಂದರ್ಭದಲ್ಲಿ, ಒಂದು ತಿಂಗಳ ಕೃಷ್ಣ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ, ಪ್ರಸ್ತುತ ಪರ್ಯಾಯ ಜವಾಬ್ದಾರಿ ಹೊಂದಿರುವ ಪುತ್ತಿಗೆ ಶ್ರೀಪಾದರು ಸಂಸ್ಕೃತದಲ್ಲೇ ಮಾತನಾಡಿದ್ದರು. ಸಂಸ್ಕೃತದ ಪ್ರಾಚೀನತೆ, ಸರಳತೆ, ಅಗಾಧತೆಗಳನ್ನು ವಿವರಿಸುತ್ತಾ, 'ಎಲ್ಲ ಭಾಷೆಗಳ ಮೂಲ ಸಂಸ್ಕೃತ. ತುಳು ನಮ್ಮ ಪ್ರಾದೇಶಿಕ ಭಾಷೆ, ಕನ್ನಡ ನಮ್ಮ ರಾಜ್ಯದ ಭಾಷೆ, ಇಂಗ್ಲಿಷ್ ಅಂತಾರಾಷ್ಟ್ರೀಯ ಭಾಷೆ. ಹಾಗೆಯೇ ದೇವಭಾಷೆ ಎನಿಸಿಕೊಂಡಿರುವ ಸಂಸ್ಕೃತವು ದೇವಲೋಕದ ಭಾಷೆ' ಎನ್ನುವುದನ್ನು ಹೇಳುವ ಸಂದರ್ಭದಲ್ಲಿ, ಸಂಸ್ಕೃತವೆಂಬುದು ಸ್ವರ್ಗವೆನಿಸಿಕೊಂಡಿರುವ ದೇವಲೋಕಕ್ಕೆ ತೆರಳಲು ಅವಶ್ಯ ರಹದಾರಿ ಎನ್ನುವ ತಾತ್ಪರ್ಯದ ಉಪಮೆಗೆ ಉದಾಹರಿಸುತ್ತಾ, ಸಂಸ್ಕೃತವೆಂಬುದು ಸ್ವರ್ಗವನ್ನು ಪ್ರವೇಶಿಸಲು 'ವೀಸಾ' ಇದ್ದಂತೆ ಎಂದು ಹೇಳಿ, ಸಂಸ್ಕೃತದ ಕಲಿಕೆಗೆ ಪ್ರೇರೇಪಿಸುವ, ಲಘುಹಾಸ್ಯದ ಲೌಕಿಕ ಉದಾಹರಣೆಯನ್ನು ಬಳಸಿದ್ದರು. ಅವರ ಮಾತಿಗೆ ಸಭೆಯಲ್ಲಿದ್ದ ಶ್ರದ್ಧಾವಂತ ಜನರು, ವೇದಿಕೆಯ ಮೇಲಿದ್ದ ಗಣ್ಯರು ನಕ್ಕು ಹಗುರಾದರು. ಆದರೆ ಶ್ರೀಗಳ ಆ ಮಾತನ್ನೇ ಕೆಲವರು ತಿರುಚಿ 'ಸ್ವರ್ಗಕ್ಕೆ ಅನರ್ಹರು' ಎಂಬರ್ಥದ ಸುದ್ದಿ ಪ್ರಕಟಿಸಿ ಕಿಡಿ ಹೊತ್ತಿಸಿದ್ದು! ಒಂದು ಸುದ್ದಿಯಂತೂ ತಲೆಬರಹವೊಂದನ್ನು ಬಿಟ್ಟು ವಿವರಗಳಲ್ಲೆಲ್ಲೂ 'ಅದುವೇ ಪರ್ಯಾಯ ಶ್ರೀ ಪುತ್ತಿಗೆ ಶ್ರೀಪಾದರ ಮಾತಿನ ಇಂಗಿತ' ಎಂಬುದನ್ನು ತಾನೇ ದೃಢೀಕರಿಸದಿದ್ದುದನ್ನು ಒಮ್ಮೆ ಸೂಕ್ಷ್ಮವಾಗಿ ಗಮನಿಸಿದರೆ, ಅದು ವಿವಾದವನ್ನು ಸೃಷ್ಟಿಸಲೆಂದೇ ಮಾಡಿದ ತಿರುಚುವಿಕೆ ಎಂಬುದು ಸ್ಪಷ್ಟವಾಗುತ್ತದೆ.

ಒಂದು ವೇಳೆ ಸ್ವಾಮೀಜಿಯವರು, 'ಸಂಸ್ಕೃತ ಬಲ್ಲವರಿಗೆ ಮಾತ್ರ ದೇವಲೋಕದ ಪ್ರವೇಶ' ಅಂತ ಹೇಳಿದ್ದಾರೆ ಅಂದುಕೊಂಡರೂ (ಅವರು ಹಾಗೆಂದಿಲ್ಲ ಎನ್ನಿ!), ತಮ್ಮರಿವಿಗೆ ತಕ್ಕಂತೆ ಶ್ರೇಷ್ಠವೆನಿಸಿದ್ದನ್ನು ಅನುಯಾಯಿಗಳಿಗೆ ಕಲಿಸಲು ಉತ್ತೇಜಿಸಲು ಅವರು ಹಾಗೆಂದಿದ್ದರೆ ಅದರಿಂದಾದ ಪ್ರಮಾದವಾದರೂ ಏನು? ಅವರು 'ಸಂಸ್ಕೃತ ಕಲಿಯದಿದ್ದರೆ ನರಕವೇ ಗತಿ' ಎಂದಿಲ್ಲವಲ್ಲ?! ಸಕಾರಾತ್ಮಕ ಪ್ರೇರಣೆಗೆ ಬಳಸಿದ ಉದಾಹರಣೆಯನ್ನು ನಕಾರಾತ್ಮಕ ದೃಷ್ಟಿಯಿಂದ ನೋಡಿ ನಮ್ಮನ್ನೇ ದೂಷಿಸಿಕೊಳ್ಳುವುದರ ಸಾರ್ಥಕತೆಯಾದರೂ ಏನು? ಅಷ್ಟಕ್ಕೂ, ನಾನು ಅಥವಾ ನಿಮ್ಮಲ್ಲೊಬ್ಬರು 'ಸ್ವರ್ಗಕ್ಕೆ ಬರೋಲ್ಲ' ಎಂದು ನಿರಾಕರಿಸಿದರೆ, ಸ್ವರ್ಗವೇನೂ ನರಕವಾಗೋಲ್ಲವೆನ್ನಿ! ನಮ್ಮಿಚ್ಛೆಯಂತೆ ಏನೂ ನಡೆಯಲಿಕ್ಕಿಲ್ಲ ಎಂಬ ಖಚಿತತೆ ನನ್ನಂಥ ಬಹುತೇಕರಿಗಿದ್ದರೂ, ನಿರಾಕರಿಸಿ ಹೆಸರುವಾಸಿಯಾಗುವ ಹುಂಬತನವಿದು ಎನಿಸುತ್ತಿಲ್ಲವೇ? ತಮಗೆ ದಕ್ಕಿದ್ದ ಪ್ರಶಸ್ತಿಯ ಮೊತ್ತವನ್ನು ಹುತ್ತದಲ್ಲೇ ಬಚ್ಚಿಟ್ಟುಕೊಂಡು, 'ಪ್ರಶಸ್ತಿ ಪತ್ರ ಅಥವಾ ಪ್ರಶಸ್ತಿಯನ್ನು (ಮಾತ್ರ!)ಹಿಂದಿರುಗಿಸುತ್ತಿದ್ದೇವೆ' ಎಂಬ ಪತ್ರಿಕಾ ಹೇಳಿಕೆಗಳನ್ನಷ್ಟೇ ಹರಿಯಬಿಟ್ಟ (ಅ)ಸಹಿಷ್ಣುಮತಿಗಳಂತೆಯೇ ಈ ಸ್ವರ್ಗ ನಿರಾಕರಣೆಯ ಹುಂಬರು ಎಂಬುದಂತೂ ಸ್ಪಷ್ಟ.

ಸಂಸ್ಕೃತವೆಂಬುದು ನಮ್ಮ ಸಮಾಜದ ಒಂದು ವರ್ಗಕ್ಕೆ ಮಾತ್ರ ಸೀಮಿತವೆಂಬ ನೋವು ಕೆಲವೊಂದು ಪ್ರತಿಕ್ರಿಯೆಗಳಲ್ಲಿ ಕಾಣಿಸಿದೆ. ಅಂದಿನ ಸಮಾರಂಭದಲ್ಲಿ ಅತಿಥಿಗಳಾಗಿ ಆಗಮಿಸಿದ್ದವರು, ಮುಸ್ಲಿಂ ಸಮುದಾಯದವರಾಗಿದ್ದೂ ಸಂಸ್ಕೃತದಲ್ಲಿ ಪಾಂಡಿತ್ಯ ಗಳಿಸಿಕೊಂಡ ಕೇರಳದ ರಾಜ್ಯಪಾಲ ಆರಿಫ್ ಮೊಹಮದ್ ಖಾನ್ ಅವರು. ಆರಿಫ್ ಅವರ ಸಂಸ್ಕೃತ ಪಾಂಡಿತ್ಯ, ಆಸಕ್ತಿಗಳನ್ನು ಶ್ರೀಗಳು ಅಂದು ಪ್ರಶಂಸಿಸಿದರು. 'ದೇವರ ಸ್ವಂತ ನಾಡೆಂದೇ ಪ್ರಖ್ಯಾತವಾಗಿರುವ ಕೇರಳದ ರಾಜ್ಯಪಾಲ ಆರಿಫ್ ಅವರೂ ದೇವಭಾಷೆ ಬಲ್ಲವರು' ಎಂಬ ಶ್ರೀ ಸುಗುಣೇಂದ್ರ ತೀರ್ಥರ ಅತಿಥಿ ಸತ್ಕಾರದ ಮಾತುಗಳ ನಡುವೆ ಈ ಮಾತುಗಳು ಬಂದಿದ್ದು, ಇತರರಲ್ಲೂ ಸಂಸ್ಕೃತ ಕಲಿಕೆಯನ್ನು ಪ್ರೇರೇಪಿಸುವ ಸ್ವಚ್ಛ ಹಂಬಲದಿಂದ. ಇದು ನಿಚ್ಚಳವಾಗದಿರುವುದು ಹಳದಿ ಕನ್ನಡಕ ಧರಿಸಿದವರಿಗೆ ಮಾತ್ರ ಎನಿಸುತ್ತಿದೆ. ಸುಗುಣೇಂದ್ರ ತೀರ್ಥರ ಇಂಗಿತವೇ ಅಲ್ಲದ ಭಾವಾರ್ಥದ ಸುದ್ದಿಯನ್ನು, ದೇವರನ್ನೇ ನಂಬದ ಮತ್ತು ಸ್ವರ್ಗವೇ ಇಲ್ಲವೆಂದು ಪ್ರತಿಪಾದಿಸಿಕೊಂಡು ಬಂದಿದ್ದ ಹಲವರು ತಮ್ಮ ಪ್ರತಿಭಟನಾ ಸ್ವರೂಪದ 'ಸ್ವರ್ಗ ನಿರಾಕರಣೆ'ಗೆ ಮಾತ್ರ ಬಳಸಿಕೊಂಡರಷ್ಟೇ. ಇದು ಅವರವರ ದ್ವಂದ್ವವನ್ನು ತೆರೆದಿಟ್ಟ ದೈವಿಕ ಸತ್ಯ!

'ನಮ್ಮೂರು ಕುಂದಾಪುರ, ನಮಗೆ ಕುಂದಾಪುರವೇ ಸ್ವರ್ಗ' ಎಂದು ಒಂದೊಮ್ಮೆ ಹೇಳಿದರೆ, ಪಕ್ಕದ ಉಡುಪಿಯಲ್ಲಿರುವವರು ನರಕದಲ್ಲಿದ್ದಾರೆ ಎಂದರ್ಥವೇ? ನಮ್ಮೂರಿನ ಬಗ್ಗೆ ನಮಗಿರುವ ಅಭಿಮಾನದಿಂದಾಗಿ ಕುಂದಾಪುರವನ್ನು ನಾವು ಹೊಗಳುತ್ತೇವೆ. ಉಡುಪಿ, ಮಂಗಳೂರು, ಬೆಳಗಾವಿ ಹೀಗೆ ಯಾವುದೇ ಊರಿಗೆ ಸೇರಿದವರು ಅಥವಾ ಆ ಮಣ್ಣಿನ ಅಭಿಮಾನಿಗಳು ತಮ್ಮ ನೆಲದ ಬಗ್ಗೆ ಹೀಗೆ ಹೇಳಿಕೊಳ್ಳುವುದು ಸಹಜ. ಆ ಊರಿನತ್ತ, ಆ ಸಮಾಜಗಳತ್ತ ಹೊರಗಿನವರನ್ನು ಆಕರ್ಷಿಸುವ ಸಾತ್ವಿಕ ಅಭಿಮಾನ, ತುಸು ಗರ್ವ ಅದರಲ್ಲಿರುವುದು ನಿಜವೆನಿಸಿದರೂ, ಅದರ ಹಿಂದೆ 'ನಮ್ಮೂರು ಒಂದೇ ಶ್ರೇಷ್ಠ, ಉಳಿದವು ನಿಕೃಷ್ಟ' ಎಂಬ ಭಾವನೆ ಖಂಡಿತವಾಗಿಯೂ ಇರುವುದಿಲ್ಲ. ಬಹುಪಾಲು ಜನರು 'ಅಮ್ಮನ ಮಡಿಲೇ ಸ್ವರ್ಗ' ಎನ್ನುವುದುಂಟು; ಹಾಗೆಂದ ಮಾತ್ರಕ್ಕೆ ಅಪ್ಪನ, ಅಥವಾ ಅಜ್ಜ-ಅಜ್ಜಿಯ ಮಡಿಲು ನರಕವೆಂಬ ಭಾವನೆ ಅಲ್ಲಿ ತುಳುಕುತ್ತದೆಯೇ? ಖಂಡಿತವಾಗಿಯೂ ಇಲ್ಲ.

ಕೊನೆಯಲ್ಲಿ ನನ್ನದೊಂದು ಚಿಕ್ಕದಾದ ಅಫಿಡವಿಟ್ಟು: ನಾನು ಶ್ರೀಮಠದ ವಕ್ತಾರನಲ್ಲ. ಮಠದಲ್ಲಿನ ಕೆಲವು ಹಿರಿಯರ ಸಂಪರ್ಕ ನನಗಿದೆಯಾದರೂ, ಅವರಾರೂ ನನ್ನನ್ನು ಪ್ರೇರೇಪಿಸಿ ಬರೆಸಿದ ಅನಿಸಿಕೆ ಇದಲ್ಲ. ಉಡುಪಿಯ ಸುತ್ತಮುತ್ತಲಿನವನೇ ಆದರೂ, ನಾನು ಮಠಕ್ಕೆ ಕೊಟ್ಟ ಭೇಟಿ ಬೆರಳಿಕೆಯಷ್ಟು ಸಲದ್ದು. ಶ್ರೀಕೃಷ್ಣ ಮಠಕ್ಕೆ ಹೋಗಿದ್ದಕ್ಕಿಂತ ಹತ್ತು ಪಟ್ಟು ಹೆಚ್ಚು ಬಾರಿ ನನ್ನ ಉಡುಪಿ ಭೇಟಿ ತಲುಪಿದ್ದು ರಥಬೀದಿಯಲ್ಲಿನ ಮಿತ್ರಸಮಾಜವನ್ನೋ ಅಥವಾ ಅಲ್ಲೇ ಸನಿಹದಲ್ಲಿರುವ ವುಡ್‌ಲ್ಯಾಂಡ್ಸ್ ಉಪಾಹಾರ ಗೃಹವನ್ನೋ ಎಂಬುದು ನಾನಿಲ್ಲಿ ನಾಚಿಕೊಳ್ಳುತ್ತಲೇ ದಾಖಲಿಸಲು ಬಯಸುವ ಸತ್ಯ. ಪಾಂಡಿತ್ಯ ಬಿಡಿ, ಅದು 3 ಅಥವಾ 4ನೇ ತರಗತಿಯಲ್ಲಿದ್ದಾಗ 10 ದಿನಗಳ ಸಂಸ್ಕೃತ ಸಂಭಾಷಣಾ ಶಿಬಿರವೊಂದರಲ್ಲಿ ತೊಡಗಿಸಿಕೊಂಡಿದ್ದರ ಫಲಶ್ರುತಿಯಷ್ಟೇ. ಅದನ್ನು ಹೊರತುಪಡಿಸಿದರೆ, ಬೇರಾವ ಸಂಸ್ಕೃತ ಅಧ್ಯಯನದ ಪರಿಶ್ರಮ ನನ್ನದಲ್ಲ. ಹೀಗಿದ್ದೂ, ಸುಗುಣೇಂದ್ರ ತೀರ್ಥರ ಸಂಸ್ಕೃತ ಮಾತಿನ ಪದಶಃ ಅರ್ಥ, ನನ್ನರಿವಿನ ಅಲ್ಪಪ್ರಮಾಣದ ಕನ್ನಡ ಜ್ಞಾನದ ಮೂಲಕವೇ ಆಗಿದೆ. ಸಂಸ್ಕೃತವೇ ಬರದ, ಸ್ವರ್ಗವನ್ನು ಬಯಸದಿದ್ದರೂ ತಕ್ಕಮಟ್ಟಿನ ಕನ್ನಡ ಬಳಕೆ ಬಲ್ಲ, ಧರಿಸಿಕೊಂಡಿರುವ ಬಣ್ಣಬಣ್ಣದ ಕನ್ನಡಕವನ್ನು ಕಳಚಿಟ್ಟು ಸುಗುಣೇಂದ್ರ ತೀರ್ಥರ ಅಂದಿನ ಸಂಪೂರ್ಣ ಮಾತನ್ನು ಕೇಳಿಸಿಕೊಳ್ಳಬಲ್ಲ ಎಲ್ಲ ಸಹೃದಯಿಗಳಿಗೂ ಶ್ರೀಗಳ ಮಾತಿನ ಭಾವಾರ್ಥ ತಲುಪಬಲ್ಲದು ಎಂಬುದು ನನ್ನ ವಿನಮ್ರ ಅನಿಸಿಕೆ ಮತ್ತು ವೈಯಕ್ತಿಕ ಅನುಭವ. ಇನ್ನು, ಎಲ್ಲರನ್ನೂ ಒಪ್ಪಿಸುವ ಹುಂಬತನ ನನ್ನದಲ್ಲ. 'ಒಂದನ್ನು ಎರಡೆಂಬ, ಹಂದಿ ಹೆಬ್ಬುಲಿಯೆಂಬ, ನಿಂದ ದೇಗುಲದ ಮರೆವೆಂಬ ಮೂರ್ಖ ತಾನೆಂದಂತೆ ಎನ್ನಿ ಸರ್ವಜ್ಞ' ಎಂಬ ವಚನದ ಪರಿಪಾಲಕನೂ ನಾನಲ್ಲ. ಹಾಗಾಗಿ, ಸಂದರ್ಭಸಹಿತವಾಗಿ ವಿಷಯ ತೆರೆದಿಟ್ಟು, ಫಲಾಫಲವನ್ನು 'ಅವರವರ ಭಾವಕ್ಕೆ, ಅವರವರ ಭಕುತಿಗೆ' ಸಮರ್ಪಿಸಲು ಇಲ್ಲಿ ಯತ್ನಿಸಿರುವೆ.

(ಲೇಖಕರು ಹವ್ಯಾಸಿ ಬರಹಗಾರರು)

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಆಸೆಯೇ ದುಃಖಕ್ಕೆ ಮೂಲ

'ಮೋಸ ಹೋಗುವವರು ಇರೋ ತನಕ, ಮೋಸ ಮಾಡುವವರು ಇದ್ದೇ ಇರುತ್ತಾರೆ; ಆದ್ದರಿಂದ ನಿಮ್ಮ ಹುಷಾರಲ್ಲಿ ನೀವಿರಬೇಕು' ಎಂದು ಜನರಿಗೆ ಹಿತೋಪದೇಶ ನೀಡಿದ್ದಾನೆ 'ಗೌರಿ ಗಣೇಶ' ಚಿತ್ರದ ಕಥಾನಾಯಕ. ಆದರೆ ಇಂಥ ಹಿತನುಡಿಗಳನ್ನು ಒಂದು ಕಿವಿಯಲ್ಲಿ ಕೇಳಿಸಿಕೊಂಡು, ಇನ್ನೊಂದು ಕಿವಿಯಲ್ಲಿ ಹೊರಬಿಡೋರೇ ಹೆಚ್ಚು. ಹೀಗಾಗಿ, ಮೂರುನಾಮ ಹಾಕಿಸಿಕೊಳ್ಳುವವರ ಸಂಖ್ಯೆ ದಿನದಿನಕ್ಕೂ ಹೆಚ್ಚುತ್ತಲೇ ಇದೆ. ಅಮಾಯಕರನ್ನು ವಂಚಿಸುವವರು 'ಹಣ ದುಪ್ಪಟ್ಟು', 'ರೈಸ್ ಪುಲ್ಲಿಂಗ್' ಹೀಗೆ ಬಗೆಬಗೆಯ ಹೆಸರುಗಳನ್ನೂ, ಕೈಯಲ್ಲಿ ಬಣ್ಣಬಣ್ಣದ 'ಟೋಪಿ'ಗಳನ್ನೂ ಇಟ್ಟುಕೊಂಡು, ಅವಕ್ಕೆ ಲಗತ್ತಾಗುವ ತಲೆಗಳನ್ನು ಹುಡುಕುತ್ತಲೇ ಇರುತ್ತಾರೆ; ಮಿಕ ಸಿಕ್ಕು ಅಂದಕೂಡಲೇ ಕಾರ್ಯಾಚರಣೆ ಶುರು! 'ಹಣ ದುಪ್ಪಟ್ಟು ಮಾಡಿಕೊಡುತ್ತೇವೆ ಎಂದು ಆನ್‌ಲೈನ್ ಮೂಲಕ ಆಮಿಷ ಒಡ್ಡುವವರ ಮಾತಿಗೆ ಮರುಳಾಗಬೇಡಿ' ಎಂದು ಪೊಲೀಸ್ ಅಧಿಕಾರಿಗಳು ಕಾಲಾನುಕಾಲಕ್ಕೆ ಹಿತೋಪದೇಶ ನೀಡಿದರೂ ಅದು ವರ್ಕೌಟ್ ಆಗುತ್ತಿಲ್ಲ ಎಂಬುದಕ್ಕೆ ಅಸ್ಸಾಂನ ಗುವಾಹಟಿಯಲ್ಲಿ ಇತ್ತೀಚೆಗೆ ವರದಿಯಾಗಿರುವ ಪ್ರಕರಣವೇ ಸಾಕ್ಷಿ. 'ಆನ್‌ಲೈನ್ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿದಲ್ಲಿ, 2 ತಿಂಗಳಲ್ಲಿ ಶೇ.30ರಷ್ಟು ಲಾಭ ನೀಡಲಾಗುವುದು' ಎಂದು ಬೂಸಿ ಬಿಟ್ಟವರ ಮಾತಿಗೆ ಮರುಳಾದವರು ಹಣ ಹೂಡಿಕೆ ಮಾಡಿ ವಂಚನೆಗೊಳಗಾಗಿದ್ದಾರೆ. ನಡೆದಿರುವ ವಂಚನೆಯ ಮೊತ್ತ ಒಂದಲ್ಲ, ಎರಡಲ್ಲ, ಬರೋಬ್ಬರಿ 2,200 ಕೋಟಿ ರುಪಾಯಿಯಷ್ಟು! ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು 38 ವಂಚಕರನ್ನು ಬಂಧಿಸಿರುವುದೇನೋ ಖರೆ; ಆದರೆ, ನಮ್ಮ ಜನ ಬುದ್ಧಿ ಕಲಿಯುವುದು ಯಾವಾಗ? ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ!

ತೊಡೆ ತಟ್ಟುವ ಜನ!

ಚುನಾವಣೆ ಸಂಬಂಧಿತ ಸುದ್ದಿ ನೀಡುವಾಗ, 'ಇಂಥವರ ವಿರುದ್ಧ ಇಂಥವರು ತೊಡೆ ತಟ್ಟಿದ್ದಾರೆ' ಎಂಬ ಸಾಲನ್ನು ಪತ್ರಿಕೆಗಳಲ್ಲಿ ಬಳಸುವುದುಂಟು. ಗಮ್ಮತ್ತೆಂದರೆ, ಈ ಬಾರಿಯ ಹರಿಯಾಣ ವಿಧಾನಸಭಾ ಚುನಾವಣೆಯ ವೇಳೆ ಈ ಸಾಲು ಅಕ್ಷರಶಃ ಸತ್ಯವಾಗಲಿದೆ. ಕಾರಣ, ವಿನೇಶ್ ಫೋಗಟ್ ಮತ್ತು ಭಜರಂಗ್ ಪುನಿಯಾ ಎಂಬಿಬ್ಬರು ಖ್ಯಾತ ಕುಸ್ತಿಪಟುಗಳು ಚುನಾವಣಾ ಅಖಾಡಕ್ಕೆ ಇಳಿಯಲಿದ್ದಾರೆ. ಕಾಂಗ್ರೆಸ್ ಇವರಿಗೆ ಟಿಕೆಟ್ ನೀಡಲಿದೆಯಂತೆ. ಸಾಂಪ್ರದಾಯಿಕ ಕುಸ್ತಿಯಲ್ಲಿ ಈಗಾಗಲೇ ಸಾಕಷ್ಟು ಜನರಿಗೆ ನೀರು ಕುಡಿಸಿರುವ ಇವರಿಬ್ಬರು, ಚುನಾವಣಾ ಅಖಾಡದಲ್ಲೂ ಎದುರಾಳಿಗಳಿಗೆ ಅದೇ ಗತಿಯನ್ನು ತಂದೊಡ್ಡಲಿದ್ದಾರಾ ಎಂಬುದು ಕುತೂಹಲ ಹುಟ್ಟಿಸಿದೆ. ಏಕೆಂದರೆ, ಚುನಾವಣಾ ಕಣವು ಕುಸ್ತಿ ಅಖಾಡದಂತಲ್ಲ; ಇಲ್ಲಿ ಏಳೇಳು ಕೆರೆಯ ನೀರು ಕುಡಿದ ರಾಜಕೀಯ ಘಟಾನುಘಟಿಗಳೇ ಸ್ಪರ್ಧಿಸುವುದು. ಪಳಗಿದ ರಾಜಕಾರಣಿಗಳ ತಂತ್ರಗಾರಿಕೆಯ ಮುಂದೆ, ಕುಸ್ತಿಪಟುಗಳ 'ಪಟ್ಟುಗಳು' ಫಲ ನೀಡುತ್ತವೆಯೇ ಇಲ್ಲವೇ ಎಂಬುದನ್ನು ಕಾಲವಷ್ಟೇ ಹೇಳಬಲ್ಲದು!

ನಾರಾಯಣ ನಾರಾಯಣ!

'ರಾಹುಲ್ ಗಾಂಧಿ ಮತ್ತು ರಾಜೀವ್ ಗಾಂಧಿ ನಡುವಣ ವ್ಯತ್ಯಾಸವೆಂದರೆ ರಾಹುಲ್ ಹೆಚ್ಚು ಬುದ್ಧಿಜೀವಿ, ಚಿಂತಕ ಮತ್ತು ಸ್ವಲ್ಪ ಹೆಚ್ಚು ಕೆಲಸ ಮಾಡುವವರು' ಎಂಬ ಕಾಂಗ್ರೆಸ್‌ನ ಸ್ಯಾಮ್ ಪಿತ್ರೋಡಾರ ಹೇಳಿಕೆಯನ್ನು ಪತ್ರಕರ್ತರೊಬ್ಬರು 'ನಗೆಹನಿ' ವಿಭಾಗದಲ್ಲಿ ಪ್ರಕಟಿಸಿದರೆ, ಅದನ್ನು ಕಣ್ತಪ್ಪಿನಿಂದಾದ ಪ್ರಮಾದ ಎನ್ನಬೇಕೋ ಅಥವಾ ಆ ಪತ್ರಕರ್ತರ ಕಿಡಿಗೇಡಿತನದ ಪರಮಾವಧಿ ಎನ್ನಬೇಕೋ?!!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:256

ಸಮಾಚಾರ ಸಣ್ಣದಲ್ಲ

ಮಾಲಿವುಡ್ ವಿವಾದ ವಿಶೇಷ ಪೀಠ ರಚನೆ

ತಿರುವನಂತಪುರಂ: ಮಲಯಾಳಂ ಚಿತ್ರರಂಗದಲ್ಲಿ ತಾರತಮ್ಯ ಮತ್ತು ಲೈಂಗಿಕ ದೌರ್ಜನ್ಯ ಕುರಿತು ನ್ಯಾ. ಹೇಮಾ ಸಮಿತಿ ವರದಿ ಬಹಿರಂಗ ಬೆನ್ನಲ್ಲೇ ಖ್ಯಾತ ನಟರು, ನಿರ್ಮಾಪಕರು, ನಿರ್ದೇಶಕರ ವಿರುದ್ಧ ಲೈಂಗಿಕ ಕಿರುಕುಳ ಆರೋಪಗಳು ಕೇಳಿ ಬಂದಿವೆ. ಈ ಹಿನ್ನೆಲೆ ಹೇಮಾ ಸಮಿತಿ ವರದಿಗೆ ಸಂಬಂಧಿಸಿ ಸಲ್ಲಿಕೆಯಾಗುವ ಅರ್ಜಿಗಳ ವಿಚಾರಣೆಗೆ ಕೇರಳ ಹೈಕೋರ್ಟ್ ಇಬ್ಬರು ನ್ಯಾಯಮೂರ್ತಿಗಳ ವಿಶೇಷ ಪೀಠ ರಚಿಸಿದೆ. ನ್ಯಾ.ಎ.ಕೆ.ಜಯಶಂಕರನ್ ನಂಬಿ ಯಾರ್, ನ್ಯಾ. ಸಿ.ಎಸ್ ಸುಧಾ ಅವರ ವಿಭಾಗೀಯ ಪೀಠ ನ್ಯಾ. ಹೇಮಾ ಸಮಿತಿ ವರದಿ ಸಂಬಂಧಿತ ಅರ್ಜಿಗಳು ಹಾಗೂ ದೂರುಗಳ ವಿಚಾರಣೆ ನಡೆಸಲಿದೆ. ವರದಿ ಬಹಿರಂಗ ಬಳಿಕ ದಾಖಲಾದ ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖೆಗೆ ರಾಜ್ಯ ಸರಕಾರ ಅದಾಗಲೇ 7 ಮಂದಿಯ ವಿಶೇಷ ತನಿಖಾ ತಂಡ ರಚಿಸಿದೆ.

ಸೇನೆಯ ವಾಹನ ಕಂದಕಕ್ಕೆ; 4 ಸಾವು

ಜುಲುಕ್: ಸಿಕ್ಕಿಂ ರಾಜ್ಯದ ಪಾಕ್ಯೋಂಗ್ ಜಿಲ್ಲೆಯ ಸಿಲ್ಕ್ ಮಾರ್ಗದಲ್ಲಿ ಭಾರತೀಯ ಸೇನೆಯ ವಾಹನವೊಂದು ಗುರುವಾರ ಚಾಲಕನ ನಿಯಂತ್ರಣ ತಪ್ಪಿ 800 ಅಡಿ ಆಳದ ಕಂದಕಕ್ಕೆ ಉರುಳಿ ಬಿದ್ದಿದ್ದು 4 ಯೋಧರು ಸಾವನ್ನಪ್ಪಿದ್ದಾರೆ. ಪಶ್ಚಿಮ ಬಂಗಾಳದ ಪೆಡೋಂಗ್‌ನಿಂದ ಸಿಕ್ಕಿಂನ ಜುಲುಕ್ ಪ್ರದೇಶಕ್ಕೆ ತೆರಳುವಾಗ ರೆಹ್ನೋಕ್ ರೊಂಗ್ಲಿ ರಾಜ್ಯ ಹೆದ್ದಾರಿಯ ದಾಲೋಪ್‌ಚಂದ್ ದಾರಾ ಬಳಿ ರಸ್ತೆಯಿಂದ ಜಾರಿದ ವಾಹನ ಕಂದಕಕ್ಕೆ ಉರುಳಿತು. ಮೃತರನ್ನು ತಮಿಳುನಾಡಿನ ಸುಬೇದಾರ್ ಕೆ.ತಂಗಪಂಡಿ, ಮಧ್ಯ ಪ್ರದೇಶದ ಚಾಲಕ ಪ್ರದೀಪ್ ಪಟೇಲ್, ಮಣಿಪುರದ ಕುಶಲಕರ್ಮಿ ಪೀಟರ್, ಹರಿಯಾಣದ ನಾಯ್ಕ್ ಗುರುಸೇವ್ ಸಿಂಗ್ ಎಂದು ಗುರುತಿಸಲಾಗಿದೆ. ನಾಲ್ವರೂ ಪಶ್ಚಿಮ ಬಂಗಾಳದ ಬಿನಾಗುರಿ ಸೇನಾ ಶಿಬಿರದಲ್ಲಿ ಸೇವೆ ಸಲ್ಲಿಸುತ್ತಿದ್ದರು.

ನ್ಯಾಯಾಂಗ ನಿಂದನೆ ವಿಕಿಪೀಡಿಯಗೆ ನೋಟಿಸ್

ದೆಹಲಿ: ಪ್ರಸಿದ್ಧ ಮಾಹಿತಿ ತಾಣ 'ವಿಕಿಪೀಡಿಯ' ವಿರುದ್ಧ ದೆಹಲಿ ಹೈಕೋರ್ಟ್ ಗುರುವಾರ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿದೆ. ಭಾರತ ಇಷ್ಟವಿಲ್ಲದಿದ್ದರೆ ಇಲ್ಲಿ ಕೆಲಸ ಮಾಡಬೇಡಿ, ನಿರ್ಗಮಿಸಿ ಎಂದೂ ಚಾಟಿ ಬೀಸಿದೆ. ಎನ್ಐಎ ಸುದ್ದಿ ಸಂಸ್ಥೆಗೆ ಸಂಬಂಧಿಸಿದ ಮಾಹಿತಿಯನ್ನು ತಿರುಚಿದವರ ಮಾಹಿತಿ ಬಹಿರಂಗಗೊಳಿಸದೇ ಮುಚ್ಚಿಟ್ಟಿದ್ದಕ್ಕೆ ವಿಕಿಪೀಡಿಯ ವಿರುದ್ಧ ಕೋರ್ಟ್ ಸಿಟ್ಟಾಗಿದೆ. 'ಭಾರತದ ಕಾನೂನು ಪಾಲಿಸದೇ ಇದ್ದರೆ ವಿಕಿಪೀಡಿಯ ಭಾರತದಲ್ಲಿ ಕೆಲಸ ಮಾಡುವುದು ಬೇಡ. ವೆಬ್‌ಸೈಟ್ ಪ್ರಸಾರ ತಡೆಗೆ ಸರಕಾರಕ್ಕೆ ಸೂಚಿಸುತ್ತೇವೆ' ಎಂದು ನ್ಯಾ. ನವೀನ ಚಾವ್ಲಾ ಅವರ ಪೀಠ ಕಠಿಣ ಎಚ್ಚರಿಕೆ ನೀಡಿದೆ. ಎಎನ್ಐ ಸುದ್ದಿ ಸಂಸ್ಥೆ ವಿಕಿಪೀಡಿಯ ವಿರುದ್ಧ ಸಲ್ಲಿಸಿದ್ದ ಮಾನನಷ್ಟ ದಾವೆಯ ವಿಚಾರಣೆ ವೇಳೆ ಹೈ ಕೋರ್ಟ್ ವಿಕಿಪೀಡಿಯಾಗೆ ನ್ಯಾಯಾಂಗ ನಿಂದನೆ ನೋಟೀಸ್ ಜಾರಿ ಮಾಡಿದೆ.

ಡಿಜಿಟಲ್ ಸಹಕಾರ, ಕೌಶಲ ಅಭಿವೃದ್ಧಿ, ಆರೋಗ್ಯ-ಶಿಕ್ಷಣ ಕ್ಷೇತ್ರ | ದ್ವಿಪಕ್ಷೀಯ ಸಭೆ

ಭಾರತ-ಸಿಂಗಾಪುರ 4 ಒಪ್ಪಂದ

ಸಿಂಗಾಪುರ ನಗರ: ಸೆಮಿಕಂಡಕ್ಟರ್, ಡಿಜಿಟಲ್ ತಂತ್ರಜ್ಞಾನ, ಕೌಶಲ ಅಭಿವೃದ್ಧಿ ಹಾಗೂ ಆರೋಗ್ಯ-ಶಿಕ್ಷಣ ಕ್ಷೇತ್ರದ ಪರಸ್ಪರ ಸಹಕಾರಕ್ಕೆ ಸಂಬಂಧಿಸಿದ ನಾಲ್ಕು ಒಪ್ಪಂದಗಳನ್ನು ಭಾರತ ಮತ್ತು ಸಿಂಗಾಪುರ ಮಾಡಿಕೊಂಡಿದ್ದು, ಅದಕ್ಕೆ ಸಂಬಂಧಿಸಿದ ಒಡಂಬಡಿಕೆ ಪತ್ರಗಳಿಗೆ ಸಹಿ ಹಾಕಿ ಪರಸ್ಪರ ವಿನಿಮಯ ಮಾಡಿಕೊಂಡವು.

ಈ ನಾಲ್ಕೂ ಮಹತ್ವದ ಒಪ್ಪಂದಗಳು ಉಭಯ ರಾಷ್ಟ್ರಗಳ ನಡುವಿನ ಪರಸ್ಪರ ಸಹಕಾರ ಮತ್ತು ಸಂಬಂಧವನ್ನು ಮತ್ತಷ್ಟು ಬಲಪಡಿಸುತ್ತವೆ ಎಂದು ವಿಶ್ಲೇಷಿಸಲಾಗಿದೆ.

2 ದಿನಗಳ ಸಿಂಗಾಪುರ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಸಿಂಗಾಪುರ ಸಂಸತ್ ಭವನಕ್ಕೆ ಆಗಮಿಸಿದಾಗ ಅವರಿಗೆ ವಿದ್ಯುಕ್ತ ಸ್ವಾಗತ ದೊರೆಯಿತು. ಸಿಂಗಾಪುರ ಪ್ರಧಾನಿ ಲಾರೆನ್ಸ್ ವಾಂಗ್ ಮೋದಿ ಅವರನ್ನು ಆತ್ಮೀಯವಾಗಿ ಬರಮಾಡಿ ಕೊಂಡರು. ಆ ಬಳಿಕ ಉಭಯ ದೇಶಗಳ ಉನ್ನತ ಮಟ್ಟದ ನಿಯೋಗಗಳು ಮೋದಿ ಮತ್ತು ಲಾರೆನ್ಸ್ ಅವರ ನೇತೃತ್ವದಲ್ಲಿ ದ್ವಿಪಕ್ಷೀಯ ಸಭೆಗಳನ್ನು ನಡೆಸಿದವು. ನಾಲ್ಕೂ ಕ್ಷೇತ್ರಗಳಿಗೆ ಸಂಬಂಧಿಸಿ ದೀರ್ಘ ಚರ್ಚೆ ನಡೆಸಿದ ನಿಯೋಗಗಳು ನಂತರ ಒಡಂಬಡಿಕೆ ಪತ್ರಗಳಿಗೆ ಸಹಿ ಹಾಕಿದವು.

ಡಿಜಿಟಲ್ ತಂತ್ರಜ್ಞಾನ ಕ್ಷೇತ್ರದಲ್ಲಿನ ಸಹಕಾರಕ್ಕಾಗಿ ಭಾರತದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಮತ್ತು ಸಿಂಗಾಪುರದ ಡಿಜಿಟಲ್ ಅಭಿವೃದ್ಧಿ ಮತ್ತು ಮಾಹಿತಿ ಸಚಿವಾಲಯದ ನಡುವಿನ ಒಪ್ಪಂದಕ್ಕೆ ಮೊದಲು ಸಹಿ ಹಾಕಲಾಯಿತು.

ಸಿಂಗಾಪುರದಲ್ಲಿ ಗುರುವಾರ ಭಾರತ-ಸಿಂಗಾಪುರ ದ್ವಿಪಕ್ಷೀಯ ಸಭೆಯಲ್ಲಿ ಉಭಯ ದೇಶಗಳ ಪ್ರಧಾನಿಗಳಾದ ನರೇಂದ್ರ ಮೋದಿ ,ಲಾರೆನ್ಸ್ ವಾಂಗ್ ಜತೆಗೆ ಸಚಿವರು, ಅಧಿಕಾರಿಗಳ ಉನ್ನತ ಮಟ್ಟದ ನಿಯೋಗ ಭಾಗಿಯಾಗಿತ್ತು.

ಅಧ್ಯಕ್ಷರ ಭೇಟಿಗೆ ಮೋದಿ ಹರ್ಷ

ಸಿಂಗಾಪುರ ಅಧ್ಯಕ್ಷ ಥರ್ಮನ್ ಷಣ್ಮುಗರತ್ನಂ ಅವರನ್ನು ಭೇಟಿ ಮಾಡಿದ ಪ್ರಧಾನಿ ಮೋದಿ, ಭಾರತ-ಸಿಂಗಾಪುರ ಸಹಕಾರವನ್ನು ವಿಸ್ತರಿಸುವ ಮತ್ತು ಬಲಗೊಳಿಸುವ ಮಾರ್ಗಗಳ ಕುರಿತು ಚರ್ಚಿಸಿದರು. ಥರ್ಮನ್ ಅವರ ಜತೆಗಿನ ಭೇಟಿ ಅತ್ಯುತ್ತಮವಾಗಿತ್ತು ಎಂದು ಮೋದಿ ಹರ್ಷ ವ್ಯಕ್ತಪಡಿಸಿದರು. ಬಳಿಕ ಸಿಂಗಾಪುರದ ಹಿರಿಯ ಸಚಿವ ಲೀ ಸೀನ್ ಲೂಂಗ್ ಅವರು ಆಯೋಜಿಸಿದ್ದ ಭೋಜನಕೂಟದಲ್ಲಿ ಮೋದಿ ಭಾಗವಹಿಸಿದ್ದರು.

ಎರಡೂ ದೇಶಗಳ ನಡುವಿನ ಮಾತುಕತೆ ಸೆಮಿಕಂಡಕ್ಟರ್, ಕೃತಕ ಬುದ್ಧಿಮತ್ತೆ, ಕೌಶಲ ಅಭಿವೃದ್ಧಿ, ತಂತ್ರಜ್ಞಾನ, ಆರೋಗ್ಯ- ಶಿಕ್ಷಣ, ಮತ್ತಿತರ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಹೆಚ್ಚಿಸುವುದರ ಮೇಲೆ ಕೇಂದ್ರೀಕೃತವಾಗಿತ್ತು. ವ್ಯಾಪಾರ-ವಾಣಿಜ್ಯ ವಹಿವಾಟು ಸಂಬಂಧ ವೃದ್ಧಿಗೂ ಎರಡೂ ದೇಶಗಳ ನಡುವೆ ಒಪ್ಪಂದ ವಾಗಿದೆ. ಡಿಜಿಟಲ್ ತಂತ್ರಜ್ಞಾನದ ಡಿಪಿಐ, ಸೈಬರ್ ಸೆಕ್ಯುರಿಟಿ, 5ಜಿ ಮತ್ತು ಸೂಪರ್ -ಕಂಪ್ಯೂಟಿಂಗ್, ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ನಂತಹ ಅತ್ಯಾಧುನಿಕ ತಂತ್ರಜ್ಞಾ ನಗಳ ಕ್ಷೇತ್ರಗಳಲ್ಲಿ ಭಾರತ-ಸಿಂಗಾಪುರದ ಸಹಕಾರವನ್ನು ಈ ಒಪ್ಪಂದಗಳು ಇನ್ನಷ್ಟು ಸುಗಮಗೊಳಿಸುತ್ತವೆ. ಡಿಜಿಟಲ್ ಕ್ಷೇತ್ರದಲ್ಲಿ ಕಾರ್ಮಿಕರ ಕೌಶಲ ಸಹಕಾರವನ್ನು ಒಪ್ಪಂದ ಮತ್ತಷ್ಟು ಸಕ್ರಿಯಗೊಳಿಸುತ್ತದೆ.

-ನರೇಂದ್ರ ಮೋದಿ ಪ್ರಧಾನಿ

ಉದ್ಯಮಿಗಳ ಜತೆ ಮೋದಿ ದುಂಡು ಮೇಜಿನ ಸಭೆ

ಸಿಂಗಾಪುರ: ಸಿಂಗಾಪುರದ ಪ್ರಮುಖ ಉದ್ಯಮಿಗಳ ಜತೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ದುಂಡು ಮೇಜಿನ ಸಭೆ ನಡೆಸಿದರು. ಭಾರತದಲ್ಲಿನ ಸದ್ಯದ ಸುಧಾರಣೆಗಳು, ಅಭಿವೃದ್ಧಿ ಚಿತ್ರಣವನ್ನು ಉದ್ಯಮಿಗಳು ಮತ್ತು ಸಿಇಒಗಳಿಗೆ ನೀಡಿದರು. ಬಳಿಕ, ಭಾರತದಲ್ಲಿ ಹೂಡಿಕೆ ಮಾಡುವಂತೆ ಸಿಂಗಾಪುರದ ಪ್ರಮುಖ ಕಂಪನಿಗಳಾದ ಬ್ಲಾಕ್‌ಸ್ಟೋನ್ ಸಿಂಗಾಪುರ್, ಟೆಮಾಸೆಕ್ ಹೋಲ್ಡಿಂಗ್ಸ್, ಸೆಂಬ್‌ಕಾರ್ಪ್ ಇಂಡಸ್ಟ್ರೀಸ್ ಲಿ., ಕ್ಯಾಪಿಟಾಲ್ಯಾಂಡ್ ಇನ್ವೆಸ್ಟ್‌ಮೆಂಟ್, ಎಸ್‌ಟಿ ಟೆಲಿಮೀಡಿಯ ಗ್ಲೋಬಲ್ ಡೇಟಾ ಸೆಂಟರ್ ಮತ್ತು ಸಿಂಗಾಪುರ್ ಏರ್‌ವೇಸ್‌ನ ಸಿಇಒಗಳಿಗೆ ಪ್ರಧಾನಿ ನರೇಂದ್ರ ಮೋದಿ ಆಹ್ವಾನಿಸಿ ಉತ್ತೇಜಿಸಿದರು.

ತ್ರಿಸೂತ್ರ ಅಭಿವೃದ್ಧಿ ಮಂತ್ರ

ಭಾರತ ಸರಕಾರ ರಿಫಾರ್ಮ್, ಪರ್ಫಾಮ್, ಟ್ರಾನ್ಸ್‌ಫಾರ್ಮ್ ಸೂತ್ರದ ಮೇಲೆಯೇ ಅಭಿವೃದ್ಧಿ ಹಾದಿಯಲ್ಲಿ ಸಾಗುತ್ತಿದೆ ಎಂದು ಮೋದಿ ವಿವರಿಸಿದರು.

ಮಾವೋವಾದಿಗಳ ವಿರುದ್ಧ ಮುಂದುವರಿದ ಕಾರ್ಯಾಚಾರಣೆ | ಛತ್ತೀಸ್‌ಗಢದ 9 ಸದಸ್ಯರ ಅಂತ್ಯ

ತೆಲಂಗಾಣದಲ್ಲೂ 6 ನಕ್ಸಲೀಯರ ಅಂತ್ಯ, ಪೊಲೀಸರಿಗೆ ಗುಂಡೇಟು

ಹೈದರಾಬಾದ್: ತೆಲಂಗಾಣದ ಭದ್ರಾದ್ರಿ ಕೊತ್ತಗುಡಂ ಜಿಲ್ಲೆಯಲ್ಲಿ ರಾಜ್ಯ ಪೊಲೀಸ್ ವಿಶೇಷ ದಳ ಗುರುವಾರ ನಡೆಸಿದ ನಕ್ಸಲರ ನಿಗ್ರಹ ಕಾರ್ಯಾಚರಣೆಯಲ್ಲಿ 6 ನಕ್ಸಲರನ್ನು ಕೊಲ್ಲಲಾಗಿದೆ. ಕಾರ್ಯಾಚರಣೆಯಲ್ಲಿ ನಕ್ಸಲ್ ನಿಗ್ರಹ ಪಡೆಯ ಇಬ್ಬರು ಪೊಲೀಸರಿಗೆ ಗುಂಡು ತಾಕಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ.

ಛತ್ತೀಸ್‌ಗಢದಲ್ಲಿ ಮಂಗಳವಾರ ನಡೆದ ಕಾರ್ಯಾಚರಣೆಯಲ್ಲಿ ಹಿರಿಯ ನಕ್ಸಲ್ ಕಮಾಂಡರ್ ಸೇರಿದಂತೆ 9 ಮಂದಿಯ ಅಂತ್ಯವಾಯಿತು. ಆ ಬಳಿಕ ಉಳಿದ ನಕ್ಸಲರ ತಂಡ ಛತ್ತೀಸ್‌ಗಢದಿಂದ ತೆಲಂಗಾಣ ಪ್ರವೇಶಿಸಿ ಗಡಿ ಭಾಗದ ಅರಣ್ಯದಲ್ಲಿ ಅಡಗಿತು. ಈ ಬಗ್ಗೆ ಗುಪ್ತಚರ ಇಲಾಖೆ ಮಾಹಿತಿ ನೀಡಿದ ಬಳಿಕ ತೆಲಂಗಾಣ ರಾಜ್ಯದ ನಕ್ಸಲ್ ನಿಗ್ರಹ ಪಡೆ ಅಧಿಕಾರಿಗಳು ಭದ್ರಾದ್ರಿ ಕೊತ್ತಗುಡಂ ಕಾರ್ಯಾಚರಣೆ ಹಮ್ಮಿಕೊಂಡರು.

ನಕ್ಸಲರ ತಂಡ ಕಾರಕಗುಡಂ ಪೊಲೀಸ್ ಠಾಣಾ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಅಡಗಿರುವುದು ಕಂಡುಬಂದಾಗ ನಕ್ಸಲ್ ನಿಗ್ರಹ ಪಡೆ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿಸಿತು. ಪ್ರತಿಯಾಗಿ ನಕ್ಸಲರೂ ಗುಂಡು ಹಾರಿಸಿದಾಗ ಇಬ್ಬರು ಪೊಲೀಸ್ ಅಧಿಕಾರಿಗಳು ಗಾಯಗೊಂಡರು. ಆದರೆ, ಗುಂಡಿನ ಚಕಮಕಿಯಲ್ಲಿ ಮೇಲುಗೈ ಸಾಧಿಸಿದ ನಕ್ಸಲ್ ನಿಗ್ರಹ ಪಡೆ ಸಿಬ್ಬಂದಿ, ಇಬ್ಬರು ಹಿರಿಯ ಕೇಡರ್‌ನ ಮಹಿಳಾ ನಕ್ಸಲರು ಸೇರಿದಂತೆ 6 ಮಂದಿ ಸಮವಸ್ತ್ರಧಾರಿ ನಕ್ಸಲರನ್ನು ಕೊಂದುಹಾಕಿದರು.

ನಕ್ಸಲರ ಮೃತದೇಹದ ಬಳಿಯಿಂದ ಎಕೆ 47, ಎಸ್ಎಲ್ಆರ್ ರೈಫಲ್ಸ್, ಗುಂಡುಗಳು ಸೇರಿದಂತೆ ಹಲವು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಮೃತ ನಕ್ಸಲರ ಗುರುತು ಪತ್ತೆ ಕಾರ್ಯ ನಡೆಯುತ್ತಿದೆ.

ಒಬ್ಬ ಪೊಲೀಸ್ ಅಧಿಕಾರಿ ಸ್ಥಿತಿ ಗಂಭೀರವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ ಎಂದು ಎಸ್‌ಪಿ ರೋಹಿತ್ ರಾಜ್ ಹೇಳಿದ್ದಾರೆ.

ದಾಂತೇವಾಡದಲ್ಲಿ ಮುಖ್ಯಸ್ಥನ ಅಂತ್ಯ

ಛತ್ತೀಸ್‌ಗಢದ ದಾಂತೇವಾಡ ಭಾಗದಲ್ಲಿ ಮಂಗಳವಾರ ನಡೆದ ದೊಡ್ಡ ಕಾರ್ಯಾಚರಣೆಯಲ್ಲಿ ನಕ್ಸಲ್ ನಿಗ್ರಹ ಪಡೆಗೆ ಮಹತ್ವದ ವಿಜಯ ಪ್ರಾಪ್ತವಾಗಿದೆ. ನಕ್ಸಲ್ ನಿಗ್ರಹ ಪಡೆ ಅಂದು 6 ಮಹಿಳಾ ನಕ್ಸಲರು ಸೇರಿದಂತೆ ಒಟ್ಟು 9 ಸಮವಸ್ತ್ರಧಾರಿ ನಕ್ಸಲರನ್ನು ಹೊಡೆದುರುಳಿಸಿತ್ತು. ಮುಖ್ಯವಾಗಿ, ಮಚೆರ್ಲಾ ಎಸೊಬು ಅಂತ್ಯವಾಯಿತು. ಮಚೆರ್ಲಾ, ತೆಲಂಗಾಣ ಮೂಲದ ಪ್ರಮುಖ ನಕ್ಸಲ್ ತಂಡವಾದ 'ದಂಡಕಾರಣ್ಯ ಸ್ಪೆಷಲ್ ಜೋನಲ್ ಕಮಿಟಿ'ಯ ಮುಖ್ಯಸ್ಥನಾಗಿದ್ದ. ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ ಭಾಗದ ನಕ್ಸಲ್ ಚಟುವಟಿಕೆಯ ಹಿರಿಯ ನಾಯಕ. ಆತನ ತಲೆಗೆ ಪೊಲೀಸರು 25 ಲಕ್ಷ ರು. ಇನಾಮು ಘೋಷಿಸಿದ್ದರು. ಆತನ ಬಂಧನಕ್ಕೆ ನೆರವಾದವರಿಗೆ ಆ ಬಹುಮಾನ ಸಿಗುತ್ತಿತ್ತು. ಅಂತಹ ಮಚೆರ್ಲಾಗೆ ಜಗನ್, ದಾದಾ ರಣದೇವ್, ರಣದೀರ, ಎಸೊಬು ಎಂಬ ಅಡ್ಡ ಹೆಸರುಗಳೂ ಇದ್ದವು. 1980ರಿಂದಲೂ ನಕ್ಸಲ್ ಚಟುವಟಿಕೆಗಳಲ್ಲಿ ಮಚೆರ್ಲಾ ತೊಡಗಿದ್ದ.

ಭಾರತದಲ್ಲಿರಿ ಸುಮ್ಮನಿರಿ ಹಸೀನಾಗೆ ಯೂನುಸ್ ಚಾಟಿ

ಢಾಕಾ: ಭಾರತದಲ್ಲಿ ಕೂತು ಬಾಂಗ್ಲಾದೇಶದ ರಾಜಕೀಯದ ಬಗ್ಗೆ ಶೇಖ್ ಹಸೀನಾ ಹೇಳಿಕೆ ನೀಡಿರುವುದಕ್ಕೆ ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಖ್ಯಸ್ಥ ಮುಹಮ್ಮದ್ ಯೂನುಸ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಭಾರತದಲ್ಲೇ ಇನ್ನಷ್ಟು ಸಮಯ ಉಳಿದುಕೊಳ್ಳಬೇಕೆಂದರೆ ಮೌನವಾಗಿರಿ, ಬಾಂಗ್ಲಾ ಬಗ್ಗೆ ಯಾವುದೇ ಹೇಳಿಕೆ ನೀಡದಿರಿ ಎಂದು ಯೂನುಸ್ ಮಾಧ್ಯಮ ಸಂದರ್ಶನದಲ್ಲಿ ಮಾಜಿ ಪ್ರಧಾನಿಗೆ ಎಚ್ಚರಿಕೆ ನೀಡಿದ್ದಾರೆ.

'ಶೇಕ್ ಹಸೀನಾ ರಾಜಕೀಯ ಹೇಳಿಕೆಗಳು ಬಾಂಗ್ಲಾ ಹಿತಾಸಕ್ತಿಗೆ ತಕ್ಕುದಾಗಿಲ್ಲ. ಹಸ್ತಾಂತರಕ್ಕೆ ಬಾಂಗ್ಲಾ ಕೇಳುವವರೆಗೂ ತನ್ನಲ್ಲೇ ಇಟ್ಟುಕೊಳ್ಳಲು ಭಾರತ ಬಯಸಿದರೆ, ಹಸೀನಾ ಮೌನವಾಗಿರಬೇಕು. ಇದು ನಮ್ಮ ಷರತ್ತು' ಎಂದು ಯೂನುಸ್ ಹೇಳಿದ್ದಾರೆ. ಹಸೀನಾ ಭಾರತದಲ್ಲಿ ಇರುವುದು ನಮಲ್ಲಿ ಯಾರಿಗೂ ಒಪ್ಪಿಗೆ ಇಲ್ಲ. ಕೆಲ ಪ್ರಕರಣಗಳಲ್ಲಿ ವಿಚಾರಣೆ ನಡೆಸಲು ಹಸೀನಾ ಬಾಂಗ್ಲಾಗೆ ಬೇಕಾಗಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಸಮಸ್ಯೆ ಸೃಷ್ಟಿಸುವ ಹೇಳಿಕೆ ನೀಡುವುದು ಥರವಲ್ಲ. ಬಾಂಗ್ಲಾ ಬಗ್ಗೆ ಟೀಕೆ ಟಿಪ್ಪಣಿ ಮಾಡಿದರೆ ಭಾಂಗ್ಲಾದಲ್ಲಿರುವವರ ಸಹನೆ ಕೊನೆಗೊಳ್ಳುತ್ತದೆ. ಇದು ಭಾರತ-ಬಾಂಗ್ಲಾ ಎರಡಕ್ಕೂ ಒಳ್ಳೆಯದಲ್ಲ' ಎಂದು ಯೂನುಸ್ ಕಿಡಿಕಾರಿದ್ದಾರೆ.

ಭಾರತಕ್ಕೆ ಸಲಹೆ: ಭಾರತದ ಜತೆ ಉತ್ತಮ ಸಂಬಂಧ ಮುಂದುವರಿಸುವ ಇಚ್ಛೆ ವ್ಯಕ್ತಪಡಿಸಿರುವ ಯೂನುಸ್, ಕೇಂದ್ರ ಸರಕಾರಕ್ಕೊಂದು ಸಲಹೆ ನೀಡಿದ್ದಾರೆ. 'ಹಸೀನಾ ಹೊರತು ಉಳಿದ ಬಾಂಗ್ಲಾ ದೇಶವಾಸಿಗಳೆಲ್ಲಾ ಇಸ್ಲಾಮಿಸ್ಟ್‌ಗಳು. ಬಾಂಗ್ಲಾವನ್ನು ಅಫ್ಘಾನಿಸ್ತಾನ್ ಆಗಿ ಬದಲಾಯಿಸಲಾಗುತ್ತದೆ. ಹಸೀನಾ ಆಡಳಿತದಲ್ಲೆ ಬಾಂಗ್ಲಾ ಸುರಕ್ಷಿತವಾಗಿತ್ತು ಎಂಬ ಧೋರಣೆಯನ್ನು ಭಾರತ ಬಿಡಬೇಕು' ಎಂದಿದ್ದಾರೆ. ಬೇರೆಲ್ಲಾ ದೇಶಗಳಂತೆಯೇ ಭಾರತಕ್ಕೆ ಬಾಂಗ್ಲಾ ನೆರೆರಾಷ್ಟ್ರ ಎಂದಿದ್ದಾರೆ. ಹಿಂದೂಗಳ ಮೇಲಿನ ದಾಳಿ ವಿಚಾರದಲ್ಲಿ ಭಾರತದ ಕಳವಳ ಉತ್ಪ್ರೇಕ್ಷಿತ ಎಂದೂ ಯೂನುಸ್ ಹೇಳಿದ್ದಾರೆ.

2027ರೊಳಗೆ 11 ಕೋಟಿ ರೈತರಿಗೆ 'ಡಿಜಿಟಲ್ ಐಡಿ'

ದೆಹಲಿ: ರೈತರ ಸಬಲೀಕರಣಕ್ಕಾಗಿ ಕೇಂದ್ರದ ಎನ್‌ಡಿಎ ಸರಕಾರ ದೇಶಾದ್ಯಂತದ 11 ಕೋಟಿ ರೈತರಿಗೆ 2027ರೊಳಗೆ 'ಡಿಜಿಟಲ್ ಐಡಿ' ಕಾರ್ಡ್ ನೀಡುವ ಗುರಿ ಇಟ್ಟುಕೊಂಡಿದೆ.



ರೈತರಿಗೆ ಪ್ರಮುಖ ಸೇವೆಗಳು-ಯೋಜನೆಗಳನ್ನು ತಲುಪಿ ಸುವ ರೈತ ಕೇಂದ್ರಿತ 'ಡಿಜಿಟಲ್ ಪಬ್ಲಿಕ್ ಇನ್ಫ್ರಾ ಸ್ಟ್ರಕ್ಚರ್'(ಡಿಪಿಐ) ದಂತೆಯೇ 'ಡಿಜಿಟಲ್ ಐಡಿ' ಕೂಡಾ ಅಗ್ರಿಸ್ಟಾಕ್ ಉಪಕ್ರಮದ ಭಾಗವಾಗಿರ ಲಿದೆ. ಆಧಾರ್ ಕಾರ್ಡ್‌ನಂತೆಯೇ 'ರೈತ ಗುರುತಿನ ಚೀಟಿ' ಪರಿಚಯಿ ಸುವುದು ಅಗ್ರಿಸ್ಟಾಕ್‌ನ ಪ್ರಮುಖ ವೈಶಿಷ್ಟ್ಯವಾಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ 6 ಕೋಟಿ ಹಾಗೂ 2025-26ರಲ್ಲಿ 3 ಕೋಟಿ ಮತ್ತು 2026-27ರಲ್ಲಿ 2 ಕೋಟಿ ಡಿಜಿಟಲ್ ಐಡಿ ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದು ಸರಕಾರ ಹೇಳಿದೆ.

ರಾಜ್ಯ ಸರಕಾರ, ಕೇಂದ್ರಾಡಳಿತ ಪ್ರದೇಶ ವ್ಯಾಪ್ತಿಯಲ್ಲಿನ ರೈತರಿಗೆ ನೀಡಲಾಗುವ ಗುರುತಿನ ಚೀಟಿಯಲ್ಲಿ ರೈತರ ಒಡೆತನದ ಭೂ ದಾಖಲೆ, ಜಾನುವಾರು ಮಾಲೀಕತ್ವ, ವರ್ಷವಾರು ಬೆಳೆಗಳು, ಸರಕಾರದ ಇಲಾಖೆಗಳಿಂದ ರೈತ ಆಯಾ ವರ್ಷ ಪಡೆದ ಪ್ರಯೋಜನಗಳ ವಿವರ ಮೊದಲಾದ ದತ್ತಾಂಶಗಳನ್ನು ಡಿಜಿಟಲ್ ಐಡಿಗೆ ಜೋಡಿಸಲಾಗುತ್ತದೆ ಎಂದು ಹೇಳಿರುವ ಸರಕಾರ, ಪ್ರಸಕ್ತ ಸಾಲಿನಲ್ಲಿ 400 ಜಿಲ್ಲೆ, ಮುಂದಿನ ವರ್ಷ ಉಳಿದೆಲ್ಲಾ ಜಿಲ್ಲೆಗಳನ್ನು ಒಳಗೊಳ್ಳುವ 'ಡಿಜಿಟಲ್ ಬೆಳೆ ಸಮೀಕ್ಷೆ'ಯನ್ನು ಆರಂಭಿಸಲೂ ಯೋಜಿಸಿದೆ.

ಭಾರತ, ಚೀನಾ ಬ್ರೆಜಿಲ್ ಮಧ್ಯಸ್ಥಿಕೆಗೆ ರಷ್ಯಾ ಒಲವು

ಶಾಂತಿ ಮಾತುಕತೆಗೆ ಪುಟಿನ್ ಸಮ್ಮತಿ

ಮಾಸ್ಕೊ: ಉಕ್ರೇನ್ ಜತೆ ಶಾಂತಿ ಮಾತುಕತೆಗೆ ಸಿದ್ಧ ಎಂದು ರಷ್ಯಾ ಹೇಳಿದೆ. ಭಾರತ, ಚೀನಾ, ಬ್ರೆಜಿಲ್ ಮಧ್ಯಸ್ಥಿಕೆ ವಹಿಸಬಹುದಾದರೆ ಶಾಂತಿ ಮಾತುಕತೆ ನಡೆಸಬಹುದಾಗಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಗುರುವಾರ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಆ ಮೂಲಕ ವರ್ಷ ಕಾಲದ ಯುದ್ಧ ಕೊನೆಗೊ ಳಿಸುವ ಇಚ್ಚೆ ವ್ಯಕ್ತಪಡಿಸಿದ್ದಾರೆ. ಜತೆಗೆ ಒಂದು ಷರತ್ತನ್ನೂ ಮುಂದಿಟ್ಟಿದ್ದಾರೆ.



ವ್ಲಾಡಿವೊಸ್ಟೋಕ್‌ನಲ್ಲಿ 'ಈಸ್ಟರ್ನ್ ಎಕಾನಾಮಿಕ್ ಫೋರಂ' ಉದ್ದೇಶಿಸಿ ಮಾತನಾಡಿದ ಪುಟಿನ್, 'ರಷ್ಯಾ ಯಾವಾಗ ಶಾಂತಿ ಮಾತುಕತೆ ವಿರೋಧಿಸಿದೆ? ಉಕ್ರೇನ್ ಜತೆ ಮಾತಿಗೆ ರಷ್ಯಾ ಸಿದ್ಧವಿದೆ. ಆದರೆ ಯಾವುದೋ ಅಲ್ಪಾವಧಿ ಬೇಡಿಕೆಗಳ ಮೇಲೆ ಅಲ್ಲ. ಇಸ್ತಾಂಬುಲ್‌ನಲ್ಲಿ ಎರಡೂ ದೇಶಗಳ ಪ್ರತಿನಿಧಿಗಳ ಪ್ರಾಥಮಿಕ ಸಭೆಯಲ್ಲಾದ ಒಪ್ಪಂದ ಈವರೆಗೂ ಜಾರಿಗೆ ಬಂದಿಲ್ಲ. ಆ ಒಪ್ಪಂದದ ಮೇಲೆ ಚರ್ಚೆಗೆ ಸಿದ್ಧ. ಇಸ್ತಾನ್‌ಬುಲ್ ಚರ್ಚೆ ವಿಚಾರಗಳು ಶಾಂತಿ ಮಾತುಕತೆಗೆ ಅಡಿಪಾಯ ಅಗಬಹುದು ಎಂದಿದ್ದಾರೆ. ಆರ್ಥಿಕ ಬೆಳವಣಿಗೆ ಹಾಗೂ ಮಾಸ್ಕೊ ಸೇನಾ ಸಾಮರ್ಥ್ಯ ಮೊದಲ ಹಂತದ ಮಾತುಕತೆಯಲ್ಲಿ ರಷ್ಯಾದ ಆದ್ಯತೆಯಾಗಿತ್ತು ಎಂದು ಪುಟಿನ್ ಹೇಳಿದ್ದಾರೆ.

ಸಂಘರ್ಷ ಕೊನೆಗಾಣಿಸಲು ಭಾರತ, ಚೀನಾ, ಬ್ರೆಜಿಲ್ ಸೇರಿ ಹಲವು ರಾಷ್ಟ್ರಗಳು ಬಹಳಷ್ಟು ಸಲಹೆ ನೀಡಿವೆ. ಎರಡೂ ರಾಷ್ಟ್ರಗಳ ನಡುವಿನ ಸಮಸ್ಯೆಗಳನ್ನು ಪರಿಹರಿಸಲು ಆಸಕ್ತಿ ತೋರಿವೆ. ಈ ಪ್ರಯತ್ನಕ್ಕೆ ಬೆಂಬಲ ಸೂಚಿಸುವುದಾಗಿ ಪುಟಿನ್ ಹೇಳಿದ್ದಾರೆ.

ಕರಸ್ಕ್ ಮೇಲಿನ ಉಕ್ರೇನ್ ದಾಳಿ ವಿಫಲ: ಪುಟಿನ್

ಆ.6ರಂದು ರಷ್ಯಾದ ಕರಸ್ಕ್ ಪ್ರದೇಶದ ಮೇಲೆ ಉಕ್ರೇನ್ ಭಾರಿ ಶಸ್ತ್ರಾಸ್ತ್ರಗಳೊಂದಿಗೆ ದಾಳಿ ನಡೆಸಿತ್ತು. 2ನೇ ವಿಶ್ವ ಯುದ್ಧ ಬಳಿಕ ರಷ್ಯಾ ಮೇಲೆ ನಡೆದ ಅತಿದೊಡ್ಡ ದಾಳಿ ಇದಾಗಿತ್ತು. ಉಕ್ರೇನ್‌ನ ಡೊನ್‌ಬಾಸ್‌ನಲ್ಲಿನ ರಷ್ಯಾ ಸೇನೆಯ ಬಲ ಕುಗ್ಗಿಸಲು ಉಕ್ರೇನ್ ಸೇನೆ ಕರಸ್ಕ್ ಮೇಲೆ ಆಕ್ರಮಣ ನಡೆಸಿತು. ಆದರೆ ಶತ್ರು ಸೇನೆ ಸ್ವತಃ ಬೇಗ ನಿಶ್ಶಕ್ತಿಗೊಳಗಾಗಿದ್ದು, ಇದು ಉಕ್ರೇನ್‌ನ ಕೆಟ್ಟ ಯುದ್ಧ ತಂತ್ರಗಾರಿಕೆ ಎಂದು ಪುಟಿನ್ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಚೇರಿ, ಅನೆಕ್ಸ್ ಕಟ್ಟಡ-1, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ನರಸಿಂಹರಾಜ ಚೌಕ, ಬೆಂಗಳೂರು-560002

ಸಂ.: BBMP/C.Comm/PSR(G)/1636/2024-25 ನಮೂನೆ-1 ದಿನಾಂಕ : 05.09.2024

ಪ್ರಕಟಣೆ

ನಮೂನೆ-1 (ಸೆಕ್ಷನ್ 14ಬಿ (4) (1)

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ (4) ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, ಈ ಕೆಳಗಿನ ಷೆಡ್ಯೂಲ್ ನಲ್ಲಿ ನಮೂದಿಸಿರುವ "ಪ್ರದೇಶ' ವು ಕೊತನೂರು ರಸ್ತೆಯನ್ನು ಕೊತನೂರು ನಿಂದ ಆವಲಹಳ್ಳಿ ವರೆಗೆ ವಯಾ ಬೈರತಿ, ಬಿಳಿಶಿವಾಲೆ, ಆಡೂರು, ಬಿದರಹಳ್ಳಿ, ಹಿರಂಡಹಳ್ಳಿ ರಸ್ತೆಯ ಅಗಲೀಕರಣ ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಅವಶ್ಯಕವಿರುತ್ತದೆ. ಭೂ ಮಾಲೀಕರು ಹಾಗೂ ಸಾರ್ವಜನಿಕ ಉದ್ದೇಶಕ್ಕೆ ಅವಶ್ಯಕವಾಗಿ ಬೇಕಾಗಿರುವ ಪ್ರದೇಶಗಳ ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ತಮ್ಮ ಸಂಬಂಧಪಟ್ಟ ದಾಖಲೆಗಳ ಪ್ರತಿಗಳೊಂದಿಗೆ ಅಂದರೆ, (1) ಕ್ರಯ/ವಿಭಾಗ/ ಇತರೆ ಡೀಡ್‌ಗಳ ಟೈಟಲ್, (2) ತಹಲ್‌ವರೆಗಿನ ಪಹಣಿಗಳು, (3) ಮ್ಯುಟೇಷನ್ ಪ್ರತಿ, (4) ತೆರಿಗೆ ಪಾವತಿ ರಶೀದಿಗಳು, (5) ಕೃಷಿಯೇತರ ಬಳಕೆಗಾಗಿ ಭೂ ಪರಿವರ್ತನಾ ಆದೇಶ ಪ್ರತಿ, (6) ಕಂದಾಯ ರೇಖಾಚಿತ್ರ (7) ಆಕಾರ್ ಬಂದ್ ಇತ್ಯಾದಿಗಳನ್ನು ಖುದ್ದಾಗಿ ಈ ಕೆಳಗೆ ನಮೂದಿಸಿರುವ ವಿಳಾಸದಲ್ಲಿ ಅವರ ಸ್ವತ್ತಿಗೆ ಸಂಬಂಧಿಸಿದಂತೆ ಈ ಪ್ರಕಟಣೆಯ 30 ದಿನಗಳೊಳಗಾಗಿ ಆಸಕ್ತಿಯನ್ನು ತೋರ್ಪಡಿಸತಕ್ಕದ್ದು.

ಭೂ ಮಾಲೀಕರು/ಆಸಕ್ತ ವ್ಯಕ್ತಿಗಳು ಹಾಜರಾಗಿ ಹಾಗೂ ಅವರ ಹಕ್ಕುಗಳನ್ನು ಸಲ್ಲಿಸಬೇಕಾದ ಸ್ಥಳ	ವಿಭಾಗ / ಉಪ-ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ದಿನಾಂಕ ಮತ್ತು ಸಮಯ
ಉಪ ಆಯುಕ್ತರು (ಎಲ್ಎಕ್ಯೂ & ಟಿಡಿಆರ್) ಕೊಠಡಿ ಸಂ: 208, 2ನೇ ಮಹಡಿ, ಅನೆಕ್ಸ್ ಕಟ್ಟಡ-3, ನರಸಿಂಹರಾಜ ಚೌಕ, ಬೆಂಗಳೂರು-560002	ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತಸೌಕರ್ಯ ಮಹದೇವಪುರ ವಿಭಾಗ, ಬೃ.ಬೆಂ.ಮ.ಪಾಲಿಕೆ	ಪ್ರಕಟಣೆಯ ದಿನಾಂಕದಿಂದ 30 ದಿನಗಳು ಸಮಯ: ಬೆಳಿಗ್ಗೆ 10:00 ರಿಂದ ಸಂಜೆ 5:00 ಗಂಟೆಯವರೆಗೆ

ಅನುಸೂಚಿತ ಸ್ವತ್ತುಗಳಂತೆ ಯಾರ ಸ್ವತ್ತುಗಳು ಸ್ವಾಧೀನಕೊಳ್ಳಪಡುತ್ತವೋ ಅಂತಹ ಸ್ವತ್ತಿನ ಮಾಲೀಕರು/ಆಸಕ್ತ ವ್ಯಕ್ತಿಗಳು ಅಭಿವೃದ್ಧಿ ಹಕ್ಕುಗಳ ಮಂಜೂರಾತಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಒಪ್ಪಿಗೆ ನೀಡತಕ್ಕದ್ದು.

ಸೌಲಭ್ಯ ಹಕ್ಕುಗಳ ಪ್ರಯೋಜನ ನಿಯಮಗಳ ಕಾಯ್ದೆ - 2016ರಂತೆ ಸ್ವಾಧೀನಕ್ಕೊಳಪಡುವ ಭೂಮಿಗಳ ಷೆಡ್ಯೂಲ್ ಸ್ವತ್ತುಗಳ ಭೂ ಮಾಲೀಕರು । ಆಸಕ್ತ ವ್ಯಕ್ತಿಗಳಿಗೆ ಅಭಿವೃದ್ಧಿ ಹಕ್ಕುಗಳ ಮಂಜೂರಾತಿಗಾಗಿ ಆಯ್ಕೆ ನೀಡಲಾಗುತ್ತದೆ. ಅಭಿವೃದ್ಧಿ ಹಕ್ಕುಗಳಂತೆ (ಪರಿಗಣಿಸಲಾಗದ ಭೂಮಿಯಲ್ಲಿ) ನಿರ್ಮಾಣಗೊಂಡಿರುವ ಕಟ್ಟಡದಲ್ಲಿ ಒಂದು ಬಾರಿ ಕಟ್ಟಡ ಪ್ರದೇಶವನ್ನು ಒಪ್ಪಿಸಿದ ಮೇಲೆ ಒಪ್ಪಿಸಲಾದ ಕಟ್ಟಡ ಪ್ರದೇಶದ ಮೌಲ್ಯದ ಅಂದಾಜಿನಂತೆ ಪ್ರದೇಶದ ಮಾರುಕಟ್ಟೆ ಮೌಲ್ಯವನ್ನು ಭಾಗಿಸಿದಾಗ ಆರ್ಥಿಕ ಪರಿಹಾರಗಳ ಬದಲಾಗಿ ಸ್ವಾಧೀನಕ್ಕೊಳಪಟ್ಟ ಭೂಮಿಯ ಎರಡರಷ್ಟು ಭೂಪ್ರದೇಶವನ್ನು ಭೂ ಮಾಲೀಕರು ಪಡೆಯುತ್ತಾರೆ. ಮೂಲ ಪ್ಲಾಟ್ ಮತ್ತು ಸ್ವೀಕರಿಸಿದ ಪ್ಲಾಟ್‌ಗಳಲ್ಲಿ ಮಾರುಕಟ್ಟೆ ಮೌಲ್ಯದೊಂದಿಗೆ ಅಪವರ್ತನ ಮಾಡುವುದರೊಂದಿಗೆ ಪರಿಗಣಿಸಲಾಗದ ಭೂಮಿಯನ್ನು ಬಳಸಬಹುದಾಗಿದೆ. ಪರಿಗಣಿಸಲಾದ ಭೂಮಿಯು ಎಫ್‌ಎಆರ್‌ಗೆ ಅರ್ಹವಾಗಿದ್ದು, ನಿಯಮಗಳಲ್ಲಿ ತಿಳಿಸಿರುವ ನಿಯಮ ಮತ್ತು ಷರತ್ತುಗಳಂತೆ ಸ್ವೀಕರಿಸಲಾದ ಪ್ಲಾಟ್‌ಗಳಲ್ಲಿ ಹೆಚ್ಚುವರಿ ಬಿಲ್ಡಪ್ ಪ್ರದೇಶವಾಗಿ ಬಳಸಬಹುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿಗಳು ಡೆಪ್ಯೂಟಿ ಕಮಿಷನರ್‌ರವರ ಕಚೇರಿ (ಎಲ್ಎಕ್ಯೂ & ಟಿಡಿಆರ್). ಬೃ.ಬೆಂ.ಮಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಷೆಡ್ಯೂಲ್

ಈ ಕೆಳಗಿನ ಷೆಡ್ಯೂಲ್ ನಲ್ಲಿ ನಮೂದಿಸಿರುವ "ಪ್ರದೇಶ' ವು ಕೊತನೂರು ರಸ್ತೆಯನ್ನು ಕೊತನೂರು ನಿಂದ ಆವಲಹಳ್ಳಿ ವರೆಗೆ ವಯಾ ಬೈರತಿ, ಬಿಳಿಶಿವಾಲೆ, ಆಡೂರು, ಬಿದರಹಳ್ಳಿ, ಹಿರಂಡಹಳ್ಳಿ ರಸ್ತೆಯ ಅಗಲೀಕರಣ ಮಾಡುವ ಕಾಮಗಾರಿಗಾಗಿಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆ" ಮಾಡುವ ಕಾಮಗಾರಿಗಾಗಿ ಅವಶ್ಯಕವಿರುವ ಭೂಸ್ವಾಧೀನ ಪ್ರಕ್ರಿಯೆ.

ಜಿಲ್ಲೆಯ ಹೆಸರು: ಬೆಂಗಳೂರು ನಗರ | ತಾಲ್ಲೂಕಿನ ಹೆಸರು: ಬೆಂಗಳೂರು ಪೂರ್ವ | ಗ್ರಾಮದ ಹೆಸರು: ಹಿರಂಡಹಳ್ಳಿ

Sl No	Sy No/ Khatha No	Type of Land		Nature of Land		Dimension of the land / plot and extent in sq.m			Boundaries of the land /plot				Building Details			Present activity on Land/ Building (Specify Specific activity such as shop, office, factory, apartment individual house etc.,	Market (guidelines) value of the land per Sqm*			Name and address of the owner of the plot/ land for which DRC is to be issued / already issued.
		Vacant	Built up	Agriculture	Converted Undeveloped	Approved layout / developed land Building Site	Dimension	Extent	North	South	East	West	Extent in Sqm	Type of Construction and No. of Floors	Floor area Ratio		Agriculture/B-Khatha	Converted Undeveloped	Developed Site	
	ಸರ್ವೇ ನಂ.112/7	ಖಾಲಿ				-		187.00	ರಸ್ತೆ	ಸರ್ವೇ ನಂ. 112/7 ರ ಉಳಿಕೆ ಭೂಮಿ	ಸರ್ವೇ ನಂ. 112/8 ರ ಶೇರಿಗ ಪೈ	ಸರ್ವೇ ನಂ. 112/7 ರ ಉಳಿಕೆ ಭೂಮಿ	-	-	-	-	ಸರ್ಕಾರದಿಂದ ನಿರ್ಧರಿಸಲಾಗುವುದು	ಸರ್ಕಾರದಿಂದ ನಿರ್ಧರಿಸಲಾಗುವುದು	ಸರ್ಕಾರದಿಂದ ನಿರ್ಧರಿಸಲಾಗುವುದು	ಶ್ರೀಮತಿ ಅಶ್ವಥ್ ಲಕ್ಷ್ಮೀ ಕೆ.ಟಿ W/o ಹೆಚ್.ವಿ ರಾಮಮೂರ್ತಿ

ಸೂಚನೆ : ಮಾರುಕಟ್ಟೆ ಮೌಲ್ಯವು ಸ್ವತ್ತಿನ ಪರಿವರ್ತನೆ ಮತ್ತು ಅಭಿವೃದ್ಧಿಯ ಸ್ಥಿತ್ಯಂತರದ ಮೇಲೆ ನಮೂನೆ-3ರ ಆಧಾರದಲ್ಲಿ ಸ್ವತ್ತಿನ ಮಾಲೀಕರು ಹಾಜರು ಪಡಿಸುವ ದಸ್ತಾವೇಜುಗಳ ಮೇಲೆ ನಿರ್ಧರಿಸಲಾಗುವುದು.ಕಟ್ಟಡದ ವಿಸ್ತೀರ್ಣವನ್ನು ಅಭಿವೃದ್ಧಿ ಹಕ್ಕುಗಳ ನಿಯಮಗಳು 2016ರ ನಗರ ಮತ್ತು ಪಟ್ಟಣ ಯೋಜನೆ, ಸೌಲಭ್ಯಗಳ ಆಧಾರದಲ್ಲಿನಮೂನೆ-3 ಸಾರ್ವಜನಿಕ ನೋಟೀಸ್ ಹಂತದಲ್ಲಿ ಪರಿವೀಕ್ಷಿಸಲಾಗುವುದು.

ಸಹಿ/-
ಮುಖ್ಯ ಆಯುಕ್ತರು, ಬಿಬಿಎಂಪಿ

ಕರ್ನಾಟಕ ಸರ್ಕಾರ ತೋಟಗಾರಿಕೆ ಇಲಾಖೆ

ಯೋಜನಾಧಿಕಾರಿ/ತೋಟಗಾರಿಕೆ ಉಪನಿರ್ದೇಶಕರ ಕಛೇರಿ, ಸಂರಕ್ಷಿತ ಬೇಸಾಯ ಉತ್ಕೃಷ್ಟ ಕೇಂದ್ರ, ಸೋಮನಹಳ್ಳಿ ಕಾವಲು ತೋಟಗಾರಿಕೆ ಕ್ಷೇತ್ರ, ದುದ್ದ ಹೋಬಳಿ, ಕುದುರುಗುಂಡಿ ಪೋಸ್ಟ್, ಹಾಸನ ಜಿಲ್ಲೆ

E-mail- coehassan@gmail.com ದೂರವಾಣಿ: 9448416618

ಸಂ:ಯೋಅ(ತೋಉನಿ)/ಸಂ.ಬೇ.ಉ.ಕೇ/ಸೋ.ಕಾ.ಹಾ/Vegetable Special/2024-25 ದಿನಾಂಕ:04.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ತೋಟಗಾರಿಕೆ ಇಲಾಖೆವತಿಯಿಂದ 2024-25ನೇ ಸಾಲಿನಲ್ಲಿ ಸಂರಕ್ಷಿತ ಬೇಸಾಯ ಉತ್ಕೃಷ್ಟ ಕೇಂದ್ರ, ಸೋಮನಹಳ್ಳಿಕಾವಲು ತೋಟಗಾರಿಕೆ ಕ್ಷೇತ್ರದಲ್ಲಿ Vegetable Special ಉತ್ಪಾದನೆಗೆ ಅವಶ್ಯಕತೆಯಿರುವ ಸೂಕ್ಷ್ಮ ಪೋಷಕಾಂಶಗಳನ್ನು ಸರಬರಾಜು ಮಾಡಲು ಇ-ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ದಿನಾಂಕ 03.09.2024 ರಿಂದ ಟೆಂಡರ್ ಪ್ರಾರಂಭಿಸಲಾಗುವುದು. ದಿನಾಂಕ 17.09.2024 ರ ಅಪರಾಹ್ನ 5.30 ಗಂಟೆಗೆ ಟೆಂಡರ್ ನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ತಾಂತ್ರಿಕ ಬಿಡ್ಡನ್ನು ದಿನಾಂಕ 19.09.2024 ರಂದು ಪೂರ್ವಾಹ್ನ 11.00 ಗಂಟೆಗೆ ತೆರೆಯಲಾಗುವುದು. ತಾಂತ್ರಿಕ ಬಿಡ್ಡಿನಲ್ಲಿ ಅನರ್ಹರಾದ ಟೆಂಡರ್‌ದಾರರ ಆರ್ಥಿಕ ಬಿಡ್ಡನ್ನು ನಂತರದ ದಿನಗಳಲ್ಲಿ ತೆರೆಯಲಾಗುವುದಿಲ್ಲ. ಟೆಂಡರ್ ನಿಬಂಧನೆ ಮತ್ತು ನಿಯಮಾವಳಿ ಹಾಗೂ ಹೆಚ್ಚಿನ ವಿವರಗಳಿಗೆ ಯೋಜನಾಧಿಕಾರಿಗಳು/ ತೋಟಗಾರಿಕೆ ಉಪನಿರ್ದೇಶಕರು, ಸಂರಕ್ಷಿತ ಬೇಸಾಯ ಉತ್ಕೃಷ್ಟ ಕೇಂದ್ರ, ಸೋಮನಹಳ್ಳಿಕಾವಲು ತೋಟಗಾರಿಕೆ ಕ್ಷೇತ್ರ, ಹಾಸನ ಕಛೇರಿ ಅಥವಾ ದೂರವಾಣಿ ಸಂಖ್ಯೆ 9739651156, 9449908205 ನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/- ಯೋಜನಾಧಿಕಾರಿಗಳು/ತೋಟಗಾರಿಕೆ ಉಪನಿರ್ದೇಶಕರು, ಸಂರಕ್ಷಿತ ಬೇಸಾಯ ಉತ್ಕೃಷ್ಟ ಕೇಂದ್ರ, ಸೋಮನಹಳ್ಳಿ ಕಾವಲು ತೋಟಗಾರಿಕೆ ಕ್ಷೇತ್ರ, ಹಾಸನ.

ವಾಸಾಸಂಇ/ಹಿಸನಿ/ಹಾಸನ/412/ಕೆಎಸ್‌ಎಂಸಿಎ/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-81/1296/2024-25 ದಿನಾಂಕ: 05.09.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ರಾಜರಾಜೇಶ್ವರಿ ಬಿಲ್ಡಂಕಾನ್ ಪ್ರೈವೇಟ್ ಲಿ., ನಂ. 67/1, ಶ್ರೀರಂಗ ಕಾಂಪ್ಲೆಕ್ಸ್, 2ನೇ ಮಹಡಿ, ನೆಟ್ಟಕಲ್ಲಪ್ಪ ಸರ್ಕಲ್, ಬಸವನಗುಡಿ, ಬೆಂಗಳೂರು-560004	ಯಲಹಂಕ	ಜಾಲ	ಸೊಣ್ಣಪ್ಪನ ಹಳ್ಳಿ	70	2ಎ-00ಗುಂ	ವ್ಯವಸಾಯ	ವಸತಿ

ಷರಾ: ಈ ಜಮೀನಿನಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಲೈಂಗಿಕ ದೌರ್ಜನ್ಯ: ಟಿಡಿಪಿ ಶಾಸಕ ಪಕ್ಷದಿಂದ ಸಸ್ಪೆಂಡ್

ಅಮರಾವತಿ: ಲೈಂಗಿಕ ದೌರ್ಜನ್ಯ ಆರೋಪ ಹಿನ್ನೆಲೆ ತೆಲುಗು ದೇಶಂ ಪಕ್ಷದ(ಟಿಡಿಪಿ) ಶಾಸಕ ಕೊಣೆತಿ ಆದಿಮುಲಂರನ್ನ ಗುರುವಾರ ಪಕ್ಷದಿಂದ ಅಮಾನತು ಮಾಡಲಾಗಿದೆ. ಸಂತ್ರಸ್ತ ಮಹಿಳೆ ಸಿಎಂ ಚಂದ್ರಬಾಬು ನಾಯ್ಡು ಅವರಿಗೆ ಪತ್ರ ಬರೆದು ತನ್ನ ಮೇಲೆ ಶಾಸಕರಿಂದ ಅತ್ಯಾಚಾರ ನಡೆದಿದೆ ಎಂದು ಆರೋಪಿಸಿದ್ದರು. ಜತೆಗೆ ಹೈದರಾಬಾದ್‌ನಲ್ಲಿ ಮಾಧ್ಯಮಗೋಷ್ಠಿ ನಡೆಸಿ, ತನ್ನ ಜತೆ ಸಹಕರಿಸದೇ ಇದ್ದರೆ ಕುಟುಂಬದವರನ್ನು ಕೊಲ್ಲುವುದಾಗಿಯೂ, ಕುಟುಂಬಕ್ಕೆ ಯಾವುದೇ ಸರಕಾರಿ ಸೌಲಭ್ಯ ದೊರೆಯದಂತೆ ಮಾಡುವುದಾಗಿಯೂ ಶಾಸಕ ಆದಿಮುಲಂ ಬೆದರಿಕೆ ಹಾಕಿದ್ದರು ಎಂದು ಆರೋಪಿಸಿದ್ದರು. ದೌರ್ಜನ್ಯ ಎಸಗಿದ್ದಕ್ಕೆ ಸಾಕ್ಷಿಯಾಗಿ ಸುದ್ದಿಗೋಷ್ಠಿಯಲ್ಲಿ ವಿಡಿಯೊ ಹಾಜರುಪಡಿಸಿದರು.

ಗಂಭೀರ ಆರೋಪ ಕೇಳಿಬಂದಿದ್ದರಿಂದ ಸತ್ಯವೇಡು ಶಾಸಕ ಕೊಣೆತಿ ಆದಿಮುಲಂರನ್ನ ಅಮಾನತುಗೊಳಿಸಲಾಗಿದೆ. ಈ ಮೊದಲು ವೈಎಸ್‌ಆರ್ ಕಾಂಗ್ರೆಸ್ ಪಕ್ಷದಲ್ಲಿದ್ದ ಆದಿಮುಲಂ ವಿಧಾನಸಭಾ ಚುನಾವಣೆ ಸಂದರ್ಭ ಟಿಡಿಪಿಗೆ ಪಕ್ಷಾಂತರಗೊಂಡಿದ್ದರು.

ಕಾಶ್ಮೀರ ಚುನಾವಣೆಗೆ ಮೋದಿ ಪ್ರಚಾರ ರ‍್ಯಾಲಿ

ಶ್ರೀನಗರ: ಜಮ್ಮು-ಕಾಶ್ಮೀರ ಚುನಾವಣೆಗೆ ಪ್ರಧಾನಿ ನರೇಂದ್ರ ಮೋದಿ ಮೂರು ಪ್ರಚಾರ ರ‍್ಯಾಲಿಗಳನ್ನು ನಡೆಸಲಿದ್ದಾರೆ. ಜಮ್ಮು ಭಾಗದಲ್ಲಿ 2, ಕಾಶ್ಮೀರ ಭಾಗದಲ್ಲಿ ಒಂದು ಪ್ರಚಾರ ರ‍್ಯಾಲಿ ನಿಗದಿಯಾಗಿದೆ ಎಂದು ಜಮ್ಮು-ಕಾಶ್ಮೀರ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿ ಅಶೋಕ್ ಕೌಲ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಕಾಶ್ಮೀರಕ್ಕೆ ಆಗಮಿಸಲಿದ್ದು, ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡುವರು. ಕಾಶ್ಮೀರ ಜನತೆ ಮೋದಿ ಸರಕಾರದಲ್ಲಿ ನಂಬಿಕೆ ಇಟ್ಟಿದ್ದು, ಈ ಬಾರಿಯ ಚುನಾವಣೆ ಯಲ್ಲಿ ಬಿಜೆಪಿ ಬೆಂಬಲಿಸಲಿದ್ದಾರೆ ಎಂದರು.

ಸಮಾಚಾರ ಸಣ್ಣದಲ್ಲ

ಬೈಂದೂರಿನಲ್ಲಿ ಗೋ ಶಾಲೆ ನಿರ್ಮಾಣಕ್ಕೆ ಸೂಚನೆ

ಬೈಂದೂರು: ಕ್ಷೇತ್ರ ವ್ಯಾಪ್ತಿಯ ಗೋಮಾಳ ಸರ್ವೇ ನಡೆಸುವ ಕಾರ್ಯ ಆದಷ್ಟು ಶೀಘ್ರ ಪೂರ್ಣಗೊಳಿಸಬೇಕು. ಮುಂದಿನ ಒಂದು ತಿಂಗಳೊಳಗೆ ಕನಿಷ್ಠ ಒಂದಾದರೂ ಗೋ ಶಾಲೆ ನಿರ್ಮಿಸಬೇಕು ಎಂದು ಶಾಸಕ ಗುರುರಾಜ್ ಗಂಟಿಹೊಳೆ ಅಧಿಕಾರಿಗಳಿಗೆ ತಿಳಿಸಿದರು. ಅವರು ಬುಧವಾರ ಗೋಮಾಳ ಸರ್ವೇ ಆದ ಗ್ರಾಮ ಪಂಚಾಯತ್ ಪಿಡಿಒ ಜೊತೆ ಸಭೆ ನಡೆಸಿದರು. ನಾಡದಲ್ಲಿ ನೀರಿಗಾಗಿ ಕೆರೆಯನ್ನು ಮಾಡಲಾಗಿದೆ ಮತ್ತು ಜೈವಿಕ ಬೇಲಿಯನ್ನು ಕೂಡ ನಿರ್ಮಿಸಲಾಗಿದೆ. ಜೈವಿಕ ಬೇಲಿಗೆ ಬಿದಿರು ಮತ್ತು ಸಿಹಿ ಹುಣಸೆ ಗಿಡಗಳನ್ನು ನೆಡಲಾಗುವುದು ಎಂದು ಸೋಶಿಯಲ್ ಫಾರೆಸ್ಟ್ ಅಧಿಕಾರಿಗಳು ತಿಳಿಸಿದರು. ನರೇಗಾ ಯೋಜನೆಯಲ್ಲಿ 35 ಲಕ್ಷ ರೂ. ಹಣ ಗೋಶಾಲೆ ಶೆಡ್ ನಿರ್ಮಾಣಕ್ಕೆ ಮೀಸಲಿದ್ದು ಅದನ್ನು ಉಪಯೋಗಿಸಲು ಕ್ರಿಯಾಯೋಜನೆಯನ್ನು ತಯಾರಿ ಮಾಡಲು ಶಾಸಕರು ತಿಳಿಸಿದರು. ಕಂಬದಕೋಣೆ ಗೋಮಾಳದಲ್ಲಿ ಅಕೇಶಿಯ ಮರಗಳಿದ್ದು ಅವುಗಳ ಕಠೋವಿನ ಕುರಿತು ಚರ್ಚಿಸಲಾಯಿತು. ಕೊಲ್ಲೂರು ದೇವಸ್ಥಾನದ ವತಿಯಿಂದ ನಡೆಯುತ್ತಿರುವ ಗೋಮಾಳ ಕೆಲಸದ ಪ್ರಗತಿಯ ಬಗ್ಗೆ ಚರ್ಚಿಸಲಾಯಿತು.

ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನ

ಚಿಕ್ಕಮಗಳೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 2024-25ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪರಿಶಿಷ್ಟ ಜಾತಿ ಉಪ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಯುವಕ/ಯುವತಿಯರಿಗೆ ಜಿಮ್/ಫಿಟ್ನೆಸ್, ಬ್ಯೂಟೀಷಿಯನ್ ಮತ್ತು ಚಾಟ್ಸ್ ತಯಾರಿಕೆ ತರಬೇತಿ ಶಿಬಿರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 19 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪನಿರ್ದೇಶಕರ ಕಚೇರಿಯನ್ನು (ದೂ.ಸಂ. 08262-295724) ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳೆಹಾನಿಯ ಸಮೀಕ್ಷೆ: ಆಕ್ಷೇಪಣೆಗೆ ಅವಕಾಶ

ಚಿಕ್ಕಮಗಳೂರು: ತೋಟಗಾರಿಕೆ ಇಲಾಖೆಯಿಂದ 2024-25ನೇ ಸಾಲಿನ ಏಪ್ರಿಲ್ ಮತ್ತು ಮೇ ಮಾಹೆಯಲ್ಲಿ ಮಳೆಯಿಂದ ಹಾನಿಯಾದ ಬೆಳೆಹಾನಿಯ ವಿವರವನ್ನು ಸಮೀಕ್ಷೆ ನಡೆಸಿ ಹಾನಿಯಾದ ರೈತರ ಸಂಪೂರ್ಣ ವಿವರವನ್ನು ಜಿಲ್ಲಾಧಿಕಾರಿಗಳ ಕಚೇರಿ, ಉಪವಿಭಾಗಾಧಿಕಾರಿಗಳ ಕಚೇರಿ, ತಹಸೀಲ್ದಾರ್ ಕಚೇರಿ, ಗ್ರಾಮ ಪಂಚಾಯಿತಿ ಹಾಗೂ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಸಾರ್ವಜನಿಕರ ವೀಕ್ಷಣೆಗಾಗಿ ಪ್ರಕಟಿಸಲಾಗಿದೆ. ಆಕ್ಷೇಪಣೆ ಇದ್ದಲ್ಲಿ ಸಂಬಂಧಿಸಿದ ತಾಲ್ಲೂಕು ಮಟ್ಟದ ತಾಲ್ಲೂಕು ಕಚೇರಿ/ತೋಟಗಾರಿಕೆ ಇಲಾಖಾ ಕಚೇರಿಗೆ 7 ದಿನದೊಳಗಾಗಿ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಲೋಕ ಅದಾಲತ್ ಸೆ.14ಕ್ಕೆ

ಚಿಕ್ಕಮಗಳೂರು: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರ ನಿರ್ದೇಶನದಂತೆ ಸೆಪ್ಟೆಂಬರ್ 14 ರಂದು ರಾಷ್ಟ್ರೀಯ ಲೋಕ ಅದಾಲತ್‌ನ್ನು ಆಯೋಜಿಸಲಾಗಿದೆ. ಈ ಲೋಕ ಅದಾಲತ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು, ಕಕ್ಷಿದಾರರು ಭಾಗವಹಿಸಿ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಅವಕಾಶವಿದ್ದು ಸಾರ್ವಜನಿಕರು ರಾಷ್ಟ್ರೀಯ ಲೋಕ ಅದಾಲತ್‌ನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹನುಮಂತಪ್ಪ .ವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿನಾಯಕ ಹಬ್ಬ: ಪ್ರಾಣಿ ವಧೆ ನಿಷೇಧ

ಚಿಕ್ಕಮಗಳೂರು: ಸೆಪ್ಟೆಂಬರ್ 7ರಂದು ಗಣೇಶ ಚತುರ್ಥಿ ಪ್ರಯುಕ್ತ ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯಲ್ಲಿ ಇರುವ ಕೋಳಿ, ಕುರಿ, ಮೀನು, ಮಾಂಸ ಮಾರಾಟಗಾರರು ಹಾಗೂ ಮಾಂಸಹಾರಿ ಹೋಟೆಲ್ ಮತ್ತು ರೆಸ್ಟೋರೆಂಟ್ ಮಾಲೀಕರು ಕಡ್ಡಾಯವಾಗಿ ಪ್ರಾಣಿ ವಧೆ ಹಾಗೂ ಮಾಂಸ ಮಾರಾಟ ಮಾಡುವುದನ್ನು ನಿಷೇಧಿಸಿದೆ. ಕೋಳಿ, ಕುರಿ, ಮೀನು, ಮಾಂಸ ಮಾರಾಟಗಾರರು ಮತ್ತು ಮಾಂಸಹಾರಿ ಹೋಟೆಲ್‌ಗಳನ್ನು ತೆರೆಯಬಾರದೆಂದು, ತಪ್ಪಿದಲ್ಲಿ ಅಂತಹ ಮಾಂಸ ಮಾರಾಟ ಮಾಡುವವರ ಮತ್ತು ಮಾಂಸಹಾರಿ ಹೋಟೆಲ್‌ಗಳ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದೆಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಹೆಚ್.ಡಿ.ಕುಮಾರಸ್ವಾಮಿ} ಕೇಂದ್ರ ಸಚಿವ

ಕೇಂದ್ರ ಸರಕಾರದೊಂದಿಗೆ ರಾಜ್ಯ ಸರಕಾರ ಸಂಘರ್ಷ ಮಾಡದೇ, ಅಭಿವೃದ್ಧಿಗಾಗಿ ಕೇಂದ್ರ ಸರಕಾರದ ಸಹಕಾರ ಬಯಸಿದರೆ ರಾಜ್ಯ ಮತ್ತು ಕೇಂದ್ರ ಸರಕಾರ ಸಂಬಂಧ ಉತ್ತಮವಾಗಿರುತ್ತದೆ.

ಜ್ಞಾನ ವೃದ್ಧಿಗೆ ಗ್ರಂಥಾಲಯ ಅಗತ್ಯ

ಓದು ವ್ಯಕ್ತಿಯ ಬೆಳವಣಿಗೆಗೆ ಪೂರಕ | ಡಾ.ಎಂ.ಮೋಹನ್ ಆಳ್ವ

ಮೂಡುಬಿದಿರೆ: ಸಂಗ್ರಹಿಸಿದ ವಸ್ತುಗಳನ್ನು ಕೊಡುಗೆ ನೀಡುವುದು ಅಂತಕರಣದಿಂದ ಮಾಡುವ ದಾನ. ಸಂಗ್ರಹ ಹಾಗೂ ದಾನದ ಹಿಂದಿನ ಮೌಲ್ಯ ಮಹತ್ತರ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಹೇಳಿದರು.

ಆಳ್ವಾಸ್ (ಸ್ವಾಯತ್ತ) ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಗುರುವಾರ ಗ್ರಂಥಾಲಯ ವಿಭಾಗವು ಹಮ್ಮಿಕೊಂಡ ಗ್ರಂಥಪಾಲಕರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಮೆಸಪಟೋಮಿಯದಲ್ಲಿ ಮೊದಲ ಗ್ರಂಥಾಲಯ ಸ್ಥಾಪನೆಯಾಯಿತು ಎಂದು ಇತಿಹಾಸ ತಿಳಿಸಿದ ಅವರು, ದೇವಸ್ಥಾನ ಕಟ್ಟಿದರೆ ಭಿಕ್ಷುಕರು ಹೆಚ್ಚಾಗುತ್ತಾರೆ. ಆದರೆ, ಗ್ರಂಥಾಲಯ ಕಟ್ಟಿದರೆ ವಿದ್ವಾಂಸರು ಹುಟ್ಟುತ್ತಾರೆ ಎಂದು ಡಾ.ಬಿ.ಆರ್. ಅಂಬೇಡ್ಕರ್ ಮಾತನ್ನು ನೆನಪಿಸಿದರು.

ಪುಸ್ತಕಕ್ಕೆ ಮರಣ ಇಲ್ಲ. ಪುಸ್ತಕಗಳು ಜ್ಞಾನ ನೀಡುವ ದೇಗುಲ. ಜಾತಿ, ಧರ್ಮ ಮೀರಿದ ದೇವಾಲಯವೇ ಗ್ರಂಥಾಲಯ. ನಾಗರಿಕತೆ ಇತಿಹಾಸವೇ ಗ್ರಂಥದಲ್ಲಿವೆ. ಓದು ವ್ಯಕ್ತಿ ಬೆಳವಣಿಗೆಗೆ ಪೂರಕ ಎಂದರು. ದೇಶದ ಮೊದಲ ಗ್ರಂಥಾಲಯದಲ್ಲಿ ನಮ್ಮ ಸುರತ್ಕಲ್‌ನ ಮಹಿಳೆಯೊಬ್ಬರು ಸೇವೆ ಸಲ್ಲಿಸಿದ್ದರು' ಎಂದು ಸ್ಮರಿಸಿದ ಅವರು, ವಿದ್ಯಾರ್ಥಿಗಳು ಓದುವ ಮತ್ತು ಬರೆಯುವ ಹವ್ಯಾಸ ಹೆಚ್ಚಿಸಿಕೊಳ್ಳಬೇಕು ಎಂದರು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಗ್ರಂಥಾಲಯ ಬಹುಮುಖ್ಯ. ಜ್ಞಾನ ಪಡೆಯುವುದು ಉತ್ತಮ. ಆದರೆ, ಪುಸ್ತಕ ಹಾಳು ಮಾಡುವುದು ಹಾಗೂ ಕದಿಯುವುದು ದೊಡ್ಡ ಅಪರಾಧ. ಪ್ರತಿಯೊಬ್ಬರ ಮನೆಯಲ್ಲಿ ಗ್ರಂಥಾಲಯ ಇರಲಿ ಎಂದು ಹಿತವಚನ ಹೇಳಿದರು.

ಉಪನ್ಯಾಸ ನೀಡಿದ ನಿವೃತ್ತ ಪ್ರಾಧ್ಯಾಪಕ ಡಾ.ಆರ್.ನರಸಿಂಹ ಮೂರ್ತಿ, ಸಾಧಕರ ಚರಿತ್ರೆ ನಮ್ಮ ಬದುಕಿಗೆ ಪ್ರೇರಣೆ ನೀಡುತ್ತದೆ' ಎಂದರು. ಸರ್ವಪಳ್ಳಿ ರಾಧಾಕೃಷ್ಣನ್ ಆದರ್ಶ ಶಿಕ್ಷಕರು. ಅವರ ಜ್ಞಾನ, ಸಾಧನೆ ಜೊತೆ ವಿದ್ಯಾರ್ಥಿಗಳ ಪ್ರೀತಿ ಪಾತ್ರರಾಗಿದ್ದರು. ಅವರ ಹುಟ್ಟುಹಬ್ಬವನ್ನು ಶಿಕ್ಷಕರ ದಿನವಾಗಿ ಆಚರಿಸಲಾಗುತ್ತದೆ ಎಂದರು. ಬದುಕಿನಲ್ಲಿ ವೃತ್ತಿಯ ಆಯ್ಕೆ ಆಕಸ್ಮಿಕ ಆಗಿರಬಹುದು.

ಗ್ರಂಥಪಾಲಕರ ದಿನಾಚರಣೆ ಕಾರ್ಯಕ್ರಮವನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಅವರು ಉದ್ಘಾಟಿಸಿದರು.

> **ಪುಸ್ತಕಕ್ಕೆ ಮರಣ ಇಲ್ಲ. ಪುಸ್ತಕಗಳು ಜ್ಞಾನ ನೀಡುವ ದೇಗುಲ. ಜಾತಿ, ಧರ್ಮ ಮೀರಿದ ದೇವಾಲಯವೇ ಗ್ರಂಥಾಲಯ. ನಾಗರಿಕತೆ ಇತಿಹಾಸವೇ ಗ್ರಂಥದಲ್ಲಿವೆ. ಓದು ವ್ಯಕ್ತಿ ಬೆಳವಣಿಗೆಗೆ ಪೂರಕ.**
>
> ಡಾ.ಎಂ.ಮೋಹನ ಆಳ್ವ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ

ಆದರೆ, ವೃತ್ತಿಗೆ ಬಂದ ಬಳಿಕ ಅದನ್ನು ಪ್ರೀತಿಸಬೇಕು, ಆನಂದಿಸಬೇಕು ಹಾಗೂ ನ್ಯಾಯ ನೀಡಬೇಕು ಎಂದರು.

ಗಣಿತ ಪ್ರಾಧ್ಯಾಪಕರಾದ ಎಸ್.ಆರ್. ರಂಗನಾಥನ್ ತಮ್ಮ ಆಸಕ್ತಿ ಹಾಗೂ ಅಧ್ಯಯನದಿಂದ ಭಾರತದ ಗ್ರಂಥಾಲಯ ಪಿತಾಮಹ ಆದರು ಎಂದರು. ಆಳ್ವಾಸ್ ಕಾಲೇಜಿನ ವಿದ್ಯಾರ್ಥಿಗಳು ಅದೃಷ್ಟವಂತರು. ಇಲ್ಲಿ ಪಠ್ಯದಷ್ಟೇ ಪ್ರಮುಖವಾದ ಪಠ್ಯೇತರ ಚಟುವಟಿಕೆಗಳು ನಿರಂತರವಾಗಿವೆ. ಸಿಕ್ಕಿದ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು.

ಸಮಯ ಪ್ರಜ್ಞೆ, ದೂರಗಾಮಿ ಚಿಂತನೆ, ಸದುದ್ದೇಶಗಳನ್ನು ಕಾರ್ಯಗತಗೊಳಿಸುವ ಇಚ್ಛಾಶಕ್ತಿಯನ್ನು ಹೊಂದಿದ ಡಾ.ಎಂ. ಮೋಹನ ಆಳ್ವ ಅವರು ನಮ್ಮ ನಡುವಿನ ಶ್ರೇಷ್ಠ ಸಾಧಕರು' ಎಂದು ಅವರು ಅಭಿನಂದಿಸಿದರು.

ಖಾಸಗಿ ಗ್ರಂಥಾಲಯ ಸ್ಥಾಪಿಸಿದ್ದ ಹಾಗೂ ಆಳ್ವಾಸ್ ಕಾಲೇಜಿನ ಗ್ರಂಥಾಲಯಕ್ಕೆ ಕೃತಿಗಳನ್ನು ಕೊಡುಗೆ ನೀಡಿದ ತೀರ್ಥಹಳ್ಳಿ ಶೈಲಶ್ರೀ ರಮೇಶ್ ಅವರನ್ನು ಅಭಿನಂದಿಸಿ, ಗೌರವಿಸಲಾಯಿತು. ಆಳ್ವಾಸ್ (ಸ್ವಾಯತ್ತ) ಕಾಲೇಜಿನ ಪ್ರಾಂಶುಪಾಲ ಡಾ.ಕುರಿಯನ್ ಅಧ್ಯಕ್ಷತೆ ವಹಿಸಿದ್ದರು. ಗ್ರಂಥಾಲಯ ವಿಭಾಗವು ಹಮ್ಮಿಕೊಂಡಿದ್ದ ಕನ್ನಡ ಹಾಗೂ ಇಂಗ್ಲೀಷ್ ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಗ್ರಂಥಾಲಯ ಪಿತಾಮಹ ಎಸ್. ಆರ್ ರಂಗನಾಥನ್ ಅವರನ್ನು ಸ್ಮರಿಸಿದ ಮುಖ್ಯ ಗ್ರಂಥಪಾಲಕಿ ಶ್ಯಾಮಲತಾ ಎಲ್ಲರನ್ನೂ ಸ್ವಾಗತಿಸಿದರು. ಶ್ರೀಯಾ ಶೆಟ್ಟಿ ನಿರೂಪಿಸಿದರು. ಪ್ರಾಧ್ಯಾಪಕ ಹರೀಶ್ ಟಿ.ಜಿ. ವಂದಿಸಿದರು.

ಗಣೇಶನಿಗೆ ವಿಘ್ನ ಆರೋಪ: ಶಾಸಕರ ವಿರುದ್ಧ ಕಾಂಗ್ರೆಸ್ ಕಿಡಿ

ಮಂಗಳೂರು: ಶಾಸಕ ವೇದವ್ಯಾಸ ಕಾಮತ್‌ರವರು ಆರೋಪಿಸಿರುವಂತೆ ಜಿಲ್ಲಾಡಳಿತವಾಗಲಿ, ಸರಕಾರವಾಗಲಿ ಗಣೇಶ ಚತುರ್ಥಿ ಆಚರಣೆಗೆ ಯಾವುದೇ ರೀತಿಯ ನಿರ್ಬಂಧ ವಿಧಿಸಿಲ್ಲ. ಶಾಸಕರು ಸಂಕುಚಿತ ಭಾವನೆಯಿಂದ ಹೊರಬರಬೇಕು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪದ್ಮರಾಜ್ ಆರ್. ಹೇಳಿದ್ದಾರೆ.

ದ.ಕ. ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಯಾವುದೇ ಹಬ್ಬ ಆಚರಣೆಗೆ ಸಂಬಂಧಿಸಿ ಕಾಂಗ್ರೆಸ್ ಯಾವತ್ತೂ ತೊಡಕಾಗಿಲ್ಲ. ಬದಲಾಗಿ ಶ್ರದ್ಧಾ ಭಕ್ತಿಯಿಂದ ಹಬ್ಬ ಆಚರಣೆಗೆ ಪ್ರೇರಣೆ ನೀಡಿದೆ. ಹಾಗಾಗಿ ಗಣೇಶ ಹಬ್ಬ ಆಚರಣೆಗೆ ಸಂಬಂಧಿಸಿಯೂ ಯಾವುದೇ ಆತಂಕ ಬೇಡ ಎಂದರು.

ವಿಶೇಷ ಸಂಸ್ಕೃತಿಯನ್ನು ಹೊಂದಿರುವ ದ.ಕ. ಜಿಲ್ಲೆಯಲ್ಲಿ ಎಲ್ಲಾ ಧರ್ಮ, ಭಾಷೆಯವರು ಒಟ್ಟಾಗಿ ಶಿಸ್ತುಬದ್ಧವಾಗಿ ಹಬ್ಬ ಆಚರಿಸುತ್ತಾರೆ. ಇದನ್ನು ಖಾತರಿಪಡಿಸುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವಾಗಿ ಕಾರ್ಯಕ್ರಮ ಆಯೋಜಕರು ಸಿದ್ಧತೆಗಳನ್ನು ನಡೆಸುತ್ತಾರೆ. ಅದಕ್ಕಾಗಿ ಹಿಂದಿನ ಸರಕಾರದ ಅವಧಿಯಲ್ಲಿಯೂ ಆಯೋಜಕರು ಅನುಮತಿ ಕೇಳುವುದು ಸಾಮಾನ್ಯ. ಆದರೆ ಟ್ಯಾಬ್ಲೋಗಳ ವಿಚಾರದಲ್ಲಿ ಕಾಲಕಾಲಕ್ಕೆ ವ್ಯತ್ಯಾಸಗಳು ಆಗುತ್ತವೆ. ನಮ್ಮ ಸಂಸ್ಕೃತಿಗೆ ಕಳಂಕ ಬರುವ ಟ್ಯಾಬ್ಲೋಗಳ ಬಗ್ಗೆ ಗಮನ ಹರಿಸುವ ನಿಟ್ಟಿನಲ್ಲಿ ವಿವರ ಕೇಳುವುದರಲ್ಲಿ ತಪ್ಪೇನು? ಎಂದು ಪ್ರಶ್ನಿಸಿದ ಪದ್ಮರಾಜ್, ಕಾಂಗ್ರೆಸ್‌ನಲ್ಲಿರುವ ನಾವು ಕೂಡಾ ಹಿಂದೂಗಳೇ. ಜಿಲ್ಲೆಯಲ್ಲಿ ಹಿಂದೂಗಳು ಹಬ್ಬಗಳನ್ನು ಅದ್ದೂರಿಗಿಂತಲೂ ಮುಖ್ಯವಾಗಿ ಭಕ್ತಿಪೂರ್ವಕವಾಗಿ ಆಚರಿಸುತ್ತೇವೆ ಎಂದರು.

ನಗರದ ಟ್ರಾಫಿಕ್ ಒತ್ತಡದ ಕುರಿತಂತೆಯೂ ಶಾಸಕರು ಬಾಯಿಚಪಲಕ್ಕೆ ಹೇಳಿಕೆ ನೀಡಿದ್ದಾರೆ. ಉಸ್ತುವಾರಿ ಸಚಿವರ ಮೌಖಿಕ ಆದೇಶದ ಮೇರೆಗೆ ಬದಲಾವಣೆ ಮಾಡಲಾಗಿದೆ ಎಂದು ತಪ್ಪು ಆರೋಪ ಮಾಡಿದ್ದಾರೆ ಎಂದರು.

ಸುಳ್ಳು ಆಪಾದನೆ: ಉದಯ ಕ್ಷಮೆಗೆ ಆಗ್ರಹ

ಉಡುಪಿ: ಬೈಲೂರಿನ ಉಮಿಕಲ್ ಬೆಟ್ಟದಲ್ಲಿ ನಿರ್ಮಾಣ ಹಂತದಲ್ಲಿರುವ ಪರಶುರಾಮ ಥೀಂ ಪಾರ್ಕ್ ಕಾಮಗಾರಿ ಬಗ್ಗೆ ಕಾರ್ಕಳದ ಜನತೆಗೆ ದಿನಕ್ಕೊಂದು ಸುಳ್ಳು ಹೇಳುತ್ತಿರುವ ಕಾರ್ಕಳ ಕಾಂಗ್ರೆಸ್‌ನ ಮುನಿಯಾಲು ಉದಯ ಕುಮಾರ್ ಶೆಟ್ಟಿ ಮತ್ತು ಅವರ ತಂಡ ಕಾರ್ಕಳದ ಸಮಸ್ತ ಜನತೆಯ ಬೇಷರತ್ ಕ್ಷಮೆ ಯಾಚಿಸಬೇಕೆಂದು ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಉದಯ ಎಸ್. ಕೋಟ್ಯಾನ್ ಹೇಳಿದ್ದಾರೆ.

ಥೀಂ ಪಾರ್ಕ್ ಕಾಮಗಾರಿಗಳಲ್ಲಿ ಒಂದು ಭಾಗವಾಗಿರುವ ಪರಶುರಾಮನ ಕಂಚಿನ ಮೂರ್ತಿಯನ್ನು ಮರುವಿನ್ಯಾಸಗೊಳಿಸುವ ಬಗ್ಗೆ ಕಾನೂನಾತ್ಮಕವಾಗಿಯೇ ತೆಗೆ ಯುವ ಸಂದರ್ಭದಲ್ಲಿ ಸರಕಾರದ ಮೂಲಕ ಒತ್ತಡ ಹೇರಿ ಮೂರ್ತಿಯ ಅರ್ಧ ಭಾಗ ತೆಗೆಯುವ ವೇಳೆ ಕಾಮಗಾರಿಗೆ ತಡೆಯನ್ನು ತಂದಿರುತ್ತೀರಿ. ಪೊಲೀಸ್ ರಕ್ಷಣೆಯಲ್ಲಿಯೇ ಮೂರ್ತಿ ಭಾಗಗಳನ್ನು ತೆಗೆದಿದ್ದರೂ ಕೂಡ ಮೂರ್ತಿ ಕಳವು ಆಗಿದೆ ಎಂದು ದೂರು ಕೊಟ್ಟಿರುತ್ತೀರಿ ಹಾಗೂ ಮಾಧ್ಯಮಗಳಿಗೆ ಮೂರ್ತಿ ಕಳವು ಆಗಿದೆ ಎಂದು ತಪ್ಪು ಮಾಹಿತಿ ನೀಡಿದಿರಿ ಎಂದರು. ಉಳಿದ ಮೂರ್ತಿಯ ಭಾಗಗಳನ್ನು ತೆಗೆಯುವಾಗ ಕೋರ್ಟ್ ಆದೇಶ ಇದ್ದರೂ ಕೂಡ ರಾತ್ರೋ ರಾತ್ರಿ ಬೆಟ್ಟಕ್ಕೆ ಹೋಗುವ ಏಕೈಕ ರಸ್ತೆಗೆ ಮಣ್ಣು ತಂದು ರಾಶಿ ಹಾಕಿದಿರಿ ಹಾಗೂ ನಿಮ್ಮ ಪ್ರಭಾವ ಬಳಸಿ ಪೊಲೀಸ್ ರಕ್ಷಣೆಯನ್ನು ಹಿಂಪಡೆದಿರಿ. ಈ ಮೂಲಕ ಮತ್ತೆ ಕಾಮಗಾರಿಗೆ ತಡೆಯೊಡ್ಡಿದಿರಿ. ರಾಜ್ಯದಲ್ಲಿಯೇ ಪ್ರಥಮ ಎಂಬಂತೆ ಜಿಲ್ಲಾ ಉಸ್ತುವಾರಿ ಸಚಿವರಿಂದಲೇ ರಾಜ್ಯದ ರಾಜ್ಯಧಾನಿಯಲ್ಲಿ ಪ್ರತಿಭಟನೆ ಮಾಡಿಸಿ ಇಡೀ ರಾಜ್ಯದ ಜನರಿಗೆ ಸುಳ್ಳು ಹೇಳಿಸಿದಿರಿ. ಈ ಮೂಲಕ ಕಾರ್ಕಳಕ್ಕೆ ಕಳಂಕ ತಂದಿರಿ. ಮೂರ್ತಿ ಕಳಪೆ ಹಾಗೂ ಫೈಬರ್ ಮೂರ್ತಿ ಎಂದು ಬಿಂಬಿಸುತ್ತಾ ಕೋರ್ಟಿಗೆ ಹೋದಿರಿ ಎಂದು ಉದಯ ಎಸ್. ಕೋಟ್ಯಾನ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೊದಲಿಗೆ ಇಡೀ ಮೂರ್ತಿ ಫೈಬರ್ ಹೇಳಿದ್ದೀರಿ ನಂತರ ಅರ್ಧ ಮೂರ್ತಿ ಫೈಬರ್ ಅಂದಿರಿ ಈಗ ಕರ್ನಾಟಕದ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೂರ್ತಿಯ ಬಗ್ಗೆ ನಮಗೆ ಯಾವುದೇ ತಕರಾರು ಇಲ್ಲ, ಮೂರ್ತಿ ಕಂಚಿನದೇ. ನಮ್ಮ ತಕರಾರು ಏನಿದ್ದರೂ ಮೂರ್ತಿಯ ಶಿಲ್ಪಿ ಕೃಷ್ಣ ನಾಯ್ಕ ಜಿಎಸ್‌ಟಿ ಕಟ್ಟಿಲ್ಲ ಎಂಬುದರ ಬಗ್ಗೆ ಮಾತ್ರ ಎನ್ನುತ್ತೀರಿ. ಕಾರ್ಕಳವನ್ನು ಒಂದು ಪ್ರವಾಸೋದ್ಯಮ ಕ್ಷೇತ್ರವನ್ನಾಗಿ ಮಾಡಬೇಕೆಂಬ ಮಾನ್ಯ ಶಾಸಕರಾದ ಸುನಿಲ್ ಕುಮಾರ್ ಅವರ ಪ್ರಯತ್ನಕ್ಕೆ ಯಾಕೆ ಅಡ್ಡಗಾಲು ಹಾಕಿದ್ದೀರಿ? ಎಂದು ಉದಯ್ ಎಸ್. ಕೋಟ್ಯಾನ್ ಪ್ರಶ್ನಿಸಿದ್ದಾರೆ.

21 ಶಿಕ್ಷಕರಿಗೆ ಜಿಲ್ಲಾ ಪ್ರಶಸ್ತಿ ಪ್ರದಾನ

ಮಂಗಳೂರು: ದ.ಕ. ಜಿಲ್ಲಾ ಮಟ್ಟದ 21 ಶಿಕ್ಷಕರಿಗೆ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಜಿಲ್ಲಾ ಶಿಕ್ಷಣ ಇಲಾಖೆಯು ನೀಡಿ ಗೌರವಿಸಿದೆ.

ಕಿರಿಯ ಪ್ರಾಥಮಿಕ ವಿಭಾಗ: ಬಂಟ್ವಾಳ ವಲಯದ ಕಂಚಿನಡ್ಕ ಸರಕಾರಿ ಶಾಲೆಯ ಫ್ರಾನ್ಸಿಸ್ ಡೇಸ, ಬೆಳ್ತಂಗಡಿ ವಲಯದ ಹುಣ್ಸೆಕಟ್ಟೆ ಸರಕಾರಿ ಶಾಲೆಯ ಕರಿಯಪ್ಪ ಎ.ಕೆ.ಮಂಗಳೂರು ದಕ್ಷಿಣ ವಲಯದ ಒಡ್ಡೂರು ಶಾಲೆಯ ರೋಸಾ ರಜನಿ ಡಿಸೋಜ, ಮಂಗಳೂರು ಉತ್ತರ ವಲಯದ ಬೊಕ್ಕಪಟ್ಣ ಶಾಲೆಯ ಡ್ರಿಸಿಲ್ ಲಿಲ್ಲಿ ಮಿನಿಜಸ್, ಮೂಡುಬಿದಿರೆ ವಲಯದ ಮೂಡುಕೊಣಾಜೆ ಶಾಲೆಯ ಐಡಾ ಪೀರೇರಾ, ಪುತ್ತೂರು ವಲಯದ ಕೈಕಾರ ಶಾಲೆಯ ರಾಮಣ್ಣ ರೈ, ಸುಳ್ಯ ತಾಲೂಕಿನ ದೊಡ್ಡೇರಿ ಶಾಲೆಯ ಕೃಷ್ಣಾನಂತ ಸರಳಾಯ ಎಂ.

ಹಿರಿಯ ಪ್ರಾಥಮಿಕ ವಿಭಾಗ: ಬಂಟ್ವಾಳ ವಲಯದ ಕೆಲಿಂಜ ಶಾಲೆಯ ಬಿ.ತಿಮ್ಮಪ್ಪ ನಾಯ್ಕ, ಬೆಳ್ತಂಗಡಿ ವಲಯದ ಸವಣಾಲು ಶಾಲೆಯ ಮಂಜುನಾಥ ಜಿ., ಮಂಗಳೂರು ಉತ್ತರ ವಲಯದ ಪಂಜಿಮೊಗರು ಶಾಲೆಯ ವಾಣಿ, ಮಂಗಳೂರು ದಕ್ಷಿಣ ವಲಯದ ಬೋಳಾರ ಶಾಲೆಯ ಸುಜಾತಾ, ಮೂಡುಬಿದಿರೆ ವಲಯದ ಕೋಟೆಬಾಗಿಲು ಶಾಲೆಯ ಮೇಬಲ್ ಫೆನಾರ್‌ಂಡಿಸ್. ಪುತ್ತೂರು ವಲಯದ ಬೆಳ್ಳಿಪ್ಪಾಡಿಯ ಯಶೋದಾ ಎನ್.ಎಂ., ಸುಳ್ಯ ವಲಯದ ಕೆಪಿಎಸ್ ಗಾಂಧಿನಗರ ಶಾಲೆಯ ಪದ್ಮನಾಭ ಎ.

ಪ್ರೌಢ ಶಾಲೆ ವಿಭಾಗ: ಬಂಟ್ವಾಳ ವಲಯದ ನಂದಾವರ ಶಾಲೆಯ ಶ್ರೀಕಾಂತ ಎಂ., ಬೆಳ್ತಂಗಡಿ ವಲಯದ ನಡ ಶಾಲೆಯ ಮೋಹನ ಬಾಬು ಡಿ., ಮಂಗಳೂರು ಉತ್ತರ ವಲಯದ ಬಡಗ ಎಕ್ಕಾರು ಶಾಲೆಯ ವಿದ್ಯಾಲತಾ, ಮಂಗಳೂರು ದಕ್ಷಿಣ ವಲಯದ ಎಡಪದವು ಸ್ವಾಮಿ ವಿವೇಕಾನಂದ ಪಪೂ ವಿದ್ಯಾಲಯದ ಸುಬ್ರಹ್ಮಣ್ಯ ಮೊಗೆರಾಯ, ಮೂಡುಬಿದಿರೆ ವಲಯದ ಅಳಿಯೂರು ಶಾಲೆಯ ವಿದ್ಯಾ ಸಂದೀಪ ನಾಯಕ, ಪುತ್ತೂರು ವಲಯದ ರೇಬಂಡಾಡಿ ಶಾಲೆಯ ಲಲಿತಾ, ಸುಳ್ಯ ವಲಯದ ಸುಬ್ರಹ್ಮಣ್ಯ ಶಾಲೆಯ ರಘು ಅವರನ್ನು ಆಯ್ಕೆ ಮಾಡಲಾಗಿದೆ. ದ.ಕ.ಜಿಲ್ಲಾ ಮಟ್ಟದ ಹಾಗೂ ಬಂಟ್ವಾಳ ತಾಲೂಕು ಮಟ್ಟದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನೋತ್ಸವ ಪ್ರಯುಕ್ತ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವು ಸೆ.5ರಂದು ಬೆಳಗ್ಗೆ 9ಕ್ಕೆ ಬಂಟ್ವಾಳ ಬಂಟರಭವನದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸರಕಾರಿ ಶಾಲೆ ಆದರ್ಶವಾಗಿರಲಿ



ಕಾರ್ಕಳ ಹಿರಿಯಂಗಡಿ ಮಹಾವೀರ ಭವನದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಶಾಸಕ ವಿ. ಸುನಿಲ್ ಕುಮಾರ್ ಅವರು ಉದ್ಘಾಟಿಸಿದರು.

ಉಡುಪಿ: ತಾಲೂಕಿನ 10 ಸರಕಾರಿ ಶಾಲೆಗಳನ್ನು ಗುರುತಿಸಿ ರಾಜ್ಯಕ್ಕೆ ಮಾದರಿ ಎಂಬಂತೆ ಆದರ್ಶ ಶಾಲೆಗಳಾಗಿ ನಿರ್ಮಾಣ ಮಾಡಬೇಕಿದೆ. ಈ ನಿಟ್ಟಿನಲ್ಲಿ ಶಿಕ್ಷಕರ ವಿವಿಧ ಸಂಘಗಳು ಕಾರ್ಯೋನ್ಮುಖವಾಗಬೇಕಿದೆ ಎಂದು ಶಾಸಕ ವಿ. ಸುನಿಲ್ ಕುಮಾರ್ ಆಶಯ ವ್ಯಕ್ತಪಡಿಸಿದರು.

ಅವರು ಸೆ. 5ರಂದು ಕಾರ್ಕಳ ಹಾಗೂ ಹೆಬ್ರಿ ಶಿಕ್ಷಕರ ದಿನಾಚರಣೆ ಸಮಿತಿ ವತಿಯಿಂದ ಕಾರ್ಕಳ ಹಿರಿಯಂಗಡಿ ಮಹಾವೀರ ಭವನದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಗುರುವಿನ ಪ್ರೇರಣೆಯಿಂದ ಸಾವಿರಾರು ಮಂದಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಶ್ರೇಷ್ಠ ಸಾಧನೆ ಮಾಡಿರುತ್ತಾರೆ. ಸಾಮ್ರಾಜ್ಯವನ್ನೇ ಕಟ್ಟಿರುತ್ತಾರೆ. ಪ್ರಸ್ತುತ ಶಿಕ್ಷಕರಿಗೆ ಸಾಮ್ರಾಜ್ಯಗಳನ್ನು ನಿರ್ಮಾಣ ಮಾಡಬೇಕಾದ ಸವಾಲುಗಳಿಲ್ಲ. ಬದಲಾಗಿ ವ್ಯಕ್ತಿ ನಿರ್ಮಾಣದ ಅಗತ್ಯತೆಯಿದೆ. ವ್ಯಕ್ತಿ ನಿರ್ಮಾಣ ಉತ್ತಮ ಸಮಾಜ ನಿರ್ಮಾಣಕ್ಕೆ ಪೂರಕವಾಗುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರು ಪರೀಕ್ಷೆಗಿಂತ ವ್ಯಕ್ತಿ ನಿರ್ಮಾಣಕ್ಕೆ ಆದ್ಯತೆ ನೀಡಬೇಕೆಂದು ಸುನಿಲ್ ಕುಮಾರ್ ಅಭಿಪ್ರಾಯಪಟ್ಟರು.

ನಿವೃತ್ತ ಶಿಕ್ಷಕರಿಗೆ ಸನ್ಮಾನ: ಈ ವರ್ಷ ನಿವೃತ್ತಿ ಹೊಂದಿರುವ 37 ಶಿಕ್ಷಕರಿಗೆ ಹಾಗೂ ಶಾಲಾ ಆವರಣದಲ್ಲಿ ಆಯುರ್ವೇದ ಗಿಡಗಳನ್ನೊಳಗೊಂಡ ಧನ್ವಂತರಿ ವನ ನಿರ್ಮಿಸಿದ ನಲ್ಲೂರು ಸ. ಹಿ. ಪ್ರಾ. ಶಾಲೆಯ ಮುಖ್ಯ ಶಿಕ್ಷಕ ನಾಗೇಶ್ ನಲ್ಲೂರು ಹಾಗೂ ಶಿಕ್ಷಕ ವೃಂದದವರನ್ನು ಇದೇ ಸಂದರ್ಭ ಸನ್ಮಾನಿಸಲಾಯಿತು.

ಪುರಸಭಾ ಮುಖ್ಯಾಧಿಕಾರಿ ರೂಪಾ ಟಿ. ಶೆಟ್ಟಿ, ಅಜೆಕಾರು ಪಿಎಸ್‌ಐ ರವಿ ಬಿ. ಕೆ., ಪುರಸಭಾ ಅಧ್ಯಕ್ಷ ಯೋಗೀಶ್ ದೇವಾಡಿಗ, ಕಾ. ತಾ. ಸ. ಗ್ರೇಡ್-1 ದೈಹಿಕ ಶಿಕ್ಷಕರ ಸಂಘ ಕಾರ್ಕಳ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿ ಲೋಕೇಶ್ ಬಿ.ಎ. ಸ್ವಾಗತಿಸಿದರು. ಶಿಕ್ಷಕರಾದ ಪ್ರವೀಣ್ ಶೆಟ್ಟಿ ಹಾಗೂ ಗೀತಾ ಕಾರ್ಯಕ್ರಮ ನಿರೂಪಿಸಿದರು. ಪ್ರಿತೇಶ್, ಪ್ರೇಮ ಕುಮಾರಿ, ಜ್ಯೋತಿ, ಮಮತಾ ಹಾಗೂ ರಾಘವೇಂದ್ರ ಆಚಾರ್ ಸನ್ಮಾನಿತರ ಪತ್ರ ವಾಚಿಸಿದರು. ಕರ್ನಾಟಕ ರಾಜ್ಯ ಶಿಕ್ಷಣಾಧಿಕಾರಿಗಳ ಸಂಘ ಕಾರ್ಕಳ ತಾಲೂಕು ಅಧ್ಯಕ್ಷ ಭಾಸ್ಕರ್ ಟಿ. ವಂದಿಸಿದರು.

ಭವಿಷ್ಯದ ಸಜ್ಜನರನ್ನು ರೂಪಿಸುವ ಅವಕಾಶ ಶಿಕ್ಷಕರಿಗಿದೆ

ಮಂಗಳೂರು: ಭವಿಷ್ಯದ ಸತ್ಪ್ರಜೆಗಳನ್ನು ರೂಪಿಸುವ ಅವಕಾಶ ಶಿಕ್ಷಕರದ್ದಾಗಿದ್ದು, ಮಕ್ಕಳಲ್ಲಿ ಉತ್ತಮ ವ್ಯಕ್ತಿತ್ವ ಬೆಳೆಸುವಲ್ಲಿ ಪೋಷಕರಿಗಿಂತಲೂ ಶಿಕ್ಷಕರ ಕೊಡುಗೆ ಮಹತ್ತರವಾದುದು ಎಂದು ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್ ಹೇಳಿದ್ದಾರೆ.

ದ.ಕ. ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಚೇರಿ, ಮಂಗಳೂರು ದಕ್ಷಿಣ ವಲಯ ಶಿಕ್ಷಕರ ದಿನಾಚರಣಾ ಸಮಿತಿ ಮತ್ತು ಶಿಕ್ಷಕರ ಕಲ್ಯಾಣ ನಿಧಿ ಆಶ್ರಯದಲ್ಲಿ ನಗದ ಪ್ರೆಸ್ಟೇಜ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಆಯೋಜಿಸಲಾದ ಶಿಕ್ಷಕರ ದಿನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕರ ಸಮಸ್ಯೆಗಳನ್ನು ಕಡಿಮೆ ಮಾಡಿ ಮಕ್ಕಳ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸುವ ಜವಾಬ್ದಾರಿ ಜನಪ್ರತಿನಿಧಿಗಳದ್ದು. ಶಿಕ್ಷಕರ ಸಮಸ್ಯೆಗಳು ಗಮನಕ್ಕೆ ಬಂದಾಗ ಅವುಗಳನ್ನು ಪರಿಹರಿಸಿ, ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿಯೂ ಹಂತ ಹಂತವಾಗಿ ಕ್ರಮ ವಹಿಸಲಾಗುವುದು. ಕ್ಷೇತ್ರದಲ್ಲಿ ಮೂರು ಕೋಟಿ ರೂ. ಅನುದಾನ ಮೀಸಲಿರಿಸಿದ್ದು, ಅದರಲ್ಲಿ ಎಲ್ಲಾ ಪ್ರೌಢಶಾಲೆಗಳ ಅಭಿವೃದ್ಧಿಗೆ ಕ್ರಮ ವಹಿಸಲಾಗುವುದು. ಮುಂದಿನ ದಿನಗಳಲ್ಲಿ ಪ್ರಾಥಮಿಕ ಶಾಲೆಗಳ ಬಗ್ಗೆ ಗಮನ ಹರಿಸಲಾಗುವುದು ಎಂದು ಅವರು ಹೇಳಿದರು.

ಅಧ್ಯಕ್ಷತೆಯನ್ನು ಶಾಸಕ ಡಿ. ವೇದವ್ಯಾಸ ಕಾಮತ್ ವಹಿಸಿದ್ದರು. ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು, ಸ್ಥಳೀಯ ಕಾರ್ಪೊರೇಟರ್ ವೀಣಾ ಮಂಗಳ, ಕ್ಷೇತ್ರ ಸಮನ್ವಯಾಧಿಕಾರಿ (ಪ್ರಭಾರ) ಸುಷ್ಮಾ ವಿ. ಕಿಣಿ, ಅನುದಾನಿತ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಎಂ. ಕೆ. ಮಂಜನಾಡಿ, ದೈರಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಶೇಖರ್, ಯೂನಿಯನ್ ಬ್ಯಾಂಕ್‌ನ ಡಿಜಿಎಂ ಎಂ. ರಾಜಮಣಿ, ಸಿಇಟಿ ಉಪನ್ಯಾಸಕ ಶಿವಾನಂದ, ಕ್ಷೇತ್ರ ಶಿಕ್ಷಣ ಸಮನ್ವಯಾಧಿಕಾರಿ ಡಾ. ಪ್ರಶಾಂತ್‌ಕುಮಾರ್, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷೆ ಜಯವಂತಿ ಸೋನ್ಸ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷೆ ಪ್ರಮೀಳಾ, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಮೈಸೂರು ವಿಭಾಗದ ಕಾರ್ಯದರ್ಶಿ ತ್ಯಾಗಂ ಹರೇಕಳ, ಡಯಟ್ ಉಪನ್ಯಾಸಕ ಆಂಟನಿ ಕುಟಿನ್ಹೋ, ನೋಡಲ್ ಅಧಿಕಾರಿ ಪೀತಾಂಬರ, ಮೂಡ ಅಧ್ಯಕ್ಷ ಸದಾಶಿವ ಉಳ್ಳಾಲ್, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಮಹೇಸ್ ಕುಮಾರ್ ಹೊಳ್ಳ, ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಲಿಲ್ಲಿ ಪಾಯಸ್ ಉಪಸ್ಥಿತರಿದ್ದರು.

ಉದ್ಘಾಟನಾ ಸಮಾರಂಭಕ್ಕೂ ಮೊದಲು ಶಿಕ್ಷಕರಿಂದ ವಿವಿಧತೆಯಲ್ಲಿ ಏಕತೆಯನ್ನು ಸಾರುವ ನೃತ್ಯ ಪ್ರದರ್ಶನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ವಿಧಾನಸಭೆ ಸ್ಪೀಕರ್ ರವರಿಗೆ ಅನುದಾನಿತ ಶಾಲೆಗಳ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ ಮನವಿ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಮಂಗಳೂರು ದಕ್ಷಿಣ ವಲಯದ 57 ಮಂದಿ ನಿವೃತ್ತ ಶಿಕ್ಷಕರಿಗೆ ಸನ್ಮಾನ ನೆರವೇರಿಸಲಾಯಿತು. ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಈಶ್ವರ್ ಸ್ವಾಗತಿಸಿದರು. ಶಿಕ್ಷಕರಾದ ಮೋಹನ್ ಶಿರ್ಲಾಲ್ ಮತ್ತು ರಫೀಕ್ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕರು ಪೋಷಕರ ಪಾತ್ರವನ್ನೂ ನಿರ್ವಹಿಸಬೇಕಿದೆ

ಶಿಕ್ಷಕರ ಕಲ್ಯಾಣ ನಿಧಿ ಆಶ್ರಯದಲ್ಲಿ ನಗದ ಪ್ರೆಸ್ಟೇಜ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಆಯೋಜಿಸಲಾದ ಶಿಕ್ಷಕರ ದಿನವನ್ನು ಉದ್ಘಾಟಿಸಿ ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್ ಅವರು ಮಾತನಾಡಿದರು.

ಪೋಷಕರು ಮಕ್ಕಳ ಜತೆ ಕಳೆಯುವ ಸಮಯ ಅತ್ಯಲ್ಪವಾಗುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ಶಿಕ್ಷಕರು ಪೋಷಕರ ಪಾತ್ರವನ್ನೂ ನಿರ್ವಹಿಸಬೇಕಾಗಿದೆ. ಪಠ್ಯ ಕಲಿಕೆಯ ಜತೆಗೆ ಮಕ್ಕಳ ಸರ್ವಾಂಗೀಣ ಬೆಳವಣಿಗೆಯ ದೃಷ್ಟಿಯಿಂದ ಅವರ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗಳ ಬಗ್ಗೆಯೂ ಗಮನ ಹರಿಸಬೇಕು. ಇಂದಿನ ಮಕ್ಕಳು ತಮ್ಮ ಮಾನಸಿಕ ತೊಂದರೆಗಳನ್ನು ಯಾರಲ್ಲೂ ಹೇಳಲಾಗದೆ ತೊಳಲಾಡುವ ಕಾರಣ ಆತ್ಮಹತ್ಯೆಯಂತಹ ಪ್ರಕರಣಗಳು ಹೆಚ್ಚುತ್ತಿದ್ದು, ಶಿಕ್ಷಕರು ತಮ್ಮ ಮಕ್ಕಳ ಮಾನಸಿಕ ತುಮುಲವನ್ನು ಗಮನಿಸಿ ಅವರ ಭಾವನೆಗಳನ್ನು ಕೇಳಿಸಿಕೊಳ್ಳುವ ತಾಳ್ಮೆಯನ್ನು ಬೆಳಿಸಿಕೊಳ್ಳಬೇಕು ಎಂದು ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ನೀಡಿದ ಮಾನಸಿಕ ಆರೋಗ್ಯ ಕೇಂದ್ರದ ಪ್ರೊ. ಡಾ. ರಮೀಳಾ ಶೇಖರ್ ಶಿಕ್ಷಕರಿಗೆ ಸಲಹೆ ನೀಡಿದರು.

ಗಣೇಶೋತ್ಸವಕ್ಕೆ ವಿವಿಧ ಕಾರ್ಯಕ್ರಮ ಸೆ.7ರಿಂದ

ಚಿಕ್ಕಮಗಳೂರು: ಆಜಾದ್ ಮೈದಾನದ 88ನೇ ವರ್ಷದ ಶ್ರೀಗಣಪತಿ ಪ್ರತಿಷ್ಠಾಪನಾ ಮಹೋತ್ಸವವು ಸೆ.7 ರಿಂದ ಸೆ.29 ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ ನಗರದ ಬೋಳರಾಮೇಶ್ವರ ಆವರಣದಲ್ಲಿ ಪ್ರತಿಷ್ಟಾಪಿಸಲಾಗುವುದು ಎಂದು ಶ್ರೀಗಣಪತಿ ಸೇವಾ ಸಮಿತಿ ಪ್ರಧಾನ ಕಾರ್ಯದರ್ಶಿ ಸಿ.ಆರ್.ಕೇಶವಮೂರ್ತಿ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು ಸೆ.7 ರಂದು ಮಧ್ಯಾಹ್ನ 3 ಗಂಟೆಗೆ ಗಣಪತಿ ವಿಗ್ರಹವನ್ನು ಮೆರವಣಿಗೆ ಮುಖಾಂತರ ಬೋಳರಾಮೇಶ್ವರ ದೇವಾಲಯದ ಆವರಣಕ್ಕೆ ಕರೆತಂದು ಸಂಜೆ 5ಕ್ಕೆ ಪ್ರತಿಷ್ಠಾಪಿಸಿ 21 ದಿನಗಳ ಕಾಲ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಗಣೇಶೋತ್ಸವ ಪ್ರಯುಕ್ತ ಸೆ.07 ರಿಂದ 9ರವರೆಗೆ ಹರಿಕಥೆ, ಸೆ.10 ಸುಗಮ ಸಂಗೀತ, ಸೆ.11 ಜಾದೂ, ಸೆ.12 ನೃತ್ಯರೂಪಕ, ಸೆ.13 ಸುಗಮ ಸಂಗೀತ, ಸೆ.14 ಶಾಸ್ತ್ರೀಯ ಸಂಗೀತ, ಸೆ.15 ಜಾದೂ, ಸೆ.16 ಸುಗಮ ಸಂಗೀತ, ಸೆ.17 ರಸಮಂಜರಿ, ಸೆ.18 ಸಂಗೀತ ಕಾರ್ಯಕ್ರಮ, ಸೆ19 ಜನಪದ, ಸೆ.20 ನೃತ್ಯ ಕಾರ್ಯಕ್ರಮ, ಸೆ.21 ಸಂಕಷ್ಟಹರ ಗಣಪತಿ ವಿಶೇಷ ಪೂಜೆ, ಸೆ.22 ರಂದು ಬೆಳಿಗ್ಗೆ 11ಕ್ಕೆ ಗಣಹೋಮ ಮತ್ತು ಅನ್ನಸಂ ತರ್ಪಣೆ ಸಂಜೆ ಆರ್ಕೇಸ್ಟ್ರಾ, ಸೆ.23 ಡ್ಯಾನ್ಸ್, ಸೆ.24 ರಿಂದ ಸೆ.27ರವರೆಗೆ ಆರ್ಕೇಸ್ಟ್ರಾ ನಡೆಯಲಿದೆ. ಈ ಸಂದರ್ಭದಲ್ಲಿ ಸೇವಾ ಸಮಿತಿ ಅಧ್ಯಕ್ಷ ಸಿ.ಎಸ್.ಕುಬೇರ, ಗೌರವಾಧ್ಯಕ್ಷ ದಿವಾಕರ್, ಉಪಾಧ್ಯಕ್ಷ ಉಮೇಶ್ ಹಾಜರಿದ್ದರು.

ಶಿಕ್ಷಕರು ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯ ಬಿತ್ತಲಿ: ಸಿ.ಟಿ.ರವಿ

ಚಿಕ್ಕಮಗಳೂರು: ಯಾವುದೇ ವ್ಯಕ್ತಿ ಪರಿಪೂರ್ಣನಾಗುವುದು ಶಿಕ್ಷಣದ ಮೂಲಕ. ವಿದ್ಯಾರ್ಥಿಗಳಲ್ಲಿ ಸಮಾಜದ ನೈತಿಕ ಮೌಲ್ಯಗಳ ಅರಿವು ಮೂಡಿಸುವಲ್ಲಿ ಗುರುವಿನ ಪಾತ್ರ ಮಹತ್ವದ್ದಾಗಿದೆ ಎಂದು ವಿಧಾನ ಪರಿಷತ್ ಶಾಸಕ ಸಿ.ಟಿ.ರವಿ ಹೇಳಿದರು.

ಶಾಲಾ ಶಿಕ್ಷಣ ಇಲಾಖೆ ತಾಲ್ಲೂಕು ಪಂಚಾಯಿತಿ ಚಿಕ್ಕಮಗಳೂರು ತಾಲ್ಲೂಕು ಶಿಕ್ಷಕರ ದಿನಾಚರಣಾ ಸಮಿತಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಮತ್ತು ಕ್ಷೇತ್ರ ಸಂಪನ್ಮೂಲ ಕೇಂದ್ರ, ಚಿಕ್ಕಮಗಳೂರು ಇವರ ವತಿಯಿಂದ ನಗರದ ಕುವೆಂಪು ಕಲಾಮಂದಿರದಲ್ಲಿ ಇಂದು ಆಯೋಜಿಸಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನರವರ 137ನೇ ಜನ್ಮ ದಿನೋತ್ಸವ ಮತ್ತು 63ನೇ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಲ್ಲಿ ಗುರುವಿಗೆ ಅಗ್ರಸ್ಥಾನವಿದೆ. ತಂದೆ-ತಾಯಿ ನಂತರ ದೈವಿಕ ಸ್ಥಾನವನ್ನು ಗುರುವಿಗೆ ನೀಡಲಾಗಿದೆ. ಹರ ಮುನಿದರೆ ಗುರು ಕಾಯುವನು, ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ನಾಣ್ನುಡಿಯಂತೆ ಗುರುವನ್ನು ಪೂಜ್ಯ ಸ್ಥಾನದಲ್ಲಿರಿಸಿ ಗೌರವಿಸುವ ಸಂಸ್ಕೃತಿ ನಮ್ಮಲ್ಲಿದೆ ಎಂದು ಹೇಳಿದರು.

ಪ್ರತಿಯೊಬ್ಬ ವ್ಯಕ್ತಿಯು ಸಮಾಜದಲ್ಲಿ ಉತ್ತಮ ನಾಗರೀಕನಾಗುವುದು ಉತ್ತಮ ಶಿಕ್ಷಣವನ್ನು ಪಡೆದಾಗ ಮಾತ್ರ, ಶಿಕ್ಷಣದ ಉದ್ದೇಶ ಅರಿವನ್ನು ಮೂಡಿಸುವುದು ವಿದ್ಯಾರ್ಥಿಗಳಲ್ಲಿ ಸಮಾಜದಲ್ಲಿನ ಒಳಿತು ಕೆಡುಕಗಳ ಅರಿವನ್ನು ಮೂಡಿಸಿ ನೈತಿಕ ಮೌಲ್ಯಗಳ ಶಿಕ್ಷಣವನ್ನು ನೀಡುವುದರ ಮೂಲಕ ಸಮಾಜಕ್ಕೆ ಶ್ರೇಷ್ಠ ಹಾಗೂ ಸಶಕ್ತ ಪ್ರಜೆಗಳನ್ನು ನೀಡುವ ಶಿಕ್ಷಕರ ಕಾರ್ಯ ಸ್ಮರಣೀಯವಾದುದು ಎಂದರು. ಶಿಕ್ಷಕರು ವಿದ್ಯಾರ್ಥಿಗಳಿಗೆ ಪಠ್ಯ ಹಾಗೂ ಸಮಾಜದ ವಿಚಾರಗಳ ಅರಿವು ಮೂಡಿಸುವುದರೊಂದಿಗೆ ಪ್ರತಿ ಮಗುವಿನ ಕಲೆಯನ್ನು ಗುರುತಿಸಿ ಪ್ರೋತ್ಸಾಹಿಸಿ ಅವರನ್ನು ಸಮಾಜಕ್ಕೆ ಪರಿಚಯಿಸಿ ಅವರ ಬದುಕಿಗೆ ದಾರಿ ದೀಪವಾಗಿರುತ್ತಾರೆ.

ಡಾ. ಸರ್ವಪಲ್ಲಿ ರಾಧಾಕೃಷ್ಣನರವರ 137ನೇ ಜನ್ಮ ದಿನೋತ್ಸವ ಮತ್ತು 63ನೇ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ವಿಧಾನ ಪರಿಷತ್ ಶಾಸಕ ಸಿ.ಟಿ.ರವಿ ಅವರು ಮಾತನಾಡಿದರು.

ಯಾವುದೇ ವ್ಯಕ್ತಿ ತನ್ನ ಗುರಿ ತಲುಪಬೇಕಾದರೆ ಗುರುವಿನ ಪಾತ್ರ ಮಹತ್ವದ್ದಾಗಿರುತ್ತದೆ ಎಂದ ಅವರು. ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡಲು ಬಾಲ್ಯದಲ್ಲಿ ಉತ್ತಮ ಶಿಕ್ಷಣದ ಬೀಜವನ್ನು ಭಿತ್ತಿ ಪರಿಪೂರ್ಣ ವ್ಯಕ್ತಿಯಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅಪಾರವಾಗಿದೆ. ಹಿಂದೆ ಗುರುಕುಲಗಳಲ್ಲಿ ಶಿಕ್ಷಣವು ಶುಲ್ಕ ರಹಿತವಾಗಿತ್ತು, ಇಂದು ಶಿಕ್ಷಣ ವ್ಯಾಪಾರವಾಗಿದೆ. ಶಿಕ್ಷಣವು ಸಮಗ್ರವಾಗಿ ವ್ಯಕ್ತಿ, ಕುಟುಂಬ, ಸಮಾಜ, ರಾಷ್ಟ್ರವನ್ನು ಜೋಡಿಸುವ ಸಾಧನವಾಗಬೇಕು. ಅಜ್ಞಾನದಲ್ಲಿರುವವರ ಅಂಧಕಾರವನ್ನು ಹೋಗಲಾಡಿಸಿ ಜ್ಞಾನದ ಬೆಳಕನ್ನು ನೀಡುವ ವ್ಯವಸ್ಥೆಯಾಗಬೇಕು. ಉತ್ತಮ ಶಿಕ್ಷಕನು ಜ್ಞಾನದ ಗಣಿಯಾಗಿರುತ್ತಾನೆ ಎಂದ ಅವರು. ಶಿಕ್ಷಕರು ಉತ್ತಮ ಮಾರ್ಗದರ್ಶನವನ್ನು ನೀಡುವುದರ ಮೂಲಕ ವಿದ್ಯಾರ್ಥಿಗಳಿಗೆ ಭವಿಷ್ಯ ರೂಪಿಸಿ ಕೊಡಬೇಕು ಎಂದರು.

ನಗರಸಭೆ ಅಧ್ಯಕ್ಷೆ ಸುಜಾತ ಶಿವಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಕರ್ನಾಟಕ ಸರಕಾರದ ರಾಜ್ಯಪಾಲರು ತಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಮಧು ಬಂಗಾರಪ್ಪ, ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಹೆಚ್.ಡಿ. ತಮ್ಮಯ್ಯ ಹಾಗೂ ವಿಧಾನ ಪರಿಷತ್ ಶಾಸಕರಾದ ಎಸ್.ಎಲ್. ಭೋಜೇಗೌಡ ಅವರು ಶಿಕ್ಷಕ ದಿನಾಚರಣೆಯ ಅಂಗವಾಗಿ ಕಳುಹಿಸಿದ ಶುಭ ನುಡಿಗಳನ್ನು ಕಾರ್ಯಕ್ರಮದಲ್ಲಿ ಶಿಕ್ಷಕರು ಓದಿದರು. ಈ ಸಂದರ್ಭದಲ್ಲಿ ಚಿಕ್ಕಮಗಳೂರು ತಾಲೂಕಿನಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದ್ದ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ರವೀಶ್ ಹಾಜರಿದ್ದರು.

ಕ್ಲಬ್ ಥ್ರೋ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಧರಂಬೀರ್, ಬೆಳ್ಳಿ ಗೆದ್ದ ಪ್ರಣವ್ | ಭಾರತದ ಪದಕ ಸಂಖ್ಯೆ 25

ಪದಕ ಬೇಟೆ: 14 ನೇ ಸ್ಥಾನದಲ್ಲಿ ಭಾರತ

ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಸಾಧನೆ

2012 ಲಂಡನ್: 1
2016 ರಿಯೋ: 4
2020 ಟೋಕ್ಯೊ: 19
2024 ಪ್ಯಾರಿಸ್: 25★
★ಸೆ.5 ರ ರಾತ್ರಿ 11 ಗಂಟೆಯಂತೆ

ಪ್ಯಾರಿಸ್: ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳ ಸರ್ವಶ್ರೇಷ್ಠ ನಿರ್ವಹಣೆಯ ಸಾಧನೆ ಮುಂದುವರಿದಿದೆ. ಸದ್ಯ ಭಾರತ 25 ಪದಕ ಗೆದ್ದು ಪದಕಪಟ್ಟಿಯಲ್ಲಿ 15ನೇ ಸ್ಥಾನಿಯಾಗಿದೆ. 5 ಚಿನ್ನ, 6 ಬೆಳ್ಳಿ, 11 ಕಂಚು ಒಳಗೊಂಡಿದೆ. ಬುಧವಾರ ತಡರಾತ್ರಿ ಭಾರತಕ್ಕೆ ಒಟ್ಟು 3 ಪದಕ ಒಲಿದಿತ್ತು. 2 ಚಿನ್ನ ಮತ್ತು 1 ಬೆಳ್ಳಿ.

ಪುರುಷರ ಕ್ಲಬ್ ಥ್ರೋ ಎಫ್51 ಸ್ಪರ್ಧೆಯಲ್ಲಿ ಭಾರತದ ಧರಂಬೀರ್ ಚಿನ್ನದ ಪದಕವನ್ನು ಗೆದ್ದರೆ, ಮತ್ತೋರ್ವ ಭಾರತೀಯ ಪ್ರಣವ್ ಸೂರ್ಮಾ ಬೆಳ್ಳಿ ಪದಕ ಗೆದ್ದರು. ಇದಕ್ಕೂ ಮುನ್ನ ನಡೆದ ಪುರುಷರ ವೈಯಕ್ತಿಕ ರಿಕರ್ವ್ ಆರ್ಚರಿ ಫೈನಲ್ ಪಂದ್ಯದಲ್ಲಿ ಭಾರತದ ಹರ್ವಿಂದರ್ ಸಿಂಗ್ ಭರ್ಜರಿ ಪ್ರದರ್ಶನದೊಂದಿಗೆ ಚಿನ್ನ ಗೆದ್ದರು.

ಪುರುಷರ ಕ್ಲಬ್ ಥ್ರೋ ಎಫ್51 ಸ್ಪರ್ಧೆಯಲ್ಲಿ ಧರಂಬೀರ್ 34.92 ಮೀಟರ್‌ಗಳ ಅತ್ಯುತ್ತಮ ಎಸೆತದೊಂದಿಗೆ ಏಷ್ಯನ್ ದಾಖಲೆಯನ್ನು ಮುರಿದು ಅಗ್ರಸ್ಥಾನದೊಂದಿಗೆ ಚಿನ್ನಕ್ಕೆ ಕೊರಳೊಡ್ಡಿದರು. ಪ್ರಣವ್ ಸೂರ್ಮಾ 34.59 ಮೀಟರ್ ದೂರ ಕ್ರಮಿಸಿ ಬೆಳ್ಳಿ ಪದಕ ಪಡೆದರು. ಇದೇ ಸ್ಪರ್ಧೆಯಲ್ಲಿ ಕಣಕ್ಕಿಳಿದಿದ್ದ ಭಾರತ ಅಮಿತ್ ಕುಮಾರ್ 10ನೇ ಸ್ಥಾನ ಪಡೆದರು. ಸೆರ್ಬಿಯಾದ ಜೆಲ್ಕೊ ಡಿಮಿಟ್ರಿಜೆವಿಕ್ ಅವರು 34.18 ಮೀಟರ್‌ಗಳ ಅತ್ಯುತ್ತಮ ಪ್ರಯತ್ನದೊಂದಿಗೆ ಕಂಚಿನ ಪದಕ ಪಡೆದರು.

ಹರಿಯಾಣದ ಸೋನೆಪತ್‌ನವರಾದ ಧರಂಬೀರ್, 2014 ರಲ್ಲಿ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ತಮ್ಮ ಜರ್ನಿ ಆರಂಭಿಸಿದರು.ನೀರಿನ ಆಳವನ್ನು ಸರಿಯಾಗಿ ತಿಳಿಯದೆ ಕಾಲುವೆಯೊಂದಕ್ಕೆ ಧುಮುಕಿದ ಧರಂಬೀರ್ ಕೆಳಗಿರುವ ಬಂಡೆಗಳಿಗೆ ಅಪ್ಪಳಿಸಿ ಸೊಂಟದ ಪಾರ್ಶ್ವವಾಯುವಿಗೆ ತುತ್ತಾದರು.

16 ನೇ ವಯಸ್ಸಿನಲ್ಲಿ, ಪ್ರಣವ್ ಸೂರ್ಮಾ ಅವರ ತಲೆಯ ಮೇಲೆ ಸಿಮೆಂಟ್ ಶೀಟ್ ಬಿದ್ದು ಅವರ ಜೀವನವು ನಾಟಕೀಯ ತಿರುವು ಪಡೆದುಕೊಂಡಿತು. ಇದರ ಪರಿಣಾಮವಾಗಿ ಬೆನ್ನುಹುರಿಗೆ ತೀವ್ರವಾದ ಗಾಯವು ಪಾರ್ಶ್ವವಾಯುವಿಗೆ ಒಳಗಾಯಿತು. ಸುಮಾರು ಆರು ತಿಂಗಳು ಕಾಲ ಪ್ರಣವ್ ಆಸ್ಪತ್ರೆಯಲ್ಲಿದ್ದರು. ವ್ಹೀಲ್ ಚೇರ್ ತನ್ನ ಜೀವಮಾನದ ಒಡನಾಡಿ ಎಂದು ಹಿಂದೊಮ್ಮೆ ಪ್ರಣವ್ ಸಂದರ್ಶನದಲ್ಲಿ ಹೇಳಿದ್ದರು.

ವಿಶ್ವವಾಣಿ
ಚೌತಿ ಸಂಭ್ರಮ

ಪ್ರೀತಿಯ ಮಕ್ಕಳೇ,
ಮೋದಕ ಪ್ರಿಯ, ಮೂಷಿಕ ವಾಹನ ಗಣೇಶ ಎಂದರೆ ನಿಮಗೆಲ್ಲರಿಗೂ ಅಚ್ಚುಮೆಚ್ಚು, ಸೆಪ್ಟೆಂಬರ್ 07ರಂದು ವಿಘ್ನನಿವಾರಕನ ಹಬ್ಬ, ಈ ಬಾರಿಯ ಹಬ್ಬಕ್ಕೆ ಗಣೇಶನ ಚಿತ್ರ ಬಿಡಿಸಿ, ಅದರ ಫೋಟೋ ತೆಗೆದು ನಮಗೆ ವಾಟ್ಸ್ ಆ್ಯಪ್ ಮಾಡಿ. ಪತ್ರಿಕೆಯಲ್ಲಿ ಪ್ರಕಟವಾದ ನಿಮ್ಮ ಅಂದವಾದ ಚಿತ್ರಗಳನ್ನು ಕಂಡು ಸಂಭ್ರಮಿಸಿ.



ನಿಬಂಧನೆಗಳು
1. ಒಂದರಿಂದ ಎಂಟನೇ ತರಗತಿವರೆಗಿನ ಮಕ್ಕಳು ಮಾತ್ರ ಸ್ಪರ್ಧೆಯಲ್ಲಿ ಭಾಗವಹಿಸಬಹುದು.
2. ಚಿತ್ರದ ಜತೆ ನಿಮ್ಮ ಭಾವಚಿತ್ರವನ್ನೂ ಕಳುಹಿಸಿ. ಹೆಸರು, ತರಗತಿ ಮತ್ತು ಶಾಲೆಯ ಹೆಸರನ್ನು ಬರೆಯಲು ಮರೆಯದಿರಿ.
3. ಪೆನ್ಸಿಲ್ ಸ್ಕೆಚ್, ವರ್ಣ ಚಿತ್ರ ಯಾವುದಾದರೂ ಆಗಬಹುದು.
4. ಮಕ್ಕಳ ಚಿತ್ರದಲ್ಲಿ ಹಿರಿಯರ ಸಲಹೆ ಇರಲಿ, ಹಸ್ತಕ್ಷೇಪ ಬೇಡ.
5. ಚಿತ್ರಗಳು ನಮಗೆ 07-9-2024ರ ಸಂಜೆ 5 ಗಂಟೆಯೊಳಗೆ ತಲುಪಬೇಕು.

ವಾಟ್ಸ್ ಆ್ಯಪ್ ಸಂಖ್ಯೆ
6362393988

14 ನೇ ಸ್ಥಾನದಲ್ಲಿ ಭಾರತ

ಒಲಿಂಪಿಕ್ಸ್‌ಗೆ ಹೋಲಿಸಿದರೆ, ಭಾರತವು ಪ್ಯಾರಾಲಿಂಪಿಕ್ಸ್‌ನಲ್ಲಿ ಗರಿಷ್ಠ ಸಾಧನೆಯನ್ನು ತೋರಿಸಿದೆ. 1 ಬೆಳ್ಳಿ, 5 ಕಂಚನ್ನು ಗೆದ್ದು ಒಲಿಂಪಿಕ್ಸ್‌ನಲ್ಲಿ ಭಾರತ 71 ನೇ ಸ್ಥಾನವನ್ನು ಗಳಿಸುವಷ್ಟರಲ್ಲೇ ಸಫಲವಾಗಿತ್ತು. ಅದರಿಂದ ದೇಶವಾಸಿಗಳೂ ತಮ್ಮ ಸಾತ್ವಿಕ ಸಿಟ್ಟನ್ನು ಕ್ರೀಡಾಳುಗಳ ಮೇಲೆ ತೋರಿಸಿದ್ದರು. ಇನ್ನೂ ಕೆಲವು ಕ್ರೀಡಾಳುಗಳು ಅಭ್ಯಾಸ ಮಾಡುವುದನ್ನು ಬಿಟ್ಟು ರಾಜಕೀಯ, ಹೋರಾಟ ಮಾಡುತ್ತಿದ್ದರೆ, ಮೆಡಲ್‌ಗಳೂ ಹೇಗೆ ಬಂದಾವು ಎಂದು ಪ್ರಶ್ನೆಯನ್ನು ಎಬ್ಬಿಸಿದ್ದರು, ಆದರೆ, ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಈಗ ಘಟಾನುಘಟಿ ರಾಷ್ಟ್ರಗಳನ್ನು ಮೀರಿಸಿ 14 ನೇ ಸ್ಥಾನದಲ್ಲಿದೆ. ಇನ್ನೂ ಆಟಗಳು ಬಾಕಿಯಿರುವಾಗಲೇ ದ ಈ ಸಾಧನೆ ಯನ್ನು ಭಾರತೀಯರೆಲ್ಲರೂ ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ. ಅದರ ಜತೆಗೆ ಸದ್ಯ ಭಾರತಕ್ಕೆ 25 ಮೆಡಲ್‌ಗಳು ಲಭಿಸಿವೆ. ಇನ್ನೂ ಹಲವಾರು ಆಟೋಟಗಳಲ್ಲಿ ಪದಕಗಳು ಭಾರತೀಯರ ಕೊರಳಲ್ಲಿ ರಾರಾಜಿಸಲಿವೆ. ಅದರ ಜತೆಗೆ, ಹಿಂದಿನ ಎಲ್ಲ ಒಲಿಂಪಿಕ್ಸ್‌ಗಳನ್ನು ಹೋಲಿಸಿದರೆ, ಭಾರತದ ಪಾಲಿಗೆ ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಅದೃಷ್ಟ ಮತ್ತು ಐತಿಹಾಸಿಕ ಸಾಧನೆಯನ್ನು ಮಾಡುವಲ್ಲಿ ಸಫಲವಾಗಿದೆ.

ಕಪಿಲ್ ಪರ್ಮಾರ್‌ಗೆ ಕಂಚು

ಪ್ಯಾರಾ ಜುಡೊ ಸ್ಪರ್ಧಿ ಕಪಿಲ್ ಪರ್ಮಾರ್, ಐತಿಹಾಸಿಕ ಕಂಚಿನ ಪದಕ ಗೆದ್ದಿದ್ದಾರೆ. ಪುರುಷರ 60 ಕೆ.ಜಿ. ಜೆ1 ಜುಡೊ ಸ್ಪರ್ಧೆಯಲ್ಲಿ ಕಪಿಲ್, ಬ್ರೆಜಿಲ್‌ನ ಎಲಿಯೆಲ್ಟನ್ ಡಿ ಒಲಿವೇರಾ ಅವರನ್ನು ಮಣಿಸಿ ಐತಿಹಾಸಿಕ ಸಾಧನೆ ಮಾಡಿದರು. ಪ್ಯಾರಾಲಿಂಪಿಕ್ಸ್ ಜುಡೊ ಕ್ರೀಡೆಯ ಇತಿಹಾಸದಲ್ಲೇ ಭಾರತ ಗೆದ್ದ ಮೊದಲ ಪದಕ ಇದಾಗಿದೆ. ಕಂಚಿನ ಪದಕಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಅಮೋಘ ಪ್ರದರ್ಶನ ನೀಡಿದ ಕಪಿಲ್, 10-0 ಅಂತರದಲ್ಲಿ ಪಂದ್ಯ ವಶಪಡಿಸಿಕೊಂಡರು. 2022ರ ಏಷ್ಯನ್ ಗೇಮ್ಸ್‌ನಲ್ಲೂ ಇದೇ ವಿಭಾಗದಲ್ಲಿ ಕಪಿಲ್ ಬೆಳ್ಳಿ ಪದಕ ಗೆದ್ದಿದ್ದರು.

ವಜ್ರಮುನಿ ಲುಕ್‌ನಲ್ಲಿ ಕೋಮಲ್

ಯಲಾಕುನ್ನಿ ಈ ಡೈಲಾಗ್ ಕೇಳುತ್ತಲೇ ಇದು ಕನ್ನಡ ಚಿತ್ರರಂಗದ ಖ್ಯಾತ ಖಳನಟ ವಜ್ರಮುನಿ ಅವರದ್ದು ಎಂಬುದು ಸ್ಪಷ್ಟವಾಗುತ್ತದೆ. ಈ ಡೈಲಾಗ್ ಈಗ ಸಿನಿಮಾ ಶೀರ್ಷಿಕೆಯಾಗಿದೆ. ಯಲಾಕುನ್ನಿ ಟೈಟಲ್‌ನಲ್ಲಿ ಮೂಡಿಬರುತ್ತಿರುವ ಈ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. ಈ ಚಿತ್ರದಲ್ಲಿ ಕೋಮಲ್ ನಾಯಕನಾಗಿ ನಟಿಸಿದ್ದು, ಎನ್.ಆರ್. ಪ್ರದೀಪ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಸದ್ದಿಲ್ಲದೆ ಚಿತ್ರೀಕರಣ ಪೂರ್ಣಗೊಳಿಸಿರುವ ಯಲಾಕುನ್ನಿ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ. ಈ ಚಿತ್ರಕ್ಕಾಗಿ ಶ್ರೀರಂಗಪಟ್ಟಣದಲ್ಲಿ ಸೆಟ್ ಹಾಕಿ ಚಿತ್ರೀಕರಿಸಲಾಗಿದೆ. ಕೋಮಲ್ ಕುಮಾರ್ ಮೊದಲ ಬಾರಿಗೆ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿರುವುದು ಈ ಚಿತ್ರದ ವಿಶೇಷ. ದತ್ತಣ್ಣ, ಸಾಧು ಕೋಕಿಲ, ಮಿತ್ರ, ಸುಚೇಂದ್ರ ಪ್ರಸಾದ್, ಶಿವರಾಜ್.ಕೆ.ಆರ್ ಪೇಟೆ, ತಬಲಾ ನಾಣಿ, ರಾಜು ತಾಳಿ ಕೋಟೆ, ಸುಮನ್ ನಗರ ಕರ್, ಮಾನಸಿ ಸುಧೀರ್, ಯತಿರಾಜ್ ಜಗ್ಗೇಶ್, ಜಯಸಿಂಹ ಮುಸುರಿ, ರಘು ರಾಮನಕೊಪ್ಪ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ವಜ್ರಮುನಿ ಅವರ ಮೊಮ್ಮಗ ಆಕರ್ಷ್ ಈ ಚಿತ್ರದಲ್ಲಿ ನಟಿಸಿದ್ದು, ಈ ಸಿನಿಮಾ ಮೂಲಕ ಬಣ್ಣದ ಲೋಕ ಪ್ರವೇಶಿಸುತ್ತಿದ್ದಾರೆ. ಮಯೂರ್ ಪಟೇಲ್ ಖಳನಾಯಕನಾಗಿ ನಟಿಸಿದ್ದಾರೆ.

ಯಲಾಕುನ್ನಿ ಚಿತ್ರಕ್ಕೆ ಮೇರಾ ನಾಮ್ ವಜ್ರಮುನಿ ಎಂಬ ಅಡಿಬರಹವಿದೆ. ಸೌಂದರ್ಯ ಸಿನಿ ಕಂಬೈನ್ಸ್ ಹಾಗೂ ನರಸಿಂಹ ಸಿನಿಮಾಸ್ ಲಾಂಛನದಲ್ಲಿ ಅನುಸೂಯ ಕೋಮಲ್ ಕುಮಾರ್, ಸಹನಾ ಮೂರ್ತಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಸಂಪೂರ್ಣ ಹಳ್ಳಿ ಸೊಗಡಿನಲ್ಲಿ ಮೂಡಿಬಂದಿರುವ ಯಲಾಕುನ್ನಿ ಸಿನಿಮಾಕ್ಕೆ ಧರ್ಮ ವಿಶ್ ಸಂಗೀತ ನಿರ್ದೇಶನ, ದೀಪು. ಎಸ್.ಕುಮಾರ್ ಸಂಕಲನ ಹಾಗೂ ಹಾಲೇಶ್ ಭದ್ರಾವತಿ ಛಾಯಾಗ್ರಹಣವಿದೆ. ಮುರಳಿ ಮಾಸ್ಟರ್ ನೃತ್ಯ ಸಂಯೋಜನೆ ಮಾಡಿರುವ ಈ ಚಿತ್ರಕ್ಕೆ ನರಸಿಂಹ ಮಾಸ್ಟರ್ ಸಾಹಸ ನಿರ್ದೇಶನ ಮಾಡಿದ್ದಾರೆ.

ಇಂದಿನಿಂದ ಅನ್ನ ಪ್ರಸಾದ

ಅನ್ನದ ಮಹತ್ವ ಸಾರುವ ಅನ್ನ ಸಿನಿಮಾ ತೆರೆಗೆ ಬಂದಿದೆ. ಎನ್.ಎಸ್. ಇಸ್ಲಾಹುದ್ದೀನ್ ಈ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತಂದಿದ್ದಾರೆ. ಹಿಂದೆ ಹಳ್ಳಿಗಳಲ್ಲಿ ಹಬ್ಬದ ದಿನ ಮಾತ್ರವೇ ಅನ್ನವನ್ನು ಮಾಡಲಾಗುತ್ತಿತ್ತು. ಹಾಗಾಗಿ ಅಂದು ಎಲ್ಲರಿಗೂ ಅನ್ನವೇ ಮಹಾಪ್ರಸಾದವಾಗಿತ್ತು. ಅನ್ನ ಎಷ್ಟು ಮುಖ್ಯ, ಅದರ ಮಹತ್ವ ಏನು ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ. ಅದರ ಜತೆಗೆ ಹಳ್ಳಿಯ ಬಡಕುಟುಂಬದಲ್ಲಿ ಬೆಳೆದ ಹುಡುಗನೊಬ್ಬ ಜಾತ್ರೆಯಲ್ಲಿ ನಾಪತ್ತೆಯಾಗಿ ತದನಂತರ ಅವನ ಹುಡುಕಾಟದಲ್ಲಿ ಎದುರಾಗುವ ಒಂದಷ್ಟು ಸಮಸ್ಯೆಗಳ ನಡುವೆ ಅನ್ನದ ಅರಿವು ಮೂಡಿಸುವ ಪ್ರಯತ್ನವೂ ಇಲ್ಲಿದೆ. ಮಾಸ್ಟರ್ ನಂದನ್, ಮಹಾದೇವ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಸಿದ್ದು ಪ್ರಸನ್ನ, ಸಂಪತ್ ಮೈತ್ರಿಯ, ಬಲರಾಜವಾಡಿ, ರಮೇಶ್ ಸಿದ್ದಯ್ಯನಪುರ, ನಾಗಶ್ರೀ ತಾರಾಬಳಗದಲ್ಲಿದ್ದಾರೆ. ಹನೂರು ಚನ್ನಪ್ಪ ಕಥೆ, ಚಿತ್ರದ ಕಥೆ ಬರೆದಿದ್ದು, ಬಸವರಾಜ್ ಚಿತ್ರ ನಿರ್ಮಾಣ ಮಾಡಿದ್ದಾರೆ. ನಾಗೇಶ್ ಕಂದೇಗಾಲ ಸಂಗೀತ ನಿರ್ದೇಶನ ಅನ್ನ ಚಿತ್ರಕ್ಕಿದೆ.

ಇಬ್ಬನಿ ತಬ್ಬಿದ ಮಯೂರಿ

ಇಬ್ಬನಿ ತಬ್ಬಿದ ಇಳೆಯಲಿ ಸುಂದರ ದೃಶ್ಯ ಕಾವ್ಯವಾಗಿದೆ. ಈ ಸಿನಿಮಾ ನೋಡುತ್ತಿದ್ದರೆ ಎಲ್ಲರೂ ಚಿತ್ರದ ಜತೆಗೆ ಸಾಗುತ್ತಾರೆ. ಹೊಸ ಲೋಕದಲ್ಲಿ ಪಯಣಿಸುತ್ತಾರೆ.

ಇಬ್ಬನಿ ತಬ್ಬಿದ ಇಳೆಯಲಿ ಶೀರ್ಷಿಕೆ, ಸಂಗೀತ, ಮಧುರಗಾನದ ಮೂಲಕ ಸಖತ್ ಸದ್ದು ಮಾಡುತ್ತಿದೆ. ರೊಮ್ಯಾಂಟಿಕ್ ಲವ್ ಸ್ಟೋರಿಯ ಈ ಸಿನಿಮಾದಲ್ಲಿ ಮಯೂರಿ ನಾಯಕಿಯಾಗಿ ನಟಿಸಿದ್ದಾರೆ. ರಾಧೆಯಾಗಿ ಕಾಣಿಸಿಕೊಳ್ಳುತ್ತಿರುವ ಮಯೂರಿ ತಮ್ಮ ಚಿತ್ರ ಹಾಗೂ ಪಾತ್ರದ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ : ಚಿತ್ರದಲ್ಲಿ ನಿಮ್ಮ ಪಾತ್ರ ?

ಮಯೂರಿ: ಈ ಚಿತ್ರದಲ್ಲಿ ನಾನು ರಾಧಾ ಎಂಬ ಪಾತ್ರದಲ್ಲಿ ನಟಿಸಿದ್ದು, ವಿಹಾನ್‌ಗೆ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ಇದೊಂದು ರೊಮ್ಯಾಂಟಿಕ್ ಲವ್ ಸ್ಟೋರಿಯ ಸಿನಿಮಾ. ಜರ್ನಿಯಲ್ಲಿ ಸಾಗುವ ಸುಂದರ ಪ್ರೇಮಕಥೆ ಇಲ್ಲಿದೆ. ನಾಯಕ ಸಿದ್ದಾರ್ಥ, ರಾಧೆಗೆ ಸಿದ್ದಾರ್ಥನೇ ಪ್ರಪಂಚ. ಇದಕ್ಕಾಗಿ ಎಲ್ಲ ಗಡಿ ಮೀರಿ ಸಾಗುವ ಪಾತ್ರ ಇದಾಗಿದೆ. ಪ್ರಕೃತಿ ಹೊರತಾಗಿ ಮನುಷ್ಯ ಇಲ್ಲ, ಒಂದಲ್ಲ ಒಂದು ರೀತಿಯಾಗಿ ನಾವು ಪ್ರಕೃತಿಯೊಂದಿಗೆ ಸಂಬಂಧ ಹೊಂದಿದ್ದೇವೆ. ಈ ಸಂಬಂಧವನ್ನು ಒಂದು ನವೀರಾದ ಪ್ರೀತಿಯ ಕಥೆಯಲ್ಲಿ ಹೇಳಲಾಗುತ್ತಿದೆ.

ವಿ.ಸಿ : ಇದು ಹೊಸತರದ ಪ್ರೇಮ ಕಥೆಯೆ?

ಮಯೂರಿ: ಇದೊಂದು ಹೊಸತರದ ಕಥೆಯಾಗಿದ್ದು ಎಲ್ಲರನ್ನೂ ರಂಜಿಸುತ್ತದೆ. ರಾಧಾ ಪಾತ್ರವೂ ಗಟ್ಟಿಯಾಗಿದೆ, ಎಲ್ಲರಿಗೂ ಇಷ್ಟವಾಗಲಿದೆ. ಗುರುದೇವ ಹೊಯ್ಸಳ ಚಿತ್ರದ ಬಳಿಕ ಸಿಕ್ಕಿದ ಅದ್ಭುತ ಸಿನಿಮಾವಿದು.

ರೆಟ್ರೋ ಶೈಲಿಯಲ್ಲಿ ಮೂಡಿಬಂದಿರುವ ಹಾಡುಗಳು ಚಿತ್ರಕ್ಕೆ ಶಕ್ತಿತುಂಬಿವೆ. ಪ್ರತಿ ಹಾಡುಗಳೂ ಕೂಡ ಮಧುರವಾಗಿದ್ದು ಕೇಳಲು ಹಿತ ಅನ್ನಿಸುತ್ತದೆ.

ನಿರ್ದೇಶಕ ಚಂದ್ರಜಿತ್ ಬೆಳ್ಳಿಯಪ್ಪ ಹೇಳಿದ ಕಥೆ ಮನಸಿನಲ್ಲಿ ಆವರಿಸಿತು. ಕಥೆ ಕೇಳುತ್ತಾ ನನಗೆ ಅರಿವಿಲ್ಲದಂತೆ ನಾನು ರಾಧೆ ಪಾತ್ರದಲ್ಲಿ ಹೊಸ ಪ್ರಪಂಚದಲ್ಲಿ ವಿಹರಿಸುತ್ತಿದ್ದೆ. ಇದು ನಿಜವಾಗಿಯೂ ನನಗೆ ಬಯಸದೇ ಬಂದ ಭಾಗ್ಯ.

ವಿ.ಸಿ : ಚಿತ್ರದ ಹಾಡುಗಳ ಬಗ್ಗೆ ಹೇಳುವುದಾದರೆ?

ಮಯೂರಿ : ಎಲ್ಲಾ ಹಾಡುಗಳು ಅದ್ಭುತವಾಗಿವೆ. ರಾಧೆ.. ಹಾಗೂ ಹೇಳು ಗೆಳತಿ... ಈ ಎರಡು ಹಾಡುಗಳಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ಈ ಎರಡು ಗೀತೆಗಳು ದೃಶ್ಯ ಕಾವ್ಯದಂತಿದ್ದು, ಮಧುರ ಅನುಭೂತಿ ನೀಡುತ್ತವೆ. ಸಾಹಿತ್ಯ, ಸಂಗೀತ ಹಾಗೂ ಕ್ಯಾಮೆರಾ ಕೈಚಳಕವೇ ಆ ಹಾಡುಗಳು ಸುಂದರವಾಗಿ ಮೂಡಿಬರಲು ಕಾರಣವಾಗಿದೆ. ಹಾಡಿನಲ್ಲಿ ಕೂಡ ಪಾತ್ರಗಳು ಗಮನಸೆಳೆಯುತ್ತವೆ.

ಲಂಗೋಟಿಮ್ಯಾನ್ ಹಿಂದೆ ಮಹಿಳಾ ತಂತ್ರಜ್ಞರ ದಂಡು

ಸಂಜೋತಾ ಭಂಡಾರಿ ನಿರ್ದೇಶನದ ಲಂಗೋಟಿ ಮ್ಯಾನ್ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಟೀಸರ್ ವಿಭಿನ್ನವಾಗಿದ್ದು ಸಿನಿಪ್ರಿಯರ ಮನಗೆಲ್ಲುವ ಜತೆಗೆ ಒಂದಷ್ಟು ವಿವಾದಕ್ಕೂ ಕಾರಣವಾಗಿದೆ. ಟೀಸರ್ ನೋಡಿದ ಕೆಲವರು ಚಿತ್ರತಂಡದ ಮೇಲೆ ಕೆಂಡ ಕಾರಿದ್ದರು. ಕೆಲವು ಸಮುದಾಯ ಸಹ ಟೀಸರ್ ಕುರಿತು ಅಸಮಾಧಾನ ವ್ಯಕ್ತಪಡಿಸಿತ್ತು. ಅದಕ್ಕೆಲ್ಲ ನಿರ್ದೇಶಕಿ ಸಂಜೋತಾ ಸಮಜಾಯಿಷಿ ನೀಡಿದ್ದಾರೆ. ಇದೀಗ ಲಂಗೋಟಿ ಬಲು ಒಳ್ಳೇದಣ್ಣ... ಎಂಬ ಹಾಡು ಬಿಡುಗಡೆ ಮಾಡಿದ್ದು, ಚಿತ್ರದಲ್ಲಿ ಕಥೆ ಏನು ಎಂಬುದರ ಬಗ್ಗೆ ಸಣ್ಣ ಸುಳಿವು ನೀಡಲಾಗಿದೆ. ಈ ಕೌಪಿನ ಹಾಡಿಗೆ ವ್ಯಾಪಕ ಮೆಚ್ಚುಗೆಯೂ ವ್ಯಕ್ತವಾಗಿದೆ.

ಪ್ರಮೋದ್ ಮರವಂತೆ ಲಂಗೋಟಿ.. ಹಾಡಿಗೆ ಸಾಹಿತ್ಯ ಬರೆದಿದ್ದು, ಕೆ.ಸುಮೆದ್ ಸಂಗೀತ ಸಂಯೋಜಿಸಿದ್ದಾರೆ. ರ‍್ಯಾಪ್ ಹಾಗೂ ಕ್ಲಾಸಿಕಲ್ ಟಚ್ ಇರುವ ಈ ಗೀತೆಗೆ ಚೇತನ್ ನಾಯ್ಕ್ ಹಾಗೂ ಸುಮೆದ್ ದನಿಯಾಗಿದ್ದಾರೆ. ಕಲರ್‌ಫುಲ್ ಸೆಟ್‌ನಲ್ಲಿ ಈ ಹಾಡಿನ ಚಿತ್ರೀಕರಣ ನಡೆಸಲಾಗಿದೆ. ಈ ಚಿತ್ರದಲ್ಲಿ ನಿರ್ದೇಶಕಿ ಸಂಜೋತಾ ಜತೆಗೆ ಹಲವು ಮಹಿಳಾ ತಂತ್ರಜ್ಞರು ಕಾರ್ಯನಿರ್ವಹಿಸಿದ್ದಾರೆ. ಐಶ್ವರ್ಯಾ ರಮೇಶ್, ವರ್ಷಾ ಅಮರನಾಥ್ ನೃತ್ಯ ಸಂಯೋಜಿಸಿದ್ದು, ಸುದೀಕ್ಷಾ.ಎನ್.ರೆಡ್ಡಿ ಕಲಾ ನಿರ್ದೇಶನದ ಜವಾಬ್ದಾರಿ ನಿರ್ವಹಿಸಿದ್ದಾರೆ. ರೋಮಿ ಮೇಕಪ್ ವಿಭಾಗದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಆಕಾಶ್ ರ‍್ಯಾಂಬೋ, ಸ್ನೇಹಾ ಖುಷಿ, ಸಂಹಿತಾ ವಿನ್ಯಾ, ಧೀರೇಂದ್ರ, ಮಹಾಲಕ್ಷ್ಮಿ, ಹುಲಿ ಕಾರ್ತಿಕ್, ಗಿಲ್ಲಿ ನಟ, ಸಾಯಿ ಪವನ್ ಕುಮಾರ್ ಮುಂತಾದವರು ಚಿತ್ರದ ತಾರಾಗಣದಲ್ಲಿದ್ದಾರೆ. ತನು ಟಾಕೀಸ್ ಬ್ಯಾನರ್‌ನಲ್ಲಿ ಲಂಗೋಟಿ ಮ್ಯಾನ್ ನಿರ್ಮಾಣವಾಗಿದ್ದು, ಇದೇ 20ರಂದು ರಾಜ್ಯಾದ್ಯಂತ ತೆರೆಕಾಣಲಿದೆ.

ಚಂದನವನದಲ್ಲಿ ಗದಾಧಾರಿ ಹನುಮಾನ್

ಚಂದನವನದಲ್ಲಿ ಹನುಮಾನ್ ಪ್ರತ್ಯಕ್ಷವಾಗಿದ್ದಾನೆ, ಬಹಳ ದಿನಗಳ ಬಳಿಕ ಹನುಮಾನ್ ಕುರಿತ ಚಿತ್ರ ಬರುತ್ತಿದೆ. ಹಾಗಂತ ಇದು ಭಕ್ತಿಪ್ರಧಾನ ಸಿನಿಮಾವಲ್ಲ. ಪ್ರಸ್ತುತ ಕಾಲ ಘಟ್ಟದಲ್ಲಿ ನಡೆಯುವ ಫ್ಯಾಂಟಸಿ ಅಂಶಗಳು ಚಿತ್ರದ ಕಥೆಯಲ್ಲಿ ಬೆರೆತಿವೆ. ಗದಾಧಾರಿ ಹನುಮಾನ್ ಶೀರ್ಷಿಕೆಯಲ್ಲಿ ಸೆಟ್ಟೇರಿರುವ ಈ ಚಿತ್ರದ ಪೋಸ್ಟರ್ ಬಿಡುಗಡೆಯಾಗಿದ್ದು, ಕನ್ನಡ, ತೆಲುಗು ಮತ್ತು ಹಿಂದಿ ಭಾಷೆಯಲ್ಲಿ ನಿರ್ಮಾಣವಾಗಲಿದೆ. ರೋಹಿತ್ ಕೊಲ್ಲಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದು, ರಾಕ್ಷಸ ಗುಣದ ದುರುಳರನ್ನು ನಾಯಕ ಹೇಗೆ ಹನುಮಾನ್‌ನಂತೆ ಸೆದೆಬಡಿಯುತ್ತಾನೆ ಎಂಬುದನ್ನು ಆ್ಯಕ್ಷನ್, ಥ್ರಿಲ್ಲರ್, ಕಾಮಿಡಿ ಅಂಶಗಳನ್ನು ಬೆರೆಸಿ ಕಟ್ಟಿಕೊಡಲಾಗುತ್ತಿದೆ.

ತಾರಕಾಸುರ ಖ್ಯಾತಿಯ ರವಿ ನಾಯಕನಾಗಿ ಅಭಿನಯಿಸುತ್ತಿದ್ದು, ಹರ್ಷಿತಾ ನಾಯಕಿ ಕಾಣಿಸಿಕೊಳ್ಳುತ್ತಿದ್ದಾರೆ. ಉಳಿದಂತೆ ಕಲ್ಯಾಣ್ ಕೃಷ್ಣ, ರಮೇಶ್ ಪಂಡಿತ್, ಸುನಂದಾ ಕಲ್ಬುರ್ಗಿ, ನಾಗೇಶ್ ಮಯ್ಯ, ಶಿವಪ್ಪ, ಅರ್ಜುನ್ ಜೋಯಿಸ್, ಭೀಷ್ಮ, ಲೋಕೇಶ್ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಸಂಗೀತ ಜ್ಯೂಡಾ ಸ್ಯಾಂಡಿ, ಛಾಯಾಗ್ರಹಣ ಅರುಣ್ ಗೌಡ, ಸಂಕಲನ ಸಿ.ಎನ್.ಕಿಶೋರ್, ಸಾಹಸ ಟೈಗರ್ ಶಿವ, ಅವರದಾಗಿದೆ. ಬೆಂಗಳೂರು, ಚಿತ್ರದುರ್ಗ, ಗಂಗಾವತಿ, ಹಂಪಿ, ಅಂಜನಾದ್ರಿಬೆಟ್ಟ, ಕಿತ್ತೂರು, ಹೊನ್ನಾಪುರ್, ದಾಂಡೇಲಿ ಸುಂದರ ತಾಣಗಳಲ್ಲಿ ನಾಲ್ಕು ಹಂತಗಳಲ್ಲಿ ಚಿತ್ರೀಕರಣ ನಡೆಸಲು ಯೋಜನೆ ರೂಪಿಸಲಾಗಿದೆ.

ವೀರೇಶ್ ಸಿನಿಮಾಸ್

ಜೆ.ಪಿ.ನಗರ ಸಿದ್ಧಲಿಂಗೇಶ್ವರ
PVR INOX
MALL OF ASIA | NEXUS | ORION | VAISHNAVI | REGALIA | MARKETCITY | AURA | VEGACITY | SPIRIT | UPTOWN | BHARTIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD
cinépolis
ETA | MEENAKSHI | ORION EAST | LULU | SHANTINIKETAN | SJR
GOPALAN CINEMAS
ARCH | INNOVATION | GRAND | SIGNATURE | LEGACY
ROCKLINE cinemas JALAHALLI
MIRAJ SUNKADAKATTE
CINEPHILE THE MOVIE HUB HSR LAYOUT
VAISHNAVI VAIBHAVI UTHARAHALLI
Balaji Cinemas : Multiplex CHIKKALASANDRA
V CINEMAS RAMMURTHYNAGAR
ತುಮಕೂರು ಮಾರುತಿ, PVR INOX
ಮೈಸೂರು PVR INOX GARUDA | FORUM | SATYAM, DRC CINEMAS, VISION CINEMAS
ಶಿವಮೊಗ್ಗ Bharath Cinemas
ದಾವಣಗೆರೆ MOVIETIME
ಬಳ್ಳಾರಿ MOVIETIME
ಹುಬ್ಬಳ್ಳಿ PVR INOX, cinépolis
ಧಾರವಾಡ PVR INOX
ಬೆಳಗಾವಿ PVR INOX, KAPEEL
ಗುಲ್ಬರ್ಗ PVR INOX, MIRAJ
ರಾಯಚೂರು MIRAJ
ಬೀದರ್ ಸಪ್ನ
ಗಂಗಾವತಿ ಶಿವೆ
ಮಂಗಳೂರು PVR INOX, cinépolis, Bharath Cinemas
ಉಡುಪಿ Bharath Cinemas
ಮಣಿಪಾಲ PVR INOX, Bharath Cinemas
ಕುಂದಾಪುರ Bharath Cinemas
ಸುರತ್ಕಲ್ Cine GALAXY
ಪಡುಬಿದ್ರೆ Bharath Cinemas
ಪುತ್ತೂರು Bharath Cinemas

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್

ದಿನ ದರ್ಶಿಕೆ

ಭಾದ್ರಪದ ಮಾಸ, ಶುಕ್ಲ ಪಕ್ಷ, ತೃತಿಯಾ ತಿಥಿ, ಶುಕ್ಲ ಯೋಗ, ಹಸ್ತಾ ನಕ್ಷತ್ರ, ಗರಜ ಕರಣ, 1946 ಕ್ರೋಧಿನಾಮ ಸಂವತ್ಸರ, ದ್ರಿಕ್ ಋತು ಶರದ್, ದ್ರಿಕ್ ಆಯನ ದಕ್ಷಿಣಾಯನ

ಮನೆಮದ್ದು



ಮೆಂತ್ಯ ಬೀಜಗಳನ್ನು ರಾತ್ರಿ ನೀರಿನಲ್ಲಿ ನೆನೆಸಿ ಮತ್ತು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಯಿರಿ. ಇದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಮೆಂತ್ಯ ಬೀಜಗಳು ಕರಗುವ ಫೈಬರ್ ಅನ್ನು ಹೊಂದಿರುತ್ತವೆ, ಇದು ಕಾರ್ಬೋಹೈಡ್ರೇಟ್‌ಗಳ ಹೀರಿಕೊಳ್ಳುವಿಕೆಯನ್ನು ನಿಧಾನಗೊಳಿಸುವ ಮೂಲಕ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸುತ್ತದೆ.

ಸೌಂದರ್ಯ ಸೂತ್ರ

ತೆಂಗಿನ ಎಣ್ಣೆಯನ್ನು ನೆಲ್ಲಿಕಾಯಿಯೊಂದಿಗೆ ಬೆರೆಸಿದರೆ ಬೂದು ಕೂದಲಿನ ಸಮಸ್ಯೆಯನ್ನು ಸುಲಭವಾಗಿ ನಿವಾರಿಸಿಕೊಳ್ಳಬಹುದು. ಸ್ವಲ್ಪ ಒಣಗಿದ ನೆಲ್ಲಿಕಾಯಿ ತುಂಡುಗಳನ್ನು ತೆಂಗಿನ ಎಣ್ಣೆಯಲ್ಲಿ ಕುದಿಸಿ ಮತ್ತು ರಾತ್ರಿಯಿಡೀ ಹಾಗೆಯೇ ಬಿಡಿ. ಬೆಳಿಗ್ಗೆ ಈ ಎಣ್ಣೆಯನ್ನು ನಿಮ್ಮ ಕೂದಲಿಗೆ ಹಚ್ಚಿ. ನಂತರ ಮೂರು ಗಂಟೆ ಬಿಟ್ಟು ಕೂದಲನ್ನು ತೊಳೆಯಿರಿ.ಇದರಿಂದ ಬಿಳಿ ಕೂದಲಿನ ಸಮಸ್ಯೆಯನ್ನು ನಿವಾರಿಸಿಕೊಳ್ಳಬಹುದು.

ದಿನ ಭವಿಷ್ಯ

ಮೇಷ ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಭೂಮಿಗೆ ಸಂಬಂಧಿಸಿದ ವಿಷಯಕ್ಕೆ ಹಣ ಖರ್ಚು ಮಾಡಬೇಕಾಗಬಹುದು.

ವೃಷಭ ನಿಮ್ಮ ಕೋಪ ಕಡ್ಡಿಯನ್ನು ಗುಡ್ಡ ಮಾಡಬಹುದು -ಇದು ನಿಮ್ಮ ಕುಟುಂಬದ ಸದಸ್ಯರ ಅಸಮಾಧಾನಕ್ಕೆ ಕಾರಣವಾಗುತ್ತದೆ.

ಮಿಥುನ ಇಂದು ಸಹೋದರರ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ ನಿಮ್ಮ ಆಹ್ಲಾದಕರ ವರ್ತನೆ ಕುಟುಂಬವನ್ನು ಖುಷಿಪಡಿಸುತ್ತದೆ.

ಕಟಕ ಕೆಲಸದ ಒತ್ತಡ ಇಂದು ಸ್ವಲ್ಪ ಒತ್ತಡ ತರಬಹುದು. ಹಿಂದೆ ಮಾಡಿದ ಹಣದ ಹೂಡಿಕೆಯಿಂದ ಲಾಭ ಪಡೆಯುವ ಸಾಧ್ಯತೆಯಿದೆ.

ಸಿಂಹ ಕೆಲವು ಮಾನಸಿಕ ಒತ್ತಡಗಳ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ದೂರದ ಸಂಬಂಧಿಗಳು ಇಂದು ನಿಮ್ಮನ್ನು ಸಂಪರ್ಕಿಸಬಹುದು.

ಕನ್ಯಾ ಮುಂಗೋಪ ನಿಮ್ಮನ್ನು ಇನ್ನೂ ಹೆಚ್ಚು ತೊಂದರೆಯಲ್ಲಿ ಸಿಲುಕಿಸಬಹುದು. ಹಣದ ಹಠಾತ್ ಒಳಹರಿವು ವೆಚ್ಚಗಳನ್ನು ನೋಡಿಕೊಳ್ಳುತ್ತದೆ.

ತುಲಾ ಮನೆಯ ಅಗತ್ಯವಾದ ವಸ್ತುಗಳ ಮೇಲೆ ಹಣ ಖರ್ಚು ಮಾಡುವುದು ಖಂಡಿತವಾಗಿಯೂ ನಿಮಗೆ ಆರ್ಥಿಕ ತೊಂದರೆ ನೀಡುತ್ತದೆ.

ವೃಶ್ಚಿಕ ವಿಶ್ರಾಂತಿಯ ಸಲುವಾಗಿ ಸ್ನೇಹಿತರೊಂದಿಗೆ ಸ್ವಲ್ಪ ಸಮಯ ಕಳೆಯಿರಿ. ಹಣ ಉಳಿಸಲು ಮಾಡಲಾಗಿರುವ ಪ್ರಯತ್ನ ವಿಫಲ.

ಧನು ನಿಮ್ಮ ಮಗುವಿನ ಸಾಧನೆ ನಿಮಗೆ ಅಪಾರ ಸಂತೋಷ ನೀಡಬಹುದು. ಇಂದು ತಮ್ಮ ಆಪ್ತರಿಂದ ಸಲಹೆಯನ್ನು ಪಡೆಯಬಹುದು.

ಮಕರ ನಿಮ್ಮ ಸಕಾರಾತ್ಮಕ ದೃಷ್ಟಿಕೋನ ನಿಮ್ಮ ಸುತ್ತಲಿನವರನ್ನು ಆಕರ್ಷಿಸಬಹುದು. ನಿಮ್ಮ ತಾಯಿಯ ಬದಿಯಿಂದ ಹಣಕಾಸಿನ ಲಾಭವಿದೆ.

ಕುಂಭ ಸೃಜನಶೀಲ ಆಸಕ್ತಿಗಳು ನಿಮ್ಮನ್ನು ಶಾಂತವಾಗಿರಿಸುತ್ತವೆ. ಆರ್ಥಿಕ ದೃಷ್ಟಿಯಿಂದ ಈ ದಿನ ಮಿಶ್ರವಾಗಿ ಉಳಿಯುತ್ತದೆ.

ಮೀನ ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಇಂದು ಹಣಕ್ಕೆ ಸಂಬಂಧಿಸಿದ ಸಮಸ್ಯೆಯಿಂದ ತೊಂದರೆಗೆ ಒಳಗಾಗಬಹುದು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1963: ಮಂಜೇಶ್ವರ ಗೋವಿಂದ ಪೈ ಅವರು ದೇಹಾಂತ್ಯಗೊಂಡರು.
- 2012: ಬರಾಕ್ ಒಬಾಮಾ ಅವರು ಡೆಮಾಕ್ರೆಟಿಕ್ ಪಕ್ಷದಿಂದ ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ನಾಮನಿರ್ದೇಶಿತಗೊಂಡರು.
- ಪಾರ್ವತಿ ದೇವಿಯನ್ನು ಆರಾಧಿಸುವ ಹರ್ತಲಿಕಾ ತೀಜ್ ಹಬ್ಬ

ಚಿತ್ರಸ್ಫೂರ್ತಿ



ವಿಮಾನ ಆಕಾಶಕ್ಕೆ ಹಾರಿದಾಗ ಚಿಕ್ಕದಾಗುತ್ತಲ್ಲ, ಅವಾಗ ಬಣ್ಣ ಬಳೀತಾರಂತೆ!

ಚಿತ್ರಕೃಪೆ: ಸುಧಾಕರ್ ದೇವರಾಜ್

ಮತ್ತೊಬ್ಬರನ್ನು ಅನುಕರಿಸಿ ಏನೂ ಸಾಧಿಸಲಾಗದು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದು ಹಳ್ಳಿಯಲ್ಲಿ ಒಬ್ಬ ರೈತನಿದ್ದ. ರೈತನ ಬಳಿ ಒಂದು ಕತ್ತೆ ಹಾಗೂ ಒಂದು ನಾಯಿ ಇತ್ತು. ರೈತ ಹೊಲದ ಕೆಲಸ ಮುಗಿಸಿ ಮನೆಗೆ ಬಂದಾಗ ಅವನನ್ನು ನೋಡಿ ನಾಯಿ ಕುಣಿಯುತ್ತ ಅವನ ಬಳಿಗೆ ಓಡಿ ಬಂದು, ಅವನ ಮೈ ಮೇಲೆ ಹತ್ತಿಕೊಂಡು ಅವನನ್ನು ಮುದ್ದಿಸುತ್ತಿತ್ತು. ರೈತನೂ ಅದನ್ನು ಎತ್ತಿಕೊಂಡು ಮುದ್ದಿಸುತ್ತಿದ್ದ. ಇದನ್ನು ನೋಡುತ್ತಿದ್ದ ಕತ್ತೆಗೆ, ನಾಯಿಯನ್ನು ಕಂಡು ಹೊಟ್ಟೆಕಿಚ್ಚು ಆಗುತ್ತಿತ್ತು.

ರೈತ ಕತ್ತೆಯನ್ನೂ ಕೂಡ ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ. ಅದಕ್ಕೆ ಹೊಟ್ಟೆ ತುಂಬಾ ಹುಲ್ಲು, ಕಾಳು ಕಡ್ಡಿಗಳನ್ನು ಕೊಟ್ಟು, ಬಿಡುವಾದಾಗ ಪ್ರೀತಿಯಿಂದ ಅದರ ಮೈ ನೇವರಿಸುತ್ತಾ, ಮಾಲಿಶು ಮಾಡುತ್ತಿದ್ದ. ಇಷ್ಟಾದರೂ ಕತ್ತೆಗೆ, ಅವನು ನಾಯಿಯನ್ನು ಮುದ್ದಿಸುವಷ್ಟು ತನ್ನನ್ನು ಮುದ್ದಿಸುವುದಿಲ್ಲವೆಂಬ ಬೇಸರವಿತ್ತು. ನಾಯಿಯನ್ನು ಎತ್ತಿಕೊಂಡು ಮುದ್ದಿಸುವ ಹಾಗೆ ಅವನು ತನ್ನನ್ನೂ ಮುದ್ದಿಸಲಿ ಎಂಬ ಆಸೆ ಅದಕ್ಕೆ.

ತನ್ನ ಯಜಮಾನ ನಾಯಿಯನ್ನು ಅಷ್ಟೊಂದು ಮುದ್ದಿಸಲು ಕಾರಣ, ಅದರ ಕುಣಿದಾಟವೇ ಇರಬೇಕು! ನಾನು ಅದೇ ರೀತಿ ಕುಣಿದಾಡಿದರೆ, ಯಜಮಾನ ನನ್ನನ್ನು ಕೂಡಾ ಅದಕ್ಕಿಂತ ಜಾಸ್ತಿ ಮುದ್ದಿಸುತ್ತಾನೆ ಎಂದು ಯೋಚಿಸಿತು.

ಒಂದು ದಿನ ಯಜಮಾನ ತನ್ನ ಕೆಲಸ ಮುಗಿಸಿ ಮನೆಗೆ ಬಂದಾಗ, ನಾಯಿ ಮಾಡುವ ಹಾಗೆ, ತಾನೂ ಕುಣಿಯುತ್ತ ಅವನೊಟ್ಟಿಗೆ ಮನೆಯ ಒಳಗೆ ಹೋಯಿತು. ಇದರ ಕುಣಿದಾಟದಿಂದ ಮನೆಯ ಹಜಾರದೊಳಗಿದ್ದ ಸಾಮಾನುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಕೆಳಗೆ ಬಿದ್ದು ಹೋದವು. ಯಜಮಾನ ಇದಕ್ಕೇನಾಯಿತು ಎಂದು ಆಶ್ಚರ್ಯದಿಂದ ನೋಡುತ್ತಿದ್ದಾಗ, ಕತ್ತೆ ಅವನ ಹತ್ತಿರ ಬಂದು ನಾಯಿ ಅವನ ಮೇಲೆ ಎರಗುವಂತೆ ತಾನು ಕೂಡಾ ತನ್ನ ಮುಂಗಾಲನ್ನು ಎತ್ತಿ, ಅವನ ತೊಡೆಯ ಮೇಲಿಟ್ಟಿತು. ಯಜಮಾನ ನೋವಿನಿಂದ ಚೀರುತ್ತಾ, ತನ್ನ ಆಳನ್ನು ಕರೆದು 'ಈ ಕತ್ತೆಗೆಲ್ಲೋ, ಹುಚ್ಚು ಹಿಡಿದಿರಬೇಕು! ಇದನ್ನು ಊರ ಹೊರಗಿನ ಕಾಡಿನೊಳಗೆ ಬಿಟ್ಟು ಬಾ' ಎಂದು ಆಜ್ಞೆ ಮಾಡಿದ. ಅವನು ಅದನ್ನು ಎಳೆದುಕೊಂಡು ಕಾಡಿನೊಳಗೆ ಬಿಟ್ಟು ಬಂದ.

ಕತ್ತೆ ಮುಖ ಸಪ್ಪೆಗೆ ಮಾಡಿಕೊಂಡು ದುಃಖದಿಂದ ತನಗೆ ತಾನೇ ಹೇಳಿಕೊಂಡಿತು, ತಾನು ದುರಾಸೆಯಿಂದ ನಾಯಿಯಂತೆ ಯಜಮಾನನನ್ನು ಮುದ್ದಿಸಲು ಹೋಗಿ, ಅವನಿಗೆ ನೋವನ್ನುಂಟು ಮಾಡಿ, ಅವನ ಪ್ರೀತಿಯನ್ನು ಕಳೆದುಕೊಂಡು ಬಿಟ್ಟೆ. ಅವನು ನಾಯಿಯಷ್ಟೇ ತನ್ನನ್ನು ಕೂಡ ಪ್ರೀತಿಸುತ್ತಿದ್ದ, ದುರಾಸೆಯಿಂದ ನನಗೆ ನಾನೇ ಕಷ್ಟವನ್ನು ತಂದುಕೊಂಡು ಬಿಟ್ಟೆನಲ್ಲ, ಎಂದು ಪೇಚಾಡತೊಡಗಿತು.

ನಿಜವೇ ಅಲ್ಲವೇ! ಜೀವನದಲ್ಲಿ ಯಾರದ್ದೋ ಏಳಿಗೆಯನ್ನ ನೋಡಿ ನಾವು ಕೂಡ ಅವರಂತಾಗಲು ಆಶಿಸುತ್ತೇವೆ. ಆದರೆ ಅವರಂತೆ ಎಂದರೆ, ಅವರಂತೆ ಜೀವನದಲ್ಲಿ ಕಷ್ಟಪಡುವುದು, ನಿಷ್ಠೆಯಿಂದ ಬದುಕುವುದು. ಅದನ್ನು ಬಿಟ್ಟು ನಾವು ಕೇವಲ ಅವರ ಬಾಹ್ಯ ಹಾವ ಭಾವ, ನಡವಳಿಕೆ, ವಸ್ತ್ರ ಇವುಗಳನ್ನು ಮಾತ್ರ ಅನುಸರಿಸಲು ಪ್ರಾರಂಭಿಸುತ್ತೇವೆ. ಯಾರಾದರೂ ಯಶಸ್ವಿಯಾಗಲು ಅದಕ್ಕೆ ಹಲವಾರು ವರ್ಷಗಳ ತಪಸ್ಸಿರುತ್ತವೆ. ಹಗಲು ರಾತ್ರಿ ಅವರು ಕಂಡ ಕನಸನ್ನು ನನಸಾಗಿಸಿಕೊಳ್ಳಲು ಶ್ರಮಿಸಿರುತ್ತಾರೆ. ನಾವು ಕೇವಲ ಅವರ ಯಶಸ್ಸಿನ ಒಂದು ಭಾಗವನ್ನು ಮಾತ್ರ ನೋಡಿ ಅಷ್ಟನ್ನು ಅನುಕರಿಸಿದರೆ ಏನೂ ಮಾಡಿದಂತಾಗುವುದಿಲ್ಲ.

ಎಂದಿಗೆ ನಾವು ಸ್ವಂತಿಕೆಯನ್ನು ಉಳಿಸಿಕೊಂಡು ನಮ್ಮ ಸಾಮರ್ಥ್ಯವನ್ನು ಗುರುತಿಸಿಕೊಂಡು ಅದರ ಮೇಲೆ ಶ್ರಮಿಸುತ್ತೇವೋ ಆಗ ನಮಗೆ ನಮ್ಮ ಜೀವನದ ಬೆಳಕು ಸಿಗುತ್ತಾ ಹೋಗುತ್ತದೆ.

ಮತ್ತೊಬ್ಬರಂತಾಗಲು ಅವರನ್ನು ಅನುಕರಿಸಲು ಪ್ರಯತ್ನಿಸಿದಾಗ, ನಾವು ನಮ್ಮತನವನ್ನೂ ಕಳೆದುಕೊಂಡು ತ್ರಿಶಂಕು ಸ್ವರ್ಗದಲ್ಲಿ ಸಿಲುಕಿಕೊಳ್ಳುತ್ತೇವೆ. ಅಲ್ಲಿ ನಾವ್ಯಾರೆಂದೇ ನಮಗೆ ತಿಳಿಯುವುದಿಲ್ಲ. ಬೇರೆಯವರಿಗೂ ನಮ್ಮ ಗುಣಗಳ ಪರಿಚಯವಾಗುವುದಿಲ್ಲ. ಜೀವನದಲ್ಲಿ ಏನೇ ಬಂದರೂ ನಮ್ಮ ಸ್ವಂತಿಕೆ ಉಳಿಸಿಕೊಳ್ಳಬೇಕು. ಮತ್ತೊಬ್ಬರನ್ನು ಅನುಕರಿಸಿ ನಾವು ಎಂದೂ ಬೆಳೆಯಲು ಸಾಧ್ಯವಿಲ್ಲ. ಎಲ್ಲರಿಗೂ ಗೌರಿ ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.

ಪ ದ ಬಂ ಧ



ಎಡದಿಂದ ಬಲಕ್ಕೆ

1. ದುಃಖಕ್ಕೆ ಕಾರಣವಾದ ಎಂದರ್ಥ (4)
3. ಮನಸ್ಸಿನ ತಳಮಳ (3)
4. ನೋವು ಕೊಡುವ ಹೆರಿಗೆ (3)
5. ಮಾವನ ಮಧ್ಯೆ ಸಿಲುಕಿರುವ ವಿಷ್ಣು (3)
6. ಒಲೆಯಲ್ಲಿಟ್ಟ ಪದಾರ್ಥ ಸೀದು ಹೋಗು (3)
8. ಕೋಟೆಯ ಸುತ್ತಲಿರುವ ಅಗಳು (3)
10. ರಾಜನಿಗೆ ಮತ್ತೊಂದು ಹೆಸರು (4)
12. ಕುಬೇರನ ಒಂಭತ್ತು ಐಶ್ವರ್ಯಗಳು (4)
14. ಸ್ವರ್ಗದ ವಿರುದ್ಧ ಪದ (3)
16. ಕೆಸರಿನಲ್ಲಿ ಹುಟ್ಟಿದುದು (3)
18. ವ್ಯಾಪಾರದ ಸಾಮಗ್ರಿ (3)
19. ಗೊತ್ತುವಳಿ ಅಥವಾ ತೀರ್ಮಾನ (3)
20. ಸರದ ಮಧ್ಯೆ ಸಿಲುಕಿದೆ ಗಾಳಿ (3)
21. ಮಹಾವಿಷ್ಣುವಿನ ಹಾಸಿಗೆಯಾಗಿರುವ ಸರ್ಪರಾಜ (4)

ಎಡದಿಂದ ಬಲಕ್ಕೆ

2. ಸದ್ದೇ ಇಲ್ಲ, ಮೌನ (3)
3. ಅತಿಯಾದ ಆತುರ (3)
4. ದೋಷ ಅಥವಾ ಅಪಾಯ (3)
5. ಹೊಗಳುಭಟ್ಟ (3)
7. ದನಿಯೊಂದಿಗೆ ಬಂದಿರುವ ಆನೆ (3)
8. ನಡುಕಕ್ಕೆ ಮತ್ತೊಂದು ಹೆಸರು (3)
9. ಎರಡು ಕಡೆಯಿಂದ ನೋಡಿದರೂ ಚೆನ್ನವೇ (3)
11. ಕಾಪಾಡುವವನು (3)
13. ಮತ್ತೊಂದು ಸೊಕ್ಕು (3)
15. ಅಸ್ತವ್ಯಸ್ತವಾಗಿ ಬಂದಿರುವ ವ್ಯಾಪ್ತಿ (3)
17. ಹೊಟ್ಟೆ ಅಥವಾ ಒಂದು ಜೀರ್ಣಾಂಗ (3)
18. ಅಪ್ಪಣ್ಣ ನುಡಿಸಿದ ವಾದ್ಯ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಕಿರಾತ 4. ಹುರುಪು 5. ಪವನು 6. ರಸನ 9. ಪರಾಭವ 10. ದಹನ 12. ಉವಕ 14. ಡಮರುಗ 16. ಮಜಲು 18. ವೀಕ್ಷಕ 19. ಗರಿಕೆ 20. ರದನಿ

ಮೇಲಿನಿಂದ ಕೆಳಕ್ಕೆ: 1. ಕಿನ್ನರ 2. ತಪನ 3. ಅನುಚರಾ 4. ಹುಲ್ಲುಗಾವಲು 7. ಸಮ್ಮೋಹ 8. ದಾಯಕ 10. ದಕ್ಷತೆ 11. ನಡವಳಿಕೆ 13. ವನಜ 15. ರುದ್ರವೀಣೆ 16. ಮಕರ 17. ಲುಕುನಿ

● ಸಿ. ರವಿಶಂಕರ ಶಾಸ್ತ್ರಿ ದಂಬೆ

ದಿನಕ್ಕೊಂದು ಮಾಹಿತಿ

14 ಜನರ ಇಂಟರ್ನೆಟ್

ಇಂಟರ್ನೆಟ್ ಈಗ ಪ್ರತಿಯೊಬ್ಬನ ಜೀವನದ ಅವಿಭಾಜ್ಯ ಅಂಗ. ಊಟಕ್ಕೆ ಸ್ವಲ್ಪ ತಡವಾದರೂ ನಡೆಯುತ್ತದೆ. ಆದರೆ, ಇಂಟರ್ನೆಟ್ ಇರಲಿಲ್ಲವೆಂದರೆ, ಎಷ್ಟೋ ಜನಕ್ಕೆ ಊಟವೂ ಸೇರಲ್ಲ. ಹೆಚ್ಚೂ ಕಡಿಮೆ ವಿಶ್ವದ ಪ್ರತಿಯೊಬ್ಬರೂ ಇಂಟರ್ನೆಟ್ ಪ್ರಭಾವಕ್ಕೆ ಒಳಪಟ್ಟೇ ಪಡುತ್ತಾರೆ. ಆದರೆ, ನಿಮಗೆ ಗೊತ್ತಾ ಇಂಟರ್ನೆಟ್ 14 ಜನರ ಕೈಯಲ್ಲಿರುವುದು ಎಂದು? ಹೌದು ಇಡೀ ವಿಶ್ವದ ಇಂಟರ್ನೆಟ್ ಅನ್ನು 14 ಜನಗಳು ನಿರ್ವಹಣೆ ಮಾಡುತ್ತಾರೆ. ಅದೂ 7 ಯುನಿಕ್ ಡಿಜಿಟಲ್ ಕೀ ಎಂಬ ವಿಶಿಷ್ಟವಾದ ಕೋಡ್‌ಗಳಿಂದ ನಿರ್ಮಿಸಲ್ಪಟ್ಟ ಪಾಸ್‌ವಾರ್ಡ್‌ಗಳಿಂದ ನಿರ್ವಹಿಸುತ್ತಾರೆ. ಈ ಡಿಜಿಟಲ್ ಕೀಗಳೇ ವಿಶ್ವದ ಇಂಟರ್ನೆಟ್ ಅನ್ನು ನಿರ್ವಹಿಸುವುದು. ಅವರ ಕೆಲಸದ ಶೈಲಿ ನೋಡಿ, ಎಂದಿಗೂ ಇಂಟರ್ನೆಟ್ ನಿಂತಿಲ್ಲ, ನಿಂತಿದ್ದರೂ ಅದು ಸ್ಥಳೀಯ ಕಾರಣಗಳಿಂದಷ್ಟೇ. ಇನ್ನು ಮುಂದೆ ಇಂಟರ್ನೆಟ್ ಬಳಸುವಾಗ, ಇದು ಬರೀ 14 ಜನರಿಂದನೇ ಕೆಲಸಮಾಡುತ್ತದೆ ಎನ್ನುವುದನ್ನು ನೆನಪಿನಲ್ಲಿಡಿ. ಹಾಗೇ, ಇಂಟರ್ನೆಟ್ ಅನ್ನು ನಿರ್ವಹಿಸುವುದು, 14 ಜನರಿಗೆ ಮೆಸ್ಸೇಜ್ ಶೇರ್ ಮಾಡಿದಷ್ಟು ಸುಲಭವಲ್ಲ!!

ಪುಸ್ತಕ ಲೋಕ

ಒಲವಿನ ಒಲಂಪಿಕ್ಸ್



ಇದು ಎಚ್. ಡುಂಡಿರಾಜ್ ಅವರ ದಾಂಪತ್ಯ ಬಗೆಗಿನ ಹನಿಗವನ ಸಂಕಲನನ. ಕೃತಿಯಲ್ಲಿ ಲೇಖಕರ ಬೆನ್ನುಡಿಯ ಬರಹ ಹೀಗಿದೆ; ಒಲವಿನ ಒಲಂಪಿಕ್ಸ್ ಎಂಬ ಈ ಸಂಕಲನದಲ್ಲಿ ನಾನು ದಾಂಪತ್ಯದ ವಿವಿಧ ಮುಖಗಳನ್ನು ಕಿರುಗವನಗಳಲ್ಲಿ ಹಿಡಿದಿಡುವ ಕಿರು ಪ್ರಯತ್ನವನ್ನು ಮಾಡಿದ್ದೇನೆ. ಇವುಗಳಲ್ಲಿ ಸಿಹಿ-ಕಹಿ, ನಗೆ-ಧಗೆ ಎರಡೂ ಇವೆ. ಇದು ನನ್ನೊಬ್ಬನ ಅನುಭವವಲ್ಲ ಜೀವನ ನಾಟಕದ ದಾಂಪತ್ಯವೆಂಬ ಅಂಕದಲ್ಲಿ ನಾನು ಪಾತ್ರಧಾರಿಯಾಗಿ ಉಂಡದ್ದು ಮತ್ತು ಪ್ರೇಕ್ಷಕನಾಗಿ ಕಂಡದ್ದು ಎರಡೂ ಇಲ್ಲಿನ ಕವನಗಳಿಗೆ ಪ್ರೇರಣೆಯಾಗಿವೆ. ದಾಂಪತ್ಯದ ಬೆರಗು ಹಾಗೂ ಕೊರಗನ್ನು ಕಿರುಗವನಗಳಲ್ಲಿ ಸೆರೆ ಹಿಡಿ ಯುವ ಒಲವಿನ ಒಲಂಪಿಕ್ಸ್ ಕಾವ್ಯ ಪ್ರಿಯರ ಮೆಚ್ಚುಗೆಗೆ ಪಾತ್ರ ವಾಗುತ್ತದೆ ಎಂಬುವುದನ್ನು ಈ ಪುಸ್ತಕದಲ್ಲಿ ನೋಡಬಹುದು ಎಂದಿದ್ದಾರೆ.

ಟ್ವೀಟ್‌ಮೆಂಟ್

ಪ್ರಕಾಶ್: ನಾನು ನನ್ನ ನೆಟ್‌ಫ್ಲಿಕ್ಸ್ ಚಂದಾದಾರಿಕೆಯನ್ನು ಮುಗಿಸಿದೆ!
ನವೀನ್: ನಾನು ಅದಕ್ಕೆ ಚಂದಾದಾರನೇ ಅಲ್ಲ!

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ, ಈ ಕೆಳಗಿನ ಯಾವ ರಾಜ್ಯ ಸರಕಾವು ಪ್ರತಿ ವರ್ಷ 'ತಾನಾ ರಿರಿ' ಪ್ರಶಸ್ತಿಯನ್ನು ನೀಡುತ್ತದೆ?

- ಎ. ಕರ್ನಾಟಕ.
- ಬಿ. ಗುಜರಾತ್.
- ಸಿ. ಪಂಜಾಬ್.
- ಡಿ. ಮಧ್ಯಪ್ರದೇಶ.

ಉತ್ತರ: ಬಿ. ಗುಜರಾತ್.

ಮಾಹಿತಿ

ಗುಜರಾತಿನಲ್ಲಿನ, ವಡ್ನಗರವು ಮೊಘಲ್ ಕಾಲದ ಇಬ್ಬರು ಸಹೋದರಿಯರಾದ 'ತಾನಾ' ಮತ್ತು 'ರಿರಿ' ಗಾಗಿ ಪ್ರಸಿದ್ಧವಾಗಿದೆ. ಅವರು ಗ್ರಾಮ ದೇವತೆಯ ಮುಂದೆ ಮಾತ್ರ ಹಾಡುವ ಸಂಪ್ರದಾಯವನ್ನು ಕಾಪಾಡಿಕೊಳ್ಳಲು ತಮ್ಮ ಜೀವನವನ್ನು ತ್ಯಾಗ ಮಾಡಿದರು. ಚಕ್ರವರ್ತಿ ಅಕ್ಬರನ ಆಸ್ಥಾನದಲ್ಲಿ ಹಾಡಲು ಅವರನ್ನು ಒತ್ತಾಯಿಸಲಾಯಿತು. ಇದಕ್ಕಾಗಿ ಮನನೊಂದ ಆ ಸಹೋದರಿಯರು ಬಾವಿಯಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಂಡರು. ಅವರ ಗೌರವಾರ್ಥ ಗುಜರಾತ್ ಸರಕಾರ ತಾನಾ-ರಿರಿ ಪ್ರಶಸ್ತಿಯನ್ನು ನೀಡುತ್ತದೆ.

ಕಷ್ಟಕಾರ್ಪಣ್ಯಗಳ ಸಲಾಕೆ: ಬದುಕು

● ದೀಪಿಕಾ ಬಾಬು

ಬದುಕೆಂದರೆ ಮೂರಕ್ಷರದ ಪದವೆಂದೇ ಹಲವರಿಗೆ ಭಾಸವಾಗುವುದುಂಟು. ಬದುಕೆಂದರೆ ನಾವೆಂದುಕೊಂಡಂತೆ ಇರುವುದಿಲ್ಲವೆಂದು ಹಲವು ಮಂದಿಯ ಬಾಯಲ್ಲಿ ಕೇಳಿರುವುದು ಸಹಜ.

ಹಾಗಾದರೆ ಬದುಕು ಅಥವಾ ಜೀವನವೆಂದರೆ ಏನು ಎಂದು ಮನಗಾಣುವುದಾದರೆ ಹಲವು ಹಿರಿಯರು, ತತ್ವಜ್ಞಾನಿಗಳು ಬದುಕನ್ನು ಬಹಳ ಭಿನ್ನ-ವಿಭಿನ್ನವಾಗಿ ವರ್ಣಿಸಿದ್ದಾರೆ.

ಬುದ್ಧ ಪ್ರೀತಿ ಮತ್ತು ಶಾಂತಿಯೇ ಬದುಕೆಂದು ಹೇಳುತ್ತಾನೆ. ದುರ್ಯೋಧನನು 'ಹಠ ಮತ್ತು ಛಲವೇ' ಬದುಕು ಎಂದು ವರ್ಣಿಸುತ್ತಾನೆ, ಗುರಿಯ ಸಾಧನೆಯೇ ಬದುಕೆಂದು ಏಕಲವ್ಯ ಹೇಳುತ್ತಾನೆ, ಶ್ರೀಕೃಷ್ಣ ಪರಮಾತ್ಮನು 'ಸಮದರ್ಶಿತ್ವವೇ' ಬದುಕೆಂದು ಸಾರುತ್ತಾನೆ, ಅಲೆಕ್ಸಾಂಡರ್ 'ಯುದ್ಧದ ಕಾರ್ಯವೇ' ಬದುಕೆಂದು ಭಾವಿಸಿದ್ದಾನೆ, ಭೀಷ್ಮನ ದೃಷ್ಟಿಯಲ್ಲಿ 'ಪ್ರತಿಜ್ಞೆಯೇ' ಬದುಕಾಗಿರುತ್ತದೆ. ಹೀಗೆ ಮಹಾನ್ ಪುರಾಣ ಸಂತ, ತತ್ವಶಾಸ್ತ್ರಜ್ಞರ ದೃಷ್ಟಿಯಲ್ಲಿ ಬದುಕು ವಿಭಿನ್ನವಾಗಿ ವರ್ಣಿತಗೊಂಡಿದೆ. ಇನ್ನೂ ಹಲವರು ಅವರ ಅನುಭವದ ಆಧಾರದ ಮೇಲೆ ಬದುಕಿನ ನೆಲೆಯನ್ನು ಸ್ಪಷ್ಟಪಡಿಸಿದ್ದಾರೆ, ಅವರವರ ದೃಷ್ಟಿಕೋನದಲ್ಲಿ ಬದುಕು ಹೀಗೆ ವರ್ಣಿತಗೊಂಡಿದೆ.

- ಒಬ್ಬ ಸಂತನಿಗೆ ಬದುಕಿನ ಸಾರ್ಥಕತೆ 'ಭಕ್ತಿಯೇ' ಆಗಿರುತ್ತದೆ.
- ಒಬ್ಬ ಸನ್ಯಾಸಿಗೆ 'ಸನ್ಯಾಸತ್ವ'ದಲ್ಲಿ ಪರಿಪೂರ್ಣತೆ ಕಾಣುವುದು ಬದುಕಾಗಿರುತ್ತದೆ.
- ಶ್ರೀಮಂತನ ದೃಷ್ಟಿಕೋನದಲ್ಲಿ ಮೋಜು, ಮಸ್ತಿ, ಹಣವೇ ಬದುಕಾಗಿರುತ್ತದೆ.
- ಉದ್ಯೋಗದಿಂದ ಜೀವನ ಸಾಧಿಸುವುದೇ ಮಧ್ಯಮ ವರ್ಗದವರ ದೃಷ್ಟಿಕೋನದಲ್ಲಿ ಬದುಕಾಗಿರುತ್ತದೆ.
- ಹಸಿದವನ ದೃಷ್ಟಿಕೋನದಲ್ಲಿ ಬದುಕೆಂದರೆ ಇಷ್ಟೇ ತನ್ನ ಪಾಲಿನ ಅರ್ಧ ರೊಟ್ಟಿಯೇ ಬದುಕಾಗಿರುತ್ತದೆ.

ಹೀಗೆ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಬದುಕು ಗೋಚರವಾಗುತ್ತದೆ. ಅವರವರ ಆಲೋಚನೆಯಂತೆ ಅವರವರ ಬದುಕನ್ನು ಸಮರ್ಥಿಸುತ್ತಾರೆ. ನನ್ನ ಅಭಿಪ್ರಾಯದಲ್ಲಿ ಬದುಕೆಂದರೆ, ಭುವಿಯಲ್ಲಿ ಹುಟ್ಟು-ಸಾವಿನ ನಡುವಿನ ಅಂತರದಲ್ಲಿ ಜೀವಿಸುವ ವಿಧಾನವೇ ಬದುಕೆಂದು ಅರ್ಥೈಸಬಲ್ಲೆ.

ಬವಣೆ

ಬವಣೆ ಎಂದರೆ ಸಮನಾರ್ಥಕವಾಗಿ ಕಷ್ಟವೆಂದು ಹೇಳಬಹುದು.

ಬವಣೆ ಎಂದರೆ ಹುಟ್ಟು - ಸಾವಿನ ಅಂತರದ ಬದುಕಿನಲ್ಲಿ ಎದುರಿಸುವ ಎಡರು ತೊಡರುಗಳನ್ನೇ ಬವಣೆ ಎಂದು ಅರ್ಥೈಸಬಹುದಾಗಿದೆ.

ಈ ನರಮನುಜ ತನ್ನ ಹುಟ್ಟಿನಿಂದ ಮಣ್ಣುಪಾಲಾಗುವ ತನಕವು ಹಲವಾರು ಕಷ್ಟ ಸುಖಗಳನ್ನು ಅನುಭವಿಸುತ್ತಾ ಜೀವನವೆಂಬ ಸೇತುವೆಯ ಮೇಲೆ ತೂಗಾಡುತ್ತಾ ದಿನಗಳನ್ನು ದೂಡುತ್ತಾ ಜೀವನ ಸಾಗಿಸುತಲಿರುವನು.

ಬದುಕೆಂಬುದು ಕಷ್ಟ ಕಾರ್ಪಣ್ಯಗಳ ಸಲಾಕೆ, ಬದುಕು ಹಲವಾರು ಬಗೆಯ ಕಷ್ಟಗಳೊಂದಿಗೆ ಪ್ರಾರಂಭಗೊಂಡು, ಹಲವಾರು ಸುಖ-ದುಃಖಗಳಿಂದ ಅಂತ್ಯಗೊಳ್ಳುವುದುಂಟು. ಸಮಯ ಸಂದರ್ಭ ಪರಿಸ್ಥಿತಿಗಳಿಗೆ ತಕ್ಕಂತೆ ಕಷ್ಟ, ಸುಖಗಳೆರಡೂ ಮಾರ್ಪಡುವುದನ್ನು ಪ್ರಸ್ತುತ ಸಮಾಜದಲ್ಲಿ ನಾವು ಕಾಣುತ್ತಿರುತ್ತೇವೆ. ಜೀವನದಲ್ಲಿ ವಿವಿಧ ಬಗೆಯ ಬವಣೆಗಳು ಕಾಡುವುದುಂಟು ಆ ಬವಣೆಗಳ ಕಡೆಗೆ ಒಮ್ಮೆ ಕಣ್ಣಾಯಿಸುವುದಾದರೆ, ಈ ಕೆಳಕಂಡಂತೆ ಗೋಚರವಾಗುವುದುಂಟು.

1) ವೈಯಕ್ತಿಕ ಬವಣೆ: ದಿನನಿತ್ಯದ ನಮ್ಮ ಜೀವನದಲ್ಲಿ ವಿಭಿನ್ನ ಬಗೆಯ ಬವಣೆಗಳು ಭಾಧಿಸುತ್ತಿರುತ್ತವೆ, ಮಾನವ ಸಂಘಜೀವಿ ಒಂಟಿಯಾಗಿ ಜೀವಿಸುವ ಜೀವಿ ಅವನಲ್ಲ, ತನ್ನ ಬದುಕಿನಲ್ಲಿ ತನ್ನವರಿಂದಲೇ ಹಲವು ಬವಣೆಗಳನ್ನು ಅನುಭವಿಸುವುದುಂಟು, ಸಣ್ಣ ಸಣ್ಣ ವಿಷಯಗಳಿಂದ ಹಿಡಿದು, ದೊಡ್ಡ ದೊಡ್ಡ ವಿಚಾರಗಳಿಗೂ ಹಲವಾರು ಸಣ್ಣ ಪುಟ್ಟ ಕಾರಣಗಳಿಂದಲೂ ಕಷ್ಟಪಡುವುದುಂಟು,ಇಂತಹ ಹಲವಾರು ಬವಣೆಗಳನ್ನು ವೈಯಕ್ತಿಕ ಬವಣೆಗಳೆಂದು ವಿಭಾಗಿಸಬಹುದು.

2)ಮಾನಸಿಕ ಬವಣೆಗಳು: ಮನುಜ ತನ್ನ ಮಿದುಳಿನ ಮಾತಿಗಿಂತ ಭಾವನೆಗಳಿಗೆ ಹೆಚ್ಚು ಬೆಲೆ ಕೊಡುತ್ತಾನೆ. ತನ್ನ ದಿನ ನಿತ್ಯದ ಕಾರ್ಯದಲ್ಲಿ ಹಲವರ ಮಾತು, ಕಾರ್ಯ ಮುಂತಾದ ವಿಚಾರಗಳಿಂದ ಮಾನಸಿಕವಾಗಿ ಕಿರಿಕಿರಿಯನ್ನು ಅನುಭವಿಸುತ್ತಾನೆ, ಇಂತಹ ಕಷ್ಟಗಳಿಗೆ ಮಾನಸಿಕ ಬವಣೆಗಳೆಂದು ವಿಶ್ಲೇಷಿಸಬಹುದು.

3)ಸಾಂಸಾರಿಕ ಬವಣೆಗಳು: ಯಾವುದೇ ಒಬ್ಬ ವ್ಯಕ್ತಿ ತನ್ನ ಪ್ರೌಢ ವ್ಯವಸ್ಥೆಯನ್ನು ದಾಟಿ ವೈವಾಹಿಕ ಜೀವನಕ್ಕೆ ಅಡಿ ಇಡುತ್ತಾನೋ ತದನಂತರದಲ್ಲಿ ವೈವಾಹಿಕ ಜೀವನದಲ್ಲಿ ಹಲವಾರು ಬವಣೆಗಳು ತೆರೆದುಕೊಳ್ಳುತ್ತಾ ಹೋಗುತ್ತವೆ, ಇಂತಹ ಬವಣೆಗಳನ್ನು ಸಾಂಸಾರಿಕ ಬವಣೆಗಳೆಂದು ಕರೆಯುವುದುಂಟು. ಸಾಂಸಾರಿಕ ಜೀವನ ಕೆಲವರ ಪಾಲಿಗೆ ನೆಮ್ಮದಿಯಾದರೆ ಕೆಲವರ ಪಾಲಿಗೆ ನರಕವೆಂತಲೂ ಹೇಳಬಹುದು. ಇಂದಿನ ದಿನಗಳಲ್ಲಿ ಸಂಬಂಧಗಳ ಬೆಲೆಯನ್ನು ಸರಿಯಾಗಿ ಅರಿಯದ ಕಾರಣ ಮತ್ತು ಅನುಮಾನ ಎಂಬ ಕೂಪದಿಂದಾಗಿ ಅದೆಷ್ಟೋ ಕಷ್ಟಗಳನ್ನು ಎದುರಿಸಬೇಕಾದಂತಹ ಸಂದಿಗ್ಧ ಪರಿಸ್ಥಿತಿಯನ್ನು ಈ ದಿನಗಳಲ್ಲಿ ಕಾಣಬಹುದಾಗಿದೆ.

4)ವ್ಯವಹಾರಿಕ ಬವಣೆಗಳು: ಪ್ರಸ್ತುತ ಸಮಾಜ ಪರಿವರ್ತನೆ ಹೊಂದುತ್ತಿದ್ದು ಇಂತಹ ಪರಿವರ್ತನಾ ಪ್ರಪಂಚದಲ್ಲಿ ಜೀವನವೆಂಬ ಬಂಡಿ ಸಾಗಿಸಲು ಹಲವಾರು ಕ್ಷೇತ್ರಗಳ ಮೇಲೆ ಮಾನವ ಇಂದು ಅವಲಂಬಿತನಾಗಿದ್ದಾನೆ, ಆರ್ಥಿಕವಾಗಿ ತಾನು ಸದೃಢನಾಗಲು ಹಲವಾರು ವ್ಯವಹಾರಿಕೆಗಳಲ್ಲಿ ತೊಡಗಿರುವನು, ಇಂತಹ ಕ್ಷೇತ್ರಗಳಲ್ಲಿ ಲಾಭ, ನಷ್ಟ, ಆದಾಯ ಮುಂತಾದ ಬವಣೆಗಳನ್ನು ಎದುರಿಸುವನು.

ಹೀಗೆ ಜೀವನದಲ್ಲಿ ಹಲವಾರು ಬವಣೆಗಳು ಗೋಚರಿಸಲ್ಪಡುತ್ತವೆ, ಈ ಮೇಲಿನ ಬವಣೆಗಳಲ್ಲದೆಯೇ ಸಾರ್ವಜನಿಕ ಬವಣೆ, ಅನಾರೋಗ್ಯ, ಖಿನ್ನತೆ, ಶತೃತ್ವ ಇನ್ನೂ ಮುಂತಾದ ರೀತಿಯ ಬವಣೆಗಳನ್ನೂ ಎದುರಿಸುತ್ತಾ ಮುನ್ನಡೆಯಬೇಕಾಗುತ್ತದೆ ಈ ಜೀವನ ಎಂಬ ಯಾತ್ರೆಯಲ್ಲಿ.

ಇತ್ತೀಚಿನ ದಿನಗಳಲ್ಲಿ ಇಂತಹ ಬವಣೆಗಳನ್ನು ಎದುರಿಸಲಾಗದವರು ಆತ್ಮಹತ್ಯೆಯಂತಹ ದಾರಿಯಲ್ಲಿ ಸಾಗುತ್ತಿರುವುದನ್ನು ನೋಡಬಹುದಾಗಿದೆ. ಎಮಿಲಿ ಡರ್ಖೈಮ್‌ರವರು ಆತ್ಮಹತ್ಯೆಯ ಸಿದ್ಧಾಂತ ಎಂಬ ಗ್ರಂಥವನ್ನು ಪ್ರತಿಪಾದಿಸಿದ್ದಾರೆ. ಮತ್ತೂ ಆತ್ಮಹತ್ಯೆಯ ಪ್ರಕಾರಗಳು ಎಂದು ಮೂರು ಭಾಗಗಳಾಗಿ ವಿಂಗಡನೆ ಮಾಡಲಾಗಿದೆ.

1) ಆತ್ಮಕೇಂದ್ರಿತ ಆತ್ಮಹತ್ಯೆ / ಸ್ವಾತ್ಮಕ ಆತ್ಮಹತ್ಯೆ
2) ನಿರಾಶಾ ಆತ್ಮಹತ್ಯೆ / ನಿಯಮರಾಹಿತ್ಯದ ಆತ್ಮಹತ್ಯೆ
3) ಪರಾತ್ಮಕ ಆತ್ಮಹತ್ಯೆ / ಪರಹಿತ ಆತ್ಮಹತ್ಯೆ.

ಈ ಆತ್ಮಹತ್ಯೆ ಎಂಬುದು ಖಾಸಗಿ ವಿಚಾರವಾಗಿರದೆ, ಇದೊಂದು ಸಾಮಾಜಿಕ ವಿದ್ಯಮಾನವಾಗಿದೆ. 'ಆತ್ಮಹತ್ಯೆಯ ಮೂಲ ಹಾಗೂ ಅದರ ಪ್ರೇರಣೆ ಸಮಾಜದ ರಚನೆಯಲ್ಲಿದೆ'. ಮಾನವ ಅಸಹನೀಯವಾದ ಪರಿಹಾರ ಸಿಗದೇ ಇರುವಂತಹ ಯಾತನೆ, ಕಷ್ಟ-ಕಾರ್ಪಣ್ಯ ಮತ್ತು ಘರ್ಷಣೆಯ ಸುಳಿಯಲ್ಲಿ ಸಿಲುಕಿ ಒದ್ದಾಡಿ ಮಾನಸಿಕ ಮತ್ತು ದೈಹಿಕ ಯಾತನೆ ತಾಳಲಾರದೆ ತನ್ನ ಬದುಕನ್ನು ಕೊನೆಗಾಣಿಸಿಕೊಳ್ಳುತ್ತಾನೆ.

ಜೀವನದಲ್ಲಿ ನಿಸ್ವಾರ್ಥಿಯಾಗಿ, ಆದರ್ಶ ವ್ಯಕ್ತಿಯಾಗಿ, ಸ್ವ-ಪ್ರಯತ್ನ, ಆತ್ಮ ವಿಶ್ವಾಸ, ಧೈರ್ಯ, ಪ್ರೀತಿ, ಪ್ರೇಮ, ಕರುಣೆ, ಮಾನವೀಯತೆ, ಬೆಳವಣಿಗೆ, ಬೆಳೆಸುವ ನಿಸ್ವಾರ್ಥತೆ ಮುಂತಾದ ಅಂಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜೀವಿಸಿದ್ದೇ ಆದಲ್ಲಿ ಅದೆಂತಹುದ್ದೇ ಬವಣೆಯನ್ನು ಬೇಕಾದರೂ ಮೆಟ್ಟಿ ನಿಲ್ಲಬಹುದು.

ಬದುಕೆನ್ನುವುದು ಸುಂದರ ಮತ್ತು ಸ್ವಚ್ಛಟದವಾದ ಅನುಭವ, ಪ್ರತಿ ಸೆಕೆಂಡ್, ಪ್ರತಿ ನಿಮಿಷ, ಪ್ರತಿ ಗಂಟೆಗಳಿಗೆಯೂ ಮುಖ್ಯ, ಇದ್ಯಾವುದು ಹಿಂತಿರುಗಿ ಬರಲು ಸಾಧ್ಯವಿಲ್ಲ, ಒಮ್ಮೆ ಕಳೆದು ಹೋದರೆ ಅದು ಭೂತಕಾಲವಾಗಿ ಮರೆಯಬೇಕಾದೀತು ಆದ್ದರಿಂದಲೇ ಪ್ರತಿ ಕ್ಷಣದ ಬದುಕು ಹೊಸತು, ಹೀಗೆ ನಮ್ಮ ಬದುಕು ಅನಿಶ್ಚಿತವಾದುದು ಕೂಡ. ನಾಳೆಯ ಭವಿಷ್ಯ ಏನೆಂದು ಯಾರಿಗೂ ತಿಳಿಯದು, ಈ ಕ್ಷಣವೇ ಪರಮೋನ್ನತ ಈ ಕ್ಷಣವನ್ನು ಅರ್ಥಪೂರ್ಣವಾಗಿ ಅನುಭವಿಸುವುದೇ ಬದುಕು.

ಪ್ರೀತಿ, ಸೌಹಾರ್ದ, ಸಹಾಯ, ಕಾರುಣ್ಯ ಮತ್ತು ಹಸನ್ಮುಖದ ನಡುವೆ ಬದುಕುವುದೇ ಸಾರ್ಥಕ ಜೀವನ. ನಮ್ಮ ಚಿಂತನೆ ಸಾಕರಾತ್ಮಕವಾಗಿದ್ದರೆ ಆ ಕ್ಷಣದಲ್ಲಿ ಒಂದಷ್ಟು ಚೈತನ್ಯ ಮೂಡುತ್ತದೆ ಇಲ್ಲವಾದರೆ ನಿರಾಸೆ ನಮ್ಮೆಲ್ಲರದಾಗುತ್ತದೆ.

ಕಬ್ಬಿಣದ ಸಲಾಕೆಯನ್ನು ಕುಲುಮೆಯಲ್ಲಿಟ್ಟು ಕಾಯಿಸಿ ಎಷ್ಟೇ ಉಳಿಪೆಟ್ಟು ಕೊಟ್ಟು ಹದ ಮಾಡಿದರು ತನ್ನ ಗುಣವನ್ನು ಅದು ಬಿಟ್ಟುಕೊಡುವುದಿಲ್ಲ ಹಾಗೆಯೇ ನಮ್ಮ ಬದುಕಲ್ಲಿ ಎಷ್ಟೇ ಬವಣೆಗಳು ಬಂದರೂ ಸಲಾಕೆಯಂತೆಯೇ ಗುಣವಿಶಿಷ್ಟವಾಗಬೇಕು ಆಗ ಮಾತ್ರ ಅದು ಸಾರ್ಥಕ ಜೀವನವೆಂದೆನಿಸುತ್ತದೆ.

ಕಷ್ಟ, ನೋವು, ನಿರಾಸೆ, ದುಃಖ, ಸಂಘರ್ಷ, ಮನಸ್ತಾಪ, ಕೋಪ, ದ್ವೇಷ ಎಲ್ಲರಿಗೂ ಇದೆ, ಆದರೆ ಇವುಗಳನ್ನು ಕೊಲ್ಲುತ್ತಾ ಇವುಗಳ ಮಧ್ಯೆ ಸಂತೋಷದಿಂದ ತೃಪ್ತಿದಾಯಕವಾಗಿ ಬದುಕುವುದೇ ಜೀವನ.

ವಿಶ್ವವಾಣಿ
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
@vishwavaninews
ಬೆಂಗಳೂರು | ಶುಕ್ರವಾರ 06 | 09 | 2024

ಕಸ ಮುಕ್ತ ಸ್ವಚ್ಛ ಸುಂದರ ನಗರವನ್ನು ನಿರ್ಮಿಸಲು ಮುಂದಾಗಿದೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ವೈಜ್ಞಾನಿಕವಾಗಿ ತ್ಯಾಜ್ಯ ನಿರ್ವಹಣೆ!

● ವಸೀಮ ಭಾವಿಮನಿ ಹುಬ್ಬಳ್ಳಿ

ವೈಜ್ಞಾನಿಕ ತಾಜ್ಯ ವಿಲೇವಾರಿ ಮೂಲಕ ಹಾಗೂ ಸಿಮೆಂಟ್ ಕಾರ್ಖಾನೆಗೆ ಕಚ್ಚಾವಸ್ತು ಪೂರೈಕೆ ಹಾಗೂ ರೈತರು ಬೆಳೆಯುತ್ತಿರುವ ದ್ರಾಕ್ಷಿಗೆ ಹಾಗೂ ತೋಟಗಾರಿಕೆ ಬೆಳೆಗಳಿಗೆ ಗೊಬ್ಬರವನ್ನು ಒದಗಿಸುವ ಕೆಲಸ ಮಾಡುವ ಮೂಲಕ ರಾಜ್ಯದ 2 ನೇ ಬಹುದೊಡ್ಡ ಮಹಾನಗರ ಪಾಲಿಕೆ ಎಂದು ಕರೆಯಿಸಿಕೊಳ್ಳುವ ಹುಬ್ಬಳ್ಳಿ-ಧಾರವಾಡ ಮಹಾನಾಗರ ಪಾಲಿಕೆ ಘನ ತಾಜ್ಯ ನಿರ್ವಹಣೆಯಲ್ಲಿ ವಿಭಿನ್ನ ಹಾಗೂ ಹೊಸದೊಂದು ಹೆಜ್ಜೆ ಹಾಗೂ ಆವಿಷ್ಕಾರ ಮಾಡುತ್ತಿದೆ.

ರಾಜ್ಯದಲ್ಲಿಯೇ 2 ನೇ ರಾಜಧಾನಿ ಎಂದು ಹೆಸರು ಪಡೆದಿರುವ ಛೋಟಾ ಮುಂಬೈ ಖ್ಯಾತಿಯ ಹುಬ್ಬಳ್ಳಿಯಲ್ಲಿ ಅವಳಿನಗರದ ಸ್ವಚ್ಛತೆಗೆ ಮಹಾನಗರ ಪಾಲಿಕೆ ಆಯುಕ್ತರು ಒಳಗೊಂಡ ಅಧಿಕಾರಿಗಳ ತಂಡ ಮುಂದಾಗಿ, ಕಾಯಕವೇ ಕೈಲಾಸ ಎನ್ನುವ ನಿಟ್ಟಿನಲ್ಲಿ ಪ್ರಾಮಾಣಿಕ ಕೆಲಸವನ್ನು ಮಾಡುತ್ತಿದ್ದಾರೆ.

ಕೇಂದ್ರ ಸರಕಾರದ ಪುರಸ್ಕೃತ ಸ್ವಚ್ಛ ಭಾರತ ಮಿಷನ್ 1.0 ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಪಾಲಿಕೆ ಸ್ವಚ್ಛ ಸರ್ವೇಕ್ಷಣದಲ್ಲಿ ರಾಜ್ಯಕ್ಕೆ 2ನೇ ಸ್ಥಾನದಲ್ಲಿರುವುದು ಹೆಮ್ಮೆಯ ವಿಷಯ. ಎಸ್‌ಬಿಎಂ 2.0 ಯೋಜನೆಯನ್ನು ಸದ್ಯ ಕೈಗೆತ್ತಿಕೊಂಡಿರುತ್ತದೆ. ಹೊಸ ಪ್ರಯೋಗದ ಜೊತೆಗೆ ನಗರದ ಸ್ವಚ್ಛತೆಗೆ ಹಾಗೂ ಜನರ ಆರೋಗ್ಯದ ದೃಷ್ಟಿಯಿಂದ ಮಹಾನಗರ ಪಾಲಿಕೆ ಅಧಿಕಾರಿಗಳು ವಿಶೇಷವಾದ ಪ್ರಯತ್ನ ಮಾಡುತ್ತಿದ್ದು, ಮಲ್ಲಿಕಾರ್ಜುನ ಬಿ.ಎಂ, ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಶ್ರೀಧರ ಟಿ.ಎನ್, ನಯನಾ ಕೆ.ಎಸ್, ಯುವರಾಜ ಕೆ.ಆರ್, ಅವಿನಾಶ, ಪರಿಸರ ಅಭಿಯಂತರರು ಹಾಗೂ ಇವರ ತಂಡದ ಆರೋಗ್ಯ ನೀರೀಕ್ಷಕರು ಮತ್ತು 2100 ಪೌರ ಕಾರ್ಮಿಕರ ಸಿಬ್ಬಂದಿಗಳು, ಚಾಲಕರು ಹಗಲಿರುಳು ಕೆಲಸ ಮಾಡುತ್ತಿದ್ದಾರೆ.

ಪೌರ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಎಸ್‌ಬಿಐ, ಎಲ್‌ಐಸಿ ವಿಮಾ ಯೋಜನೆಗಳನ್ನು ಜಾರಿಗೆ ತಂದಿದ್ದು, ಕಾರ್ಮಿಕರ ಸುರಕ್ಷತೆಗಾಗಿ ಸುರಕ್ಷತಾ ಶೂಗಳು, ಸಮವಸ್ತ್ರಗಳು, ಕೈಗವಸುಗಳು, ಸ್ವಚ್ಛತಾ ಸಲಕರಣೆಗಳು ಹಾಗೂ ಆರೋಗ್ಯ ತಪಾಸಣೆಗಳಂತಹ ಸೌಲಭ್ಯಗಳನ್ನು ನೀಡಲಾಗಿರುತ್ತದೆ. ಕಾರ್ಮಿಕರಿಗೆ ಬೆಳಗಿನ ಉಪಹಾರ ಹಾಗೂ ದಣಿವಾರಿಸಿಕೊಳ್ಳಲು ವಾರ್ಡವಾರು ಭೀಮಾಶ್ರಯಗಳನ್ನು ನಿರ್ಮಿಸಿ ಪೌರಕಾರ್ಮಿಕರನ್ನು ಮನೆಯ ಮಕ್ಕಳಂತೆ ನೋಡಿಕೊಳ್ಳುತ್ತಿದ್ದಾರೆ.

ನಾವು ಈಗಾಗಲೇ ಹುಬ್ಬಳ್ಳಿ ಧಾರವಾಡದಲ್ಲಿ ವಿನಡ್ರೋವ್ ಮೆಥೆಡ್ ಮೂಲಕ ಕಸ ವಿಲೇವಾರಿ ಕೆಲಸ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಸಿಎನ್‌ಜಿ ಪ್ಲ್ಯಾಂಟ್ ಎಂಆರ್‌ಎಫ್‌ಗಳನ್ನು ಅನುಷ್ಠಾನ ಮಾಡುವುದರೊಂದಿಗೆ, ಮನೆ ಮನೆ ವಿಂಗಡಿತ ತಾಜ್ಯವನ್ನು ಸಂಗ್ರಹಿಸಲು ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳನ್ನು ಖರೀದಿಸಿ, ತಾಜ್ಯ ವಿಲೇವಾರಿ ಹಾಗೂ ಸಂಗ್ರಹವನ್ನು ಸುಗಮಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

● ಮಲ್ಲಿಕಾರ್ಜುನ ಬಿ.ಎಂ (ಕಾರ್ಯನಿರ್ವಾಹಕ ಅಭಿಯಂತರರು), ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಮೂಲದಲ್ಲಿ ಕಸ ವಿಂಗಡಣೆ ಮಾಡಿ, ಸಾರ್ವಜನಿಕರು ಪಾಲಿಕೆಗೆ ನೀಡಲು ಸಂಪೂರ್ಣ ಸಹಕಾರ ನಿಡದಿದ್ದಲ್ಲಿ, ವೈಜ್ಞಾನಿಕ ಕಸ ವಿಲೇವಾರಿ ಜಟಿಲವಾಗುತ್ತದೆ. ಕರದಾತರು ಪಾಲಿಕೆ ನೀಡುವ ತೆರಿಗೆಯು ನಗರದ ಅಭಿವೃದ್ಧಿಯ ಬದಲು ಹೆಚ್ಚಿನದಾಗಿ ಕಸ ನಿರ್ವಹಣೆಗೆ ವ್ಯರ್ಥವಾಗುವುದನ್ನು ಅರಿತು ಸಾರ್ವಜನಿಕರು ತಾಜ್ಯವನ್ನು ವಿಂಗಡಿಸಿ, ದಿನ ನಿತ್ಯದ ಕಸ ವಿಲೇವಾರಿಗೆ ಸಹಕರಿಸುವಂತೆ, ಮನವಿ ಮಾಡುತ್ತೇವೆ.

● ಶ್ರೀಧರ್ ಟಿಎನ್. (ಪರಿಸರ ಅಭಿಯಂತರರು), ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ

450 ಟನ್ ಕಸ ಸಂಗ್ರಹದ ಗುರಿ

ಹುಬ್ಬಳ್ಳಿ ನಗರದಲ್ಲಿಯೇ 300 ಟನ್ ಹಾಗೂ ಧಾರವಾಡದಲ್ಲಿ ಪ್ರತಿನಿತ್ಯ 150 ಟನ್ ತಾಜ್ಯವನ್ನು ಸುಮಾರು 3.5 ಲಕ್ಷ ಮನೆ- ಮನೆಗಳಿಂದ 255 ಸಂಖ್ಯೆಯ ಆಟೋ ಟಿಪ್ಪರ ವಾಹನಗಳ ಮುಖಾಂತರ ಸಂಗ್ರಹಿಸಿ, ದ್ವಿತಿಯ ಹಂತದ ತಾಜ್ಯ ಸಂಗ್ರಹಣಾಗಾರದಲ್ಲಿ ಸಂಗ್ರಹಿಸಿ, ವೈಜ್ಞಾನಿಕ ವಿಲೇವಾರಿಗೆ ಹುಬ್ಬಳ್ಳಿ- ಧಾರವಾಡದಲ್ಲಿ ಪ್ರತ್ಯೇಕವಾಗಿ ಸ್ಥಾಪಿಸಿರುವ ತಾಜ್ಯ ಸಂಸ್ಕರಣ ಕಂಪೋಸ್ಟ್ ಘಟಕಗಳಿಗೆ ಪ್ರತಿನಿತ್ಯ ವಿಲೇವಾರಿ ಮಾಡಿ, ಹಸಿ ತಾಜ್ಯದಿಂದ ಉತ್ಕೃಷ್ಟ ದರ್ಜೆಯ ಆರ್ಗಾನಿಕ್ ಗೊಬ್ಬರವನ್ನು ತಯಾರಿಸಲಾಗುತ್ತಿದೆ. ಹುಬ್ಬಳ್ಳಿಯಲ್ಲಿ ಬೆಂಗೇರಿ, ಉಣಕಲ್ಲಲ್ಲಿರುವ ವಿದ್ಯಾನಗರ, ಅಕ್ಷಯ ಪಾರ್ಕ್‌ನಲ್ಲಿರುವ ನಂದಿನಿ ಲೇಔಟ್, ಇಂದಿರಾನಗರದಲ್ಲಿ ಕಸ ಸಂಗ್ರಹದ ವ್ಯವಸ್ಥೆ ಮಾಡಲಾಗಿದೆ. 1 ವಾರ್ಡ್‌ಗೆ 3 ವಾಹನಗಳನ್ನು ಕಳುಹಿಸಿ, 1 ಟ್ರ್ಯಾಕ್ಟರ್ ಕೊಟ್ಟು ಕಸ ಸಂಗ್ರಹದ ವ್ಯವಸ್ಥೆ ಮಾಡಲಾಗುತ್ತಿದೆ. ಒಬ್ಬ ವ್ಯಕ್ತಿಗೆ 450 ಗ್ರಾಂನಂತೆ, 5 ರಿಂದ 6 ಜನ ಸದಸ್ಯರು ಇದ್ದರೆ, ಒಟ್ಟು 3 ಕೆಜಿ ಕಸ ಸಂಗ್ರಹದ ವ್ಯವಸ್ಥೆಯನ್ನು ಮಾಲಾಗುತ್ತದೆ.

ತೋಟಗಾರಿಕೆಗೆ ಗೊಬ್ಬರ ತಯಾರಿ

ಕಸದಿಂದ ರಸ ಎನ್ನುವ ಗಾದೆ ಮಾತನ್ನು ಅಕ್ಷರಶ: ಇಲ್ಲಿ ಅಧಿಕಾರಿಗಳು ಪಾಲಿಸಿದ್ದಾರೆ. ಇಲ್ಲಿ ತಯಾರಾಗುವ ಗೊಬ್ಬರಿಂದ ತೋಟಗಾರಿಕೆ ಬೆಳೆಗಳಾದ ಬಾಳೆ, ತೆಂಗು, ಅಡಕೆ ಹಾಗೂ ದ್ರಾಕ್ಷಿಗೆ 1 ಕೆಜಿ 2 ರು.ನಂತೆ ದರವನ್ನು ಫಿಕ್ಸ ಮಾಡಿ ಮಾರಾಟ ಮಾಡಲಾಗುತ್ತಿದೆ. ಇದರಿಂದ ರೈತರಿಗೆ ಅನುಕೂಲವಾಗುತ್ತಿದೆ.

ಮಾದರಿ ವಾರ್ಡ್!

ಹುಬ್ಬಳ್ಳಿ ಧಾರವಾಡದ ವಾರ್ಡ ನಂಬರ್ 47 ರಲ್ಲಿ 178 ಅರ್ಪಾಟಮೆಂಟಗಳು ಇದ್ದು, ಜನರು ಬಹಳ ಕಾಳಜಿ ಪೂರ್ವಕವಾಗಿ ಸ್ವಯಂ ಪ್ರೇರಣೆಯಿಂದ ಕಸ ವಿಲೇವಾರಿ ಮಾಡಲು ಅನುಕೂಲ ಮಾಡಿಕೊಡುತ್ತಾರೆ. ಇದು ನಮಗೆ ಬಹಳ ಖುಷಿ ಕೊಟ್ಟಿದೆ ಅಂತಾರೆ ಪಾಲಿಕೆ ವೈಜ್ಞಾನಿಕ ಘನ ತಾಜ್ಯ ನಿರ್ವಹಣೆ ತಂಡದ ಅಧಿಕಾರಿಗಳು.

ಅಧಿಕಾರಿಗಳಿಂದ ಅಧ್ಯಯನ

ಹುಬ್ಬಳ್ಳಿ ಧಾರವಾಡದಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವೈಜ್ಞಾನಿಕ ಘನ ತಾಜ್ಯ ನಿರ್ವಹಣೆ ಮಾಡುತ್ತಿರುವ ಅಧಿಕಾರಿಗಳು, ಉತ್ತರಪ್ರದೇಶದ, ಗಾಜಿಯಾಬಾದ, ಲಖನೌ, ಇಂದೋರ್, ಕಲ್ಕತಾ ಮತ್ತು ದೆಹಲಿಯಲ್ಲಿ ಮಾದರಿ ತಾಜ್ಯ ನಿರ್ವಹಣೆ ಅಧ್ಯಯನ ಮಾಡಿ ಬಂದಿದ್ದಾರೆ. ಘನತಾಜ್ಯ ನಿರ್ವಹಣಾ ನಿಯಮ 2016 ಹಾಗೂ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಆದೇಶವನ್ನು ಯಥಾವತ್ತಾಗಿ ಪಾಲಿಕೆಯ ವ್ಯಾಪ್ತಿಯಲ್ಲಿ ಪಾಲಿಸಲು ಅಧಿಕಾರಿಗಳ ತಂಡವು ಉತ್ತಮ ಕೆಲಸವನ್ನ ಮಾಡುತ್ತಿದೆ.

ಸಿಮೆಂಟ್ ಫ್ಯಾಕ್ಟರಿಗೆ ಕಚ್ಚಾವಸ್ತು

ಹುಬ್ಬಳ್ಳಿ-ಧಾರವಾಡದ ಸಾಲಿಡ್ ವೇಸ್ಟ್ ಮ್ಯಾನೇಜಮೆಂಟ್‌ನಿಂದ ಸಿಮೆಂಟ್ ಫ್ಯಾಕ್ಟರಿಗಳಿಗೂ ಕಚ್ಚಾವಸ್ತು ಹೋಗುತ್ತೆ. ಇಪಿಆರ್ ಪಾಲಿಸಿ ಅನ್ವಯ 200 ಕಿ.ಮೀ ಒಳಗಿನ ಸಿಮೆಂಟ್ ಫ್ಯಾಕ್ಟರಿಗಳಿಗೆ ಆರ್‌ಡಿಎಫ್ ಕಚ್ಚಾವಸ್ತು ಪೂರೈಸಲಾಗುತ್ತಿದೆ. ಲೋಕಾಪೂರದ ಜೆಕೆ ಸಿಮೆಂಟ್ ಫ್ಯಾಕ್ಟರಿ ಹಾಗೂ ದಾಲ್ಮಿಯಾ ಫ್ಯಾಕ್ಟರಿಗೆ ಕಚ್ಚಾವಸ್ತು ಸರಬರಾಜು ಮಾಡಲಾಗುತ್ತಿದೆ.

ಆರೋಗ್ಯದ ಮೇಲೆ ಕೆಟ್ಟ ಪರಿಣಾಮ

ಎಲ್ಲೆಂದರಲ್ಲಿ ಕಸ ಎಸೆಯುವುದು ಹಾಗೂ ಪ್ಲಾಸ್ಟಿಕ್ ಪೇಪರ್, ರಬ್ಬರ ಟೈರಗಳಂತಹ ವಸ್ತುಗಳನ್ನು ಸುಡುವುದರಿಂದ ಡಯಾಕ್ಸಿನ್ಸ್‌ಗಳು ಹಾಗೂ ಕಾರ್ಬನ್ ಮೋನಾಕ್ಸೈಡ್ ಶುದ್ಧ ಗಾಳಿಗೆ ಸೇರಿ ಕ್ಯಾನ್ಸರ್‌ನಂತಹ ಕೆಟ್ಟ ಕಾಯಿಲೆಗಳನ್ನು ಸಮಾಜದಲ್ಲಿ ಹರಡುವ ಸಾಧ್ಯತೆ ಹೆಚ್ಚಿದೆ.

ಒಟ್ಟಿನಲ್ಲಿ ಹುಬ್ಬಳ್ಳಿ ಧಾರವಾಡದಲ್ಲಿ ವೈಜ್ಞಾನಿಕ ಘನ ತಾಜ್ಯ ನಿರ್ವಹಣೆ ಮೂಲಕ ಮಹಾನಗರ ಪಾಲಿಕೆ ಅಧಿಕಾರಿಗಳು ಒಂದೊಳ್ಳೆ ಕೆಲಸವನ್ನು ಮಾಡುತ್ತಿದ್ದು, ಜನರ ಆರೋಗ್ಯ ಕಾಪಾಡಲು ಬಹುದೊಡ್ಡ ಕೆಲಸವನ್ನು ಮಾಡುತ್ತಿದ್ದಾರೆ. ಇವರ ಕೆಲಸಗಳನ್ನು ಇನ್ನಷ್ಟು ಯಶಸ್ವಿಯಾಗಲಿ ಎನ್ನುವುದು, ಹುಬ್ಬಳ್ಳಿ ಧಾರವಾಡ ಅವಳಿನಗರದ ಜನತೆಯ ಆಶಯ.

ಅವಳಿ ನಗರದಲ್ಲಿ ತಾಜ್ಯ ನಿರ್ವಹಣೆಗೆ ಸಿಸಿಟಿವಿ ಕಣ್ಗಾವಲು

ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಿಸಲಾದ ಇಂಟಿಗ್ರೇಟೆಡ್ ಕಮಾಂಡೆಟ್ ಕಂಟ್ರೋಲ್ ಸೆಂಟರ್ ಮೂಲಕ ಸುಮಾರು 95 ಕಡೆಗಳಲ್ಲಿ ರಸ್ತೆ ಬದಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಎಲ್ಲೆಂದರಲ್ಲಿ ತಾಜ್ಯ ಎಸೆಯುವವರ ಮೇಲೆ ಸಿಸಿಟಿವಿ ಕಣ್ಗಾವಲನ್ನು ಇರಿಸಲಾಗಿದೆ. ಈಗಾಗಲೇ ರು. 10 ಲಕ್ಷಕ್ಕಿಂತ ಹೆಚ್ಚು ದಂಡವನ್ನು ವಸೂಲಿ ಮಾಡಲಾಗಿದೆ. ನಿಷೇಧಿತ ಏಕಬಳಕೆಯ ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ, ಕಳೆದ 2 ವರ್ಷಗಳಿಂದ 35 ಟನ್‌ಗಳಿಗಿಂತ ಹೆಚ್ಚು ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದು, ಸುಮಾರು 40 ಲಕ್ಷ ದಂಡವನ್ನು ವಿಧಿಸಿ, ಪ್ಲಾಸ್ಟಿಕ್ ಭೂತವನ್ನು ನಗರದಿಂದ ಓಡಿಸಲು ಪ್ರಯತ್ನ ಮಾಡುತ್ತಿದ್ದಾರೆ.

ಪಾರಂಪರಿಕ ತಾಜ್ಯ ನಿರ್ವಹಣೆ

ಸುಮಾರು 50 ರಿಂದ 60 ವರ್ಷಗಳ ಪಾರಂಪರಿಕ ತಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸದ್ಯ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಂಡಿದ್ದು, ತಾಜ್ಯ ಸಂಗ್ರಹಣಾಕಾರರ ಸುತ್ತಮುತ್ತಲಿನ ಪರಿಸರವನ್ನು ಸಂರಕ್ಷಿಸಿಲು ಈಗಾಗಲೇ ಟೆಂಡರ್ ಕರೆದು ಕಾರ್ಯಾದೇಶವನ್ನು ನೀಡಿದ್ದು, ಈ ಮಾನ್ಸೂನ್ ನಂತರದಲ್ಲಿ ಒಂದು ವರ್ಷದಲ್ಲಿ, ಇಷ್ಟು ದಿನಗಳ ಕಾಲ ಕಸವಿರುವ ಜಾಗವನ್ನು ಶುಭ್ರಗೊಳಿಸಿ, ಅಲ್ಲಿ ವಿವಿಧ ಉದ್ಯಾನವನ್ನು ನಿರ್ಮಿಸಲು ಮಹಾನಗರ ಪಾಲಿಕೆ ಮುಂದಾಗಿದೆ.

ಭಾರೀ ಗಣಪನಿಗೆ ಹಗುರ ಪದ್ಯಗಳು

ತಂದೆತಾಯಿಯೇ ವಿಶ್ವವೆಂದು
ಪ್ರದಕ್ಷಿಣೆ ಹಾಕಿ ಗೆದ್ದ ಬುದ್ಧಿವಂತಾ,
ನಮ್ಮ ಹುಡುಗರಿಗೂ ಅದೇ ಬುದ್ಧಿ
ಕೊಡು ಗಣಪಾ, ಭಗವಂತಾ.

ಅಮ್ಮನ ಹಿಂದಿಂದೆ ನೀನು ಬರುತ್ತೀ;
ತಮ್ಮ ಎಲ್ಲಿ?
ಮುಗಿದಿಲ್ವಾ ಇನ್ನೂ
ಬ್ರಹ್ಮಾಂಡ ಸುತ್ತಿ?

ಹೌದಲ್ವೆ!
ಅಮ್ಮನ ಹಿಂದೆ ಬರೋ ನೀನು
ತಮ್ಮನನ್ನೂ ಕರ್ಕೊಂಡು ಬರುತ್ತಿ
ಬಿಮ್ಮನೆ ಹೊಟ್ಟೆಗೆ ಸುತ್ತಿ!

ಹೂವಿನ ಜೊತೆಗೆ ನಾರೂ
ಸ್ವರ್ಗ ಸೇರೋಹಾಗೆ, ಗಣಪಾ,
ನಿನ್ನಿಂದಾಗಿ ಆ
ಇಲಿಗೂ ಪೂಜೆ ಕಣಪಾ!

ಮೋದ ತರುವ ಗಣಪಾ,
ನಿನಗೆ ಮೋದಕ.
ಸಾಧಾರಣದವನಲ್ಲ ನೀನು,
ಭಲೇ ಸಾಧಕ!

ಆನೆ ಮುಖದವನೇ,
ನೀನು ನಮ್ಮೋನೆ?
ಏನೇನೋ ಗೀಚಿಬಿಟ್ಟೆ.
ಆನೆಯಂಥಾ ಹೊಟ್ಟೆ,
ಒಳಗೆ ಹಾಕ್ಕೋ ದೇವನೇ.

● ಎಚ್. ಆನಂದರಾಮ ಶಾಸ್ತ್ರೀ

ಕಲೆಗಾಗಿ ಸೋಲು ಜೀವನದಲ್ಲಿ ಗೆಲುವು

● ನಾರಾಯಣ ಯಾಜಿ

ಸಂತೆಗುಳಿ ನಾರಾಯಣ ಭಟ್ಟರು ಯಕ್ಷಗಾನ ವಲಯದಲ್ಲಿ ಪರಿಚಿತವಾದ ಹೆಸರು. ಆದರೆ ಅವರು ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನದ ಚರಿತ್ರೆಯ ಭಾಗವೂ ಆಗಿದ್ದಾರೆ ಎನ್ನುವುದು ಕೆಲವೇ ಜನರಿಗೆ ತಿಳಿದ ಸಂಗತಿ. ಕಾಲವೇ ಹಾಗೇ, ಹೊಸ ನೀರು ಬಂದಾಗ ಹಳೇಯ ನೀರು ಕೊಚ್ಚಿಹೋಗುತ್ತದೆ. ನಾರಾಯಣ ಭಟ್ಟರಂಥವರು ಯಕ್ಷಗಾನ ಕಲೆಯಮೇಲಿನ ಅವಿನಾಭಾವ ಸಂಬಂಧದಿಂದ ರಂಗದ ಹಿಂದಿನ ಮಹಾನ ಶಕ್ತಿಯಾಗಿ ಅನೇಕ ಪ್ರಸಿದ್ಧ ಕಲಾವಿದರಿಗೆ ಹೆಗಲೇಣಿಯಾದವರು, ಆ ಕಾರಣಕ್ಕಾಗಿ ತಾವು ಗಳಿಸಿದ ಸಂಪತ್ತಗಳನ್ನೆಲ್ಲಾ ಕಳೆದುಕೊಂದರೂ ಅದಕ್ಕಾಗಿ ಬೇಸರಿಸದೇ ಈ ಕಲೆಯ ಗೀಳಿನಿಂದಾಗಿ ಅದರೊಂದಿಗೆ ನಿರಂತರವಾಗಿ ಸಾಗುತ್ತಾ ಬಂದವರು. ಇದೀಗ ಅವರಿಗೆ ಎಂಭತ್ತರ ಹರೆಯ. ಈ ಹಂತದಲ್ಲಿ ಅವರ ಬದುಕಿನ ಪಥದ ಅನುಭವವನ್ನು ತಮ್ಮ ಆತ್ಮಚರಿತ್ರೆ 'ಆಟದ ಮೇಳ' ದಲ್ಲಿ ತೆರೆದಿರಿಸಿದ್ದಾರೆ.

> ಯಕ್ಷಗಾನ ಪ್ರದರ್ಶನದಲ್ಲಿ ಹೊಸ ಸಾಹಸಗಳನ್ನು ನಡೆಸಿದ ಸಂತೆಗುಳಿ ನಾರಾಯಣ ಭಟ್ಟರ ಆತ್ಮಕಥೆಯು ಹಲವು ಆಯಾಮಗಳಲ್ಲಿ ಪ್ರಮುಖ ಎನಿಸಿದೆ.

'ಆಟದ ಮೇಳ' ಮುಖ್ಯವಾಗುವುದು ನಾರಾಯಣ ಭಟ್ಟರ ಜೀವನದ ಸಂಗಡವೇ ಯಕ್ಷಗಾನ ನಡೆದು ಬಂದ ಅನೇಕ ಸ್ಥಿತ್ಯಂತರಗಳಿಂದಾಗಿ. ಒಂದರ್ಥದಲ್ಲಿ ಬಡಗಿನ ಯಕ್ಷಗಾನದ ಚರಿತ್ರೆಯೂ ಇವರ ಮೂಲಕವಾಗಿ ಅನಾವರಣಗೊಂಡಿದೆ. ಯಕ್ಷಗಾನದ ದಂತಕತೆ ಎಂದು ಪ್ರಖ್ಯಾತರಾದ ಮೂಡ್ಕಣಿ ನಾರಾಯಣ ಹೆಗಡೆಯವರ ಲಾಲಿತ್ಯದ ಕುಣಿತ, ಡಾ. ಪದ್ಮನಾಭಯ್ಯನವರ ಅರ್ಥಗಾರಿಕೆ, ಕೆರಮನೆ ಶಿವರಾಮ ಹೆಗಡೆಯವರ ಸಮಗ್ರ ಅಭಿನಯ ಮತ್ತು ಉತ್ತರಕನ್ನಡದಲ್ಲಿ ಪ್ರಪ್ರಪಥಮ ಬಾರಿಗೆ ಟೆಂಟಿನ ಮೇಳ ಮಾಡಿದ ಅನುಭವ, ಕರ್ಕಿ ಮೇಳದ ಕಲಾವಿದರ, ಕೆರಮನೆ ಶಂಭುಹೆಗಡೆಯವರೊಡನೆಯ ದೀರ್ಘಕಾಲದ ಅನುಬಂಧ, ಚಿಟ್ಟಾಣಿ ಮತ್ತು ಕಡತೋಕಾ ಭಾಗವತರ ಹೊಂದಾಣಿಕೆಯಲ್ಲಿ ನಡೆದ ಆಟ ವೈಭವಗಳು, ಇವೆಲ್ಲವನ್ನೂ ಇದ್ದದ್ದನ್ನು ಇದ್ದ ಹಾಗೇ ನಮ್ಮ ಎದುರು ನಾರಾಯಣ ಭಟ್ಟರು ಕಟ್ಟಿಕೊಟ್ಟಿದ್ದಾರೆ. 1940ರಿಂದ ಇದು ತನಕದ ನಡೆಯಲ್ಲಿ ಪ್ರೇಕ್ಷಕರು ಆಟಗಳನ್ನು ನೋಡುವ ಕ್ರಿಯೆಯಲ್ಲಿ 'ಭಾವನಾತ್ಮಕವಾಗಿ ಪಾತ್ರಗಳನ್ನು ನೋಡಲು ಇಷ್ಟಪಡುತ್ತಿದ್ದರು, ಇಂದು ವಾಕ್ಚಾತುರ್ಯ ಮತ್ತು ವಿಪರೀತ ಕುಣಿತ ರಂಗವನ್ನು ಆವರಿಸಿ ಕೊಂಡಿದೆ, ಪ್ರೇಕ್ಷಕರಿಗೂ ಇದೇ ಯಕ್ಷಗಾನ ಎಂದು ಅನಿಸಿದೆ' ಎನ್ನುವ ಬದಲಾವಣೆಗಳನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ.

ನಾರಾಯಣ ಭಟ್ಟರು ಪ್ರಾರಂಭದಲ್ಲಿ ಸಾಮವೇದವನ್ನು ಮತ್ತು ಪೌರೋಹಿತ್ಯಕ್ಕೆ ಬೇಕಾದ ಎಲ್ಲಾ ಮಂತ್ರಗಳನ್ನು ಕಲಿತು ಉತ್ತಮ ಪುರೋಹಿತರಾಗಿ ಬೆಳೆಯುತ್ತಿದ್ದರು. ವ್ಯಾಪಾರ, ರಾಜಕೀಯ, ಧಾರ್ಮಿಕ ಹೀಗೆ ಈ ವಿಭಾಗಗಳಲ್ಲಿ ಮುಖಂಡರೂ ಆಗಿದ್ದವರಿಗೆ ಅಂತರಂಗದಲ್ಲಿ 'ಇದಲ್ಲ ನಿನ್ನ ಕ್ಷೇತ್ರ' ಎನ್ನುವ ಕೂಗು ಕೇಳಿಸಿತು. ಅವರೇ ಹೇಳಿಕೊಂಡಂತೆ ವ್ಯಾಪಾರಕ್ಕಿಂತ ತನಗೆ 'ಸರ್ವಂ ಯಕ್ಷಗಾನಮಯಂ' ಎನ್ನುವ ಮಟ್ಟಿಗೆ ಮನಸ್ಸು ಸೋತಿತು. ಉತ್ತರ ಕನ್ನಡದ ಎಲ್ಲಾ ಪ್ರಸಿದ್ಧ ಮೇಳದ ಕಲಾವಿದರನ್ನೂ ಸೇರಿಸಿ ಸಂಘಟಿಸಿದ 'ಶ್ರೀ ಇಡಗುಂಜಿ ಮಹಾಗಣಪತಿ ಪ್ರಾಸಾದಿತ ಯಕ್ಷಗಾನ ಮಂಡಳಿ ಸಂಯುಕ್ತ ಉತ್ತರಕನ್ನಡ' ಒಂದು ದಾಖಲೆ ಮತ್ತು ಅವರಿಗೆ ಸಂಕಟವನ್ನು ತಂದುಕೊಟ್ಟ ಘಟನೆಗಳೂ ಇಲ್ಲಿವೆ. ಎತ್ತರದಲ್ಲಿದ್ದ ವ್ಯಕ್ತಿ ಕಲಾವಿದರನ್ನು ಸಂಭಾಳಿಸಿಕೊಳ್ಳಲೂ ಏನೆಲ್ಲಾ ಕಷ್ಟಪಡಬೇಕಾಯಿತು ಎನ್ನುವುದನ್ನು ಇಲ್ಲಿ ನೋಡಬಹುದಾಗಿದೆ. ನಾರಾಯಣ ಭಟ್ಟರು ತಮಗೆ ಕಲಾವಿದರಿಂದ ಆದ ನೋವಿನ ಕುರಿತು ಯಾವ ಆಪಾದನೆಯನ್ನೂ ಮಾಡಿವುದಿಲ್ಲ. ಎಲ್ಲವೂ ತನ್ನ ಹಣೆಯ ಬರಹ ಎನ್ನುವುದಾಗಿ ಹೇಳಿಕೊಳ್ಳುವ ಸಜ್ಜನಿಕೆ ಅವರದು.

ಮೊದಲ ಬಾರಿ ಗ್ಯಾಸ್ ಲೈಟ್

ಇವರ ಮೇಳವನ್ನು ಗಜಮೇಳವೆಂದು ಕರೆಯುತ್ತಿದ್ದರು. ಗ್ಯಾಸ್ ಲೈಟ್ ಮೂಲಕ ಆತ ನಡೆಯುವ ಕಾಲದಲ್ಲಿ ಅದನ್ನು ಬಿಟ್ಟು ಮೊತ್ತಮೊದಲ ಬಾರಿಗೆ ವಿದ್ಯುತ್ ದೀಪದ ಬಳಕೆಯನ್ನು ಅದಕ್ಕಾಗಿ ಜನರೇಟರ್ ಖರೀದಿ ಮಾಡಿದವರು. ಟೆಂಟ್ ಮೇಳದಲ್ಲಿ ಅನೇಕ ಸೌಲಭ್ಯಗಳನ್ನು ಕಲಾವಿದರಿಗೆ, ಪ್ರೇಕ್ಷಕರಿಗೆ ಮೊದಲಬಾರಿಗೆ ಒದಗಿಸಿದರು. ವ್ಯಾಪಾರದಲ್ಲಿ ಗಣ್ಯರಾಗಿ ಮೆರೆದವರು ಯಕ್ಷಗಾನ ಮೇಳದಿಂದಾಗಿ ಕಷ್ಟ ನಷ್ಟಗಳಿಗೆ ತುತ್ತಾಗಬೇಕಾಯಿತು. ಮನೆಯ ಚಿನ್ನವನ್ನು, ಪಾತ್ರೆ ಪಗಡೆಗಳನ್ನು ಮಾರಿ ಮೇಳದಿಂದಾದ ಸಾಲವನ್ನು ತೀರಿಸಬೇಕಾಗಿ ಬಂದಾಗ ಇವರ ಬೆನ್ನ ಹಿಂದೆ ನಿಂತವರು ಇವರ ಸಹೋದರರು.

ಕೆರಮನೆ ಶಂಭು ಹೆಗಡೆಯವರ ಮೇಳದಲ್ಲಿ ನಾರಾಯಣ ಭಟ್ಟರು ತೊಡಗಿಕೊಂಡು ಶಂಭುಹೆಗಡೆಯವರಿಗೆ ಹೆಚ್ಚಿನ ಸಂದರ್ಭದಲ್ಲಿ ತಮ್ಮ ಅನುಭವವನ್ನು ಹಂಚಿ ಇಡಗುಂಜಿ ಮೇಳದ ಮ್ಯಾನೇಜರರಾಗಿ ಕೊನೆಯವರೆಗೂ ಇದ್ದ ಸಂಗತಿ ಅವರ ಜೀವನದ ಮತ್ತೊಂದು ಘಟ್ಟ. ಯಕ್ಷಗಾನದ ಕುತೂಹಲಕಾರಿ ಅನೇಕ ಸಂಗತಿಗಳಿಗೆ ಇಲ್ಲಿ ಉತ್ತರ ಸಿಗುತ್ತದೆ. ಚಿಟ್ಟಾಣಿಯವರು ಕೆರಮನೆ ಮೇಳಕ್ಕೆ ಬರುತ್ತೇನೆಂದು ಒಪ್ಪಿ ನಂತರ ಯಾವುದೋ ಕಾರಣಕ್ಕೆ ಬರದೇ ಇರುವ ಘಟನೆ ಯಕ್ಷಗಾನ ವಲಯದಲ್ಲಿ ಇಂದಿಗೂ ಚರ್ಚೆಗೆ ಒಳಗಾದ ವಿಷಯ.

ಲಾಭ ನಷ್ಟ ಎರಡೂ ವ್ಯವಹಾರದಲ್ಲಿ ಇದ್ದಿರುವುದೇ. ಅಷ್ಟೇ ಆಗಿದ್ದರೆ ಆತ್ಮಕತೆಗೆ ಮಹತ್ವವಿರುತ್ತಿರಲಿಲ್ಲ. ಈ ಕೃತಿಯಲ್ಲಿ ಗಮನ ಸೆಳೆಯುವುದು ನಾರಾಯಣ ಭಟ್ಟರು ತಮ್ಮ ಪ್ರಯೋಗ ಮತ್ತು ಮೇಳದ ಕಾರಣದಿಂದ ಉತ್ತರಕನ್ನಡ ಜಿಲ್ಲೆಯಲ್ಲಿ ವೃತ್ತಿಮೇಳಕ್ಕೆ ಒಂದು ಘನತೆಯನ್ನು ಯಕ್ಷಗಾನ ರಂಗದಲ್ಲಿ ಕೊಟ್ಟವರಿವುದು. ನಾಲ್ಕಾಣೆ ದಕ್ಷಿಣೆ ಕೊಡುವಾಗ ಆದ ಅವಮಾನ ತನ್ನನ್ನು ವೈದಿಕ ವೃತ್ತಿಯಿಂದ ವಿಮುಖನಾಗುವಂತೆ ಮಾಡಿತು ಎನ್ನುವ ನಾರಾಯಣ ಭಟ್ಟರಿಗೆ ಮೇಳದ ಸಂಘಟನೆಯಿಂದಾಗಿ ಅನುಭವಿಸಿದ ಅವಮಾನ ಅವರನ್ನು ಅದರ ಹತ್ತುಪಾಲು ಹೆಚ್ಚಿನದ್ದು. ಕಲೆಯೆನ್ನುವುದು ಭಾವ ಪ್ರಪಂಚ. ರಂಗದಲ್ಲಿ ಇನ್ನೊಬ್ಬರನ್ನು ದೊಡ್ಡ ಕಲಾವಿದರನ್ನಾಗಿಸಿ ತಾವು ಅವರ ಶ್ರೇಯಸ್ಸಿನಲ್ಲಿ ಆನಂದಪಡೆಯುವ ಭಾವನಾ ಜೀವಿಯಾದ ಕಾರಣ ಅವರಿಗೆ ಮೇಳಗಳಲ್ಲಿ ನಡೆದ ಕೆಲ ಬೇಸರದ ಸಂಗತಿಗಳು ಅವಮಾನವೆನಿಸಲಿಲ್ಲ. ಕಲೆ ದೊಡ್ಡದು, ಕಲಾವಿದನಿಗಿಂತಲೂ ಕಲೆ ದೊಡ್ಡದು ಎನ್ನುವದನ್ನು ಅವರ ಜೀವನ ಚರಿತ್ರೆಯನ್ನು ಓದಿದಾಗ ಅನಿಸುತ್ತದೆ. ಯಕ್ಷಗಾನದಲ್ಲಿ ಬಂದ ಕೆಲವೇ ಅತ್ಯುತ್ತಮ ಆತ್ಮಕಥೆಯಲ್ಲಿ ಇದು ಒಂದು ಎಂದು ಗುರುತಿಸಬಹುದು.



ಆಟದ ಮೇಳ
ಸಂತಗುಳಿ ನಾರಾಯಣ ಭಟ್ಟರ ಆತ್ಮಕಥೆ
ನಿರೂಪಣೆ: ಕೆರಮನೆ ಶಿವಾನಂದ ಹೆಗಡೆ
ಪ್ರಕಾಶನ: ಯಾಜಿ ಪ್ರಕಾಶನ, ಹೊಸಪೇಟೆ
ಬೆಲೆ: ರೂ. 220/-

ಗೌರಿ ಬಾಗಿನ

ಹಲೋ ಅಕ್ಕಾ ಕುಶಲವೇ? ಕ್ಷೇಮವೇ?
ಹುಟ್ಟಿದ ಮನೆಯ ನೋಡಲು ಬಾರೆ
ಅಪ್ಪನ ಪ್ರೀತಿ ಸವಿಯಲು ಬಾರೆ
ಅಮ್ಮನ ಮಡಿಲಲ್ಲಿ ಮಗುವಾಗಲು ಬಾರೆ
ಗೋಮಾತೆಯ ಕೂಗನು ಕೇಳಲು ಬಾರೆ
ಜೀವದ ಗೆಳತಿಯರ ನೋಡಲು ಬಾರೆ
ನೀನಾಡಿದ ಜೋಕಾಲಿ ಆಡಲು ಬಾರೆ
ಈ ತಮ್ಮನ ಕಾಟ ಮರೆತು ಬಾರೆ
ಒಗ್ಗಟ್ಟಿನ ಒಬ್ಬಟ್ಟು ತಿನ್ನೋಣ ಬಾರೆ
ಪ್ರೀತಿಯ ಸಿಹಿಯನು ಬೇಗನೆ ತಾರೆ॥

ಹಲೋ ಅಕ್ಕಾ
ತುಂಬಿದ ಕೆರೆ ನೋಡಲು ಬಾರೆ
ನೀ ನೆಟ್ಟ ಮಾವಿನಗಿಡ ಬೆಳೆದಿದೆ ಬಾರೆ
ನಗುವಲಿ ಅರಳಲಿ ನಿನ್ನ ಮೋರೆ
ಹಾರುವ ಹಕ್ಕಿಗಳ ನೋಡಲು ಬಾರೆ
ಗೌರಿ, ಗಣೇಶ ಹಬ್ಬವ ಮಾಡಲು ಬಾರೆ
ತುಪ್ಪದಾರತಿ ಬೆಳಗಲು ಬಾರೆ
ಗೌರಿ ಬಾಗಿನ ಸ್ವೀಕರಿಸಲು ಬಾರೆ
ಆಗಸದಿ ಹೊಳೆದಿದೆ ಪುಟ್ಟ ತಾರೆ
ತವರಿನ ಪ್ರೀತಿ ಸವಿಯಲು ಬಾರೆ

● ಡಾ.ಎನ್.ಟಿ.ಅನಿಲ್ ಬೆಂಗಳೂರು

ಅರ್ಧ ದಿನದ ಗಣಪ!

> ನಮ್ಮ ಮೇಲೆ ಆಡಳಿತ ನಡೆಸುವವರು ಹಬ್ಬದಾಚರಣೆಯಲ್ಲಿ ಮೂಗು ತೂರಿಸಿದರೆ ಏನಾಗುತ್ತದೆ? ಅಧಿಕಾರಿಗಳ ಹಸ್ತಕ್ಷೇಪದಿಂದಾಗಿ, ಅರ್ಧ ದಿನ ಮಾತ್ರ ಗಣಪನನ್ನು ಕೂರಿಸುವ ಪದ್ಧತಿ ಇಲ್ಲಿದೆ!

● ಗುರುರಾಜ ಮ.ದೇಶಕುಲಕರ್ಣಿ

ಅರ್ಧ ದಿನ ಮಾತ್ರ ಗಣೇಶನನ್ನು ಕೂಡ್ರಿಸುವ ಒಂದು ಸಂಪ್ರದಾಯ ಇರುವುದು ನಿಮಗೆ ಗೊತ್ತೆ? ಇದಕ್ಕೆ ಐತಿಹಾಸಿಕ ಕಾರಣವೂ ಇದೆ ಗೊತ್ತೆ? ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ಭೋಗೇನಾಗರಕೊಪ್ಪ ಗ್ರಾಮದ ದೇಶಕುಲಕರ್ಣಿ (ದೇಸಾಯಿ) ಅವರ ವಾಡೆದಲ್ಲಿ ಕೇವಲ ಅರ್ಧ ದಿನ ಮಾತ್ರ ಗಣಪತಿಯನ್ನು ಕೂಡ್ರಿಸುತ್ತಾರೆ. ಈ ಆಚರಣೆಗೆ ಅಂತಹ ವಿಶೇಷ ಕಾರಣವೇನಿದೆ?

ಬ್ರಿಟಿಷರು ಆಳ್ವಿಕೆ ನಡೆಸುತ್ತಿದ್ದ ಕಾಲ. ಕಲಘಟಗಿ ತಾಲೂಕಿನಲ್ಲಿ ತೀವ್ರ ಬರಗಾಲ ಆವರಿಸಿತ್ತು. ಜತೆಗೆ ಉಪ್ಪಿಗೂ ಬ್ರಿಟಿಷರು ತೆರಿಗೆ ವಿಧಿಸಿದ್ದರು. ದೇಸಗತಿಯ ಆಡಳಿತದ ಐದು ಹಳ್ಳಿಗಳು ಕಂದಾಯ ಕಟ್ಟಿರಲಿಲ್ಲ. ಈ ವಿಷಯದಲ್ಲಿ ಬ್ರಿಟಿಷರಿಗೂ ದೇಸಯಿಯವರಿಗೂ ವಾಗ್ವಾದವಾಗಿತ್ತು. ಕಂದಾಯ ಅಧಿಕಾರಿಯು ಅಗ ದಾಸ್ತಿಕೊಪ್ಪದ ಬ್ರಿಟಿಷ್ ಬಂಗಲೆಯಲ್ಲಿ ಇರುತ್ತಿದ್ದ. ಅವನು ದೇಸಾಯಿಯವರ ಅಡಳಿತದಲ್ಲಿದ್ದ ಗ್ರಾಮದ ಮರಾಠಿ ಓಣಿಯ ಹಿತ್ತಲನ್ನು ವಿಭಾಗಿಸಿ ಅದನ್ನು ಗಂಜೀಗಟ್ಟಿ ಸರಹದ್ದಿನಲ್ಲಿಟ್ಟು ನಕಾಶೆಯನ್ನು ತಯಾರಿಸಿದ. ದೇಸಾಯಿಯವರು ಇರುವ ಗ್ರಾಮದ ವಿಸ್ತೀರ್ಣ ಕಡಿತಗೊಳಿಸಿ ಸೇಡು ತೀರಿಸಿಕೊಂಡ.

ಛತ್ರಪತಿ ಶಿವಾಜಿ ಮಹಾರಾಜರಿಂದ ಐದು ಹಳ್ಳಿಗಳನ್ನು ಇನಾಮು ಪಡೆದ ದೇಸಾಯರು ಬೇಸರಗೊಂಡರು. ಆಕ್ರೋಶಗೊಂಡ ವಿರುಪಾಕ್ಷ ಅನಂತರಾವ್ ದೇಸಾಯಿ ಅವರು ಚಳುವಳಿ ಆರಂಭಿಸಿದರು. ಮುಂದೆ ಇವರು ಗೋವಾ ವಿಮೋಚನಾ ಚಳವಳಿಯಲ್ಲಿಯೂ ಭಾಗವಹಿಸಿದ್ದರು. ಇವರಿಗೆ ಸ್ವತಂತ್ರ ಯೋಧರ ಪಿಂಚಣಿ ಸಹ ಬರುತ್ತಿತ್ತು. ಇವರ ಜೊತೆಗೆ ದೇಸಾಯಿ ದತ್ತಮೂರ್ತಿಯವರು ಭೂಗತರಾಗಿದ್ದುಕೊಂಡು ಪತ್ರಿಕೆಗಳಿಗೆ ದೇಶಪ್ರೇಮಿ ಲೇಖನಗಳನ್ನು ಬರೆಯುತ್ತಿದ್ದರು.

ಇದೇ ಸಂದರ್ಭದಲ್ಲಿ ಹುಬ್ಬಳ್ಳಿಗೆ ಲೋಕಮಾನ್ಯ ತಿಲಕರು ಬಂದು, ಸಾರ್ವಜನಿಕ ಗಣೇಶೋತ್ಸವದ ಬಗ್ಗೆ ವಿವರಿಸಿದ್ದರು. ಸಾರ್ವಜನಿಕವಾಗಿ ಗಣಪತಿ ಕೂಡ್ರಿಸಿ ಜನರು ಹೇಗೆ ಬ್ರಿಟಿಷರ ವಿರುದ್ಧ ಒಂದಾಗಬಹುದೆಂದು ವಿವರಿಸಿದಾಗ, ದೇಸಾಯರು ಸಾರ್ವಜನಿಕವಾಗಿ ತಮ್ಮ ವಾಡೇದಲ್ಲಿ ವಿಜೃಂಭಣೆಯಿಂದ ಐದು ದಿನಗಳ ಕಾರ್ಯಕ್ರಮ ನಡೆಯಿತು. ಬರಗಾಲದ ವರ್ಷ ಗಣೇಶೋತ್ಸವದ ಸಂಭ್ರಮದ ತಯರಿ ನಡೆಸಿ ಬೆಳಿಗ್ಗೆ ಚೌತಿ ದಿನ ಗಣಪತಿಯನ್ನು ಪ್ರತಿಷ್ಠಾಪೂಜೆ ಮಾಡಿದ್ದರು. ಗ್ರಾಮಸ್ಥರಿಗೆ ತೀರ್ಥ-ಪ್ರಸಾದ ವಿತರಿಸಲಾಗಿತ್ತು.

ಬ್ರಿಟಿಷರು ಕೋಪಗೊಂಡರು; ದೇಸಾಯಿವರು ಬ್ರಿಟಿಷ ವಿರೋಧಿ ಚಟುವಟಿಕೆ ನಡೆಸುತ್ತಿದ್ದರೆಂದು ಪಿತೂರಿಯಿಂದ ವಾಡೆಗೆ ಬ್ರಿಟಿಷ್ ಸೈನ್ಯ ದಾಳಿ ಮಾಡಿತು. ದಾಳಿ ಮಾಡಿದ್ದು ಮಧ್ಯಾಹ್ನ ಸಮಯ! ದೇಸಾಯರು ಪ್ರಸಾದ ವಿತರಿಸಿ ಊಟಕ್ಕೆ ಕೂಡ್ರುವ ತಯಾರಿಯಲ್ಲಿದ್ದಾಗ ಪೊಲೀಸ್ ದಂಡು ಮನೆಬಾಗಿಲಿಗೆ ಬಂದಿತ್ತು! ಬ್ರಿಟಿಷರೂ ಒಳಬಂದು ಗಣಪತಿಗೆ ಧಕ್ಕೆ ಮಾಡಬಹುದೆಂದು ಅಂದಾಜಿಸಿ ವಾಡೆದಲ್ಲಿರುವ ಹುಡೇದ ಬಾವಿಯಲ್ಲಿ ವಿಸರ್ಜಿಸಿ ಪಶ್ಚಿಮದ್ವಾರದ ಮುಖಾಂತರ ಭೂಗತರಾದರು. ಬ್ರಿಟಿಷರಿಗೆ ತವು ಬರುವ ಮುಂಚೆ ಏನು ನಡೆದಿದೆ ಎಂದು ಸುಳಿವು ದೊರಕಲಿಲ್ಲ. ಬ್ರಿಟಿಷ ಸೈನ್ಯ ಬಂದ ದಾರಿಗೆ ಸುಂಕವಿಲ್ಲದಂತೆ ಮರಳಿತು.

ಹಬ್ಬದ ದಿನ ನಡೆದ ಈ ದಾಳಿಯ ನೆನಪಿನಲ್ಲಿ, ದೇಶಕುಲಕರ್ಣಿ(ದೇಸಾಯಿ) ಅವರು ಇಂದಿಗೂ ಅರ್ಧದಿನ ಗಣಪನನ್ನು ಕೂರಿಸುವ ಪರಿಪಾಠ ಮುಂದುವರೆಸಿಕೊಂಡು ಬಂದಿದ್ದಾರೆ. ಬೆಳಿಗ್ಗೆ ಗಣಪತಿಯನ್ನು ಕೂರಿಸಿ ಪೂಜೆ, ಮಹಾನೈವೈದ್ಯ, ಮಹಾಮಂಗಳಾರತಿ ನಂತರ ಮಧ್ಯಾಹ್ನದ ಊಟಕ್ಕೂ ಮುನ್ನವೇ ವಿಸರ್ಜಿಸಲಾಗುತ್ತದೆ ಎಂದು ಮನೆತನದ ಹಿರಿಯರಾದ ಮಧುಸೂದನ ದೇಶಕುಲಕರ್ಣಿ ಇತಿಹಾಸ ನೆನಪಿಸಿಕೊಳ್ಳುತ್ತಾರೆ. ಹಬ್ಬದ ಆಚರಣೆಯಲ್ಲೂ ಆಡಳಿತ ನಡೆಸುವವರು ಮಧ್ಯ ಪ್ರವೇಶಿಸಿದ ನೋವಿನ ಉದಾಹರಣೆ ಇದು.